ಶನಿವಾರ, ಆಗಸ್ಟ್ 2, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನೇಮಕ



ಸೇನಾಪಡೆಗಳ ಉಪ ಮುಖ್ಯಸ್ಥರಾಗಿ ಲೆಫ್ಟಿನೆಂಟ್ ಜನರಲ್ ಪುಷ್ಪೇಂದ್ರ ಸಿಂಗ್ ಶುಕ್ರವಾರ ಅಧಿಕಾರ ಸ್ವೀಕರಿಸಿದರು. ಸೇನೆಯಲ್ಲಿ 38 ವರ್ಷಗಳಿಂದ ವಿವಿಧ ಹುದ್ದೆಗಳಲ್ಲಿ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ

ಅಟ್ಕಿನ್ಸನ್ ಮಿಂಚು




ಇಂಗ್ಲೆಂಡ್‌ನ ವೇಗಿ ಗಸ್ ಅಟ್ಕಿನ್ಸನ್ ಅವರು ಓವಲ್‌ನಲ್ಲಿ ನಡೆಯುತ್ತಿರುವ ಭಾರತ ವಿರುದ್ಧದ ಐದನೇ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಗಳಿಸಿದರು

ಪುಸ್ತಕ ಬಿಡುಗಡೆ ಸಮಾರಂಭ

ದಿನಾಂಕ: 3, ಆಗಸ್ಟ್ 2025, ಭಾನುವಾರ, ಬೆಳಗ್ಗೆ 10.00 ಗಂಟೆ

ಸ್ಥಳ: ಕಲಾಭವನ, ನವನಗರ, ಬಾಗಲಕೋಟೆ



ವಿಶ್ವಸಂಸ್ಕೃತಿಯ ಮಹಾಯಾನ

ಸಂಪುಟ-೩

ಮಾಜಿ ಮುಖ್ಯಮಂತ್ರಿಗಳು, ಮಾಜಿ ಕೇಂದ್ರಸಚಿವರು
ಹಾಗೂ ಮೂರ್ತಿದೇವಿ ಪುರಸ್ಕಾರ , ಸರಸ್ವತಿ
ಸಮ್ಮಾನ್ ಪ್ರಶಸ್ತಿ ಹಾಗೂ ಕೇಂದ್ರ ಸಾಹಿತ್ಯ
ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ

ಡಾ.ಎಂ ವೀರಪ್ಪ ಮೊಯಿಲಿ

ವಿರಚಿತ

ಡಾ. ಎಂ. ವೀರಪ್ಪ ಮೊಯಿಲಿ ಅವರು ಮುಖ್ಯಮಂತ್ರಿಯಾಗಿ ಕೇಂದ್ರ ಸಚಿವರಾಗಿ ರಾಜ್ಯದ ಅಭ್ಯುದಯಕ್ಕೆ ನೀಡಿದ ಕೊಡುಗೆ ಅಪಾರ

- 1993ರಲ್ಲಿ ಬೆಂಗಳೂರಿನ ದೇವನಹಳ್ಳಿಯಲ್ಲಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಮಂಜೂರು..
- ಪಾರದರ್ಶಕ ರೀತಿಯಲ್ಲಿ 8ಲಕ್ಷ ಶಿಕ್ಷಕರ ನೇಮಕಾತಿ
- ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕ (ಸಿ.ಇ.ಟಿ.) ವ್ಯವಸ್ಥೆ ಜಾರಿ ಮತ್ತು ಕ್ಯಾಪಿಟೇಶನ್ ಶುಲ್ಕ ಪದ್ಧತಿ ರದ್ದು.
- ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಮತ್ತು ವೈಟ್ ಫೀಲ್ಡ್‌ನಲ್ಲಿ ಅಂತಾರಾಷ್ಟ್ರೀಯ ಟೆಕ್ನಾಲಜಿ ಪಾರ್ಕ್ ನಿರ್ಮಾಣ.
- ಮಂಗಳೂರು ರಿಫೈನರಿ ಪೆಟ್ರೋಕೆಮಿಕಲ್ಸ್ ಲಿ. ಸ್ಥಾಪನೆ ಮತ್ತು ವಿಸ್ತರಣೆ.
- ಜಿಂದಾಲ್ ವಿಜಯನಗರ ಸ್ಟೀಲ್ ಕಂಪನಿ ಲಿಮಿಟೆಡ್ ಸ್ಥಾಪನೆ.
- ರಾಮನಗರ ಜಿಲ್ಲೆಯ ಬಿಡದಿಯಲ್ಲಿ Toyota ಕಂಪನಿ ಮತ್ತು ಕೋಲಾರ ಜಿಲ್ಲೆಯಲ್ಲಿ Volvo Motors ಗೆ ಚಾಲನೆ.
- ಕೃಷ್ಣ ಜಲಭಾಗ್ಯ ನಿಗಮ ಸ್ಥಾಪನೆ ಮತ್ತು ಆಲಮಟ್ಟಿ ಡ್ಯಾಮ್ 518 ಮೀಟರ್ ಗಳಿಗೆ ಏರಿಕೆ ಮತ್ತು 6 ಮೀಟರ್ ಗೇಟ್ ನಿರ್ಮಾಣ.
- ಕನ್ನಡ ಸಂಸ್ಕೃತಿ ಸಚಿವಾಲಯ, ಹಂಪಿ ಪ್ರಾಧಿಕಾರ, ಜಿಲ್ಲಾ ಉತ್ಸವಗಳ ಪ್ರಾರಂಭ, ಜಿಲ್ಲಾ ಕ್ರೀಡಾಂಗಣಗಳ ಸ್ಥಾಪನೆ,
- ಚಿನ್ನಪ್ಪರೆಡ್ಡಿ ಆಯೋಗದ ಅನುಷ್ಠಾನ.
- ಕೇಂದ್ರ ಸರಕಾರದಿಂದ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ.
- ಗುಲ್ಬರ್ಗ ಮತ್ತು ಧಾರವಾಡದಲ್ಲಿ ಶಾಶ್ವತ ಹೈಕೋರ್ಟ್‌ಪೀಠ ಸ್ಥಾಪನೆ.
- ಬೆಳಗಾವಿಯಲ್ಲಿ ಘಟಪ್ರಭಾ ನದಿಗೆ ಕಡಬಗಟ್ಟ ಮತ್ತು ಹೇಮಾವತಿಯ ಚಟ್ಟಮಗೆರೆ, ಬಾಗೂರು ನವಿಲೆ ಸುರಂಗಗಳ ತೆರವು.
- ಕೂಡಲಸಂಗಮ ಪ್ರಾಧಿಕಾರದ ರಚನೆ ಮತ್ತು ಬಸವೇಶ್ವರರು ಹುಟ್ಟಿದ ಮನೆ ಮತ್ತು ಐಕ್ಯಮಂಟಪದ ಅಭಿವೃದ್ಧಿ.
- ಕರ್ನಾಟಕ-ಹೈದರಾಬಾದ್ ಅಭಿವೃದ್ಧಿ ಮಂಡಳಿಯ ರಚನೆ- ಕೇಂದ್ರದ ಕಾನೂನು ಸಚಿವರಾಗಿದ್ದಾಗ ಸಂವಿಧಾನದ 375-ಎ ಸ್ಥಾನಮಾನ, ಬಯಲುಸೀಮೆ ಅಭಿವೃದ್ಧಿ ಮಂಡಳಿ, ಗಡಿ ಅಭಿವೃದ್ಧಿ ಮಂಡಳಿ, ಮಲೆನಾಡು ಅಭಿವೃದ್ಧಿ ಮಂಡಳಿಗಳ ಸ್ಥಾಪನೆ.
- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ (ವಿ.ಟಿ.ಯು), ಬೆಳಗಾವಿ., ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಮಂಗಳೂರು ವಿಶ್ವವಿದ್ಯಾನಿಲಯ, ಗುಲ್ಬರ್ಗ ವಿಶ್ವವಿದ್ಯಾನಿಲಯ, ಬೆಂಗಳೂರಿನ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾನಿಲಯ, ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ, ಬೀದರ್‌ನಲ್ಲಿ ಪಶು ವೈದ್ಯಕೀಯ ವಿಶ್ವವಿದ್ಯಾಲಯಗಳ ಸ್ಥಾಪನೆ.

ಕೊಂಕಣ ರೈಲ್ವೆಗೆ ಚಾಲನೆ

- ವಿಜಯಪುರ ಜಿಲ್ಲೆಯ ಕೂಡಿಗಿಯಲ್ಲಿ ಸೂಪರ್ ಥರ್ಮಲ್ ವಿದ್ಯುತ್ ಸ್ಥಾವರ ಸ್ಥಾಪನೆ ಮತ್ತು ಶೋಲಾಪುರ ದಿಂದ ರಾಯಚೂರು ಪವರ್ ಗ್ರಿಡ್ ಸ್ಥಾಪನೆ
- ಕೇಂದ್ರದಲ್ಲಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವರಾಗಿದ್ದಾಗ ಗೇಲ್ ಇಂಡಿಯಾ ನಿರ್ಮಾಣದ ದಾಬೋಲ್-ಬೆಂಗಳೂರು ಪೈಪ್‌ಲೈನ್ ಮೂಲಕ ಗ್ಯಾಸ್ ಸರಬರಾಜು ಆರಂಭ ಮಾಡಲಾಯಿತು.
- ಹೊಸಕೋಟೆಯ ಕಂಬಳಿಪುರದಲ್ಲಿ 'ರಾಜೀವ್‌ಗಾಂಧಿ ಪೆಟ್ರೋಲಿಯಂ ಉತ್ಪನ್ನಗಳ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ'ವನ್ನು 1650 ಕೋಟಿ ರೂ. ವೆಚ್ಚದಲ್ಲಿ ಪ್ರಾರಂಭಿಸಿದರು.
- ''ಶ್ರೀ ರಾಮಾಯಣ ಮಹಾನ್ವೇಷಣಂ', 'ಸಿರಿಮುಡಿ ಪರಿಕ್ರಮಣ' ಹಾಗೂ 'ಶ್ರೀ ಬಾಹುಬಲಿ ಅಹಿಂಸಾ ದಿಗ್ವಿಜಯಂ' ಎಂಬ ಮೂರು ಮಹಾಕಾವ್ಯಗಳ ರಚನೆ.

ಪ್ರಶಸ್ತಿ ಪುರಸ್ಕಾರಗಳು

- 'ಮೂರ್ತಿದೇವಿ' ಪುರಸ್ಕಾರ :2009-(ಭಾರತೀಯ ಜ್ಞಾನಪೀಠ ಸಂಸ್ಥೆ, ನವದೆಹಲಿ) -'ಶ್ರೀರಾಮಾಯಣ ಮಹಾನ್ವೇಷಣಂ'
- 'ಸರಸ್ವತಿಸಮ್ಮಾನ್' ಪ್ರಶಸ್ತಿ :2014-(ಕೆ.ಕೆ.ಬಿರ್ಲಾ ಫೌಂಡೇಶನ್, ನವದೆಹಲಿ) -'ಶ್ರೀರಾಮಾಯಣ ಮಹಾನ್ವೇಷಣಂ'
- 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ-2020' : 'ಶ್ರೀ ಬಾಹುಬಲಿ ಅಹಿಂಸಾ ದಿಗ್ವಿಜಯಂ'

ಪ್ರಕಟಣೆ

ಶ್ರೀ ಹೆಚ್. ಎಂ. ರೇವಣ್ಣ
ಮಾನ್ಯ ರಾಜ್ಯಾಧ್ಯಕ್ಷರು
ಕರ್ನಾಟಕರಾಜ್ಯ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ
ಪ್ರಾಧಿಕಾರ, ಕರ್ನಾಟಕ ಸರ್ಕಾರ,
ವಿಕಾಸಸೌಧ, ಬೆಂಗಳೂರು.

ಶ್ರೀ ರಾಮಲಿಂಗಾರೆಡ್ಡಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು,
ಕರ್ನಾಟಕ ಸರ್ಕಾರ
ವಿಧಾನಸೌಧ, ಬೆಂಗಳೂರು

ಶ್ರೀ ಕೆ.ಎಂ. ನಾಗರಾಜ್
ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಧಾರ್ಮಿಕ
ಪರಿಷತ್ತು, ಬೆಂಗಳೂರು.

ಶ್ರೀ ಎಸ್.ಆರ್. ಪಾಟೀಲ
ಮಾಜಿ ಸಚಿವರು,
ಕರ್ನಾಟಕ ಸರ್ಕಾರ ಹಾಗೂ
ಮಾಜಿ ವಿಧಾನಪರಿಷತ್ತಿನ ವಿರೋಧಪಕ್ಷದ ನಾಯಕರು,
ಬಾಗಲಕೋಟೆ.

ಶನಿವಾರ, ಆಗಸ್ಟ್ 2, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 213 | ಪುಟ 24

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಜಮೀಲ್ ಕೋಚ್
ಭಾರತ ಪುರುಷರ ಫುಟ್‌ಬಾಲ್ ತಂಡದ ತರಬೇತುದಾರನಾಗಿ ಮಾಜಿ ಅಂತರರಾಷ್ಟ್ರೀಯ ಆಟಗಾರ ಖಾಲಿದ್ ಜಮೀಲ್ ಶುಕ್ರವಾರ ನೇಮಕಗೊಂಡಿದ್ದಾರೆ



ಹುಲಿ ದಾಳಿ
2020ರಿಂದ 2024ರವರೆಗೆ ಹುಲಿ ದಾಳಿಯಿಂದಾಗಿ ದೇಶದಲ್ಲಿ 378 ಮಂದಿ ಮೃತಪಟ್ಟಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ

ಸೆನ್ಸೆಕ್ಸ್ 81,185 | ನಿಫ್ಟಿ 24,768 | $/₹ 87.18 | ಚಿನ್ನ (Std. 10g) ₹1,03,300 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,18,600 (ಬೆಂಗಳೂರು)

ಅತ್ಯಾಚಾರ: ಪ್ರಜ್ವಲ್ ರೇವಣ್ಣ ದೋಷಿ

ಜನಪ್ರತಿನಿಧಿಗಳ ನ್ಯಾಯಾಲಯ ಆದೇಶ • ಶಿಕ್ಷೆ ಪ್ರಮಾಣ ಇಂದು ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗೆಲಸದ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿದ್ದ ಹಾಸನ ಲೋಕಸಭಾ ಕ್ಷೇತ್ರದ ಮಾಜಿ ಸಂಸದ, ಜೆಡಿಎಸ್ ಯುವ ನಾಯಕ ಪ್ರಜ್ವಲ್ ರೇವಣ್ಣ ಅಪರಾಧಿ ಎಂದು ಜನಪ್ರತಿನಿಧಿಗಳ ವಿಶೇಷ (ಸೆಷನ್ಸ್) ನ್ಯಾಯಾಲಯ ಸಾರಿದೆ.

ಈ ಸಂಬಂಧ ಕಾಯ್ದಿರಿಸಿದ್ದ ಆದೇಶದ ನಿರ್ಣಯಾತ್ಮಕ ಭಾಗವನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು ಶುಕ್ರವಾರ ಕಿಕ್ಕಿರಿದು ತುಂಬಿದ್ದ ತೆರೆದ ನ್ಯಾಯಾಲಯದಲ್ಲಿ (ಸಿಸಿಸಿಎಚ್-82) ಪ್ರಕಟಿಸಿದರು.

'ಆರೋಪಿ ವಿರುದ್ಧದ ಭಾರತೀಯ ದಂಡ ಸಂಹಿತೆ-1860 ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆ-2008ರ ವಿವಿಧ ಕಲಂಗಳ ಅಡಿಯಲ್ಲಿನ ದೋಷಾರೋಪಗಳು ವಿಚಾರಣೆಯಲ್ಲಿ ಸಾಬೀತಾಗಿವೆ. ಹೀಗಾಗಿ, ಆರೋಪಿಯನ್ನು ಅಪರಾಧಿ ಎಂದು ತೀರ್ಮಾನಿಸಲಾಗಿದೆ. ಶಿಕ್ಷೆಯ ಪ್ರಮಾಣವನ್ನು ಶನಿವಾರ (ಆ.2) ನಿಗದಿಪಡಿಸಲಾಗುವುದು' ಎಂದು ನ್ಯಾಯಾಧೀಶರು ಘೋಷಿಸಿದರು.

ಪ್ರಜ್ವಲ್‌ನನ್ನು ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿತ್ತು. ಪ್ರಾಸಿಕ್ಯೂಷನ್ ಪರ ಬಿ.ಎನ್.ಜಗದೀಶ್ ಮತ್ತು ಅಶೋಕ್ ಎನ್.ನಾಯಕ್ ವಾದ ಮಂಡಿಸಿದ್ದರು.

▶6

ಮುಖ್ಯಾಂಶಗಳು

- ಶುಕ್ರವಾರ ಮಧ್ಯಾಹ್ನ 1.10ಕ್ಕೆ ಆದೇಶ ಘೋಷಣೆ
- ಕಿಕ್ಕಿರಿದು ತುಂಬಿದ್ದ ಸಿಸಿಸಿಎಚ್ 82ನೇ ಕೋರ್ಟ್ ಹಾಲ್

15 ತಿಂಗಳಲ್ಲಿ ತನಿಖೆ, ವಿಚಾರಣೆ, ಆದೇಶ



ಅಶ್ಲೀಲ ದೃಶ್ಯಗಳ ವಿಡಿಯೊ (2024ರ ಏ.22–28)
- ಲೋಕಸಭಾ ಚುನಾವಣೆಯ ಕಾವು ಇದ್ದ ಹೊತ್ತಿನಲ್ಲೇ ಪ್ರಜ್ವಲ್ ರೇವಣ್ಣನ ಅಶ್ಲೀಲ ದೃಶ್ಯ ಇರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು. ಸಾವಿರಾರು ವಿಡಿಯೊ ಇದ್ದ ಪೆನ್‌ಡ್ರೈವ್ ಅನ್ನು ಹಾಸನದ ಮನೆಮನೆಗಳ ಎದುರು ಬಿಸಾಡಲಾಯಿತು
- ತನ್ನ ಮೇಲೆ ಅತ್ಯಾಚಾರ ನಡೆಸಿದ್ದಾರೆ ಎಂದು ಪ್ರಜ್ವಲ್ ವಿರುದ್ಧ ಮನೆಗೆಲಸದ ಮಹಿಳೆಯೊಬ್ಬರಿಂದ ದೂರು. ಎಫ್‌ಐಆರ್ ದಾಖಲು, ಎಸ್‌ಐಟಿ ರಚನೆ

ಸಂತ್ರಸ್ತೆ ನಾಪತ್ತೆ, ಪ್ರಜ್ವಲ್ ಪರಾರಿ (ಏ.27–ಮೇ 30)
- ದೂರು ನೀಡಿದ ಬೆನ್ನಲ್ಲೇ ಸಂತ್ರಸ್ತೆ ನಾಪತ್ತೆ. ಆರೋಪಿಯ ಪೋಷಕರೇ ಅಪಹರಣ ಮಾಡಿದ್ದಾರೆಂದು ಸಂತ್ರಸ್ತೆ ಮಗನಿಂದ ದೂರು. ಸಂತ್ರಸ್ತೆ ರಕ್ಷಿಸಿದ ಎಸ್‌ಐಟಿ
- ಏಪ್ರಿಲ್ 27ರಂದು ಭಾರತ ಬಿಟ್ಟು ವಿದೇಶಕ್ಕೆ ಪರಾರಿಯಾದ ಪ್ರಜ್ವಲ್. ಎಸ್‌ಐಟಿಯಿಂದ ಲುಕ್ ಔಟ್ ನೋಟಿಸ್ ಜಾರಿ. ಮೇ 31ರಂದು ಜರ್ಮನಿಯಿಂದ ಬಂದಿಳಿದ ಪ್ರಜ್ವಲ್‌ನನ್ನು ಬಂಧಿಸಿದ ಎಸ್‌ಐಟಿ

ಜಾಮೀನು ನಿರಾಕರಣೆ (ಜೂ. 24–ನ.11)
- 150 ಸಾಕ್ಷಿಗಳ ಹೇಳಿಕೆ ಇದ್ದ ಒಟ್ಟು 2,144 ಪುಟಗಳ ಎರಡು ಆರೋಪ ಪಟ್ಟಿ ಸಲ್ಲಿಕೆ. ಸಂತ್ರಸ್ತೆಯ ಒಳಉಡುಪಿನಲ್ಲಿ ಪ್ರಜ್ವಲ್‌ನ ಡಿಎನ್‌ಎ ಪತ್ತೆಯಾಗಿದೆ ಎಂದ ಎಫ್‌ಎಸ್‌ಎಲ್ ವರದಿ
- ಜಾಮೀನು ನಿರಾಕರಿಸಿದ ವಿಶೇಷ ನ್ಯಾಯಾಲಯ (ಜೂ.26), ಹೈಕೋರ್ಟ್ (ಅ. 21) ಮತ್ತು ಸುಪ್ರೀಂ ಕೋರ್ಟ್ (ನ.11)

ವಿಚಾರಣೆ, ಆದೇಶ (2025ರ ಮೇ)
- ಪ್ರಜ್ವಲ್ ಪರ ವಕಾಲತ್ತಿನಿಂದ ಹಿಂದೆ ಸರಿದ ವಕೀಲರು. ವಕೀಲರ ವ್ಯವಸ್ಥೆ ಆಗುವವರೆಗೆ ವಿಚಾರಣೆ ಮುಂದೂಡಿ ಎಂದು ಸಲ್ಲಿಸಿದ ಅರ್ಜಿ ತಿರಸ್ಕೃತ
- ಮೇ 2ರಿಂದ ವಿಚಾರಣೆ. ಸಾಕ್ಷಿದಾರರ ವಿಚಾರಣೆ, ಎಫ್‌ಎಸ್‌ಎಲ್ ವರದಿ ಪರಿಶೀಲನೆ ನಂತರ ಜುಲೈ 30ಕ್ಕೆ ಆದೇಶ ಕಾಯ್ದಿರಿಸಿ, ಆಗಸ್ಟ್ 1ರಂದು ಪ್ರಜ್ವಲ್ ದೋಷಿ ಎಂದು ತೀರ್ಮಾನ

ಯಾವುದಕ್ಕೆ ಎಷ್ಟು ಶಿಕ್ಷೆ?

376(2)(ಕೆ) ಅತ್ಯಾಚಾರ-ಕನಿಷ್ಠ 10 ವರ್ಷ, ಗರಿಷ್ಠ ಜೀವಾವಧಿ.
354(ಎ)–ಲೈಂಗಿಕ ಕಿರುಕುಳ, ಬಲವಂತದ ದೈಹಿಕ ಸಂಪರ್ಕ-ಕನಿಷ್ಠ 3 ವರ್ಷ
376(2)(ಎನ್)-ಸಾರ್ವಜನಿಕ ಸೇವಕ ಅಧಿಕಾರ ದುರ್ಬಳಕೆ ಮಾಡಿ ಎಸಗಿದ ಅತ್ಯಾಚಾರ- ಕನಿಷ್ಠ 10 ವರ್ಷ, ಗರಿಷ್ಠ ಜೀವಾವಧಿ. 354(ಬಿ)–ಬಲವಂತದಿಂದ ವಿವಸ್ತ್ರಗೊಳಿಸುವುದು-ಕನಿಷ್ಠ 3 ವರ್ಷ, ಗರಿಷ್ಠ 7 ವರ್ಷ
354(ಸಿ)-ಮಹಿಳೆಯ ಖಾಸಗಿ ಚಿತ್ರ ಸೆರೆ ಹಿಡಿಯುವುದು -ಕನಿಷ್ಠ 1 ವರ್ಷ, ಗರಿಷ್ಠ 3 ವರ್ಷ
506-ಕ್ರಿಮಿನಲ್ ಬೆದರಿಕೆ-ಕನಿಷ್ಠ 2 ವರ್ಷ, ಗರಿಷ್ಠ 7 ವರ್ಷ
201-ಸಾಕ್ಷ್ಯ ನಾಶ-ಕನಿಷ್ಠ 3 ವರ್ಷ, ಗರಿಷ್ಠ 7 ವರ್ಷ
ಮಾಹಿತಿ ತಂತ್ರಜ್ಞಾನ ಕಾಯ್ದೆ–2008ರ ಕಲಂ 66(ಇ)-ವ್ಯಕ್ತಿಯ ಗೋಪ್ಯತೆಯ ಉಲ್ಲಂಘನೆ-3 ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ಗರಿಷ್ಠ ₹2 ಲಕ್ಷ ದಂಡ

ಗುರುತು ಸಿಗದ ಶವಗಳ ವಿವರ ಸಂಗ್ರಹ

ಮಂಗಳೂರು: ಧರ್ಮಸ್ಥಳ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗುರುತು ಪತ್ತೆಯಾಗದೆ, ಎಷ್ಟು ಮೃತದೇಹಗಳನ್ನು ವಿಲೇವಾರಿ ಮಾಡಲಾಗಿದೆ ಎಂಬ ಮಾಹಿತಿಯನ್ನು ಎಸ್‌ಐಟಿ ಕಲೆ ಹಾಕುತ್ತಿದೆ.

ವಿವರ ▶6

ಚಿನಕುರುಳಿ ಪ್ರಕಾಶ್ ಶೆಟ್ಟಿ




ಜಾಗತಿಕ ಅರ್ಥವ್ಯವಸ್ಥೆ ಮೇಲೆ ಪ್ರಹಾರ

ನ್ಯೂಯಾರ್ಕ್/ವಾಷಿಂಗ್ಟನ್(ಪಿಟಿಐ/ಎಪಿ): ಭಾರತ ಸೇರಿ ವಿವಿಧ ದೇಶಗಳಿಂದ ಅಮೆರಿಕ ಆಮದು ಮಾಡಿಕೊಳ್ಳುವ ಸರಕುಗಳಿಗೆ ಭಾರಿ ಪ್ರಮಾಣದ ಸುಂಕ ವಿಧಿಸುವುದಕ್ಕೆ ಸಂಬಂಧಿಸಿದ ಕಾರ್ಯಕಾರಿ ಆದೇಶಕ್ಕೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ಸಹಿ ಹಾಕಿದ್ದಾರೆ.

ಭಾರತವಲ್ಲದೇ, ಇತರ 70 ರಾಷ್ಟ್ರಗಳಿಗೆ ಕೂಡ ಬೇರೆ ಬೇರೆ ಪ್ರಮಾಣದ ಸುಂಕ ವಿಧಿಸಲಾಗಿದ್ದು, ಶ್ವೇತಭವನ ಈ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಟ್ರಂಪ್ ಆಡಳಿತದ ಈ ನಡೆಯು ಜಾಗತಿಕ ಅರ್ಥ ವ್ಯವಸ್ಥೆಯನ್ನು ಪುನರ್‌ಸಂಘಟನೆಯತ್ತ ದೂಡಲಿದೆ. ಮತ್ತೊಂದೆಡೆ, ವಿಶ್ವದ ಆರ್ಥಿಕತೆ ಹಾಗೂ ಮಿತ್ರ ರಾಷ್ಟ್ರಗಳು ಅಮೆರಿಕದೊಂದಿಗೆ ಹಲವು ದಶಕಗಳಿಂದ ಹೊಂದಿರುವ ಬಾಂಧವ್ಯ ಎಷ್ಟು ದೃಢವಾಗಿ ನಿಲ್ಲಲಿದೆ ಎಂಬುದನ್ನು ಕೂಡ ಈ ಕ್ರಮವು ಒರೆಗೆ ಹಚ್ಚಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.



ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ 25ರಷ್ಟು ಸುಂಕ ವಿಧಿಸಲಾಗುತ್ತದೆ. ಕೆನಡಾ ಮೇಲೆ ವಿಧಿಸಲಾಗುವ ಸುಂಕದ ಪ್ರಮಾಣ ಶೇ 35.

▶10

ಟ್ರಂಪ್ ಹೇಳಿಕೆಗೆ ಭಾರತ ತಿರುಗೇಟು



ನವದೆಹಲಿ(ಪಿಟಿಐ): 'ಅಮೆರಿಕ ಮತ್ತು ಭಾರತದ ನಡುವಿನ ಪಾಲುದಾರಿಕೆ, ದ್ವಿಪಕ್ಷೀಯ ಸಂಬಂಧ ಹಲವು ಸ್ಥಿತ್ಯಂತರಗಳನ್ನು ಕಂಡಿದೆ. ಅನೇಕ ಸವಾಲುಗಳನ್ನು ಮೆಟ್ಟಿನಿಂತು ಮುಂದುವರಿದಿದೆ' ಎಂದು ಭಾರತ ಶುಕ್ರವಾರ ಹೇಳಿದೆ.

ದೇಶದ ಮೇಲೆ ಶೇ 25ರಷ್ಟು ಸುಂಕ ವಿಧಿಸಿದ್ದಲ್ಲದೇ, 'ಭಾರತದ್ದು 'ಸತ್ತ' ಆರ್ಥಿಕತೆ' ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆಗೆ ಈ ಮೂಲಕ ತಿರುಗೇಟು ನೀಡಿದೆ.

'ಭಾರತ ಮತ್ತು ಅಮೆರಿಕ ಸಮಗ್ರ ಪಾಲುದಾರಿಕೆ ಹೊಂದಿರುವ ರಾಷ್ಟ್ರಗಳಾಗಿವೆ. ಪ್ರಜಾಸತ್ತಾತ್ಮಕ ಮೌಲ್ಯಗಳು, ಜನರ ನಡುವೆ ಉತ್ತಮ ಬಾಂಧವ್ಯದಿಂದ ಹಿಡಿದು ಹಲವಾರು ಸಾಮಾನ್ಯ ಹಿತಾಸಕ್ತಿಗಳು ಉಭಯ ದೇಶಗಳನ್ನು ಬೆಸೆದಿವೆ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ ಜೈಸ್ವಾಲ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

▶10

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆ ಇದೆ

4ರಂದು 'ವಿನ್ಯಾಸ ವೈಭವ-02'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅಪರೆಲ್ ತಂತ್ರಜ್ಞಾನ ವಿಭಾಗವು ಇದೇ 4ರಂದು ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ 'ವಿನ್ಯಾಸ ವೈಭವ-02' ಅಕಾಡೆಮಿಕ್ ಫ್ಯಾಷನ್ ಪ್ರದರ್ಶನವನ್ನು ಆಯೋಜಿಸಿದೆ.

ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಪ್ರೊ. ಕೆ.ಆರ್.ಜಲಜಾ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅಪರೆಲ್ ಮತ್ತು ಫ್ಯಾಷನ್ ವಿನ್ಯಾಸ ವಿಭಾಗದ ಪ್ರಭಾರ ಅಧ್ಯಕ್ಷ ಪ್ರೊ. ದೇವರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರದರ್ಶನದಲ್ಲಿ ತೀರ್ಪುಗಾರರಾಗಿ ಫ್ಯಾಷನ್ ತಜ್ಞರು ಭಾಗವಹಿಸಲಿದ್ದಾರೆ.

ವಿದ್ಯಾ ಫ್ಯಾಷನ್ ಅಕಾಡೆಮಿ ಸಂಸ್ಥಾಪಕ ಮತ್ತು ಸಿಇಒ ವಿದ್ಯಾ ವಿವೇಕ್, ಶ್ರೀಕೃಷ್ಣ ಮಿಲ್ ಇಂಡಸ್ಟ್ರೀಯ ವಾಣಿಜ್ಯ ಮತ್ತು ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥೆ ಲಕ್ಷ್ಮಿ ಸುಬ್ರಹ್ಮಣ್ಯ, ವಿಶ್ವವಿದ್ಯಾಲಯದ ಕುಲಸಚಿವ ಬಿ.ರಮೇಶ್, ವಿತ್ತ ಅಧಿಕಾರಿ ವಿಜಯಲಕ್ಷ್ಮಿ ಎಂ.ವಿ ಉಪಸ್ಥಿತರಿರುತ್ತಾರೆ.

ಹಳದಿ ಮಾರ್ಗ: ಸಂಚಾರಕ್ಕೆ ಒಪ್ಪಿಗೆ

ಮೆಟ್ರೊ ರೈಲು ಸುರಕ್ಷತಾ ಆಯೋಗ ಅನುಮತಿ; 25 ನಿಮಿಷಕ್ಕೊಂದು ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ರೈಲು ಸಂಚಾರ ಆರಂಭಿಸಲು ರೈಲ್ವೆಯ ಮೆಟ್ರೊ ರೈಲು ಸುರಕ್ಷತಾ ಆಯೋಗ (ಸಿಎಂಆರ್‌ಎಸ್) ಅನುಮತಿ ನೀಡಿದೆ.

ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರ ಸಂಪರ್ಕಿಸುವ ಈ ಮಾರ್ಗದಲ್ಲಿ ಮೆಟ್ರೊ ರೈಲು ಸುರಕ್ಷತೆ ದಕ್ಷಿಣ ವೃತ್ತದ ಆಯುಕ್ತ ಅನಂತ್ ಮಧುಕರ್ ಚೌಧರಿ ನೇತೃತ್ವದ ತಂಡವು ಜುಲೈ 22ರಿಂದ 25ರವರೆಗೆ ವಿವಿಧ ಪರೀಕ್ಷೆಗಳನ್ನು ನಡೆಸಿತ್ತು.

ಕೆಲವು ಸಣ್ಣ ಸಣ್ಣ ಬದಲಾವಣೆಗಳನ್ನು ಮಾಡಿಕೊಳ್ಳಬೇಕೆಂಬ ಷರತ್ತು ವಿಧಿಸಿ ಅನುಮತಿ ನೀಡಿದೆ. ಆ ಬದಲಾವಣೆಗಳನ್ನು ಮಾಡಿಕೊಳ್ಳುವ ಕಾರ್ಯಗಳು ನಡೆಯುತ್ತಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

'ಸುರಕ್ಷತಾ ಅನುಮತಿ ಸಿಕ್ಕಿರುವ ಬಗ್ಗೆ ನಗರಾಭಿವೃದ್ಧಿ ಇಲಾಖೆಗೆ ಶುಕ್ರವಾರ ತಿಳಿಸಲಾಗಿದೆ. ಅಲ್ಲಿಂದ ಕೇಂದ್ರದ ವಸತಿ ಮತ್ತು ನಗರ ವ್ಯವಹಾರ ಇಲಾಖೆಗೆ ಮಾಹಿತಿ ರವಾನೆಯಾಗಲಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ರೈಲುಗಳ ವ್ಯವಸ್ಥೆ: 19.15 ಕಿ.ಮೀ ಉದ್ದದ ಹಳದಿ ಮಾರ್ಗಕ್ಕೆ ಈಗಾಗಲೇ ಮೂರು ರೈಲುಗಳು ಬಂದಿವೆ. ಪಶ್ಚಿಮ ಬಂಗಾಳದ ಟಿಟಾಗಢ ರೈಲ್ ಸಿಸ್ಟಂ ಲಿಮಿಟೆಡ್ (ಟಿಆರ್‌ಎಸ್‌ಎಲ್) ಕಾರ್ಖಾನೆಯಿಂದ ನಾಲ್ಕನೇ ರೈಲು ಕಳುಹಿಸಿದ್ದು, ಒಂದು ವಾರದ ಒಳಗೆ ಬೆಂಗಳೂರು ತಲುಪಲಿದೆ.

'ಕೇಂದ್ರ ಮತ್ತು ರಾಜ್ಯ ಸರ್ಕಾರ ನಿಗದಿಪಡಿಸಿದ ದಿನದಂದು ಈ ಮಾರ್ಗದಲ್ಲಿ ಸಂಚಾರ ಆರಂಭಗೊಳ್ಳಲಿದೆ. 25 ನಿಮಿಷಕ್ಕೊಂದು ರೈಲುಗಳು ಸಂಚರಿಸಲಿವೆ. ನಾಲ್ಕನೇ ರೈಲು ಬಂದ ಬಳಿಕ ಆ ರೈಲಿನ ಪರಿಶೀಲನೆ ನಡೆಯಲಿದೆ. ಸೆಪ್ಟೆಂಬರ್‌ನಲ್ಲಿ ಇನ್ನೆರಡು ರೈಲುಗಳು ಬರುವ ನಿರೀಕ್ಷೆ ಇದೆ. ಹಳದಿ ಮಾರ್ಗಕ್ಕೆ ಒಟ್ಟು 15 ರೈಲುಗಳ ಅಗತ್ಯವಿದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.



ಎಲ್ಲೆಲ್ಲಿ ನಿಲ್ದಾಣ

ಹಳದಿ ಮಾರ್ಗವು ಬೊಮ್ಮಸಂದ್ರ, ಹೆಬ್ಬಗೋಡಿ, ಹುಸ್ಕೂರು ರಸ್ತೆ, ಇನ್ಫೊಸಿಸ್ ಫೌಂಡೇಷನ್ (ಕೋನಪ್ಪನ ಅಗ್ರಹಾರ), ಎಲೆಕ್ಟ್ರಾನಿಕ್ ಸಿಟಿ, ಬೆರಟೇನ ಅಗ್ರಹಾರ, ಹೊಸರಸ್ತೆ, ಸಿಂಗಸಂದ್ರ, ಕೂಡ್ಲು ಗೇಟ್, ಹೊಂಗಸಂದ್ರ, ಬೊಮ್ಮನಹಳ್ಳಿ, ಸೆಂಟ್ರಲ್ ಸಿಲ್ಕ್ ಬೋರ್ಡ್, ಬಿಟಿಎಂ ಲೇಔಟ್, ಜಯದೇವ ಆಸ್ಪತ್ರೆ, ರಾಗಿಗುಡ್ಡ, ಆರ್.ವಿ.ರಸ್ತೆ ನಿಲ್ದಾಣಗಳನ್ನು ಹೊಂದಿದೆ.

ಸುದ್ದಿ 2 ನಿಮಿಷ

ಸುಪ್ರೀಂಗೆ ಹೆಚ್ಚುವರಿ ಪ್ರಮಾಣಪತ್ರ

ನವದೆಹಲಿ: ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿ ನಗರಾಭಿವೃದ್ಧಿ ಇಲಾಖೆಯು ಶುಕ್ರವಾರ ಹೆಚ್ಚುವರಿ ಪ್ರಮಾಣಪತ್ರ ಸಲ್ಲಿಸಿದೆ.

ವಕೀಲ ಡಿ.ಎಲ್. ಚಿದಾನಂದ ಮೂಲಕ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, 'ನವೆಂಬರ್ 1ರಂದು ವಾರ್ಡ್‌ಗಳ ಮರುವಿಂಗಡಣಾ ಪಟ್ಟಿ ಪ್ರಕಟಿಸಲಾಗುವುದು. ನವೆಂಬರ್ 30ಕ್ಕೆ ಮೀಸಲಾತಿಯ ಅಂತಿಮ ಅಧಿಸೂಚನೆ ಹೊರಡಿಸಲಾಗುವುದು. ಆ ಬಳಿಕ ಪಾಲಿಕೆ ಚುನಾವಣೆ ನಡೆಸಬಹುದು' ಎಂದು ತಿಳಿಸಿದ್ದಾರೆ.

'ಅದಕ್ಕೂ ಮುನ್ನವೇ ಈ ಎಲ್ಲ ಪ್ರಕ್ರಿಯೆ ಮುಗಿಸಲು ಪ್ರಯತ್ನಿಸಲಾಗುವುದು. ಚುನಾವಣೆಗೆ ಸಂಬಂಧಿಸಿದಂತೆ ನ್ಯಾಯಪೀಠದ ಎಲ್ಲ ನಿರ್ದೇಶನಗಳನ್ನು ಪಾಲಿಸಲು ಸಿದ್ಧರಿದ್ದೇವೆ' ಎಂದು ಅವರು ಹೇಳಿದ್ದಾರೆ. ಈ ಪ್ರಕರಣದ ವಿಚಾರಣೆ ಮುಂದಿನ ಸೋಮವಾರಕ್ಕೆ ನಿಗದಿಯಾಗಿದೆ.

'ಸ್ವಯಂ ನಿಯಂತ್ರಣ ಮುಖ್ಯ'



ಬೆಂಗಳೂರು: 'ಮಹಂತ ಶಿವಯೋಗಿ ಸ್ವಾಮೀಜಿ ಅವರ ಜನ್ಮದಿನದ ಪ್ರಯುಕ್ತ ನಡೆಯುತ್ತಿರುವ ಒಂದು ದಿನದ 'ವ್ಯಸನಮುಕ್ತ' ಆಚರಣೆ, ಆಗಸ್ಟ್ ತಿಂಗಳು ಪೂರ್ತಿ ನಡೆಯುವ ಮೂಲಕ 'ಮಾಸಾಚರಣೆ' ಆಗಬೇಕು' ಎಂದು ಮನೋವಿಜ್ಞಾನಿ ಎ. ಶ್ರೀಧರ್ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಗಾಂಧಿ ಸ್ಮಾರಕ ನಿಧಿ ಸೇರಿದಂತೆ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಶುಕ್ರವಾರ ನಡೆದ 'ವ್ಯಸನಮುಕ್ತ ದಿನಾಚರಣೆ'ಯಲ್ಲಿ ಅವರು ಉಪನ್ಯಾಸ ನೀಡಿದರು.

ಸ್ವಯಂ ನಿಯಂತ್ರಣದಿಂದಲೇ ವ್ಯಸನಮುಕ್ತರಾಗಲು ಸಾಧ್ಯವಿದೆ' ಎಂದು ಅವರು ಅಭಿಪ್ರಾಯಪಟ್ಟರು.

ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್ ಮಾತನಾಡಿ, 'ವ್ಯಸನಮುಕ್ತ' ದಿನಾಚರಣೆ ಜಿಲ್ಲೆ, ತಾಲ್ಲೂಕು ಮಟ್ಟದಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆಯುವಂತಾಗಬೇಕು' ಎಂದು ಸಲಹೆ ನೀಡಿದರು.

ಚಿತ್ತರಗಿ ಇಳಕಲ್ ವಿಜಯಮಹಾಂತೇಶ್ವರ ಸಂಸ್ಥಾನದ ಗುರುಮಹಾಂತ ಸ್ವಾಮೀಜಿ, ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷೆ ಆಯೇಷಾ ಖಾನುಂ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಕಾರ್ಯದರ್ಶಿ ಎನ್.ಎಸ್.ಮಹೇಶ್, ಗಾಂಧಿ ಸ್ಮಾರಕ ನಿಧಿಯ ಕೋಶಾಧಿಕಾರಿ ಎಚ್.ಬಿ.ದಿನೇಶ್, ಗಾಂಧಿ ಭವನದ ಕಾರ್ಯದರ್ಶಿ ಎಂ.ಸಿ.ನರೇಶ್, ಸದಸ್ಯೆ ಅಬಿದಾ ಬೇಗಂ ಇದ್ದರು.



ಸಮಾರಂಭದಲ್ಲಿ ರಾಜ್ಯ ಪ್ರಶಸ್ತಿ ವಿಜೇತ ಮತ್ತು ಜಾನಪದ ಗಾಯಕಿ ಹೊನ್ನಗಂಗಮ್ಮ ಅವರನ್ನು ಅಭಿನಂದಿಸಲಾಯಿತು. ಎಸ್. ಮುನಿರಾಜು, ಎಸ್ ಬಾಲಾಜಿ, ರಿಯಾಜ್ ಪಾಷ, ವೈ.ಬಿ.ಎಚ್ ಜಯದೇವ್, ಚಿಕ್ಕಹೆಜ್ಜಾಜಿ ಮಹದೇವ್, ಬಿ.ಎಂ. ವೆಂಕಟೇಶ್ ಎಂ.ಬಿ. ದಯಾನಂದ್, ಭರತ್ ಗುಂಡಪ್ಪ, ಎಸ್ ಮಂಜುನಾಥ್ (ಎಬಿಬಿ), ಲತಾ ಕುಂದರಗಿ, ಸಂಗನಬಸಪ್ಪ ಬಿರಾದಾರ್ ಮತ್ತಿತರರು ಇದ್ದರು

'ಜಾನಪದ ನಮ್ಮ ಸಂಸ್ಕೃತಿಯ ಪ್ರತೀಕ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಜಾನಪದ ನಮ್ಮ ಸಂಸ್ಕೃತಿಯ ಪ್ರತೀಕ. ಅದು ನಮ್ಮ ಬದುಕಿಗೆ ನೀತಿ ಪಾಠಗಳನ್ನು ಕಲಿಸುತ್ತದೆ' ಎಂದು ಕನ್ನಡಪರ ಚಿಂತಕ ಚಿಕ್ಕಹೆಜ್ಜಾಜಿ ಮಹದೇವ್ ತಿಳಿಸಿದರು.

ಕನ್ನಡ ಜಾನಪದ ಪರಿಷತ್‌ಗೆ ಹತ್ತು ವರ್ಷ ತುಂಬಿದ ಪ್ರಯುಕ್ತ ದಾಸರಹಳ್ಳಿ ಕ್ಷೇತ್ರ ಘಟಕದ ವತಿಯಿಂದ ಹೆಸರಘಟ್ಟ ಮುಖ್ಯರಸ್ತೆಯ ಅಸೆಂಟ್ ಪಿಯು ಕಾಲೇಜಿನಲ್ಲಿ ಆಯೋಜಿಸಿದ್ದ 'ದಶಮಾನೋತ್ಸವ ಸಂಭ್ರಮ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಾಸಕ ಎಸ್. ಮುನಿರಾಜು ಮಾತನಾಡಿ, 'ನಮ್ಮ ಬಾಲ್ಯದಲ್ಲಿ ಜಾನಪದ ಹಾಡು, ನೃತ್ಯ, ಕ್ರೀಡೆ ಎಲ್ಲವೂ ಇದ್ದವು. ಇವೆಲ್ಲದರ ಜೊತೆಗೆ ನಮ್ಮ ಬದುಕು ಸಮೃದ್ಧವಾಗಿತ್ತು. ಅಂತಹ ಸಮೃದ್ಧ ಜಾನಪದ ಸಂಸ್ಕೃತಿಯನ್ನು ನಾವಿಂದು ಉಳಿಸಬೇಕಿದೆ' ಎಂದರು.

ಕನ್ನಡ ಜಾನಪದ ಪರಿಷತ್ ರಾಜ್ಯಾಧ್ಯಕ್ಷ ಎಸ್ ಬಾಲಾಜಿ ಮಾತನಾಡಿ, 'ಜಾನಪದ ಎಂಬುದು ವಿಶಾಲವಾದ ಆಲದ ಮರ. ಅದರ ಸಮೃದ್ಧ ನೆರಳಲ್ಲಿ ನಾವು ಬದುಕುವಂತಾಗಬೇಕು. ಜಾನಪದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಮಹತ್ತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ' ಎಂದು ತಿಳಿಸಿದರು.

ಸಮಾರಂಭದಲ್ಲಿ 10 ಸಾಧಕರಿಗೆ ದಶಮಾನೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿದ್ಯಾರ್ಥಿಗಳಿಂದ ನೃತ್ಯ, ಹಾಡು ಮನರಂಜನಾ ಕಾರ್ಯಕ್ರಮಗಳು ನಡೆದವು.

ಬಿಡಿಎಗೆ ಸುಪ್ರೀಂ ತರಾಟೆ

ಪ್ರಜಾವಾಣಿ ವಾರ್ತೆ

ನವದೆಹಲಿ: 2015ರ ಭೂ ವ್ಯವಹಾರಕ್ಕೆ ಸಂಬಂಧಿಸಿದಂತೆ ವಂಚನೆ ಮತ್ತು ಪಿತೂರಿ ಆರೋಪ ಹೊತ್ತಿರುವ ಬೆಂಗಳೂರಿನ ನಾಲ್ವರು ಭೂಮಾಲೀಕರ ವಿರುದ್ಧದ ಎಫ್‌ಐಆರ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ.

ಆದಾಗ್ಯೂ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧಿಕಾರಿಗಳು ಖಾಸಗಿ ವ್ಯಕ್ತಿಗಳೊಂದಿಗೆ ಶಾಮೀಲಾಗಿ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆ ತಂದಿದ್ದಾರೆ. ಅಲ್ಲದೇ, ಸ್ವಾಧೀನ ಪಡಿಸಿಕೊಂಡ ಜಮೀನನ್ನು ಖಾಸಗಿ ವ್ಯಕ್ತಿಗಳಿಗೆ ಹಿಂದಿರುಗಿಸಲು ಅನುಕೂಲ ಮಾಡಿಕೊಟ್ಟಿದ್ದಾರೆ ಎಂದು ನ್ಯಾಯಪೀಠ ತೀವ್ರ ಕಳವಳ ವ್ಯಕ್ತಪಡಿಸಿದೆ.

'ನ್ಯಾಯಾಲಯವು ಪ್ರಸ್ತುತ ಮೇಲ್ಮನವಿಯನ್ನು ಅನುಮತಿಸಿದೆ. ಆದರೆ, ಶಾಸನಬದ್ಧ ಸಂಸ್ಥೆಗಳ ಲೋಪದಿಂದಾಗಿ ಸಾಮಾನ್ಯ ನಾಗರಿಕರ, ವಿಶೇಷವಾಗಿ ಬೆಂಗಳೂರಿನ ಹಿತಾಸಕ್ತಿಗೆ ಧಕ್ಕೆಯಾಗಿದೆ' ಎಂದು ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರ ಪೀಠ ಹೇಳಿದೆ. ರಾಜಮಹಲ್ ವಿಲಾಸ್ ಎರಡನೇ ಹಂತದ ಬಡಾವಣೆ ನಿರ್ಮಿಸುವುದಕ್ಕಾಗಿ ಪ್ರಾಧಿಕಾರವು ಭೂಪಸಂದ್ರ ಗ್ರಾಮದ ಸರ್ವೆ ನಂಬರ್ 20ರಲ್ಲಿ 3 ಎಕರೆ 34 ಗುಂಟೆ ಹಾಗೂ ಸರ್ವೆ ನಂಬರ್ 21ರಲ್ಲಿ 2 ಎಕರೆ 32 ಗುಂಟೆ ಸ್ವಾಧೀನ ಮಾಡಿಕೊಂಡು 42 ಜನರಿಗೆ ನಿವೇಶನ ಹಂಚಿಕೆ ಮಾಡಿತ್ತು. 1992ರಲ್ಲಿ ಆಗಿನ ಸರ್ಕಾರ ಈ ಜಮೀನನ್ನು ಸಂಪೂರ್ಣವಾಗಿ ಡಿನೋಟಿಫೈ ಮಾಡಿ ಮೂಲ ಮಾಲೀಕರ ವಶಕ್ಕೆ ನೀಡಿತ್ತು. ಇದನ್ನು ಪ್ರಶ್ನಿಸಿ ನಿವೇಶನಗಳ ಮಾಲೀಕರು ಹೈಕೋರ್ಟ್ ಮೊರೆ ಹೋಗಿದ್ದರು. ಡಿನೋಟಿಫಿಕೇಷನ್ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿತ್ತು.

ಈ ನಡುವೆ, ಕೀರ್ತಿರಾಜ್ ಶೆಟ್ಟಿ ಎಂಬುವರು ನೀಡಿದ ಖಾಸಗಿ ದೂರಿನ ಆಧಾರದಲ್ಲಿ 2023ರ ಅಕ್ಟೋಬರ್‌ನಲ್ಲಿ ಸಂಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

'ಭೂಪಸಂದ್ರ ಗ್ರಾಮದಲ್ಲಿ 6 ಎಕರೆ ಜಮೀನನ್ನು ಮಾರಾಟ ಮಾಡಲು ಶೆಟ್ಟಿ ಅವರು ಆರೋಪಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು. ಆರೋಪಿಗಳು ಗಣನೀಯ ಮೊತ್ತದ ಹಣ ಪಡೆದು ಸಾಮಾನ್ಯ ಪವರ್ ಆಫ್ ಅಟಾರ್ನಿ ಕಾರ್ಯಗತಗೊಳಿಸಿದ್ದರು. ನಂತರ ಅದನ್ನು ರದ್ದುಗೊಳಿಸಿ ಜಮೀನನ್ನು ಬೇರೆಯವರಿಗೆ ವರ್ಗಾಯಿಸಿದ್ದರು' ಎಂದು ದೂರುದಾರರು ಆರೋಪಿಸಿದ್ದರು. ಪೊಲೀಸರು 2024ರ ಆಗಸ್ಟ್ 8ರಂದು ಆರೋಪಪಟ್ಟಿ ಸಲ್ಲಿಸಿದ್ದರು. ಎಫ್‌ಐಆರ್ ರದ್ದುಗೊಳಿಸುವಂತೆ ಸಲ್ಲಿಸಿದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು.

ಆರೋಪಿಗಳ ವಿರುದ್ಧ ಯಾವುದೇ ಆರೋಪ ಸಾಬೀತಾಗಿಲ್ಲ ಎಂದು ಪೀಠ ಅಭಿಪ್ರಾಯಪಟ್ಟಿತು.

ಸಂಕ್ಷಿಪ್ತ ಸುದ್ದಿ

ಸೂಕ್ಷ್ಮಜೀವಿಗಳ ಕುರಿತ ಸಂವಾದ ನಾಳೆ

ಬೆಂಗಳೂರು: ಸೂಕ್ಷ್ಮಜೀವಿಗಳ ಕುರಿತು ಅರಿವು ಮೂಡಿಸಲು ನೇಚರ್ ಇನ್‌ಸ್ಪೈರ್ಸ್ ಸಂಸ್ಥೆ ಆಗಸ್ಟ್ 3ರಂದು 'ಸೊಗಡು ಸಂವಾದ' ಎಂಬ ವಿಶೇಷ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ.

ಬೆಳಿಗ್ಗೆ 9 ರಿಂದ 12ರವರೆಗೆ ಸಂವಾದ ನಡೆಯಲಿದ್ದು, ಸೂಕ್ಷ್ಮಜೀವಿಗಳ ಹತೋಟಿಗೆ ಅತಿಯಾಗಿ ಬಳಸುವ ರಾಸಾಯನಿಕಗಳಿಂದ ಆಗುವ ಆಂಟಿಮೈಕ್ರೊಬಿಯಲ್ ಪ್ರತಿರೋಧದ (ಎಎಂಆರ್) ಬಗ್ಗೆ ಸರಳವಾಗಿ ವಿವರಿಸಲಾಗುತ್ತದೆ. ಆಸಕ್ತರು 9845707043 / 8453007043 ಸಂಪರ್ಕಿಸಬಹುದು. ಸಂವಾದ' ನಡೆಯುವ ಸ್ಥಳ: 'ಸೊಗಡು', 395, 7ಎ ಮುಖ್ಯರಸ್ತೆ, 5 ನೇ ಹಂತ, ಬೆಮಲ್ ಬಡಾವಣೆ, ರಾಜರಾಜೇಶ್ವರಿನಗರ, ಬೆಂಗಳೂರು - 560098.

'ಆನ್‌ಲೈನ್ ಭಾಷಣ ಸ್ಪರ್ಧೆ'

ಬೆಂಗಳೂರು: 79ನೇ ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಪರಂಪರಾ ಕಲ್ಚರಲ್ ಫೌಂಡೇಷನ್ ವತಿಯಿಂದ ಮಕ್ಕಳಿಗಾಗಿ 'ನನ್ನ ಹೆಮ್ಮೆಯ ಸ್ವಾತ್ರಂತ್ರ ಹೋರಾಟಗಾರ/ಗಾರ್ತಿ' ಕುರಿತು 'ಆನ್‌ಲೈನ್ ಭಾಷಣ ಸ್ಪರ್ಧೆ' ಆಯೋಜಿಸಲಾಗಿದೆ. ಐದರಿಂದ ಏಳನೇ ತರಗತಿ ಹಾಗೂ ಎಂಟರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಸ್ಪರ್ಧೆ ನಡೆಯಲಿದೆ. ಆಸಕ್ತರು ಆಗಸ್ಟ್ 12ರೊಳಗೆ ಭಾಷಣದ ವಿಡಿಯೊಗಳನ್ನು https://forms.gle/4AUa4zwdo8vbsSEr5 ಮೂಲಕ ಸಲ್ಲಿಸಬಹುದು ಎಂದು ಫೌಂಡೇಷನ್ ಅಧ್ಯಕ್ಷ ಜಿ.ಪಿ. ರಾಮಣ್ಣ ತಿಳಿಸಿದ್ದಾರೆ. ಸಂಪರ್ಕ: 9448202708.

ರಾಜ್ಯಮಟ್ಟದ ಸಮ್ಮೇಳನ ಆ. 5ಕ್ಕೆ

ಬೆಂಗಳೂರು: ಅಕಾಡೆಮಿ ಆಫ್ ಫ್ಯಾಮಿಲಿ ಫಿಸಿಶಿಯನ್ಸ್ ಆಫ್ ಇಂಡಿಯಾದಿಂದ (ಎಎಫ್‌ಪಿಐ) ಆಗಸ್ಟ್ 5ರಂದು ಕುಟುಂಬ ಔಷಧ ಮತ್ತು ಪ್ರಾಥಮಿಕ ಆರೈಕೆಯ ಐದನೇ ರಾಜ್ಯಮಟ್ಟದ ಸಮ್ಮೇಳನವು ಎಸ್.ಟಿ. ಜಾನ್ಸ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಫ್‌ಪಿಐನ ಅಧ್ಯಕ್ಷೆ ಡಾ. ಸೌಮ್ಯ ಬಿ. ರಮೇಶ್, 'ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದ 300ಕ್ಕೂ ಹೆಚ್ಚು ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಸಂಸದ ಡಾ.ಸಿ.ಎನ್. ಮಂಜುನಾಥ್ ಅವರು ಸಮ್ಮೇಳನ ಉದ್ಘಾಟಿಸಲಿದ್ದಾರೆ ಎಂದರು.

ನಗರದಲ್ಲಿ ಇಂದು

ವಚನ ಶ್ರಾವಣ: ವಚನ ಗಾಯನ: ಎಸ್. ಪಿನಾಕಪಾಣಿ, ವಚನ ಚಿಂತನ: ಪ್ರಭು ಇಸುವನಹಳ್ಳಿ, ಅತಿಥಿ: ಎಸ್.ಐ. ಬಾವಿಕಟ್ಟಿ, ಅಧ್ಯಕ್ಷತೆ: ಬಿ.ಕೆ. ರಾಜು, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಶಾರದಾ ವಿದ್ಯಾಲಯ ಅಂಗಳ, ಕಡಬಗೆರೆ ಕ್ರಾಸ್, ಮಾಚೋಹಳ್ಳಿ 2ನೇ ಹಂತ, ಬೆಳಿಗ್ಗೆ 9.15

'ಭವಿಷ್ಯ ಮಾಲಿಕಾ ಪುರಾಣ ಕಲ್ಕಿ ಅವತಾರ ಮತ್ತು ಧರ್ಮ ಸಂಸ್ಥಾಪನೆ ಭಾಗ-2' ಪುಸ್ತಕ ಬಿಡುಗಡೆ: ಅತಿಥಿಗಳು: ಕಾಶಿನಾಥ್ ಮಿಶ್ರಾ, ನರೇಂದ್ರ ಬಾಬು ಶರ್ಮಾ, ಮೋಹನ್ ಸುಂದರ್ ಗುರೂಜಿ, ಅಶೋಕ್ ಹಾರನಹಳ್ಳಿ, ರಾಜೇಶ್ ರಾವ್, ಸಮತಾನಂದ, ಮೋಹನ್ ಭಯ್ಯಾ, ಆಯೋಜನೆ: ವಿಶ್ವ ಸನಾತನ ಧರ್ಮ ಟ್ರಸ್ಟ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ಸಂತ ಕನಕದಾಸರ ವಿಚಾರ ಸಂಕಿರಣ, ಕೀರ್ತನೆಗಳ ಗಾಯನ-ನೃತ್ಯ, ನಾಟಕ ಪ್ರದರ್ಶನ: ಆಯೋಜನೆ: ಮಮತ ಮಕ್ಕಳ ಮಂದಿರ, ಸ್ಥಳ: ಕಲ್ಯಾಣ ಶಂಕರ ಸದನ, ಈಶ್ವರ ದೇವಾಲಯ, ಗೋವಿಂದ ರಾಜನಗರ ವಾರ್ಡ್, ಕಲ್ಯಾಣನಗರ, ಬೆಳಿಗ್ಗೆ 10

18ನೇ ವಾರ್ಷಿಕೋತ್ಸವ ಹಾಗೂ ವ್ಯಂಗ್ಯಚಿತ್ರಕಾರ ಸುರೇಂದ್ರ ಅವರಿಗೆ 'ಬಾರ್ಟನ್ಸ್ ಜೀವಮಾನ ಸಾಧನೆ ಪ್ರಶಸ್ತಿ' ಪ್ರದಾನ ಸಮಾರಂಭ: ಉದ್ಘಾಟನೆ: ಅಮರನಾಥ್ ಕಾಮತ್, ಅತಿಥಿ: ಭರತ್ ಮೆಹ್ತಾ, ಅಧ್ಯಕ್ಷತೆ: ಕೆ. ಅನಂತ ಗೌಡ, ಆಯೋಜನೆ ಹಾಗೂ ಸ್ಥಳ: ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ಮಿಡ್ ಫೋರ್ಡ್ ಹೌಸ್, ಮಿಡ್ ಫೋರ್ಡ್ ಗಾರ್ಡನ್, ಟ್ರಿನಿಟಿ ವೃತ್ತ, ಬೆಳಿಗ್ಗೆ 11

'ಭಾರತ ಉತ್ಪಾದನಾ ಪ್ರದರ್ಶನ' ಪೂರ್ವಭಾವಿ ಕಾರ್ಯಕ್ರಮ: ಮುಖ್ಯ ಅತಿಥಿಗಳು: ಸಂಜಯ್ ಸೇಠ್, ಶೋಭಾ ಕರಂದ್ಲಾಜೆ, ಮನೋಜ್ ಜೈನ್, ಎಚ್.ಎಸ್. ಶಂಕರ್, ಟಿ.ಕೆ. ರಮೇಶ್, ಸುನೀಲ್ ದೇವಧರ್, ಸುನೀಲ್ ಗೋಪಿನಾಥ್, ಆಯೋಜನೆ: ಲಘು ಉದ್ಯೋಗ ಭಾರತಿ ಕರ್ನಾಟಕ, ಐಎಂಎಸ್ ಫೌಂಡೇಷನ್, ಸ್ಥಳ: ಹೋಟೆಲ್ ತಾಜ್, ಯಶವಂತಪುರ, ತುಮಕೂರು ರಸ್ತೆ, ಬೆಳಿಗ್ಗೆ 11

ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವ ಹಾಗೂ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಆರ್. ಅಶೋಕ, ಸನ್ಮಾನಿಸುವವರು: ಕೃಷ್ಣ ಬೈರೇಗೌಡ, ಡಾ.ಸಿ.ಎನ್.ಅಶ್ವತ್ಥನಾರಾಯಣ, 'ಒಕ್ಕಲಿಗ ರತ್ನ ಪ್ರಶಸ್ತಿ' ಪುರಸ್ಕೃತರು: ಬಿ. ವೀರಪ್ಪ, ಜಯರಾಮ್ ರಾಯಪುರ, ಜಗ್ಗೇಶ್, 'ತ್ಯಾಗಿ ಲಕ್ಷ್ಮೀದೇವಿ ಪ್ರಶಸ್ತಿ' ಪುರಸ್ಕೃತರು: ಕೆ. ಜ್ಯೋತಿ, ಆರತಿ ಕೃಷ್ಣ, ಆಯೋಜನೆ: ರಾಜ್ಯ ಒಕ್ಕಲಿಗರ ಜಾಗೃತಿ ಸಂಘ, ಸ್ಥಳ: ಕುವೆಂಪು ಕಲಾಕ್ಷೇತ್ರ, ವಿ.ವಿ. ಪುರ, ಬೆಳಿಗ್ಗೆ 10

'ಎಲ್ಲರಿಗೂ ಇದು ನಮ್ಮ ಬೆಂಗಳೂರು ಆಗಲು ಇರುವ ಸವಾಲುಗಳು ಮತ್ತು ಸಾಧ್ಯತೆಗಳು' ವಿಷಯ ಆಧರಿಸಿ ಸಭೆ: 'ಸಮುದಾಯಗಳು' ಗೋಷ್ಠಿ: ವಿನಯ್ ಶ್ರೀನಿವಾಸ್, ನರಸಿಂಹಮೂರ್ತಿ, ಬಸವರಾಜ ಕೌತಾಳ, ಶಾನ್ ಅಹದ್, 'ಸಮಸ್ಯೆಗಳು' ಗೋಷ್ಠಿ: ಪಾರಸ್ ಶರ್ಮ, ಚಂಪಕ ರಾಜಗೋಪಾಲ್, ಮ್ಯಾಥ್ಯೂ ಇಡಿಕುಲ, 'ರಾಜಕೀಯ ಮತ್ತು ಸಾಮಾಜಿಕ ಸಂಘಟಿಸುವಿಕೆ' ಗೋಷ್ಠಿ: ಸೌಮ್ಯಾ ರೆಡ್ಡಿ, ಕುಸುಮಾ ಹನುಮಂತರಾಯಪ್ಪ, ಆಯೋಜನೆ: ಜಾಗೃತ ಕರ್ನಾಟಕ, ಸ್ಥಳ: ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಮಧ್ಯಾಹ್ನ 2.30


ಎಚ್.ಎಲ್. ನಾಗೇಗೌಡ ಅವರ 'ಬೆಟ್ಟದಿಂದ ಬಟ್ಟಲಿಗೆ' ಪುಸ್ತಕ ಬಿಡುಗಡೆ: ಹಂಪ ನಾಗರಾಜಯ್ಯ, ಮುಖ್ಯ ಅತಿಥಿ: ಜಿ.ಎನ್. ಮೋಹನ್, ಕಿರುಹೊತ್ತಿಗೆ ಬಿಡುಗಡೆ: ಎಂ.ಎನ್. ವೆಂಕಟೇಶ್, ಉಪಸ್ಥಿತಿ: ಆದಿತ್ಯ ನಂಜರಾಜ್, ಅಧ್ಯಕ್ಷತೆ: ಹಿ.ಚಿ. ಬೋರಲಿಂಗಯ್ಯ, ಆಯೋಜನೆ: ಕರ್ನಾಟಕ ಜಾನಪದ ಪರಿಷತ್ತು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3

'ಓದುಗೆ ಸುಗ್ಗಿ!' ಮೂರು ಪುಸ್ತಕಗಳ ಬಿಡುಗಡೆ: ಹೃದಯ ಶಿವ ಅವರ 'ಸೂಪರ್ ಗಾಡ್ ಸಣ್ಣಯ್ಯ', ಮೇಘನಾ ಸುಧೀಂದ್ರ ಅವರ 'ಮಿಲೇನಿಯಲ್ ಅಮ್ಮ' ಹಾಗೂ ದಾದಾಪೀರ್ ಜೈಮನ್ ಅವರ 'ಜಂಕ್ಷನ್ ಪಾಯಿಂಟ್' ಪುಸ್ತಕ ಬಿಡುಗಡೆ, ಸಂವಾದದಲ್ಲಿ ಪಾಲ್ಗೊಳ್ಳುವವರು: ಟಿ.ಎಸ್.ಗೊರವರ, ಜೋಗಿ, ವಸುಧೇಂದ್ರ, ಆಯೋಜನೆ: ಹರಿವು ಬುಕ್ಸ್, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಮಧ್ಯಾಹ್ನ 3

ಕೆ.ಎಸ್. ಅಯ್ಯರ್ ಸ್ಮಾರಕ ದತ್ತಿ ಉಪನ್ಯಾಸ: 'ಸಂವಿಧಾನದ ಅಡಿಯಲ್ಲಿ ಉತ್ತಮ ಆಡಳಿತ' ವಿಷಯದ ಬಗ್ಗೆ: ಬಿ.ವಿ. ನಾಗರತ್ನ, ಅತಿಥಿಗಳು: ಶಾಲಿನಿ ರಜನೀಶ್, ಟಿ.ಎಂ. ವಿಜಯ್ ಭಾಸ್ಕರ್, ಆಯೋಜನೆ: ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆ, ಸ್ಥಳ: ಐಎಎಸ್ ಆಫೀಸರ್ಸ್ ಅಸೋಸಿಯೇಷನ್, ಇನ್ಫೆಂಟ್ರಿ ರಸ್ತೆ, ಸಂಜೆ 4

'ಗುರು ಸ್ಮರಣೆ' ನೃತ್ಯ ರೂಪಕ: ಪ್ರಿಯಾ ಗಣೇಶ್, ಶರ್ಲೋವಿ ಜಿ. ಆತ್ರೇಯ, ಅತಿಥಿಗಳು: ಬಲವಂತರಾವ್ ಪಾಟೀಲ, ಟಿ.ಜಿ. ನರಸಿಂಹಮೂರ್ತಿ, ಆನೂರು ಅನಂತಕೃಷ್ಣ ಶರ್ಮ, ಆಯೋಜನೆ: ಸಮುದ್ಭವ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 4.30

ರಂಗ ಸಂವಾದ: ತಿಂಗಳ ಅತಿಥಿ: ಶಶಿಧರ್ ಅಡಪ, ಅಧ್ಯಕ್ಷತೆ: ಕೆ.ವಿ. ನಾಗರಾಜ ಮೂರ್ತಿ, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5



ಶಶಿಧರ್ ಅಡಪ

'ಸ್ವರ ಮಲ್ಹಾರ್' ಸಂಗೀತ ಕಾರ್ಯಕ್ರಮ: ಪಿಟೀಲು: ತೇಜಸ್ ಉಪಾಧ್ಯೆ, ತಬಲಾ: ಉನ್ಮೇಶ್ ಬ್ಯಾನರ್ಜಿ, ಭರತ್ ಕಾಮತ್, ಓಜಸ್ ಆದಿಯಾ, ಸಂತೂರ್: ರಾಹುಲ್ ಶರ್ಮಾ, ಗಾಯನ: ಆನಂದ ಭಾಟೆ, ಹಾರ್ಮೋನಿಯಂ: ಸುಯೋಗ ಕುಂಡಲ್ಕರ್, ಆಯೋಜನೆ: ಸಪ್ತಕ, ವಯೋಲಿನ್ ಅಕಾಡೆಮಿ, ಸ್ಥಳ: ಪತ್ತಿ ಸಭಾಂಗಣ, ರಾಮ ಮಂದಿರ, ಎನ್.ಆರ್. ಕಾಲೊನಿ, ಸಂಜೆ 5

ಬಸವನಗುಡಿ ಜಿ. ನಟರಾಜ್ ಅವರ 81ನೇ ಜನ್ಮ ವಾರ್ಷಿಕೋತ್ಸವ ಹಾಗೂ ಸಂಸ್ಮರಣಾ ಕಾರ್ಯಕ್ರಮ: ಅತಿಥಿ: ಎಸ್. ರಘುನಾಥ್, ಸನ್ಮಾನಿತರು: ಎಂ. ದಯಾನಂದ ಮೋಹಿತೆ, ಸಂಗೀತ ಕಾರ್ಯಕ್ರಮ: ಬಿ. ರಘುರಾಮ್, ರಮ್ಯಾ ರಘುರಾಮ್, ಎನ್. ಅಮೃತ್, ಎ.ಎಸ್.ಎನ್. ಸ್ವಾಮಿ, ಆಯೋಜನೆ: ಆವಾಹನ ಕಲ್ಚರಲ್ ಟ್ರಸ್ಟ್, ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ 8ನೇ ಬ್ಲಾಕ್, ಸಂಜೆ 5.30



ಬಳ್ಕೂರು ಕೃಷ್ಣ ಯಾಜಿ

'ಯಕ್ಷ ಕಾರ್ತಿಕ' ಯಕ್ಷಗಾನ ಪ್ರದರ್ಶನ: 'ಕಂಸ ವಧೆ', 'ಮೋಕ್ಷ ಸಂಗ್ರಾಮ' ಹಾಗೂ 'ಲವ ಕುಶ' ಯಕ್ಷಗಾನ ಪ್ರದರ್ಶನ, ಹಿಮ್ಮೇಳ: ಜನ್ಸಾಲೆ ರಾಘವೇಂದ್ರ ಆಚಾರ್, ಪ್ರಸನ್ನ ಭಟ್ ಬಾಳ್ಕಲ್, ಶಶಾಂಕ್ ಆಚಾರ್ಯ, ಅನಿರುದ್ಧ ಹೆಗಡೆ, ಪ್ರಜ್ವಲ್ ಮುಂಡಾಡಿ, ನಯನ್ ಕುಮಾರ್ ನಿಟ್ಟೂರು, ಅತಿಥಿ ಕಲಾವಿದರು: ಬಳ್ಕೂರು ಕೃಷ್ಣಯಾಜಿ, ಕೊಂಡದಕುಳಿ ರಾಮಚಂದ್ರ ಹೆಗಡೆ, ಶಂಕರ ಭಟ್ಟ ಬ್ರಹ್ಮೂರು, ಅಶೋಕ್ ಭಟ್ ಸಿದ್ಧಾಪುರ, ಶ್ರೀವತ್ಸ ಗುಡ್ಡೆದಿಂಬ, ಆಯೋಜನೆ: ಪೆರ್ಡೂರು ಮೇಳ, ಸ್ಥಳ: ರವಿಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ರಾತ್ರಿ 9.55

ವಚನ ಶ್ರಾವಣ: ವಚನ ಗಾಯನ: ಸುನೀಲ್, ವಿಜಯಕುಮಾರ್, ಚಿರಂತ್, ಮಮತಾ, ಶ್ರುತಿ, ವಚನ ಚಿಂತನ: ಎಸ್. ಪಿನಾಕಪಾಣಿ, ಅತಿಥಿಗಳು: ಅನುಪಮಾ ಪಂಚಾಕ್ಷರಿ, ಲಕ್ಷ್ಮಿ ಪ್ರಭುರಾಜ್, ಅಧ್ಯಕ್ಷತೆ: ಎಸ್.ಜಿ. ಚಂದ್ರಯ್ಯ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಶ್ರೀನಿಲಯಂ 3, ಬಂಡೇಮಠ ಬಡಾವಣೆ, ಕೊಮ್ಮಘಟ್ಟ ರಸ್ತೆ, ಕೆಂಗೇರಿ ಉಪನಗರ, ಸಂಜೆ 6

ಆರಾಧನಾ ಮಹೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ: ಹರಿದಾಸ ಮಂಜರಿ: ಅನಂತರಾಜ್ ಮಿಸ್ತ್ರಿ ಮತ್ತು ಸಂಗಡಿಗರು, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಸುಧೀಂದ್ರ ನಗರ, ಸಂಜೆ 6.30

'ಅಪರಾಧಿ ನಾನಲ್ಲ' ನಾಟಕ ಪ್ರದರ್ಶನ: ನಿರ್ದೇಶನ: ಪ್ರದೀಪ್ ಅಂಚೆ, ತಂಡ: ರಂಗರಸಧಾರೆ, ಸ್ಥಳ: ಡಾ. ಸಿ.ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7

'ಗುರುವಂದನಾ' ಕಾರ್ಯಕ್ರಮ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ, ಅತಿಥಿಗಳು: ಮಧು ಬಂಗಾರಪ್ಪ, ಜಿ.ಸಿ. ಚಂದ್ರಶೇಖರ್, ಪ್ರಶಸ್ತಿ ಪುರಸ್ಕೃತರು: ಬಿ.ಕೆ. ಶಿವರಾಂ, ಚಿತ್ರಾ ಎ. ರಾವ್, ದಾಸಪ್ಪ, ಆರ್.ಎ. ರಮಾಮಣಿ, ಪಾವಗಡ ಪ್ರಕಾಶ್ ರಾವ್, ಆಯೋಜನೆ: ಮಲ್ಲೇಶ್ವರಂ ನಾಗರಿಕ ನಿರ್ವಹಣಾ ಸಮಿತಿ, ಸ್ಥಳ: ಜೆ.ಎನ್. ಟಾಟಾ ಸಭಾಂಗಣ, ಭಾರತೀಯ ವಿಜ್ಞಾನ ಸಂಸ್ಥೆ ಕ್ಯಾಂಪಸ್, ಮಲ್ಲೇಶ್ವರ, ಮಧ್ಯಾಹ್ನ 2



ನಿರ್ಮಲಾನಂದ ನಾಥ ಸ್ವಾಮೀಜಿ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಗುತ್ತಿಗೆಯಿಂದ ಹಿಂದೆ ಸರಿದ ಎಲ್ ಆ್ಯಂಡ್ ಟಿ

ಉಪನಗರ ರೈಲು ಯೋಜನೆ: ಕಾಮಗಾರಿ ಸ್ಥಗಿತಗೊಳಿಸಿದ್ದ ಗುತ್ತಿಗೆದಾರರು – ₹650 ಕೋಟಿ ಪರಿಹಾರಕ್ಕೆ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಕಾಮಗಾರಿಯನ್ನು ಇತ್ತೀಚೆಗೆ ಸ್ಥಗಿತಗೊಳಿಸಿದ್ದ ಎಲ್ ಆ್ಯಂಡ್ ಟಿ ಕಂಪನಿಯು ಇದೀಗ ಗುತ್ತಿಗೆಯಿಂದಲೇ ಹಿಂದಕ್ಕೆ ಸರಿದಿದೆ. ಇಲ್ಲಿಯವರೆಗೆ ಆಗಿರುವ ನಷ್ಟವನ್ನು ಕೆ-ರೈಡ್ ನೀಡಬೇಕು ಎಂದು ವಾಣಿಜ್ಯ ನ್ಯಾಯಾಲಯದ ಮೆಟ್ಟಿಲು ಹತ್ತಿದೆ.

2022ರಿಂದ ಇಲ್ಲಿಯವರೆಗೆ ಭರವಸೆಗಳು ಮಾತ್ರ ಸಿಕ್ಕಿವೆ. ಜಮೀನು ಹಸ್ತಾಂತರ ಪ್ರಕ್ರಿಯೆಯನ್ನು ಕೂಡ ಸಂಪೂರ್ಣವಾಗಿ ಮಾಡಿಲ್ಲ. ಇದರಿಂದ ಕಾರಿಡಾರ್ 2ಕ್ಕೆ ಸಂಬಂಧಿಸಿದಂತೆ ₹500 ಕೋಟಿ ನಷ್ಟ ಉಂಟಾಗಿದೆ. ಕಾರಿಡಾರ್-4ಕ್ಕೆ ಸಂಬಂಧಿಸಿದಂತೆ ₹150 ಕೋಟಿ ನಷ್ಟವಾಗಿದೆ ಎಂದು ಎಲ್ ಆ್ಯಂಡ್ ಟಿ ತಿಳಿಸಿದೆ.

ಕಾರಿಡಾರ್-2 (ಚಿಕ್ಕಬಾಣಾವರ-ಬೈಯಪ್ಪನಹಳ್ಳಿ) ಕಾಮಗಾರಿ 2022ರ ಡಿಸೆಂಬರ್‌ನಲ್ಲಿ ಆರಂಭವಾಗಿತ್ತು. ಕಾರಿಡಾರ್-4ರ (ಕೆಂಗೇರಿ-ವೈಟ್‌ಫೀಲ್ಡ್) ಟೆಂಡರ್ ಪ್ರಕ್ರಿಯೆ 2023ರ ಡಿಸೆಂಬರ್‌ನಲ್ಲಿ ನಡೆಯಿತು. ಎರಡೂ ಕಾರಿಡಾರ್‌ಗಳನ್ನು ನಿರ್ಮಿಸಲು ಎಲ್ ಆ್ಯಂಡ್ ಟಿ ಕಂಪನಿ ಗುತ್ತಿಗೆ ಪಡೆದಿತ್ತು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸರಿಯಾದ ಬೆಂಬಲ ಸಿಗದೇ ಕಾಮಗಾರಿ ವಿಪರೀತ ನಿಧಾನವಾಗಿ ಸಾಗುತ್ತಿತ್ತು. ಮೂರು ತಿಂಗಳ ಹಿಂದೆ ಕಾಮಗಾರಿಯನ್ನು ಎಲ್ ಆ್ಯಂಡ್ ಟಿ ಸ್ಥಗಿತಗೊಳಿಸಿತ್ತು. ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಮತ್ತು ಯಂತ್ರೋಪಕರಣಗಳನ್ನು ಅಲ್ಲಿಂದ ಸ್ಥಳಾಂತರ ಮಾಡಿತ್ತು. ನಷ್ಟ ಪರಿಹಾರ ನೀಡಲು ಕ್ರಮ ಕೈಗೊಳ್ಳಿ, ಒಪ್ಪಂದವನ್ನು ರದ್ದುಗೊಳಿಸಿ ಎಂದು ಎಲ್ ಆ್ಯಂಡ್ ಟಿ ಅಧಿಕಾರಿಗಳು ಆಗಲೇ ಕೆ-ರೈಡ್‌ಗೆ ಪತ್ರ ಬರೆದಿದ್ದರು.

ಹೊಡೆತ: 'ಎಲ್ ಆ್ಯಂಡ್ ಟಿ ಕಂಪನಿಯು ಕಾಮಗಾರಿಯಿಂದ ಹಿಂದಕ್ಕೆ ಸರಿದಿರುವ ಸಂಗತಿಯು ಬೆಂಗಳೂರಿನ ಜನರಿಗೆ ನಿರಾಸೆಯನ್ನು ಉಂಟು ಮಾಡಿದೆ. ಕೋಲ್ಕತ್ತ, ಮುಂಬೈ ಸಹಿತ ಹಲವು ನಗರಗಳಲ್ಲಿ ಉಪನಗರ ರೈಲು ಯೋಜನೆಯನ್ನು ರೈಲ್ವೆಯೇ ನಡೆಸುತ್ತಿದೆ. ಆದರೆ, ಬೆಂಗಳೂರಿನಲ್ಲಿ ಉಪನಗರ ರೈಲು ಯೋಜನೆ ಶುರುವಾಗುವ ಹೊತ್ತಿಗೆ ರಾಜ್ಯ ಸರ್ಕಾರವೂ ಒಳಗೊಳ್ಳಬೇಕು ಎಂದು ನಿಯಮ ಮಾಡಲಾಗಿತ್ತು. ಈ ಯೋಜನೆ ಜಾರಿ ಮಾಡಲು ಕೆ-ರೈಡ್ ಎಂಬ ಹೊಸ ಸಂಸ್ಥೆಯನ್ನು ಆರಂಭಿಸಲಾಗಿತ್ತು. ಕೇಂದ್ರ, ರಾಜ್ಯ ಸರ್ಕಾರಗಳ ಹೊಯ್ದಾಟದ ನಡುವೆ ಸಿಲುಕಿ ಯೋಜನೆ ಜಾರಿಯಾಗದಂತಾಗಿದೆ' ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ಬೇಸರ ವ್ಯಕ್ತಪಡಿಸಿದರು.

'ಬೆಂಗಳೂರಿನ ಶಾಸಕರು, ಸಂಸದರು ಮಾತ್ರವಲ್ಲ ಸಚಿವರು, ಮುಖ್ಯಮಂತ್ರಿ, ರೈಲ್ವೆ ಸಚಿವರೂ ಇದಕ್ಕೆ ಹೊಣೆ. ಯಾರಿಗೂ ಬಿಎಸ್‌ಆರ್‌ಪಿ ಬಗ್ಗೆ ಕಾಳಜಿ ಇರಲಿಲ್ಲ' ಎಂದು ಸಿಟಿಜನ್ಸ್ ಫಾರ್ ಸಿಟಿಜನ್ಸ್ ಸಂಸ್ಥಾಪಕ ರಾಜಕುಮಾರ್ ದುಗರ್ ಆರೋಪಿಸಿದರು.

'ಒಪ್ಪಂದ ಯಾಕೆ ರದ್ದಾಯಿತು ಎಂಬುದನ್ನು ತಿಳಿದು ಸಮಸ್ಯೆ ಬಗೆಹರಿಸಬೇಕು. ಎಲ್ ಆ್ಯಂಡ್ ಟಿಯವರೇ ಕಾಮಗಾರಿ ಮುಂದುವರಿಸಲು ಇಲ್ಲವೇ ಟೆಂಡರ್ ಕರೆದು ಕೂಡಲೇ ಬೇರೆಯವರಿಗೆ ನೀಡಿ ಕಾಮಗಾರಿ ಆರಂಭಿಸಲು ಕ್ರಮ ಕೈಗೊಳ್ಳಬೇಕು. ನಗರಕ್ಕೆ ಬಹಳ ಅಗತ್ಯವಾದ ಯೋಜನೆಯ ಸ್ಥಿತಿ ಈ ರೀತಿ ಆಗಬಾರದು' ಎಂದು ಅವರು ಆಗ್ರಹಿಸಿದರು.

ನಾಲ್ಕು ಕಾರಿಡಾರ್

1. ಬೆಂಗಳೂರು ನಗರ– ದೇವನಹಳ್ಳಿ
2. ಚಿಕ್ಕಬಾಣಾವರ–ಬೈಯಪ್ಪನಹಳ್ಳಿ
3. ಹೀಲಲಿಗೆ–ರಾಜಾನುಕುಂಟೆ
4. ಕೆಂಗೇರಿ–ವೈಟ್‌ಫೀಲ್ಡ್



ಪ್ರತಿಕ್ರಿಯೆ ನೀಡದ ಅಧಿಕಾರಿಗಳು

'ನಮಗೆ ಪ್ರತಿಕ್ರಿಯಿಸುವ ಅಧಿಕಾರ ಇಲ್ಲ. ವ್ಯವಸ್ಥಾಪಕ ನಿರ್ದೇಶಕರಿಂದಲೇ ಮಾಹಿತಿ ಪಡೆಯಿರಿ' ಎಂದು ಕೆ-ರೈಡ್‌ನ ಅಧಿಕಾರಿಗಳು ಪ್ರತಿಕ್ರಿಯಿಸಿದರು. ವ್ಯವಸ್ಥಾಪಕ ನಿರ್ದೇಶಕರಾಗಿರುವ ಎನ್. ಮಂಜುಳಾ ಅವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

ಕರ್ತವ್ಯಲೋಪ: ಬಿಬಿಎಂಪಿಯಿಂದ ಮೂವರು ನೌಕರರ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಪಶ್ಚಿಮ ವಲಯದಲ್ಲಿ ವಾರ್ಡ್‌ಗಳಲ್ಲಿನ ಸಮಸ್ಯೆ ಹಾಗೂ ನಾಗರಿಕರ ಕುಂದುಕೊರತೆಗೆ ಪರಿಹಾರ ಒದಗಿಸದೆ ಕರ್ತವ್ಯಲೋಪ ಎಸಗಿದ ಮೂವರು ನೌಕರರನ್ನು ಪಾಲಿಕೆಯ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ.

ಜಲಸಂಪನ್ಮೂಲ ಇಲಾಖೆಯಿಂದ ಬಂದಿದ್ದ ಸಹಾಯಕ ಎಂಜಿನಿಯರ್ ಸಂತೋಷ್, ಚಂದನ ಬಿ.ಎಸ್ ಅವರನ್ನು ಬಿಬಿಎಂಪಿ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ. ಗುತ್ತಿಗೆ ಆಧಾರದಲ್ಲಿದ್ದ ಕಿರಿಯ ಆರೋಗ್ಯ ಪರಿವೀಕ್ಷಕ ಬಾಬು ಅವರ ನೇಮಕಾತಿಯ ಗುತ್ತಿಗೆ ರದ್ದುಪಡಿಸಲಾಗಿದೆ. ಪಶ್ಚಿಮ ವಲಯದ ವಿವಿಧ ವಾರ್ಡ್‌ಗಳಲ್ಲಿನ ಸಮಸ್ಯೆಗಳು ಮತ್ತು ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಜುಲೈ 1, 2 ಹಾಗೂ 14ರಂದು ನಡೆದ ಸಭೆಯಲ್ಲಿ ಕ್ರಮ ಕೈಗೊಳ್ಳುವಂತೆ ಮೂವರಿಗೆ ಮುಖ್ಯ ಆಯುಕ್ತರು ಸೂಚಿಸಿದ್ದರು.

ಮುಖ್ಯ ಆಯುಕ್ತರು ವಾರ್ಡ್-102ರ ವೃಷಭಾವತಿನಗರ, ಮಹಾಲಕ್ಷ್ಮೀಪುರ ವಿಭಾಗದಲ್ಲಿ ತಪಾಸಣೆ ಕೈಗೊಂಡ ಸಂದರ್ಭದಲ್ಲಿ ರಸ್ತೆ ಗುಂಡಿಗಳು, ಪಾದಚಾರಿ ಮಾರ್ಗದ ಅಂಚಿನಲ್ಲಿ ತ್ಯಾಜ್ಯ, ಕಟ್ಟಡದ ಭಗ್ನಾವಶೇಷ, ಘನ ತ್ಯಾಜ್ಯವನ್ನು ಸ್ವಚ್ಛಗೊಳಿಸದಿರುವುದು ಕಂಡುಬಂತು. ಅಲ್ಲದೆ, ದೂರು ನೀಡಿದ್ದರೂ ಕ್ರಮವಾಗಿಲ್ಲ ಎಂದು ನಾಗರಿಕರು ಮುಖ್ಯ ಆಯುಕ್ತರಿಗೆ ತಿಳಿಸಿದರು.

'ಸಮಸ್ಯೆಗಳನ್ನು ಬಗೆಹರಿಸಲು ಮೂವರು ನೌಕರರು ಕ್ರಮ ತೆಗೆದುಕೊಂಡಿಲ್ಲ. ಕರ್ತವ್ಯದಲ್ಲಿ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನ ತೋರಿದ್ದಾರೆ. ಆದ್ದರಿಂದ ಇವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ' ಎಂದು ಪಶ್ಚಿಮ ವಲಯ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಮಾಹಿತಿ ನೀಡಿದ್ದಾರೆ.

ಚಿಟಿಕೆ ಸುದ್ದಿ

ಶೇ 50ರಷ್ಟು ರಿಯಾಯಿತಿ

ಬೆಂಗಳೂರು: ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಆಗಸ್ಟ್ ತಿಂಗಳು ಪೂರ್ತಿ ಪುಸ್ತಕಗಳ ಖರೀದಿ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಿದೆ. ಪುಸ್ತಕಗಳನ್ನು ಪ್ರಾಧಿಕಾರದ ಜಾಲತಾಣ www.kuvempubhashabharathi.karnataka.gov.in ಮೂಲಕ ಪಡೆಯಬಹುದು ಎಂದು ಪ್ರಾಧಿಕಾರದ ರಿಜಿಸ್ಟ್ರಾರ್ ಈಶ್ವರ್ ಕು. ಮಿರ್ಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಪವಾಸ ಸತ್ಯಾಗ್ರಹ ಇಂದು

ಬೆಂಗಳೂರು: ಪಿಂಚಣಿ ಪರಿಷ್ಕರಣೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬ್ಯಾಂಕ್ ಪಿಂಚಣಿದಾರರು ಮತ್ತು ನಿವೃತ್ತ ವೇತನದಾರರು ಶನಿವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಉಪವಾಸ ಸತ್ಯಾಗ್ರಹ ಹಮ್ಮಿಕೊಂಡಿದ್ದಾರೆ. ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬ್ಯಾಂಕ್ ಪಿಂಚಣಿದಾರರು ಮತ್ತು ನಿವೃತ್ತ ವೇತನದಾರರ ಸಂಘಟನೆಯ ಜಂಟಿ ಸಂಯೋಜಕ ಕೇ.ವಿ. ಆಚಾರ್ಯ, 'ನಿವೃತ್ತ ಬ್ಯಾಂಕ್ ನೌಕರರಿಗೆ ಪಿಂಚಣಿಯಲ್ಲಿ ಆಗುತ್ತಿರುವ ತಾರತಮ್ಯವನ್ನು ಹೋಗಲಾಡಿಸಬೇಕು' ಎಂದು ಆಗ್ರಹಿಸಿದರು.



ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಕೆ.ಷರೀಫಾ ಮಾತನಾಡಿದರು. ಸಂಶೋಧಕ ಚಂದ್ರಪ್ಪ, ಅಲ್ಪಸಂಖ್ಯಾತ ಕೋಶದ ವಿಶೇಷಾಧಿಕಾರಿ ಪ್ರೊ.ಡಿ.ಕೆ. ಚಿತ್ತಯ್ಯ ಪೂಜಾರ್, ಬಂಜಗೆರೆ ಜಯಪ್ರಕಾಶ್ ಮತ್ತು ಜಯಕರ್ ಎಸ್.ಎಂ. ಇದ್ದರು

'ಸೂಫಿ ಪಂಥದ ಅಧ್ಯಯನ ನಡೆಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೂಫಿ ಪರಂಪರೆಗೆ ಬಹುದೊಡ್ಡ ಇತಿಹಾಸವಿದೆ. ಸೂಫಿ ಪಂಥದ ಕುರಿತು ವಿದ್ಯಾರ್ಥಿಗಳು ಅಧ್ಯಯನ ನಡೆಸಬೇಕು. ಕಳೆದು ಹೋಗುತ್ತಿರುವ ಈ ಪರಂಪರೆ, ಸಂಸ್ಕೃತಿಯನ್ನು ಉಳಿಸಬೇಕಿದೆ' ಎಂದು ಲೇಖಕಿ ಕೆ.ಷರೀಫಾ ಅಭಿಪ್ರಾಯಪಟ್ಟರು.

ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಅಲ್ಪಸಂಖ್ಯಾತರ ಕೋಶದ ಸಹಯೋಗದಲ್ಲಿ ಕನ್ನಡ ಅಧ್ಯಯನ ಕೇಂದ್ರ ಆಯೋಜಿಸಿದ್ದ 'ಕರ್ನಾಟಕದ ಸೂಫಿಗಳು: ಸಾಹಿತ್ಯ ಮತ್ತು ಸಂಸ್ಕೃತಿ ಅನುಸಂಧಾನ' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಸೂಫಿ ಸಂತರು ಶರಣರ ರೀತಿಯಲ್ಲಿ ಸಮಾಜಕ್ಕೆ ಸಂದೇಶ ಸಾರಿದ್ದಾರೆ. ಸೂಫಿ ಪಂಥದಲ್ಲಿ ಭೇದ, ಭಾವ, ಅಸೂಯೆಗಳಿಲ್ಲ' ಎಂದು ವಿವರಿಸಿದರು. ನಂತರ ಕರ್ನಾಟಕದ ಸೂಫಿ ಸಂತರ ಪರಿಚಯ ಮಾಡುವ ಜೊತೆಗೆ, ಸೂಫಿಗಳ ಇತಿಹಾಸವನ್ನು ತಿಳಿಸಿದರು.

ಚಿಂತಕ ಬಂಜಗೆರೆ ಜಯಪ್ರಕಾಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, 'ಇಸ್ಲಾಂನಿಂದ ಹುಟ್ಟಿದ ದಾರ್ಶನಿಕ ಪಂಥವೇ ಸೂಫಿ. ಪ್ರೇಮವನ್ನು ಬಯಸುವುದು, ಪಸರಿಸುವುದು ಸೂಫಿ ಪಂಥ. ಇದು ಭಗವಂತನನ್ನು ಅರಿಯುವ, ಆಪ್ತನನ್ನಾಗಿಸುವ ಮಾರ್ಗವೂ ಹೌದು' ಎಂದು ವಿವರಿಸಿದರು.

ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ನಿರ್ಮಾಣಕ್ಕಾಗಿ ಕೃಷಿ ಜಮೀನು ಸ್ವಾಧೀನ

ಪರಿಹಾರಕ್ಕೆ ಆಗ್ರಹಿಸಿ ರೈತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪಿಆರ್‌ಆರ್) ನಿರ್ಮಾಣಕ್ಕಾಗಿ ಕೃಷಿ ಜಮೀನು ಸ್ವಾಧೀನಪಡಿಸಿಕೊಂಡು 20 ವರ್ಷಗಳು ಕಳೆದರೂ ರೈತರಿಗೆ ಯಾವುದೇ ಪರಿಹಾರ ನೀಡದೆ ಅಧಿಕಾರಿಗಳು ಲೋಪ ಎಸಗಿದ್ದಾರೆ ಎಂದು ಆರೋಪಿಸಿ ಹಿಂಡರಹಳ್ಳಿ ಗ್ರಾಮದ ರೈತರು ರಸ್ತೆ ತಡೆ ಮಾಡಿ, ಅರೆಬೆತ್ತಲೆ ಪ್ರತಿಭಟನೆ ನಡೆಸಿದರು.

ಬಿಡಿಎ ಅಧಿಕಾರಿಗಳು ಮಹದೇವಪುರ ಕ್ಷೇತ್ರ ವ್ಯಾಪ್ತಿಯ ಹಿರಂಡಹಳ್ಳಿ ಗ್ರಾಮಕ್ಕೆ ಶುಕ್ರವಾರ ಭೇಟಿ ನೀಡಿ ಜಮೀನನ್ನು ಪರಿಶೀಲಿಸಿ, ಪರಿಹಾರಕ್ಕೆ ಸಂಬಂಧಿಸಿದಂತೆ ರೈತರೊಂದಿಗೆ ಚರ್ಚಿಸಲು ಮುಂದಾದರು. ಸಭೆಯಲ್ಲಿ ಒಮ್ಮತ ಮೂಡದ ಕಾರಣ ರೈತರು ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿ, ಬಿದರಹಳ್ಳಿಯಿಂದ ಅವಲಹಳ್ಳಿ ಕಡೆಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆ ಬಂದ್ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವವಹಿಸಿದ್ದ ರೈತ ಮುಖಂಡ ಎಚ್.ಎನ್.ಜಗನ್ನಾಥ್ ಮಾತನಾಡಿ, 'ತುಮಕೂರಿನಿಂದ ಹೊಸೂರಿಗೆ ಸಂಪರ್ಕ ಕಲ್ಪಿಸುವ ಪಿಆರ್‌ಆರ್ ನಿರ್ಮಾಣಕ್ಕೆ 2007ರಲ್ಲಿ ಹಿರಂಡಳ್ಳಿ ಗ್ರಾಮದ ರೈತರ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಆದರೆ ಪರಿಹಾರ ನೀಡಿರಲಿಲ್ಲ. ಈಗ 20 ವರ್ಷಗಳ ಹಿಂದಿನ ದರವನ್ನು ಪರಿಹಾರವಾಗಿ ಕೊಡುತ್ತೇವೆ ಎಂದು ಹೇಳಿದರು. ನಾವು ಒಪ್ಪಲಿಲ್ಲ. ಈಗಿನ ಮಾರುಕಟ್ಟೆ ದರ ನೀಡಿದರೆ ಮಾತ್ರ ಜಮೀನು ಕೊಡುತ್ತೇವೆ ಎಂದು ಒತ್ತಾಯಿಸಿದ್ದೇವೆ' ಎಂದು ಹೇಳಿದರು.

'ಯುಪಿಎ ಸರ್ಕಾರ ಜಾರಿಗೊಳಿಸಿರುವ 2013ರ ಭೂ ಸ್ವಾಧೀನ ಮತ್ತು ಪರಿಹಾರ ಕಾಯ್ದೆ ಪ್ರಕಾರ ಮಾರುಕಟ್ಟೆ ಬೆಲೆಯ ಮೂರು ಪಟ್ಟು ಪರಿಹಾರ ನೀಡಿದರೆ ಮಾತ್ರ ಜಮೀನು ಕೊಡುತ್ತೇವೆ. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು' ಎಂದು ರೈತ ಎಚ್.ಜಿ.ಕೆಂಪರಾಜು ಹೇಳಿದರು.

ಪ್ರತಿಭಟನೆಯಲ್ಲಿ ಗ್ರಾಮದ ರೈತ ಮುಖಂಡರಾದ ಎಚ್.ಎನ್. ಮಂಜುನಾಥ್, ಎಚ್.ಎಂ.ರಮೇಶ್, ಎಚ್. ನಾರಾಯಣಸ್ವಾಮಿ, ಎಚ್.ಎಂ.ಕೃಷ್ಣಪ್ಪ, ಎಚ್.ಎನ್. ರಾಮಾಂಜಿನಪ್ಪ, ಎಚ್.ಎ.ಮುನಿರಾಜು, ಮುನಿಸ್ವಾಮಪ್ಪ ಭಾಗವಹಿಸಿದ್ದರು.



ಹಿರಂಡಹಳ್ಳಿಯಲ್ಲಿ ರೈತರು ರಸ್ತೆ ತಡೆ ನಡೆಸಿದರು

ಮುಖ್ಯಾಂಶಗಳು

- 20 ವರ್ಷಗಳು ಕಳೆದರೂ ರೈತರಿಗೆ ಸಿಗದ ಪರಿಹಾರ
- ಈಗಿನ ಮಾರುಕಟ್ಟೆ ದರ ನೀಡಲು ಒತ್ತಾಯ

'ಎ ಖಾತಾ ಹೆಸರಿನಲ್ಲಿ ಸರ್ಕಾರದ ಲೂಟಿ'



ರಮೇಶ್ ಗೌಡ

ಬೆಂಗಳೂರು: 'ಸ್ಥಿರಾಸ್ತಿಗಳ ಮೇಲಿನ ತೆರಿಗೆ ಹೆಚ್ಚಿಸುವ ಉದ್ದೇಶದಿಂದಲೇ ರಾಜ್ಯ ಸರ್ಕಾರವು ಬಿಬಿಎಂಪಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮಾಡಲು ಹೊರಟಿದೆ. ಜನರು 'ಬಿ' ಖಾತಾವನ್ನು 'ಎ' ಖಾತೆಗೆ ಬದಲಿಸಿಕೊಳ್ಳಲು ಆರೇಳು ಲಕ್ಷ ರೂಪಾಯಿ ವೆಚ್ಚಮಾಡಬೇಕಾಗುತ್ತದೆ' ಎಂದು ಜೆಡಿಎಸ್ ಬೆಂಗಳೂರು ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಎಂ.ರಮೇಶ್‌ಗೌಡ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '2007ರಲ್ಲಿ ಬಿಬಿಎಂಪಿ ವ್ಯಾಪ್ತಿಗೆ ಸೇರಿಸಿದ ಹಳ್ಳಿಗಳ ನಿವೇಶನಗಳಿಗೆ, ಪ್ರತಿ ಚದರ ಮೀಟರ್‌ಗೆ ಗರಿಷ್ಠ ₹250 ಸುಧಾರಣಾ ಶುಲ್ಕ ವಿಧಿಸಲಾಗುತ್ತಿತ್ತು. ಈಗ ಗ್ರೇಟರ್ ಬೆಂಗಳೂರು ಅಡಿಯಲ್ಲಿ ಪ್ರತಿ ಚದರ ಅಡಿಗೆ ಗರಿಷ್ಠ ₹500 ಸುಧಾರಣಾ ಶುಲ್ಕ ವಿಧಿಸಲು ಸರ್ಕಾರ ಸಿದ್ಧತೆ ಮಾಡಿಕೊಂಡಿದೆ' ಎಂದು ಆರೋಪಿಸಿದರು.

'ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ, ಬಿಲ್ಡರ್‌ಗಳಿಗೆ ಅನುಕೂಲವಾಗಲಿ ಎಂದು ಸರ್ಕಾರವು ಗ್ರೇಟರ್ ಬೆಂಗಳೂರು ಮಾಡಲು ಹೊರಟಿದೆ. 'ಸರ್ಕಾರವು, 'ಬಿ' ಖಾತಾವನ್ನು 'ಎ' ಖಾತಾ ಮಾಡಿಕೊಡುತ್ತೇವೆ ಎಂದು ಹೇಳಿ ಜನರನ್ನು ಸುಲಿಗೆ ಮಾಡುತ್ತಿದೆ. ಇದರ ವಿರುದ್ಧ ಜೆಡಿಎಸ್ ಕಾನೂನು ಹೋರಾಟ ನಡೆಸಲಿದೆ' ಎಂದರು.


ಬಾಲಕನ ಕೊಲೆ: ಆರೋಪಿಗಳ ಕಾಲಿಗೆ ಗುಂಡೇಟು

ಹಣಕ್ಕಾಗಿ ಕೃತ್ಯ, ಸಾಕ್ಷ್ಯನಾಶ ಪಡಿಸಲು ಅಪಹರಣಕಾರರ ಯತ್ನ

ಪ್ರಜಾವಾಣಿ ವಾರ್ತೆ

> ಬಾಲಕನ ತಾಯಿಗೆ ವಾಟ್ಸ್‌ಆ್ಯಪ್ ಕರೆ ಮಾಡಿದ್ದ ಆರೋಪಿಗಳು ಹಣಕ್ಕೆ ಬೇಡಿಕೆ ಇಟ್ಟಿದ್ದರು. ಸಾಕ್ಷ್ಯನಾಶ ಪಡಿಸುವ ಉದ್ದೇಶದಿಂದ ಬೆಂಕಿ ಹಾಕಿದ್ದರು
> **ಎಂ. ನಾರಾಯಣ್**, ಡಿಸಿಪಿ, ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗ

ಬೆಂಗಳೂರು: ಅರಕೆರೆಯ ಶಾಂತಿ ನಿಕೇತನ ಬಡಾವಣೆಯಲ್ಲಿ ಟ್ಯೂಷನ್ ಮುಗಿಸಿಕೊಂಡು ಸೈಕಲ್‌ನಲ್ಲಿ ಮನೆಗೆ ತೆರಳುತ್ತಿದ್ದ ಬಾಲಕ ನಿಶ್ಚಿತ್‌ನನ್ನು(13) ಅಪಹರಿಸಿ, ಕೊಲೆ ಮಾಡಿ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದ ಆರೋಪಿಗಳ ಕಾಲಿಗೆ ಗುಂಡು ಹಾರಿಸಿ ಬಂಧಿಸುವಲ್ಲಿ ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಹುಳಿಮಾವು ಠಾಣೆಯ ಪೊಲೀಸರು ಯಶಸ್ವಿ ಆಗಿದ್ದಾರೆ.



ಬಿಲ್ವಾರದಹಳ್ಳಿಯ ಅರಣ್ಯ ಪ್ರದೇಶದಲ್ಲಿ ಅಡಗಿದ್ದ ಅಪಹರಣ ನಿಶ್ಚಿತ್ ಕಾರಣರಾದ ಬನ್ನೇರುಘಟ್ಟ ರಸ್ತೆಯ ವೀವರ್ಸ್ ಕಾಲೊನಿ ನಿವಾಸಿಗಳಾದ ಗುರುಮೂರ್ತಿ (25) ಹಾಗೂ ಗೋಪಿ (27) ಎಂಬುವವರನ್ನು ಗುರುವಾರ ತಡರಾತ್ರಿ ಬಂಧಿಸಲಾಗಿದೆ. ಕಾರ್ಯಾಚರಣೆ ವೇಳೆ ಪೊಲೀಸರ ಮೇಲೆ ಹಲ್ಲೆಗೆ ಯತ್ನಿಸಿದಾಗ ಆತ್ಮರಕ್ಷಣೆಗಾಗಿ ಆರೋಪಿಗಳ ಕಾಲಿಗೆ ಗುಂಡು ಹೊಡೆದಿದ್ದಾರೆ.

ಶಾಂತಿನಿಕೇತನ ಬಡಾವಣೆಯ ನಿವಾಸಿ, ಸಹಾಯಕ ಪ್ರಾಧ್ಯಾಪಕ ಜೆ.ಸಿ.ಅಚ್ಯುತ್ ಅವರ ಪುತ್ರ ನಿಶ್ಚಿತ್ ಎಂಟನೇ ತರಗತಿಯಲ್ಲಿ ಓದುತ್ತಿದ್ದ. ಜುಲೈ 30ರಂದು ಸಂಜೆ 5ರ ಸುಮಾರಿಗೆ ಟ್ಯೂಷನ್‌ಗೆ ತೆರಳಿದ್ದ. ರಾತ್ರಿ 8 ಗಂಟೆಯಾದರೂ ಮನೆಗೆ ಮಗ ಬಂದಿರಲಿಲ್ಲ. ಆತಂಕಗೊಂಡ ಪೋಷಕರು, ಶಿಕ್ಷಕಿಗೆ ಕರೆ ಮಾಡಿ ವಿಚಾರಿಸಿದ್ದರು. ರಾತ್ರಿ 7.30ರ ಸುಮಾರಿಗೆ ನಿಶ್ಚಿತ್ ಹೋಗಿರುವುದಾಗಿ ಶಿಕ್ಷಕಿ ತಿಳಿಸಿದ್ದರು. ಆತಂಕಗೊಂಡ ಪೋಷಕರು ಹಲವು ಕಡೆ ಹುಡುಕಾಟ ನಡೆಸಿದ್ದರು. ಅರಕೆರೆಯ ಫ್ಯಾಮಿಲಿ ಪಾರ್ಕ್ ಬಳಿ ಸೈಕಲ್ ನಿಂತಿದ್ದು, ಕಂಡುಬಂದಿತ್ತು. ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದರು. ನಾಪತ್ತೆ ಪ್ರಕರಣ ದಾಖಲಿಸಿಕೊಂಡು ಪೊಲೀಸರು ಸಹ ಹುಡುಕಾಟ ಆರಂಭಿಸಿದ್ದರು. ಜುಲೈ 31ರಂದು ಸಂಜೆ 5 ಗಂಟೆಯ ಸುಮಾರಿಗೆ ಬಿಲ್ವಾರದಹಳ್ಳಿಯ ಅರಣ್ಯ ಪ್ರದೇಶದಲ್ಲಿ ಬಂಡೆಯ ಮೇಲೆ ಬಾಲಕನ ಮೃತದೇಹ ಪತ್ತೆಯಾಗಿತ್ತು. ಮೃತದೇಹ ಕಂಡ ಸ್ಥಳೀಯರೊಬ್ಬರು ಪೊಲೀಸರಿಗೆ ಮಾಹಿತಿ ನೀಡಿದ್ದರು.

'ಪ್ರಮುಖ ಆರೋಪಿ ಗುರುಮೂರ್ತಿ ಎಂಬಾತ ಅಚ್ಯುತ್ ಅವರ ಬಳಿ ಹೆಚ್ಚುವರಿ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದ. ಆಗಾಗ ಮನೆಗೆ ಬಂದು ಹೋಗುತ್ತಿದ್ದ ಗುರುಮೂರ್ತಿ, ನಿಶ್ಚಿತ್‌ನನ್ನು ಅಪಹರಿಸಿ ಹಣಕ್ಕೆ ಬೇಡಿಕೆ ಇಡುವ ಸಂಚು ರೂಪಿಸಿದ್ದ. ನಿಶ್ಚಿತ್ ತಾಯಿಯನ್ನು ಪರಿಚಯ ಮಾಡಿಕೊಂಡು, ಬಾಲಕ ನಿಗಾ ಹತ್ತಿರವಾಗಿದ್ದ. ಬಾಲಕನ ಕುಟುಂಬದ ಹಿನ್ನೆಲೆಯನ್ನು ತಿಳಿದು ಕೊಂಡು ಹಣ ಗಳಿಸಲು ಸಂಚು ರೂಪಿಸಿದ್ದ, ಕೃತ್ಯ ಎಸಗಲು ತನ್ನ ಸ್ನೇಹಿತ ಗೋಪಿಯನ್ನೂ ಬಳಸಿಕೊಂಡಿದ್ದ' ಎಂದು ಪೊಲೀಸರು ಹೇಳಿದರು.

ಬುಧವಾರ ಟ್ಯೂಷನ್ ಮುಗಿಸಿಕೊಂಡು ಸೈಕಲ್‌ನಲ್ಲಿ ಮನೆಯತ್ತ ಬರುತ್ತಿದ್ದಾಗ ನಿಶ್ಚಿತ್‌ನನ್ನು ಆರೋಪಿಗಳು ಮಾತನಾಡಿಸಿದ್ದರು. ಗುರುಮೂರ್ತಿಯ ಪರಿಚಯವಿದ್ದ ಕಾರಣಕ್ಕೆ ಬಾಲಕ ಸಹ ಸೈಕಲ್ ನಿಲ್ಲಿಸಿ ಪ್ರತಿಕ್ರಿಯಿಸಿದ್ದ. ಅಲ್ಲಿಂದ ಬಾಲಕನನ್ನು ಆರೋಪಿಗಳು ಅಪಹರಿಸಿದ್ದರು. ಬಾಲಕನನ್ನು ಬೈಕ್‌ನಲ್ಲಿ ಕರೆದೊಯ್ಯುತ್ತಿರುವ ದೃಶ್ಯವು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು.

ನಂತರ, ಬಾಲಕನ ತಂದೆಗೆ ಕರೆ ಮಾಡಿದ್ದ ಆರೋಪಿಗಳು 'ಮಗನನ್ನು ಜೀವಂತವಾಗಿ ನೋಡುವ ಆಸೆಯಿದ್ದರೆ ₹5 ಲಕ್ಷ ನೀಡಬೇಕು' ಎಂದು ಬೇಡಿಕೆ ಇಟ್ಟಿದ್ದರು. ಹಣ ನೀಡುವುದಾಗಿ ಪೋಷಕರೂ ಒಪ್ಪಿಕೊಂಡಿದ್ದರು. ₹5 ಲಕ್ಷ ಕೊಡಲು ಸಿದ್ಧತೆ ಮಾಡಿಕೊಂಡಿದ್ದರು. ಮತ್ತೊಂದೆಡೆ ಅಪಹರಣಕಾರರ ದೂರವಾಣಿ ಕರೆ ಆಧರಿಸಿ ಪೊಲೀಸರು ತನಿಖೆ ಆರಂಭಿಸಿದ್ದರು. ಆರೋಪಿಗಳಿರುವ ಲೊಕೇಶನ್ ಪತ್ತೆ ಹಚ್ಚಿದ್ದರು. ಪೊಲೀಸರಿಗೆ ಮಾಹಿತಿ ನೀಡಿರುವ ಅನುಮಾನ ಬಂದು, ಬನ್ನೇರುಘಟ್ಟ ಅರಣ್ಯ ಪ್ರದೇಶದಲ್ಲಿ ಬಾಲಕನ ಕತ್ತು ಕೊಯ್ದು ಕೊಲೆ ಮಾಡಿದ್ದರು ಎಂದು ಮೂಲಗಳು ತಿಳಿಸಿವೆ.


ಗುರುಮೂರ್ತಿ


ಗೋಪಿ

ಆರೋಪಿಗೆ ಅಪರಾಧ ಹಿನ್ನೆಲೆ

ಪ್ರಮುಖ ಆರೋಪಿಗೆ ಅಪರಾಧ ಹಿನ್ನೆಲೆಯಿದೆ. ಈತನ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿದೆ. ಗುರುಮೂರ್ತಿಯೇ ಅಪಹರಣಕ್ಕೆ ಸಂಚು ರೂಪಿಸಿದ್ದ, ಈ ಕೃತ್ಯಕ್ಕೆ ಕಾರಣವೇನು, ಇನ್ನೂ ಯಾರಾದರೂ ಭಾಗಿಯಾಗಿದ್ದಾರಾ? ಎಂಬುದರ ಕುರಿತು ತನಿಖೆ ನಡೆಸುತ್ತಿದ್ದೇವೆ ಎಂದು ಪೊಲೀಸರು ಹೇಳಿದರು.

ಕೇವಲ ಹಣಕ್ಕಾಗಿ ಮಾತ್ರ ಬಾಲಕನನ್ನು ಅಪಹರಿಸಲಾಗಿತ್ತೇ ಅಥವಾ ಬೇರೆ ಏನಾದರೂ ಕಾರಣ ಇದೆಯೇ ಎಂಬುದರ ಕುರಿತು ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಮಾಹಿತಿ ನೀಡಿದ್ದಕ್ಕೆ ಕೊಂದರು

ಬಾಲಕನ ತಂದೆ ಅಪಹರಣದ ಮಾಹಿತಿಯನ್ನು ಪೊಲೀಸರಿಗೆ ನೀಡಿದ್ದರು. ಇದರಿಂದ ಕೋಪಗೊಂಡ ಅಪಹರಣಕಾರರು ಬಾಲಕನನ್ನು ಕೊಂದು ಬಳಿಕ ಸುಟ್ಟು ಹಾಕಿದ್ದಾರೆ ಎಂದು ಗೊತ್ತಾಗಿದೆ.

'ಬಾಲಕನನ್ನು ಹುಡುಕುವುದಕ್ಕೆ ಪೊಲೀಸರು ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದರು. ಅತ್ತ ಬಾಲಕನ ಪೋಷಕರು ₹5 ಲಕ್ಷವನ್ನು ಸಿದ್ಧಪಡಿಸಿ ಮಗನನ್ನು ಕರೆದುಕೊಂಡು ಬರಲು ಸಿದ್ಧವಾಗಿದ್ದರು. ಆರೋಪಿಗಳು ಪೊಲೀಸರಿಗೆ ಸಿಕ್ಕಿಹಾಕಿಕೊಳ್ಳುವ ಭಯದಿಂದಲೇ ಬಾಲಕನ ಕೈಕಟ್ಟಿ ಥಳಿಸಿ ಕೊಲೆ ಮಾಡಿದ್ದರು. ಬಳಿಕ ರಸ್ತೆ ಬದಿಯ ಕಲ್ಲು ಬಂಡೆಯ ಮೇಲೆ ಪೆಟ್ರೋಲ್ ಹಾಕಿ ಬೆಂಕಿಯಿಟ್ಟು ಪರಾರಿ ಆಗಿದ್ದರು' ಎಂಬುದು ಗೊತ್ತಾಗಿದೆ.

ಪೊಲೀಸರ ಮೇಲೆ ಹಲ್ಲೆ

ಆರೋಪಿಗಳ ಬಂಧನಕ್ಕೆ ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಡಿಸಿಪಿ ನಾಲ್ಕು ತಂಡ ರಚಿಸಿದ್ದರು. ಗುರುವಾರ ರಾತ್ರಿಯೇ ಕಾರ್ಯಾಚರಣೆಗೆ ಇಳಿದ ಪೊಲೀಸ್ ತಂಡಕ್ಕೆ, ಬೆಂಗಳೂರು ಗ್ರಾಮಾಂತರ ವ್ಯಾಪ್ತಿಯ ಬನ್ನೇರುಘಟ್ಟ ಪೊಲೀಸ್ ಠಾಣಾ ವ್ಯಾಪ್ತಿಯ ಬಿಲ್ವಾರದ-ಹಳ್ಳಿಯ ಅರಣ್ಯ ಪ್ರದೇಶದಲ್ಲಿ ಆರೋಪಿಗಳು ಅಡಗಿರುವುದು ಗೊತ್ತಾಗಿತ್ತು.

ಕಾರ್ಯಾಚರಣೆ ವೇಳೆ ಇನ್‌ಸ್ಪೆಕ್ಟರ್ ಬಿ.ಜಿ.ಕುಮಾರಸ್ವಾಮಿ ಹಾಗೂ ಪಿಎಸ್‌ಐ ಅರವಿಂದ ಅವರ ಮೇಲೆ ಚಾಕು ಹಾಗೂ ಡ್ಯಾಗರ್‌ನಿಂದ ದಾಳಿ ನಡೆಸಿದ್ದರು. ಎಚ್ಚೆತ್ತ ಅರವಿಂದ ಕುಮಾರ್ ಅವರು ಗಾಳಿಯಲ್ಲಿ ಎರಡು ಸುತ್ತು ಗುಂಡು ಹಾರಿಸಿದ್ದರು. ಆದರೂ ಶರಣಾಗದೇ ಪರಾರಿಯಾಗಲು ಯತ್ನಿಸಿದರು. ಆರೋಪಿಗಳ ಕಾಲಿಗೆ ಪೊಲೀಸರು ಗುಂಡು ಹಾರಿಸಿ ವಶಕ್ಕೆ ಪಡೆದುಕೊಂಡರು.

ಘಟನೆಯಲ್ಲಿ ಗುರುಮೂರ್ತಿಯ 2 ಕಾಲುಗಳು ಹಾಗೂ ಗೋಪಾಲಕೃಷ್ಣನ ಒಂದು ಕಾಲಿಗೆ ಗುಂಡು ತಗುಲಿದ್ದು, ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಲಾಗಿದೆ. ಗಾಯಗೊಂಡ ಪೊಲೀಸ್ ಅಧಿಕಾರಿಗಳೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದರು.

ಘಟನಾ ಸ್ಥಳಕ್ಕೆ ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಡಿಸಿಪಿ ಎಂ. ನಾರಾಯಣ್ ಹಾಗೂ ಬೆಂಗಳೂರು ಗ್ರಾಮಾಂತರ ಎಸ್‌ಪಿ ಸಿ.ಕೆ. ಬಾಬಾ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸುದ್ದಿ 2 ನಿಮಿಷ

ರೈಲು ನಿಲ್ದಾಣದಲ್ಲಿ ಮಗುವಿಗೆ ಜನ್ಮ

ಬೆಂಗಳೂರು: ಬೈಯಪ್ಪನಹಳ್ಳಿಯಲ್ಲಿರುವ ಸರ್ ಎಂ.ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್‌ನಲ್ಲಿ (ಎಸ್‌ಎಂವಿಟಿ) ಪ್ರಯಾಣಿಕರೊಬ್ಬರು ಗಂಡು ಮಗುವಿಗೆ ಜನ್ಮ ನೀಡಿದ್ದು, ತಾಯಿ, ಮಗು ಇಬ್ಬರೂ ಆರೋಗ್ಯವಾಗಿದ್ದಾರೆ.

ಅರ್ಚನಾ ಕುಮಾರಿ ಮಗುವಿಗೆ ಜನ್ಮ ನೀಡಿದವರು. ಅವರು ಜಾರ್ಖಂಡ್‌ನ ಹಟಿಯಾಗೆ ಮಂಗಳವಾರ ತೆರಳಲು ಎಸ್‌ಎಂವಿಟಿಗೆ ಬಂದಿದ್ದರು. 'ಎಸ್‌ಎಂವಿಟಿ ಬೆಂಗಳೂರು–ಹಟಿಯಾ ಎಕ್ಸ್‌ಪ್ರೆಸ್' ರೈಲಿಗೆ ಕಾಯುತ್ತಿದ್ದಾಗ ಅವರಿಗೆ ಹೆರಿಗೆ ನೋವು ಕಾಣಿಸಿಕೊಂಡಿತ್ತು. ಅಲ್ಲಿ ಕರ್ತವ್ಯದಲ್ಲಿದ್ದ ರೈಲ್ವೆ ಸಿಬ್ಬಂದಿ ಆರ್.ವಿ. ಸುರೇಶ್‌ಬಾಬು ನೆರವಿಗಾಗಿ ಮಾಹಿತಿ ರವಾನಿಸಿದ್ದರು.

ರೈಲ್ವೆ ಪ್ರೊಟೆಕ್ಷನ್ ಫೋರ್ಸ್‌ನ (ಆರ್‌ಪಿಎಫ್) ಅಮೃತಾ ಮತ್ತು ಇತರ ಸಿಬ್ಬಂದಿ ಸೇರಿ ಮಹಿಳಾ ಪ್ರಯಾಣಿಕರ ನೆರವಿನೊಂದಿಗೆ ಪ್ರತ್ಯೇಕ ಕೊಠಡಿಗೆ ಒಯ್ದರು. ಕೆಲವೇ ನಿಮಿಷದಲ್ಲಿ ಹೆರಿಗೆಯಾಗಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಆಂಬುಲೆನ್ಸ್‌ಗೆ ಕರೆ ಮಾಡಲಾಗಿತ್ತು. ಆಂಬುಲೆನ್ಸ್ ಬರುವ ಮೊದಲೇ ಹೆರಿಗೆಯಾಯಿತು. ತಾಯಿ ಮತ್ತು ಮಗುವನ್ನು ಆಂಬುಲೆನ್ಸ್‌ನಲ್ಲಿ ಇಂದಿರಾನಗರದ ಸಿ.ವಿ. ರಾಮನ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಆರೋಗ್ಯವಾಗಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗೀಯ ಕಚೇರಿಯ 'ಎಕ್ಸ್' ಖಾತೆಯಲ್ಲಿ ಹೆರಿಗೆ ವಿಚಾರವನ್ನು ಹಂಚಿಕೊಳ್ಳಲಾಗಿದ್ದು, 'ಬೆಂಗಳೂರು ಎಸ್‌ಎಂವಿಟಿ ನಿಲ್ದಾಣದಲ್ಲಿ ಶುಕ್ರವಾರ ಗರ್ಭಿಣಿಯೊಬ್ಬರು ಆರೋಗ್ಯವಂತ ಗಂಡು ಮಗುವಿಗೆ ಜನ್ಮ ನೀಡಿದ್ದಾರೆ. ಮಹಿಳಾ ಸಿಬ್ಬಂದಿ ಮತ್ತು ಸಹ ಪ್ರಯಾಣಿಕರು ಸಕಾಲಿಕ ಬೆಂಬಲ ನೀಡಿದರು. ನಂತರ ಹೆಚ್ಚಿನ ಆರೈಕೆಗಾಗಿ ಅವರನ್ನು ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಭಾರತೀಯ ರೈಲ್ವೆ ಪ್ರಯಾಣಿಕರ ಯೋಗಕ್ಷೇಮಕ್ಕೆ ಬದ್ಧವಾಗಿದೆ' ಎಂದು ತಿಳಿಸಲಾಗಿದೆ.



ಅರ್ಚನಾ ಮತ್ತು ನಿಶಾಂಕ್ ಕುಮಾರ್ ದಂಪತಿ ಸಕಾಲಿಕವಾಗಿ ನೆರವಾದ ರೈಲ್ವೆ ಅಧಿಕಾರಿಗಳು, ಸಿಬ್ಬಂದಿ ಮತ್ತು ಮಹಿಳಾ ಪ್ರಯಾಣಿಕರಿಗೆ ಕೃತಜ್ಞತೆ ಸಲ್ಲಿಸಿದರು.

ವೇಶ್ಯಾವಾಟಿಕೆ: ಮಹಿಳೆ ಸೇರಿ ಮೂವರ ಬಂಧನ

ಬೆಂಗಳೂರು: ಹೊರ ರಾಜ್ಯದ ಯುವತಿಯರನ್ನು ಕರೆತಂದು ವೇಶ್ಯಾವಾಟಿಕೆ ಜಾಲಕ್ಕೆ ದೂಡಿದ್ದ ಆರೋಪದ ಮೇಲೆ ಮಹಿಳೆ ಸೇರಿ ಮೂವರನ್ನು ಕೆಂಗೇರಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕೆಂಗೇರಿಯ ಹರ್ಷ ಲೇಔಟ್‌ನ ನಾಲ್ಕನೇ ಕ್ರಾಸ್‌ನ ಮನೆಯೊಂದರಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದೆ ಎಂಬ ಖಚಿತ ಮಾಹಿತಿ ಬಂದಿತ್ತು. ಆ ಮಾಹಿತಿ ಆಧರಿಸಿ ಮನೆಯ ಮೇಲೆ ದಾಳಿ ನಡೆಸಿ ಪ್ರಮುಖ ಆರೋಪಿ ಗೌರಮ್ಮ ಸೇರಿ ಮೂವರನ್ನು ಬಂಧಿಸಲಾಯಿತು. ಹೊರ ರಾಜ್ಯದ ಯುವತಿಯರನ್ನು ರಕ್ಷಿಸಲಾಗಿದೆ. ಆರೋಪಿಗಳು ಯುವತಿಯರಿಗೆ ಹಣದ ಆಮಿಷವೊಡ್ಡಿ ವೇಶ್ಯಾವಾಟಿಕೆ ಜಾಲಕ್ಕೆ ದೂಡುತ್ತಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಎಚ್ಚೆತ್ತುಕೊಳ್ಳಲು ಎಷ್ಟು ಬಲಿ ಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೃಹ ಸಚಿವ ಜಿ. ಪರಮೇಶ್ವರ ಅವರೇ ನಿಮ್ಮ ಇಲಾಖೆ ಎಚ್ಚೆತ್ತುಕೊಳ್ಳಲು ಇನ್ನೂ ಎಷ್ಟು ಜನರು ಬಲಿಯಾಗಬೇಕು? ಇನ್ನೂ ಎಂತೆಂತಹ ದುರ್ಘಟನೆಗಳು ನಡೆಯಬೇಕು' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಪ್ರಶ್ನಿಸಿದ್ದಾರೆ.

ಬಾಲಕನನ್ನು ಅಪಹರಿಸಿ, ಕೊಲೆ ಮಾಡಿ, ಸುಟ್ಟಿರುವ ಪ್ರಕರಣದ ಬಗ್ಗೆ 'ಎಕ್ಸ್' ಮೂಲಕ ಪ್ರತಿಕ್ರಿಯೆ ನೀಡಿದ್ದು, 'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸತ್ತು ಹೋಗಿದೆ ಎನ್ನುವುದಕ್ಕೆ, ಇದಕ್ಕಿಂತ ದೊಡ್ಡ ಘಟನೆ ಬೇಕಾ' ಎಂದಿದ್ದಾರೆ.

'ಟ್ಯೂಷನ್ ಮುಗಿಸಿಕೊಂಡು ಬರುತ್ತಿದ್ದ 13 ವರ್ಷದ ಬಾಲಕನನ್ನು ಅಪಹರಣ ಮಾಡಿ, ಹಣಕ್ಕೆ ಬೇಡಿಕೆ ಇಟ್ಟು, ಕಡೆಗೆ ಬಾಲಕನ ಕತ್ತು ಕೊಯ್ದು ಕೊಲೆ ಮಾಡಿ, ಮೃತ ದೇಹವನ್ನು ಸುಟ್ಟಿರುವ ದಾರುಣ ಘಟನೆ ಎಂತಹವರನ್ನೂ ಬೆಚ್ಚಿ ಬೀಳಿಸುತ್ತದೆ' ಎಂದು ಹೇಳಿದ್ದಾರೆ.

ಅಪಘಾತ: ಬೈಕ್ ಸವಾರನಿಗೆ ಗಾಯ

ಬೆಂಗಳೂರು: 'ಬಿಗ್‌ಬಾಸ್' ಮಾಜಿ ಸ್ಪರ್ಧಿ ರಕ್ಷಕ್ 'ಬುಲೆಟ್' ಅವರಿದ್ದ ಕಾರು ಹಾಗೂ ಬೈಕ್ ನಡುವೆ ಮಾನ್ಯತಾ ಟೆಕ್‌ಪಾರ್ಕ್ ಬಳಿ ಗುರುವಾರ ಅಪಘಾತ ಸಂಭವಿಸಿದ್ದು, ಬೈಕ್ ಸವಾರ ಗಾಯಗೊಂಡಿದ್ದಾರೆ.

ಶಿಡ್ಲಘಟ್ಟದ ವೇಣುಗೋಪಾಲ ಅವರ ಕಾಲು ಮುರಿದಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮಾನ್ಯತಾ ಟೆಕ್‌ಪಾರ್ಕ್ ಬಳಿಯ ತಿರುವಿನಲ್ಲಿ ಗುರುವಾರ ಬೆಳಿಗ್ಗೆ 11.30ರ ಸುಮಾರಿಗೆ ಅಪಘಾತ ಸಂಭವಿಸಿತ್ತು.

'ರಕ್ಷಕ್ 'ಬುಲೆಟ್' ಅವರು ಕಾರಿನಲ್ಲಿ ಬರುತ್ತಿದ್ದರು. ಅದೇ ರಸ್ತೆಯಲ್ಲಿ ವೇಣುಗೋಪಾಲ ಮತ್ತು ಅವರ ಸ್ನೇಹಿತೆ ಬೈಕ್‌ನಲ್ಲಿ ಬರುತ್ತಿದ್ದರು. ಆಗ ರಕ್ಷಕ್, ಅವರಿದ್ದ ಕಾರು ದ್ವಿಚಕ್ರ ವಾಹನಕ್ಕೆ ಡಿಕ್ಕಿಯಾಗಿದೆ. ಕೆಳಕ್ಕೆ ಬಿದ್ದ ವೇಣುಗೋಪಾಲ ಅವರ ಕಾಲಿಗೆ ತೀವ್ರ ಪೆಟ್ಟಾಗಿತ್ತು. ಸ್ಥಳೀಯರು ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ' ಎಂದು ಪೊಲೀಸರು ಹೇಳಿದರು.

ಈ ಸಂಬಂಧ ಹೆಣ್ಣೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ದುಂಡು ಮೇಜಿನ ಸಭೆಯಲ್ಲಿ ಎಂ. ವೆಂಕಟಸ್ವಾಮಿ ಮಾತನಾಡಿದರು. ಅಶ್ವಥ್ ಅಂತ್ಯಜ, ಆರ್.ಮೋಹನ್ ರಾಜ್, ಹರಿರಾಮ್, ಆರ್.ಎಂ.ಎನ್. ರಮೇಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'18ರಂದು ವಿಧಾನಸೌಧಕ್ಕೆ ಮುತ್ತಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಲಿತರಿಗೆ ಮೀಸಲಾಗಿರುವ ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಣವನ್ನು ಮೂರನೇ ವರ್ಷವೂ ದುರ್ಬಳಕೆ ಮಾಡಿಕೊಂಡಿರುವ ಕಾಂಗ್ರೆಸ್ ಸರ್ಕಾರದ ನಡೆಯನ್ನು ಖಂಡಿಸಿ, ಆಗಸ್ಟ್ 18ರಂದು ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುತ್ತದೆ' ಎಂದು ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ. ವೆಂಕಟಸ್ವಾಮಿ ತಿಳಿಸಿದರು.

ದಲಿತ ಸಂಘಟನೆಗಳ ಒಕ್ಕೂಟ ವತಿಯಿಂದ ಶುಕ್ರವಾರ ಆಯೋಜಿಸಲಾಗಿದ್ದ 'ದಲಿತರ ಹಣ ದುರ್ಬಳಕೆ–ಮೊಂಡುವಾದ ಮಂಡಿಸುತ್ತಿರುವ ರಾಜ್ಯ ಸರ್ಕಾರ– ದುಂಡು ಮೇಜಿನ ಸಭೆ'ಯಲ್ಲಿ ದಲಿತ ಸಂಘಗಳ ಪದಾಧಿಕಾರಿಗಳು ಹೋರಾಟ ನಡೆಸಲು ತೀರ್ಮಾನ ಕೈಗೊಂಡರು ಎಂದು ಅವರು ಮಾಹಿತಿ ನೀಡಿದರು.

'ಮುಸ್ಲಿಮರಿಗೆ ವಿಶೇಷ ಅನುದಾನ ನೀಡಿರುವ ಸಿದ್ದರಾಮಯ್ಯ ಅವರು, ಎಸ್‌ಸಿ, ಎಸ್‌ಟಿ ಸಮುದಾಯಗಳನ್ನು ನಿರ್ಲಕ್ಷಿಸಿದ್ದಾರೆ. 'ಕಾಂಗ್ರೆಸ್ಸಿನ ಆದ್ಯತೆ ದಲಿತರು, ಆದಿವಾಸಿಗಳಲ್ಲ, ಮುಸ್ಲಿಮರು' ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ್ದನ್ನು ಸಿದ್ದರಾಮಯ್ಯ ನಿಜಗೊಳಿಸಿದ್ದಾರೆ' ಎಂದು ಟೀಕಿಸಿದರು.

'ಗೃಹ ಸಚಿವ ಪರಮೇಶ್ವರ ಅವರ ಮನೆಯಲ್ಲಿ ಪರಿಶಿಷ್ಟ ಪಂಗಡದ ಶಾಸಕರು ಸೋಮವಾರ ಸಭೆ ಸೇರಲಿದ್ದಾರೆ. ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಣ ದುರ್ಬಳಕೆಗೆ ಅವರೇ ಕಾರಣವಾಗಿದ್ದು, ಅವರನ್ನು ಒಕ್ಕೂಟದ ವತಿಯಿಂದ ಪ್ರಶ್ನಿಸಲಾಗುವುದು' ಎಂದರು.

ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಣ ದುರ್ಬಳಕೆ ವಿರುದ್ಧ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನೂ ಸಲ್ಲಿಸಲಾಗುತ್ತದೆ ಎಂದು ತಿಳಿಸಿದರು.

ದಲಿತ ಸಂಘರ್ಷ ಸಮಿತಿಯ (ಸಂಯೋಜಿತ) ಅಶ್ವತ್ಥ್ ಅಂತ್ಯಜ, ಭಾರತೀಯ ಪರಿವರ್ತನಾ ವೇದಿಕೆಯ ಹರಿರಾಮ್, ಬಹುಜನ ದಲಿತ ಸಂಘರ್ಷ ಸಮಿತಿಯ ಆರ್.ಎಂ.ಎನ್. ರಮೇಶ್, ಸಮತಾ ಸೈನಿಕ ದಳದ ಜೆ.ಸಿ. ವೆಂಕಟರಮಣಪ್ಪ, ದಲಿತ ಸಂಘರ್ಷ ಸಮಿತಿಯ (ಭೀಮವಾದ) ಆರ್. ಮೋಹನ್ ರಾಜ್ ಸಭೆಯಲ್ಲಿ ಭಾಗವಹಿಸಿದ್ದರು.

ಭೂಮಿಕಾ ಪುರವಣಿ ಓದಿರಿ...

ಬಿದರಹಳ್ಳಿ ಗ್ರಾಮಸಭೆ: ಸಮಸ್ಯೆಗಳ ಸುರಿಮಳೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕಾಟಾಚಾರಕ್ಕೆ ಗ್ರಾಮಸಭೆ: ಆರೋಪ
- ಕೆರೆ ಬಫರ್ ಝೋನ್‌ನಲ್ಲಿ ಅಕ್ರಮ ಕಟ್ಟಡ
- ದೂರುಗಳು ಪುನರಾವರ್ತನೆಯಾದರೆ ಕ್ರಮ

ಕೆ.ಆರ್.ಪುರ: ಸಮರ್ಪಕವಾಗಿ ಕುಡಿಯುವ ನೀರು ಪೂರೈಸುತ್ತಿಲ್ಲ, ರಸ್ತೆ, ಚರಂಡಿ ವ್ಯವಸ್ಥೆಯೂ ಅವ್ಯವಸ್ಥೆಯಾಗಿದೆ, ಕಸದ ಸಮಸ್ಯೆಯನ್ನು ಸರಿಯಾಗಿ ನಿರ್ವಹಿಸುವಲ್ಲಿ ಗ್ರಾಮ ಪಂಚಾಯಿತಿ ಅಧಿಕಾರಿಗಳು ವಿಫಲರಾಗಿದ್ದಾರೆ...

ಇವು ಬಿದರಹಳ್ಳಿ ಗ್ರಾಮ ಪಂಚಾಯಿತಿಯಿಂದ ಕಾಡ ಅಗ್ರಹಾರ ಗ್ರಾಮದಲ್ಲಿ ಆಯೋಜಿಸಿದ್ದ 2025-26ನೇ ಸಾಲಿನ ಮೊದಲ ಸುತ್ತಿನ ಗ್ರಾಮ ಸಭೆಯಲ್ಲಿ ಶಾಸಕಿ ಮಂಜುಳಾ ಲಿಂಬಾವಳಿ ಅವರಿಗೆ ಸಾರ್ವಜನಿಕರು ಸಲ್ಲಿಸಿದ ದೂರುಗಳು.

‘ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ಎಲ್ಲೆಂದರಲ್ಲಿ ಕಸದ ರಾಶಿ ಬಿದ್ದಿರುತ್ತದೆ. ಇದರಿಂದ ಸೊಳ್ಳೆಗಳ ಕಾಟ ಹೆಚ್ಚಾಗಿದೆ. ಕೆಲವು ಕಡೆ ಬೀದಿನಾಯಿಗಳ ಕಾಟವೂ ಜಾಸ್ತಿಯಾಗಿದೆ’ ಎಂದು ಗ್ರಾಮಸ್ಥರು ದೂರಿದರು.

‘ಹಸಿ ಮತ್ತು ಒಣ ಕಸ ಸಮರ್ಪಕವಾಗಿ ವಿಲೇವಾರಿ ಮಾಡುತ್ತಿಲ್ಲ. ಕೆಲವರು ಕೆರೆ ಒತ್ತುವರಿ ಮಾಡಿಕೊಂಡು ಬಫರ್ ವಲಯದ ವ್ಯಾಪ್ತಿಯಲ್ಲಿ ಅಕ್ರಮ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಗ್ರಾಮ ಪಂಚಾಯಿತಿ ಅಧಿಕಾರಿಗಳು ಅವುಗಳಿಗೆ ವಿದ್ಯುತ್, ನೀರು ಮೂಲ ಸೌಕರ್ಯಗಳನ್ನು ಒದಗಿಸಿದ್ದಾರೆ’ ಎಂದು ಗ್ರಾಮಸ್ಥರು ಆರೋಪಿಸಿದರು.

‘ಆದೂರು ಗ್ರಾಮದಲ್ಲಿ 14 ಗುಂಟೆ ಸ್ಮಶಾನ ಜಾಗವಿದೆ. ಆದರೆ ಸ್ಮಶಾನಕ್ಕೆ ಹೋಗಲು ದಾರಿಯಿಲ್ಲ. ಪ್ರಭಾವಿಗಳು ಸ್ಮಶಾನವನ್ನು ಒತ್ತುವರಿ ಮಾಡಿಕೊಂಡು ಬಡಾವಣೆಗಳನ್ನು ನಿರ್ಮಿಸಿದ್ದಾರೆ. ಈ ಬಗ್ಗೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ’ ಎಂದು ಆದೂರು ಗ್ರಾಮದ ನಿವಾಸಿ ಮಂಜುನಾಥ್ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

‘ಗ್ರಾಮದಲ್ಲಿ ರಾಜಕಾಲುವೆ ಅಭಿವೃದ್ಧಿ ಮಾಡಿಲ್ಲ. ಇದರಿಂದ ಮಳೆಗಾಲದಲ್ಲಿ ನೀರಿನ ಒತ್ತಡ ಹೆಚ್ಚಾಗಿ ಮನೆಗಳಿಗೆ ನುಗ್ಗುತ್ತದೆ. ಪ್ರತಿ ಗ್ರಾಮಸಭೆಯಲ್ಲೂ ಈ ಸಮಸ್ಯೆಗಳ ಬಗ್ಗೆ ಮನವಿ ಸಲ್ಲಿಸಿದ್ದೇವೆ, ಆದರೆ ಬಗೆಹರಿಸಿಲ್ಲ. ಕಾಟಾಚಾರಕ್ಕೆ ಗ್ರಾಮಸಭೆ ನಡೆಸಲಾಗುತ್ತದೆ’ ಎಂದು ಅವರು ದೂರಿದರು.



ಗ್ರಾಮ ಸಭೆಯಲ್ಲಿ ಗ್ರಾಮಸ್ಥರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು

ಶಾಸಕಿ ಮಂಜುಳಾ ಲಿಂಬಾವಳಿ ಸಾರ್ವಜನಿಕರ ಅಹವಾಲು ಅಲಿಸಿದರು. ಎಲ್ಲಾ ಸಮಸ್ಯೆಗಳಿಗೆ ಆದಷ್ಟು ಬೇಗ ಸೂಕ್ತ ಪರಿಹಾರ ಒದಗಿಸಬೇಕು. ಮತ್ತೆ ಸಾರ್ವಜನಿಕರಿಂದ ದೂರುಗಳು ಪುನರಾವರ್ತನೆ ಆದರೆ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಕಾರ್ಯಕ್ರಮದಲ್ಲಿ ಅಂಗವಿಕಲರಿಗೆ ಸಹಾಯಧನದ ಚೆಕ್, ಬಿದರಹಳ್ಳಿ ಸರ್ಕಾರಿ ಶಾಲೆಗೆ ಕಂಪ್ಯೂಟರ್ ವಿತರಿಸಲಾಯಿತು.

ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿ ಇಒ ವಸಂತ್ ಕುಮಾರ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕವಿತಾ, ಉಪಾಧ್ಯಕ್ಷ ಅಂಜಿನಮ್ಮ, ಸದಸ್ಯರಾದ ರಾಜೇಶ್, ವರುಣ್, ಪಿಡಿಒ ಲೋಹಿತ್ ಮತ್ತಿತರರು ಇದ್ದರು.

‘ಬಡವರಿಗೆ ನಿವೇಶನ ನೀಡಿ’

ಕಾಡ ಅಗ್ರಹಾರ ಗ್ರಾಮದಲ್ಲಿ ಕೆರೆ ದಡ, ಪ್ರಮುಖ ವೃತ್ತ, ಮುಖ್ಯ ರಸ್ತೆಯಲ್ಲಿ ಕಸ ಸುರಿಯುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕು. ಈ ಗ್ರಾಮದಲ್ಲಿ ದಲಿತ, ಹಿಂದುಳಿದ ಸಮುದಾಯದ ಹೆಚ್ಚಿನ ಜನರಿದ್ದು ಇವರಿಗೆ ನಿವೇಶನಗಳಿಲ್ಲ. ಗ್ರಾಮದಲ್ಲಿ ಸರ್ವೆ ನಂಬರ್ 34 ರಲ್ಲಿ ನಾಲ್ಕು ಎಕರೆ ಸರ್ಕಾರಿ ಗೋಮಾಳವಿದೆ. ಇದನ್ನು ನಿವೇಶನವಿಲ್ಲದ ಬಡವರಿಗೆ ಹಂಚಿಕೆ ಮಾಡಬೇಕು ಎಂದು ಗ್ರಾಮದ ನಿವಾಸಿ ಶಿವಕುಮಾರ್ ಆಗ್ರಹಿಸಿದರು.

ಗ್ರಾಮಸಭೆ 12.30ಕ್ಕೆ ಆರಂಭಗೊಂಡು 1.30ಗಂಟೆಗೆ ಮುಕ್ತಾಯಗೊಳಿಸಿದರು. ಗ್ರಾಮ ಸಭೆಯನ್ನು ಒಂದು ಗಂಟೆ ಅವಧಿಗೆ ಸೀಮಿತಗೊಳಿಸಿದ್ದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಯಿತು.

ಅರ್ಬನಾ ಡೆವಲಪರ್ಸ್‌ನಲ್ಲಿ ಇ.ಡಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಹಕರಿಂದ ಹಣ ಪಡೆದು ಫ್ಲ್ಯಾಟ್ ನೀಡದೆ ವಂಚಿಸಿದ ಪ್ರಕರಣದಲ್ಲಿ ಓರ್ಝೋನ್ ಅರ್ಬನಾ ಡೆವಲಪರ್ಸ್ ಕಚೇರಿಯಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶೋಧ ನಡೆಸಿದ್ದಾರೆ.

ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಓರ್ಝೋನ್ ಅರ್ಬನಾ ಡೆವಲಪರ್ಸ್, ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸುತ್ತಿದೆ. 2015-16ರ ವೇಳೆ ಸಾವಿರಾರು ಗ್ರಾಹಕರಿಗೆ ಫ್ಲ್ಯಾಟ್‌ಗಳನ್ನು ಮಾರಾಟ ಮಾಡಿತ್ತು.

2018ರ ಅಂತ್ಯದ ವೇಳೆಗೆ ಗ್ರಾಹಕರಿಗೆ ಫ್ಲ್ಯಾಟ್‌ಗಳನ್ನು ಹಸ್ತಾಂತರಿಸಬೇಕಿತ್ತು. ಆದರೆ 2024ರ ವೇಳೆಗೆ ಶೇಕಡ 49ರಷ್ಟು ಫ್ಲ್ಯಾಟ್‌ಗಳು ಮಾತ್ರ ಪೂರ್ಣವಾಗಿದ್ದವು. ಕಂಪನಿಯ ವಿರುದ್ಧ ಗ್ರಾಹಕರು ಹಲವು ದೂರುಗಳನ್ನು ನೀಡಿದ್ದರು. ಆ ದೂರುಗಳ ಆಧಾರದಲ್ಲಿ ಇಸಿಐಆರ್ ದಾಖಲಿಸಿಕೊಂಡಿರುವ ಇ.ಡಿಯು ತನಿಖೆ ಆರಂಭಿಸಿದೆ.

‘ಕಂಪನಿಯ ಬೆಂಗಳೂರು ಕಚೇರಿ, ದೇವನಹಳ್ಳಿಯ ಕಚೇರಿ, ಮುಂಬೈ ಕಚೇರಿ, ಕಂಪನಿಯ ಪ್ರವರ್ತಕರ ಮನೆ ಸೇರಿ ಒಟ್ಟು 10 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ಮಾರಾಟ ಒಪ್ಪಂದ, ಬ್ಯಾಂಕ್ ವಹಿವಾಟಿಗೆ ಸಂಬಂಧಿಸಿದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಇ.ಡಿ ಮೂಲಗಳು ತಿಳಿಸಿವೆ.

‘ಫ್ಲ್ಯಾಟ್ ನಿರ್ಮಾಣದ ಹಣವನ್ನು ಪ್ರವರ್ತಕರು ಅನ್ಯ ಉದ್ದೇಶಕ್ಕೆ, ಇತರೆಡೆ ಹೂಡಿಕೆಗೆ ಬಳಸಿಕೊಂಡಿದ್ದಾರೆ. ಒಂದೇ ಸ್ವತ್ತಿಗೆ ಎರಡು-ಮೂರು ಪ್ರತ್ಯೇಕ ಸಾಲಗಳನ್ನು ಪಡೆದಿರುವುದರ ಸಂಬಂಧ ದಾಖಲೆಗಳು ಪತ್ತೆಯಾಗಿದೆ’ ಎಂದು ಮಾಹಿತಿ ನೀಡಿವೆ.



ಸತ್ಯಸಾಯಿ ಸೆಂಟ್ರಲ್ ಟ್ರಸ್ಟ್‌ನ ಟ್ರಸ್ಟಿಗಳು ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವ ಜಿ.ಕಿಶನ್ ರೆಡ್ಡಿ ಅವರೊಂದಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಶುಕ್ರವಾರ ಭೇಟಿಯಾಗಿ ‘ಸತ್ಯಸಾಯಿ ಬಾಬಾ ಜನ್ಮ ಶತಮಾನೋತ್ಸವ’ ಕಾರ್ಯಕ್ರಮಕ್ಕೆ ಆಹ್ವಾನಿಸಿದರು. ಮ್ಯಾನೇಜಿಂಗ್ ಟ್ರಸ್ಟಿ ಆರ್.ಜೆ. ರತ್ನಾಕರ್, ಟ್ರಸ್ಟಿಗಳಾದ ನ್ಯಾಯಮೂರ್ತಿ ವಿ.ರಾಮಸುಬ್ರಮಣಿಯನ್, ರ್‍ಯೊಕೊ ಹಿರಾ, ಎಸ್.ಎಸ್.ನಾಗಾನಂದ್ ಮತ್ತು ಅಖಿಲ ಭಾರತ ಸತ್ಯಸಾಯಿ ಸೇವಾ ಸಂಸ್ಥೆಯ(ಎಸ್‌ಎಸ್‌ಎಸ್‌ಎಸ್‌ಒ) ನಿಮಿಷ್ ಪಾಂಡ್ಯ ಈ ಸಂದರ್ಭದಲ್ಲಿ ಹಾಜರಿದ್ದರು

ನಗರ ಜಿಲ್ಲಾಧಿಕಾರಿಗೆ ವಾರಂಟ್‌ನ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ಆದೇಶವನ್ನು ಉಲ್ಲಂಘಿಸಿ ಉದ್ಯಾನದ ಜಮೀನನ್ನು ಅನ್ಯ ಉದ್ದೇಶಕ್ಕೆ ಪರಭಾರೆ ಮಾಡಿದ ಪ್ರಕರಣದಲ್ಲಿ ವಿಚಾರಣೆಗೆ ಹಲವು ಬಾರಿ ಗೈರುಹಾಜರಾದ ಬೆಂಗಳೂರು ಜಿಲ್ಲಾಧಿಕಾರಿ ಜಿ.ಜಗದೀಶ್ ಅವರ ವಿರುದ್ಧ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಸಮನ್ಸ್ ಜಾರಿ ಮಾಡಿದ್ದಾರೆ.

ದೊಡ್ಡಗುಬ್ಬಿ ಗ್ರಾಮದ ಸರ್ವೆ ಸಂಖ್ಯೆ 106ರಲ್ಲಿನ 3 ಎಕರೆ 16 ಗುಂಟೆ ಜಮೀನನ್ನು ಉದ್ಯಾನದ ಉದ್ದೇಶಕ್ಕೆ ಮಾತ್ರವೇ ಬಳಸಬೇಕು ಎಂದು ಹೈಕೋರ್ಟ್ 2010ರಲ್ಲಿ ಆದೇಶಿಸಿತ್ತು. ಅದನ್ನು ಉಲ್ಲಂಘಿಸಿ ಗ್ರಾಮ ಪಂಚಾಯಿತಿ ಕಟ್ಟಡ ನಿರ್ಮಾಣಕ್ಕೆ ಜಾಗ ನೀಡಲಾಗಿದೆ. ಇದರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಲೋಕಾಯುಕ್ತದಲ್ಲಿ ದೂರು ದಾಖಲಾಗಿತ್ತು.

ಈ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಲೋಕಾಯುಕ್ತರು ಜಿಲ್ಲಾಧಿಕಾರಿಗೆ ಹಲವು ಬಾರಿ ಸೂಚಿಸಿದ್ದರು. ಆದರೆ ಜಿಲ್ಲಾಧಿಕಾರಿ ಒಮ್ಮೆಯೂ ವಿಚಾರಣೆಗೆ ಹಾಜರಾಗಿಲ್ಲ. ಜುಲೈ 31ರಂದು ನಡೆದ ವಿಚಾರಣೆಗೂ ಗೈರಾಗಿದ್ದರು. ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಲೋಕಾಯುಕ್ತರು, ‘ಸೆಪ್ಟೆಂಬರ್ 3ರಂದು ನಡೆಯಲಿರುವ ವಿಚಾರಣೆಗೆ ಹಾಜರಾಗಿ. ಇಲ್ಲವೇ ವಾರಂಟ್ ಜಾರಿ ಮಾಡಬೇಕಾಗುತ್ತದೆ’ ಎಂದು ಸಮನ್ಸ್ ಹೊರಡಿಸಿದರು.

ಸ್ಥಳ ಪರಿಶೀಲನೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊಳವೆ ಬಾವಿ ಕೊರೆಯುವ ಕಾಮಗಾರಿ ಮತ್ತು ಶುದ್ಧ ನೀರಿನ ಘಟಕ ನಿರ್ಮಾಣ ಕಾಮಗಾರಿಗಳಲ್ಲಿ ಅಕ್ರಮ ನಡೆದಿದೆ ಎಂದು ಶಾಸಕ ಮುನಿರತ್ನ ನೀಡಿದ್ದ ದೂರಿನ ಸಂಬಂಧ ಲೋಕಾಯುಕ್ತದ ಅಧಿಕಾರಿಗಳು ಶುಕ್ರವಾರ ಸ್ಥಳ ಪರಿಶೀಲನೆ ನಡೆಸಿದ್ದಾರೆ.

ರಾಜರಾಜೇಶ್ವರಿ ನಗರ ವ್ಯಾಪ್ತಿಯ ಹಲವು ಪ್ರದೇಶಗಳಿಗೆ ಭೇಟಿ ನೀಡಿದ ಲೋಕಾಯುಕ್ತದ ಅಧಿಕಾರಿಗಳು, ಪೊಲೀಸರ ಜತೆಗೆ ದೂರುದಾರ ಮುನಿರತ್ನ ಸಹ ಜತೆಗಿದ್ದರು. ‘ದಾಖಲೆಗಳಲ್ಲಿ ಮಾತ್ರವೇ ಕೊಳವೆಬಾವಿ ಮತ್ತು ಶುದ್ಧ ನೀರಿನ ಘಟಕಗಳು ಇವೆ. ವಾಸ್ತವದಲ್ಲಿ ಕಾಮಗಾರಿಯನ್ನೇ ನಡೆಸಿಲ್ಲ’ ಎಂದು ದೂರುದಾರ ಸ್ಥಳಗಳನ್ನು ತೋರಿಸಿದರು.

ಪುಸ್ತಕ ಬಹುಮಾನಕ್ಕೆ ಕೃತಿಗಳ ಆಹ್ವಾನ


ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘವು 2024ನೇ ಸಾಲಿನ ವಿವಿಧ ಪುಸ್ತಕ ಬಹುಮಾನಗಳಿಗೆ ಲೇಖಕಿಯರಿಂದ ಕೃತಿಗಳನ್ನು ಆಹ್ವಾನಿಸಿದೆ.

ಕಾದಂಬರಿ, ಕಥಾಸಂಕಲನ, ವಿಜ್ಞಾನ ಕೃತಿಗಳು, ಲಲಿತ ಪ್ರಬಂಧ, ಕವನ ಸಂಕಲನ, ಪ್ರವಾಸ ಸಾಹಿತ್ಯ, ನಾಟಕ, ಹಾಸ್ಯ ಕೃತಿ, ಆತ್ಮಕಥನ ಸೇರಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ 2024ರ ಜ.1ರಿಂದ 2024 ಡಿ.31ರೊಳಗೆ ಪ್ರಕಟಗೊಂಡ ಕೃತಿಗಳನ್ನು ಕಳುಹಿಸಬಹುದಾಗಿದೆ.

ಆಸಕ್ತರು ಆಗಸ್ಟ್ 20ರೊಳಗೆ ಕರ್ನಾಟಕ ಲೇಖಕಿಯರ ಸಂಘ, ನಂ. 206, 2ನೇ ಮಹಡಿ, ವಿಜಯ ಮ್ಯಾನ್‌ಶನ್, 2ನೇ ಕ್ರಾಸ್, 2ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು- 560018 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 8073765665 ಅಥವಾ 9480511714

ಚಿತ್ರಾವಳಿ



ಆದಾಯ ತೆರಿಗೆ ಹಾಗೂ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಬಗ್ಗೆ ಜಯನಗರದ ಜೈನ್ ವಿಶ್ವವಿದ್ಯಾಲಯದಲ್ಲಿ ರೋಟರಿ ಸಂಸ್ಥೆಯು ಶುಕ್ರವಾರ ಆಯೋಜಿಸಿದ್ದ ವಿಶೇಷ ಸಭೆಯಲ್ಲಿ (ಎಡದಿಂದ) ಆದಾಯ ತೆರಿಗೆಯ ಮಾಜಿ ಮುಖ್ಯ ಆಯುಕ್ತ ಸಂಜಯ್ ಕುಮಾರ್ ವರ್ಮಾ, ಬೆಂಗಳೂರು ವಲಯದ ಕೇಂದ್ರೀಯ ತೆರಿಗೆ ಆಯುಕ್ತ ಎಂ.ಕೊಟ್ರಸ್ವಾಮಿ, ಆದಾಯ ತೆರಿಗೆ–1ರ ಪ್ರಧಾನ ಆಯುಕ್ತೆ ಅಮೃತ ರಂಜನ್, ನ್ಯಾಷನಲ್ ಟ್ಯಾಕ್ಸೇಶನ್ ವೆಲ್ಫೇರ್ ಫೌಂಡೇಷನ್‌ನ ಅಧ್ಯಕ್ಷ ಪಿ. ವಿಜಯ್ ಆನಂದ್ ಮತ್ತು ರೋಟರಿ ಬೆಂಗಳೂರು ಜೆ.ಪಿ. ನಗರದ ಅಧ್ಯಕ್ಷ ಕೆ. ರಾಜೇಶ್ ಕುಮಾರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ



ನಾಗಾಲ್ಯಾಂಡ್ ವೃತ್ತದಿಂದ ಬಿ.ಇ.ಎಲ್ ಮಾರ್ಕೆಟ್‌ವರೆಗಿನ ಮುಚ್ಚಿರುವ ರಸ್ತೆಯನ್ನು ಸಾರ್ವಜನಿಕ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಕೋರಿ ಬಿ.ಇ.ಎಲ್ ಮುಖ್ಯಸ್ಥರಿಗೆ ಬಿಜೆಪಿ ರಾಜ್ಯ ಘಟಕದ ಕಾರ್ಯದರ್ಶಿ ತಮ್ಮೇಶ್ ಗೌಡ ನೇತೃತ್ವದಲ್ಲಿ ಶುಕ್ರವಾರ ಮನವಿ ಸಲ್ಲಿಸಲಾಯಿತು

ಮಳೆ ಇಳೆ ಮಹಿಳೆ

ರವಿಯನ್ನು ನಿಗೂಢವಾದ ತಾವಿನಲ್ಲಿ ಕೂಡಿಹಾಕಿ ಬಂದಿದೆಯೇನೋ ಎಂಬಂತೆ ಜಿಟಜಿಟ ಸುರಿಯುವ ಮಳೆ, ಎಷ್ಟೆಲ್ಲ ಬೆಚ್ಚನೆಯ ನೆನಪುಗಳನ್ನೂ ತನ್ನೊಂದಿಗೆ ಹೊತ್ತು ತರುತ್ತದೆ. ಮಲೆಸೀಮೆಯಲ್ಲಿ ಮುದ ನೀಡಿದ ಅಂದಿನ ಮುಸಲಧಾರೆ, ಕಾಂಕ್ರೀಟ್ ಕಾಡಿನ ಧಾವಂತದ ಬದುಕಿನಲ್ಲೂ ನವಿರುಕ್ಕಿಸುವ ಇಂದಿನ ವರ್ಷಧಾರೆಯ ನೆನಪಿನ ಸಿಂಚನ ಲೇಖಿಕಿ ಸಹನಾ ಹೆಗಡೆ ಅವರಿಂದ

ಮಳೆಗಾಲದಲ್ಲಿ ಯಾವುದೇ ದಿನ ಕರೆ ಮಾಡಿ, 'ಅಮ್ಮಾ ಹೇಗಿದ್ದೀಯಾ? ಏನು ಮಾಡುತ್ತಿದ್ದೀಯಾ?' ಎಂದು ಕೇಳಿದರೆ, 'ಎಂತಾ ಮಾಡದೇ? ಕರೇ ಮಳೆಗಾಲ' ಎಂಬ ಉತ್ತರ ಅಮ್ಮನ ಕಡೆಯಿಂದ ಖಚಿತ. ತಿಂಗಳಾನುಗಟ್ಟಲೆ ಕಪ್ಪಗೆ ದಟ್ಟವಾಗಿ ಕಟ್ಟಿಕೊಂಡ ಮೋಡ, ಎಡೆಬಿಡದೇ ಸುರಿಯುವ ಮಳೆ, ಕಡಿದುಹೋಗುವ ವಿದ್ಯುತ್ ಸಂಪರ್ಕ, ಜೊತೆಗೆ ಮಳೆಗಾಲ ಕಾಲಿಡುವ ಮುಂಚೆಯೇ ಅಂಗಳ, ಬಾಗಿಲು, ಗೋಡೆ, ಕಿಟಕಿಗಳನ್ನೆಲ್ಲ ಜಡಿಮಳೆಯಿಂದ ರಕ್ಷಿಸಿಕೊಳ್ಳಲು ಕಟ್ಟಿಕೊಂಡ ಜಡಿತಟ್ಟಿ...ಸೂರ್ಯ ಮೊದಲೇ ರಜೆಯ ಮೇಲಿದ್ದಾನೆ, ಅಳಿದುಳಿದ ಬೆಳಕಿಗೂ ಮನೆಯೊಳಗೆ ಬರಲು ಹಲವು ಹದಿನೆಂಟು ಅಡಚಣೆಗಳು. ಹೀಗಿದ್ದಾಗ ಮಳೆಗಾಲ ಕರಿ ಮಳೆಗಾಲವಾಗದೆ ಇನ್ನೇನಾದೀತು?

ಬಿಳಿ ಮಳೆಗಾಲ ಇದ್ದಿದ್ದರೆ! ವಯಸ್ಸಾದವರು, ಕಾಯಿಲೆ-ಕಸಾಲೆಯಿಂದ ಬಳಲುತ್ತಿರುವವರು ಅಂಗಳದಲ್ಲಿ ಆಗೀಗ ಕೈಕಾಲು ಆಡಿಸಬಹುದಿತ್ತು, ಬಿಸಿಲು ಮುಖ ತೋರಿಸಿದಾಗ ಅದರ ಕಾವಿಗೆ ಮೈಯೊಡ್ಡಿಕೊಳ್ಳಬಹುದಿತ್ತು. ಆದರೆ ಬೆಂಗಳೂರಿನಂಥ ಬೆಂಗಳೂರಿನಲ್ಲಿಯೇ ಬಿಳಿ ಮಳೆಗಾಲ ಎನ್ನುವುದು ಕನಸು. ಹಾಗಿದ್ದಾಗ ಪಶ್ಚಿಮಘಟ್ಟದ ಸೆರಗಿನಲ್ಲಿರುವ, ಹಸಿರನ್ನೇ ಹಾಸಿ ಹೊದ್ದಿರುವ ನಮ್ಮೂರಿನಲ್ಲಿ ಇದೆಲ್ಲ ಆಗುವ ಮಾತಲ್ಲ ಬಿಡಿ.

ಇಂತಹುದೇ ಒಂದು ಕರಿ ಮಳೆಗಾಲದ ದಿನ. ಬಹುಶಃ ನಾಲ್ಕನೆಯ ತರಗತಿಯಲ್ಲಿದ್ದೆ. ಸಹಪಾಠಿಯೊಬ್ಬಳು 'ಹೊಟ್ಟೆನೋವು, ಮನೆಗೆ ಹೋಗುತ್ತೇನೆ' ಎಂದು ಅಕ್ಕೋರನ್ನು ಪೀಡಿಸತೊಡಗಿದಳು. ಚಿಕ್ಕಹುಡುಗಿ, ಅವಳ ಜೊತೆ ನಾನೂ ಹೋಗುವುದೆಂದಾಯಿತು. ಅರ್ಧ ದಾರಿ ಸಾಗಿದ್ದೆವು. ಗಾಳಿ-ಮಳೆ ಜೋರಾಯಿತು. ಅಲ್ಲೊಂದು ಇಲ್ಲೊಂದು ಬಿಡಿಬಿಡಿ ಮನೆ. ನಡುವೆ ಕಾಡೇ ಕಾಡು. ಇದ್ದ ಒಂದೇ ಛತ್ರಿಯನ್ನು ಇಬ್ಬರೂ ಸೇರಿ ಹಿಡಿದುಕೊಂಡರೂ ಗಾಳಿಯ ರಭಸಕ್ಕೆ ಅದು ಮೊಗಚಿಕೊಂಡೇ ಬಿಟ್ಟಿತು. ತೊಟ್ಟ ಬಟ್ಟೆಯ ಜೊತೆಗೆ ಪಾಟಿ-ಪುಸ್ತಕಗಳೂ ಒದ್ದೆಮುದ್ದೆ. ಎಲ್ಲೆಡೆಯಿಂದ ನುಗ್ಗಿಬರುವ ನೀರು. ಸಹಾಯಕ್ಕೆ ಕರೆಯೋಣವೆಂದರೆ ಹತ್ತಿರದಲ್ಲಿ ಯಾರೂ ಕಾಣಿಸುತ್ತಿಲ್ಲ. ಒಬ್ಬರಿಗೊಬ್ಬರು ಆತುಕೊಂಡು ನಡುಗುತ್ತಲೇ ಸುಮಾರು ಸಮಯ ಕಳೆದಾಯಿತು.

ಅವಳನ್ನು ಮನೆಗೆ ಬಿಡಹೋದರೆ ತಿರುಗಿ ಬರುವಾಗ ನಾನು ಒಬ್ಬಂಟಿ. ನನ್ನನ್ನು ಬಿಡಲು ಬಂದರೆ ತಿರುಗಿ ಹೋಗುವಾಗ ಅವಳು ಒಬ್ಬಂಟಿ. ಈ ನಡುವೆ ಅವಳ ಹೊಟ್ಟೆನೋವು ಮರೆತೇಹೋಯಿತು. ಅಂತೂ ಅವಳು ತನ್ನ ಮನೆ ಕಡೆ, ನಾನು ನನ್ನ ಮನೆ ಕಡೆ ಹೋಗುವುದು ಎಂದು ನಿರ್ಧರಿಸಿಯಾಯಿತು. ಅವಳ ಮನೆಗೆ ಹೋಗಬೇಕೆಂದರೆ, ಚಿಕ್ಕದೊಂದು ಹಳ್ಳವನ್ನು ದಾಟಲೇಬೇಕಿತ್ತು. ಗುಡ್ಡಬೆಟ್ಟಗಳಿಂದ ಹರಿದುಬಂದ ಕೆನ್ನೀರಿನ ಭೋರ್ಗರೆತಕ್ಕೆ ಅದುರುತ್ತಿದ್ದ ಅಡಿಕೆಮರದ ಸಂಕವನ್ನು ದಾಟಿ ಅಂದು ಮನೆ ಸೇರಿದಳು ಗೆಳತಿ. ವಿಷಾದದ ಸಂಗತಿಯೆಂದರೆ, ಮುಂದೊಂದು ದಿನ ಸಂಸಾರದಲ್ಲಿ ಸಂತಸದಿಂದ ಅವಳು ಮೈಮರೆತಿದ್ದಾಗ, ಜೀವನದಿಗೆ ಅಡ್ಡಲಾಗಿ ಜವರಾಯ ಹಾಕಿದ ಸಂಕವನ್ನು ದಾಟಲು ಮಾತ್ರ ಅವಳಿಗೆ ಆಗಲೇ ಇಲ್ಲ.

ನಿತ್ಯವೂ ಹನ್ನೆರಡು ಕಿಲೊಮೀಟರ್ ಪಯಣಿಸಿ ಹೈಸ್ಕೂಲಿಗೆ ಹೋಗುತ್ತಿದ್ದ ಸಮಯ. ಮಳೆಗಾಲದಲ್ಲಂತೂ ನಡೆದುಹೋಗಿ ಬಸ್ ನಿಲ್ದಾಣ ತಲುಪುವ ಮೊದಲೇ ಸಮವಸ್ತ್ರ ತೋಯ್ದು ತೊಪ್ಪೆಯಾಗಿರುತ್ತಿತ್ತು. ಸುತ್ತಮುತ್ತಲಿನ ಹತ್ತಾರು ಹಳ್ಳಿಗಳಿಂದ ನಡೆದು ಬರುತ್ತಿದ್ದ ಎಲ್ಲ ಹೆಣ್ಣುಮಕ್ಕಳ ಅವಸ್ಥೆಯೂ ಇದೇ ಆಗಿತ್ತು. ದಪ್ಪನೆಯ ನೀಲಿ ಕಾಟನ್ ಲಂಗದಿಂದ ಇಳಿದು ನೆಲದುದ್ದಕ್ಕೂ ಹರಿಯುತ್ತಿದ್ದ ನೀರು. ಸಂಜೆ ಮನೆ ಸೇರುವಷ್ಟರಲ್ಲಿ ಕಟಗುಟ್ಟುವ ಹಲ್ಲುಗಳು, ಬಿಳಿಚಿ, ನೆರಿಗೊಂಡ ಕೈಕಾಲು ಬೆರಳುಗಳು. ಅಮ್ಮಂದಿರು ಜೀವಂತವಾಗಿಟ್ಟಿದ್ದ ಅಡುಗೆ ಒಲೆಯೋ ಬಚ್ಚಲ ಬೆಂಕಿಯೋ ಅಥವಾ ಹೊಡಸಲ ಕಾವೋ ಅವುಗಳಲ್ಲಿ ಮತ್ತೆ ಉಸಿರನೂದಬೇಕು.

ಇಂತಹ ಜೋರು ಮಳೆಯಲ್ಲಿಯೇ ಊರಿನ ಭತ್ತದ ಗದ್ದೆಗಳಲ್ಲಿ ಭರಪೂರ ನೆಟ್ಟಿಯ ಕೆಲಸ. ಕಂಬಳಿ-ಗೊರಬುಗಳನ್ನು ಹೊದ್ದ ಹೆಮ್ಮಕ್ಕಳು, ಸುರಿಯುವ ಧಾರಾಕಾರ ಮಳೆಗೆ ಬೆನ್ನೊಡ್ಡಿ, ಮೊಳಕಾಲುದ್ದ ಕೆಸರು ನೀರಿನಲ್ಲಿ ಸೊಂಟ ಬಗ್ಗಿಸಿ ಅಗೆ ಕೀಳಬೇಕು, ಸಸಿ ನೆಡಬೇಕು. ಊಟದ ವಿರಾಮದಲ್ಲಿ ಶಾಲೆಯಿಂದ ಮನೆಗೆ ಬಂದಿದ್ದೇ ಯಾರದಾದರೂ ನೆರವಿನಲ್ಲಿ ಗದ್ದೆಗೆ ಓಡುತ್ತಿದ್ದೆ. ಆಗ ಕಿತ್ತ, ನೆಟ್ಟ ಭತ್ತದ ಸಸಿಗಳು ಕೊಟ್ಟ ಖುಷಿಗೆ ಮತ್ತೆ ಪಕ್ಕಾಗ ಬೇಕೆಂದೆನಿಸುತ್ತದೆ. ತಮಾಷೆ, ನಗು, ಕಾಲೆಳೆಯುವುದರ ಜೊತೆಗೆ ಎಲ್ಲರೂ ಸೇರಿ ಹಾಡುತ್ತಿದ್ದ ಆ ಹಾಡು ಅದೆಷ್ಟು ರಾಗಬದ್ಧ. ಅಮರಿಕೊಂಡ ಕಷ್ಟ-ಕೋಟಲೆ, ಚಿಕ್ಕ ಪುಟ್ಟ ನಲಿವು ನೆಮ್ಮದಿಯ ಭಾವಗಳೆಲ್ಲ ಗದ್ದೆಯ ಅರಲಿನಲ್ಲಿ ಹೆಂಗಳೆಯರ ಕೊರಳಿನಲ್ಲಿ ಬಿರಿದು ಹಾಡಾಗಬೇಕು.

ಗಿಡಮರಗಳೆಲ್ಲ ಹಸಿರು ಬಣ್ಣ ತಳೆದಿವೆ, ಹಾದಿಬದಿಯೆಲ್ಲ ಶುಭ್ರವಾಗಿದೆ, ಬೋಂಡ-ಬಜ್ಜಿ ಮಾಡುವುದಕ್ಕೆ ಸಕಾಲ, ಕಾಫಿ ಡಿಕಾಕ್ಷನ್ ಸ್ವಲ್ಪ ಹೆಚ್ಚೇ ಹಾಕಿಡಿ, ಆಫೀಸಿನಿಂದ ಬೇಗ ಮನೆಯತ್ತ ಮುಖ ಮಾಡಿ, ಕುತ್ತಿಗೆ ಉದ್ದ ಮಾಡಿ ಕಾಯುವ ಒಂದಾದರೂ ಜೀವ ಅಲ್ಲಿರುತ್ತದೆ ಇತ್ಯಾದಿ ಮೃದುಮಧುರ ಭಾಷೆಯೊಂದು ಮಳೆಗಾಲದಲ್ಲಿ ಮನಕ್ಕೆ ಮುದ ನೀಡಬೇಕಿತ್ತು. ದೌರ್ಭಾಗ್ಯವೆಂದರೆ, ಅಂತಹ ಪದಪುಂಜಗಳನ್ನು ಕೇಳದೆ ದಶಕಗಳೇ ಕಳೆದುಹೋದವು. ಧಾರಾಕಾರ ಮಳೆಯನ್ನು 'ಕುಂಭದ್ರೋಣ ಮಳೆ', 'ಮುಸಲಧಾರೆ' ಎಂಬೆಲ್ಲ ಕಿವಿಗೆ ಹಿತವಾದ ಸುಂದರ ಶಬ್ದಗಳನ್ನು ಬಳಸಿ ಸಾಹಿತಿಗಳು, ಕವಿ-ಕವಯಿತ್ರಿಯರು ಬಣ್ಣಿಸುವ ಕಾಲವೊಂದಿತ್ತು. ಈಗ ಕೇಳಿಬರುವುದೆಲ್ಲವೂ 'ರಣಭೀಕರ'. ಬೀಳುವ ಹತ್ತಾರು ಹನಿಗಳೂ ಮಳೆಯಲ್ಲ, ಮಳೆರಾಯನ 'ರಣಕೇಕೆ', 'ರುದ್ರ ನರ್ತನ'. ಹಗಲಿರುಳೂ ಈ ರಣಗಳದೇ ಅನುರಣನ!

ಬಿಡಿ, ಗಮನ ಬೇರೆಡೆಗೆ ಹರಿಸೋಣ ಎಂದುಕೊಂಡರೆ, ಮನೆಯಲ್ಲೊಂದೇ ಅಲ್ಲ ಸಾಮಾಜಿಕ ಮಾಧ್ಯಮಗಳಲ್ಲಿಯೂ ಒಣಗದ ಬಟ್ಟೆಗಳದೇ ವಾಸನೆ. ಯಾರು ಎಷ್ಟು ಸೆಟ್ ಒಳಬಟ್ಟೆಗಳನ್ನು ಇಟ್ಟುಕೊಂಡು ಮಳೆಗಾಲವನ್ನು ಮ್ಯಾನೇಜ್ ಮಾಡುತ್ತಿದ್ದಾರೆ ಎನ್ನುವ ಅಂಕಿಸಂಖ್ಯೆ ಸಹಿತ ಘನಗಂಭೀರ ಚರ್ಚೆ!

ಮಳೆಗಾಲ ಎಂದರೆ ಬರೀ ಬೋಂಡ-ಬಜ್ಜಿ-ಕಾಫಿಯೇ ಆಯಿತೆನ್ನಬೇಡಿ. ಥಂಡಿಯಲ್ಲಿ ಶಾಲೆಯಿಂದ ಬರುವ ಮಕ್ಕಳಿಗಾಗಿ ಮಲೆನಾಡಿನ ಅಮ್ಮಂದಿರು ಆ ಭಾಗದಲ್ಲಷ್ಟೇ ಸಿಗುವ ಕರಿಬಾಳೆ ಹಣ್ಣನ್ನು ಸುಲಿದು, ನಿಗಿನಿಗಿ ಕೆಂಡದ ಮೇಲೆ ಸುಟ್ಟೋ ಸಿಪ್ಪೆಸಹಿತ ಬಬ್ಬೂದಿಯಲ್ಲಿ ಬೇಯಿಸಿಯೋ ಇಡುತ್ತಿದ್ದರಲ್ಲ. ಅಂಗಿ-ಚಡ್ಡಿ-ಲಂಗ-ಪಲಕಗಳನ್ನು ಒಣಗಿಸಿಕೊಳ್ಳುತ್ತಲೇ ಬದಿಯಲ್ಲಿರುವ ಹಲಸಿನ ಬೀಜಗಳನ್ನು ಒಲೆಗೆ ಹಾಕಿ, ಅವು ಢಮಾರೆಂದು ಹೊಟ್ಟಿ, ಅಮ್ಮ-ದೊಡ್ಡಮ್ಮ, ಚಿಕ್ಕಮ್ಮ, ಅತ್ತೆ, ಅಜ್ಜಿ ಎಂದು ಯಾರಾದರೊಬ್ಬರಿಂದ ಬಯ್ಯಿಸಿಕೊಳ್ಳದಿದ್ದರೆ ಅದೂ ಒಂದು ಬಾಲ್ಯವೇ? ಬೇಸಿಗೆಯಲ್ಲಿ ಆಯ್ದು ಶೇಖರಿಸಿಟ್ಟುಕೊಂಡ ಗೇರುಬೀಜಗಳನ್ನು ಹದವಾಗಿ ಸುಟ್ಟು ತಿನ್ನುವುದೂ ಮಳೆಗಾಲದ ಸುಖಗಳಲ್ಲೊಂದು.

ಮಲೆನಾಡಿನ ಅದರಲ್ಲಿಯೂ ಶಿರಸಿ-ಸಿದ್ದಾಪುರದ ಸೀಮೆಗಳಲ್ಲಿ ಮಳೆಗಾಲದಲ್ಲಿ ಮಾತ್ರ ಮಾಡುತ್ತಿದ್ದ ವಿಶೇಷ ಸಿಹಿ ತಿನಿಸು ಉಂಡ್ಲೆಕಾಳನ್ನು ಯಾರಾದರೂ ಮಾಡಿದ್ದಾರಾ ನೋಡೋಣ ಬನ್ನಿ. ಅಂದಹಾಗೆ, ಶ್ರಾಯದಲ್ಲಿ ಹೇರಳವಾಗಿ ಸಿಗುವಾಗ ಬಿಡಿಸಿ ಉಪ್ಪುನೀರಿಗೆ ಹಾಕಿಟ್ಟ ಹಲಸಿನಕಾಯಿಯ ತೊಳೆಗಳನ್ನು ಕೃಷ್ಣಾಷ್ಟಮಿಯಂತಹ ಹಬ್ಬ-ಹರಿದಿನಗಳಲ್ಲಿ ಅಥವಾ ನೆಂಟರ ನೆಪದಲ್ಲಿ ಬೀಸಿ, ಕಾಸಿ ಹದವಾಗಿ ಕರಿದು ಮಾಡುತ್ತಿದ್ದ ಈ ಕರಿಕಂದು ಗೋಲಿಗಳ ಜೊತೆಗೆ ಮಲೆನಾಡಿಗೇ ವಿಶೇಷವಾದ ಉಪ್ಪಾಗೆ ತುಪ್ಪವಿರದಿದ್ದರೆ ಕರಿ ಮಳೆಗಾಲಕ್ಕೆ ಕಳೆಕಟ್ಟುವುದಾದರೂ ಹೇಗೆ? ಹೇಳಿ.

ಹೇಗಿದೆ ಮಳೆಗಾಲ?

ತಿಂಗಳಾನುಗಟ್ಟಲೆ ಹೊಡೆಯುವ ಮಳೆಯಿಂದ ರೋಸಿಹೋದ ಮಲೆನಾಡಿಗರನ್ನು ಅರ್ಥಾತ್ ಮಳೆನಾಡಿಗರನ್ನು 'ಹೇಗಿದೆ ಮಳೆಗಾಲ?' ಎಂದು ಕೇಳಿನೋಡಿ. 'ಸುಡುಗಾಡು ಮಳೆಗಾಲ, ಬೇಜಾರು ಹಿಡಿದುಹೋಯಿತು' ಎಂಬ ಉತ್ತರ ಬರದಿದ್ದರೆ ಹೇಳಿ. ಸುಡುಗಾಡಿಗೂ ಹೋಗಲಾರದಷ್ಟು ಮಳೆ ಹೊಯ್ಯುವಲ್ಲಿ ಮಳೆಗಾಲವೇ ಸುಡುಗಾಡಾಗಿಬಿಡುತ್ತದೆ!

ಈ ಲೋಕ, ಆ ಲೋಕ

ಬೆಂಗಳೂರಿನ ರಸ್ತೆಗಳೆಲ್ಲ ಜಲಾವೃತ ಎಂದು ಮಾಧ್ಯಮಗಳು ಎತ್ತರದ ಸ್ವರದಲ್ಲಿ ಸುದ್ದಿ ಬಿತ್ತರಿಸುತ್ತಿದ್ದಾಗ ಅಮೆರಿಕೆಯ ನೆಲದಲ್ಲಿದ್ದೆ. ವಿಮಾನ ನಿಲ್ದಾಣದಿಂದ ಮನೆ ತಲುಪುವುದಕ್ಕಿಂತಲೂ ಹೆಚ್ಚಾಗಿ ಬಟ್ಟೆಗಳನ್ನು ಒಣಗಿಸುವುದು ಹೇಗಪ್ಪಾ ಎಂಬ ಚಿಂತೆ ಕಾಡುತ್ತಿತ್ತು. ಕಳವಳದಲ್ಲಿಯೇ ವಿಮಾನ ಇಳಿದು ಕಾವಳದಲ್ಲಿಯೇ ಮನೆ ತಲುಪಿದಾಗ, ನೆಟ್ಟಿದ್ದ ನಾಲ್ಕಾರು ಹೂಗಿಡಗಳೂ ಒಣಗಿ ನಿಂತಿದ್ದವು!



ಕೊಡೆ ಹೇಳುವ ಕಿವಿಮಾತು

ಅಬ್ಬರದ ಮಳೆಯಲ್ಲಿಯೇ ಕೊಡೆ ಅಮಾವಾಸ್ಯೆ ಬರುತ್ತದೆ. ಹೊಸದಾಗಿ ಮದುವೆಯಾದ ಮಗಳ ಮನೆಗೆ ನೆಂಟರೊಡನೆ ಹಬ್ಬಕ್ಕೆ ಕರೆಯಲು ಹೋಗುತ್ತಾನೆ ಅಪ್ಪ. ಭೀಮನ ಅಮಾವಾಸ್ಯೆಯಂದು ವ್ರತವಿದ್ದವರ ಮನೆಯಲ್ಲಿ ಸಂಭ್ರಮ ದುಪ್ಪಟ್ಟು. ಪೂಜೆ ಮುಗಿಸಿ, ಹಬ್ಬದೂಟ ಉಂಡು ಮನೆಯತ್ತ ಮುಖ ಮಾಡುತ್ತೇನೆ ಎನ್ನುವ ಅಳಿಯನ ಕೈಗೆ ಮುಗುಳ್ನಗುತ್ತ ಹೊಸ ಕೊಡೆಯನ್ನಿಡುತ್ತಾರೆ ಮಾವ. ಮಲೆನಾಡಿನಲ್ಲಿ, ಅದರಲ್ಲೂ ವಿಶೇಷವಾಗಿ ಅಲ್ಲಿನ ಗ್ರಾಮೀಣ ಭಾಗದ ಕೆಲವು ಸಮುದಾಯಗಳಲ್ಲಿ ಹೆಚ್ಚಾಗಿ ಆಚರಣೆಯಲ್ಲಿದೆ ಈ ಸಂಪ್ರದಾಯ. ಇಷ್ಟು ಕಾಲ ಮುದ್ದಿನಿಂದ ಬೆಳೆಸಿದ ಮಗಳನ್ನು ಧಾರೆಯೆರೆದು ಕೊಟ್ಟಿದ್ದೇನೆ, ಯಾವ ತೊಂದರೆಯೂ ಬಾಧಿಸದಂತೆ ಅವಳನ್ನು ಬಾಳಿಸಿಕೋ ಎಂದು ಸೂಚ್ಯವಾಗಿ, ಸಾಂಕೇತಿಕವಾಗಿ ಹೇಳಲು ಬಳಸಿಕೊಂಡರೇ ಈ ಸಂಪ್ರದಾಯವನ್ನು?



ಮರೆತುಬಿಡಿ ಈ ಪಾಠ!

ಮುಂಜಾನೆ ಮಂಪರುಗಣ್ಣಿನಲ್ಲಿ ಎದ್ದುಬಂದ ಮಗಳು, ಎಂದಿನಂತೆ ಓಡಿ ಬಂದು ನನ್ನನ್ನು ತಬ್ಬಲಿಲ್ಲ, 'ಗುಡ್ ಮಾರ್ನಿಂಗ್' ಎಂದದ್ದಕ್ಕೂ ಕ್ಯಾರೇ ಅನ್ನಲಿಲ್ಲ. ನಗಲೋ ಬೇಡವೋ ಎಂಬಂತೆ ಮುಖಮಾಡಿ ಸದ್ದಿಲ್ಲದೆ ಹಲ್ಲುಜ್ಜಲು ಹೊರಟಾಗ, ಅರೆ ಏನಾಯಿತು ಎಂದು ಅಚ್ಚರಿಯಾಯಿತು. ಆದರೂ ಅವಳನ್ನು ಶಾಲೆಗೆ ಹೊರಡಿಸುವ ಧಾವಂತದಲ್ಲಿ ಅದಕ್ಕೆಲ್ಲಾ ತಲೆಕೆಡಿಸಿಕೊಳ್ಳುವಷ್ಟು ಸಮಯ ಇರಲಿಲ್ಲ, ಕಚೇರಿಯ ಕೆಲಸದಲ್ಲೂ ಅದಕ್ಕೆ ಆಸ್ಪದವಾಗದೆ ವಿಷಯ ಮರೆತೇಹೋಗಿತ್ತು. ಆದರೆ ಸಂಜೆ ಮನೆಗೆ ವಾಪಸಾದಾಗಲೂ ಅವಳು ಅದೇ ಪೆಚ್ಚು ಮೋರೆಯಲ್ಲಿ ಎದುರುಗೊಂಡಾಗ ಮಾತ್ರ ಕಳವಳವಾಯಿತು. ತೋರಿಸಿಕೊಳ್ಳದೆ, ಬರುತ್ತಾ ತಂದಿದ್ದ ಅವಳಿಷ್ಟದ ತಿಂಡಿಯನ್ನು ಮುಂದಿಟ್ಟಾಗಲೂ ಸಪ್ಪೆ ಮುಖದಲ್ಲೇ ಕೈಗೆತ್ತಿಕೊಂಡಾಗ ಮಾತ್ರ ತಡೆಯಲಾಗಲಿಲ್ಲ. ಹತ್ತಿರ ಸೆಳೆದುಕೊಂಡು ಮುದ್ದುಗರೆಯುತ್ತಾ 'ಏನಾಯಿತು ನನ್ನ ಪುಟಾಣಿಗೆ?' ಎಂದಾಗ, ಅದಕ್ಕೇ ಕಾದಿದ್ದವಳಂತೆ ಸಿಡಾರ್ ಎಂದು ದೂರ ಸರಿದು 'ಹ್ಞೂಂ ನೆನ್ನೆ ನೀನು ಸುಮ್‌ಸುಮ್ನೆ ನನಗೆ ಬೈದಿದ್ಯಾಕೆ' ಎಂದಾಗಲೇ ಅವಳ ಕೋಪಕ್ಕೆ ಕಾರಣ ತಿಳಿದದ್ದು. ಮನೆ-ಕಚೇರಿ ಕೆಲಸದ ಒತ್ತಡದಲ್ಲಿ ನಿದ್ದೆ ಸಾಲದೆ ಹೈರಾಣಾಗುತ್ತಿದ್ದರಿಂದ, ನೆನ್ನೆ ರಾತ್ರಿ ಬೇಗ ಬೇಗ ಅಡುಗೆ ಮನೆಯ ಕೆಲಸ ಮುಗಿಸಿ ಆದಷ್ಟು ಬೇಗ ದಿಂಬಿಗೆ ತಲೆಯಾನಿಸುವ ಆತುರದಲ್ಲಿದ್ದೆ. ಆಗ ಹಿಂದಿನಿಂದ ಅವಳು ಗಟ್ಟಿಯಾಗಿ ತಬ್ಬಿಕೊಂಡು 'ಕಥೆ ಹೇಳು' ಎಂದು ದುಂಬಾಲು ಬಿದ್ದಾಗ 'ಟೈಮಾಯಿತು ಹೋಗು ಮಲಗು' ಎಂದು ಗದರಿದ್ದೆ ಅಷ್ಟೆ. ಆಮೇಲೆ ಅದರ ನೆನಪೇ ನನಗಿರಲಿಲ್ಲ. ಆದರೆ ಅದಾಗಿ ಒಂದು ರಾತ್ರಿ, ಒಂದು ಹಗಲು ಕಳೆದಿದ್ದರೂ ಅವಳ ಮುನಿಸು ಮಾತ್ರ ಮಾಯವಾಗಿರಲಿಲ್ಲ!

ಬಾಲ್ಯದಲ್ಲಿ ಅಮ್ಮನಿಂದ ಹಿಗ್ಗಾಮುಗ್ಗಾ ಬೈಸಿಕೊಳ್ಳುತ್ತಿದ್ದರೂ ಮರುದಿನ ಏಳುವಷ್ಟರಲ್ಲಿ ಅದ್ಯಾವುದೂ ತಲೆಯಲ್ಲಿ ಇರುತ್ತಲೇ ಇರಲಿಲ್ಲ. ಎಂದಿನಂತಿರದ ಅಮ್ಮನ ಸಿಡುಕು ಮೂತಿ ನೋಡಿದಾಗಷ್ಟೇ ಮಿತಿಮೀರಿದ ಕೀಟಲೆಯಿಂದ ಅವಳ ಪಿತ್ಥ ನೆತ್ತಿಗೇರಿಸಿದ್ದು ನೆನಪಾಗುತ್ತಿದ್ದುದು. ವಯೋಸಹಜವಾದ ವಿಪರೀತ ತುಂಟಾಟದಿಂದ ನನಗೆ ಗೂಸಾ ಬೀಳುವುದು, ಅಮ್ಮನಿಂದ ಮಂಗಳಾರತಿ ಎತ್ತಿಸಿಕೊಳ್ಳುವುದು ಮಾಮೂಲಿ ಎಂಬಂತಾಗಿ ಹೋಗಿತ್ತು. ಆದರೆ ರಾತ್ರಿ ನಿದ್ದೆ ಮುಗಿಸಿ ಎದ್ದೆನೆಂದರೆ ಮುಗಿಯಿತು, ಅಲ್ಲಿಗೆ ಎಲ್ಲವೂ ಮರೆತಂತೆಯೇ. ಮತ್ತದೇ ತುಂಟಾಟ, ಕೀಟಲೆಗೆ ಹಾತೊರೆಯುತ್ತಿತ್ತು ಮನ.

ಆದರೆ ಈಗಿನ ಮಕ್ಕಳಿಗೆ ಏನಾಗಿದೆ? ಮಲಗಿ ಎದ್ದಾಗ ಹೋಗಲಿ, ಅದರ ಮರುದಿನವೂ ಅದೇ ಗುಂಗು, ದೊಡ್ಡವರು ಮರೆತರೂ ಚಿಕ್ಕ ತಲೆಯಲ್ಲಿ ಮಾತ್ರ ಅದೇ ಗುನುಗು. ಈ ಕಿವಿಯಲ್ಲಿ ಹೇಳಿದ ಒಳ್ಳೆಯ ವಿಷಯ ಆ ಕಿವಿಯಿಂದ ಆಚೆ ಓಡಿ ಹೋಗಿರುತ್ತದೆ. ಸಕಾರಣವಿದ್ದು ಬೈದಾಗಲೂ ಕೆಲಸದ ಒತ್ತಡದಲ್ಲಿದ್ದಾಗ ಕಿರಿಕಿರಿ ತಡೆಯಲಾರದೆ ಗದರಿದಾಗಲೂ ಅದನ್ನು ಮಾತ್ರ ಮರೆಯದೇ ಜಿದ್ದು ಸಾಧಿಸುವುದು ಆನ್‌ಲೈನ್ ಕಾಲದ ನವಪೀಳಿಗೆಯ ವರಸೆಯೇ? 'ನಿದ್ದೆಗೊಮ್ಮೆ ನಿತ್ಯ ಮರಣ, ಎದ್ದ ಸಲ ನವೀನ ಜನನ' ಎಂಬ ಬೇಂದ್ರೆಯವರ ಕವನದ ಸಾಲು ಅಲ್ಲೆಲ್ಲೋ ನಮ್ಮನ್ನು ಅಣಕಿಸಿ ನಗುತ್ತಿದೆಯೇ?

'ಮನೆಯಲ್ಲಿ ಅಥವಾ ಹೊರಗೆ ನಮಗೆ ಏನಾದರೂ ಜಗಳ ಆಗಿದ್ರೆ ಒಮ್ಮೆ ಮಲಗಿ ಎದ್ದೆವೆಂದರೆ ಅದು ಮುಗಿದುಹೋಗಿರಬೇಕು. ಮತ್ತೆ ನಾವು ಕೆಟ್ಟವರೂ ಅಲ್ಲ, ಒಳ್ಳೆಯವರೂ ಅಲ್ಲ, ನಾವು ಹೊಸಬರು.ತಾಜಾ ಜೀವನ. ಹಾಗೆ ನಾವು ಪ್ರತಿದಿನ ಹೊಸಬರಾಗಿ ಬಾಳಿದರೆ ಅದೇ ಅಧ್ಯಾತ್ಮ ಜೀವನ' ಎಂದಿದ್ದಾರೆ ಸಿದ್ಧೇಶ್ವರ ಸ್ವಾಮೀಜಿ. ಹೌದು, ನಮ್ಮ ಮಕ್ಕಳಿಗೆ ನಾವೀಗ ಕಲಿಸಲೇಬೇಕಾದ ಪಾಠಗಳಲ್ಲಿ 'ಮರೆಯಲೇಬೇಕಾದ' ಈ ಪಾಠವೂ ಒಂದು, ಅಲ್ಲವೇ?

–ಶಾರದಾ

ಹಾಲುಣಿಸಿ ಬಾಂಧವ್ಯ ಹೆಚ್ಚಿಸಿ

ಸ್ತನ್ಯಪಾನ ಸಪ್ತಾಹ
ಆ. 1–7

• ಡಾ. ವೀಣಾ ಭಟ್



'ಮಗುವಿಗೆ ಎದೆಹಾಲು ಸಾಲುತ್ತಿಲ್ಲ. ದನದ ಹಾಲು ಕುಡಿಸಬಹುದೇ?' ಎಂದು ಹಲವರು ನನ್ನನ್ನು ಕೇಳುತ್ತಲೇ ಇರುತ್ತಾರೆ. ಹೆರಿಗೆಯಾದ ಪ್ರತಿ ತಾಯಿಯಲ್ಲೂ ಮಗುವಿಗೆ ಸಾಕಾಗುವಷ್ಟು ಹಾಲು ಉತ್ಪಾದಿಸುವ ಸಾಮರ್ಥ್ಯ ಇದ್ದೇ ಇರುತ್ತದೆ. ಇದಕ್ಕೆ ಅವಳಿ ಮಕ್ಕಳ ತಾಯಂದಿರೂ ಹೊರತಲ್ಲ. ಗರ್ಭಧಾರಣೆಯ ಸಂದರ್ಭದಲ್ಲಿ ಪಿಟ್ಯೂಟರಿ ಗ್ರಂಥಿಯಿಂದ ಹಾಲಿನ ಉತ್ಪಾದನೆಯನ್ನು ಪ್ರಚೋದಿಸುವ ಪ್ರೋಲ್ಯಾಕ್ಟಿನ್ ಹಾರ್ಮೋನ್ ಉತ್ಪಾದನೆಯಾಗುತ್ತದೆ. ಪ್ರತಿ ಬಾರಿ ಮಗು ಹಾಲುಂಡಾಗ ಹಾಲು ಕಡಿಮೆಯಾಗುತ್ತಿದೆ ಎನ್ನುವ ಸಂದೇಶವು ನರವಾಹಕಗಳಿಂದ ಮೆದುಳಿಗೆ ಹೋಗುತ್ತದೆ. ಆಗ ಮತ್ತಷ್ಟು ಪ್ರೋಲ್ಯಾಕ್ಟಿನ್ ಹಾರ್ಮೋನ್ ಉತ್ಪಾದನೆಯಾಗಿ ಎದೆಹಾಲು ಇನ್ನಷ್ಟು ಹೆಚ್ಚಾಗುತ್ತದೆ. ಮಗು ಹಾಲು ಕುಡಿಯುವಾಗ ಆಕ್ಸಿಟೋಸಿನ್ ಎಂಬ ಹಾರ್ಮೋನ್ ಬಿಡುಗಡೆಯಾಗಿ, ಹಾಲನ್ನು ಹೊರಚಿಮ್ಮಿಸಲು ನೆರವಾಗುತ್ತದೆ.

ಮೊದಲ ಆರು ವಾರ ದಿನಕ್ಕೆ ಹತ್ತರಿಂದ ಹನ್ನೆರಡು ಬಾರಿಯಾದರೂ ಎದೆಹಾಲುಣಿಸಬೇಕು. ಹಾಲಿಲ್ಲ, ಹಾಲು ಹೆಚ್ಚಾಗಿ ಸೋರುತ್ತಿಲ್ಲ ಎಂದು ನಿಮಗೆ ಅನ್ನಿಸಿದರೂ ಮಗುವಿಗೆ ಸಾಕಾಗುವಷ್ಟು ಹಾಲು ಬಂದೇ ಬರುತ್ತದೆ. ಪ್ರತಿ ಬಾರಿಯೂ ಕನಿಷ್ಠ 15 ನಿಮಿಷವಾದರೂ ಒಂದು ಕಡೆ ಕುಡಿಸಿ, ಪೂರ್ತಿ ಖಾಲಿಯಾದ ಮೇಲೆ ಇನ್ನೊಂದು ಕಡೆ ಕುಡಿಸಿ.

ಎದೆಹಾಲಿನಲ್ಲಿ ಮುಂಭಾಗದ ಹಾಲು ಹಾಗೂ ಹಿಂಭಾಗದ ಹಾಲು ಎಂದು ಎರಡು ವಿಧ. ಸಕ್ಕರೆ ಅಂಶವಿರುವ ಮುಂದಿನ ಹಾಲು (ಫ್ಲೋರ್‌ಮಿಲ್ಕ್) ನೀರಿನಂತಿದ್ದು, ಬಾಯಾರಿಕೆ ನೀಗಿಸುತ್ತದೆ. ಮಗು ಇದನ್ನಷ್ಟೇ ಕುಡಿದಾಗ ಹೊಟ್ಟೆ ಉಬ್ಬರಿಸಿದಂತಾಗಿ, ಆಗಾಗ್ಗೆ ಅಳಬಹುದು. ಹಿಂದಿನ ಹಾಲಿನಲ್ಲಿ (ಹೈಂಡ್‌ಮಿಲ್ಕ್) ಹೆಚ್ಚು ಕೊಬ್ಬಿನಾಂಶವಿದ್ದು, ಅದನ್ನು ಕುಡಿದ ಮಗು ಸಂತೃಪ್ತಭಾವದಿಂದ ಮಲಗಬಹುದು. ಮಗುವಿನ ತೂಕ ಹೆಚ್ಚಲು ಇದು ಪೂರಕ. ತಾಯಿ–ಮಗುವಿನ ಬಾಂಧವ್ಯದಿಂದಲೂ ಹಾಲು ಉತ್ಪಾದನೆ ಹೆಚ್ಚುತ್ತದೆ ಎಂಬುದು ತಿಳಿದಿರಲಿ.

ಸರಿಯಾದ ಭಂಗಿಯಲ್ಲಿ ಕುಳಿತು ಹಾಲುಣಿಸಿ. ಮೊಲೆಯ ತೊಟ್ಟಿನ ಭಾಗ ಬಾಯೊಳಗೆ ಪೂರ್ತಿ ಹೋಗುವಂತೆ ನೋಡಿಕೊಳ್ಳಿ. ಎದೆಹಾಲು ನೀಡುವ ತಾಯಿ ದಿನಕ್ಕೆ ಕನಿಷ್ಠ ಮೂರರಿಂದ ಮೂರೂವರೆ ಲೀಟರ್ ನೀರನ್ನು ಕುಡಿಯಲೇಬೇಕು. ನಾರಿನಂಶವುಳ್ಳ, ಪ್ರೊಟೀನ್‌ಯುಕ್ತ ಆಹಾರ ಸೇವಿಸಬೇಕು. ಕೆಲವರು ಎದೆಹಾಲು ಹೆಚ್ಚಲು ಮೆಂತ್ಯೆ, ಸೋಂಪಿನಕಾಳು, ಕ್ಯಾರೆಟ್, ನುಗ್ಗೇಸೊಪ್ಪು, ತೆಂಗಿನಹಾಲು ಕೊಡುತ್ತಾರೆ. ಇದರಿಂದ ಅಪಾಯವೇನೂ ಇಲ್ಲ. ಶತಾವರಿ, ಅಶ್ವಗಂಧ, ದಶಮೂಲ ಸೇವಿಸಲು ಆಯುರ್ವೇದ ತಜ್ಞರು ಹೇಳುತ್ತಾರೆ. ಇದು ಸಹ ಹಾಲು ಹೆಚ್ಚಿಸಲು ಪೂರಕವೇ.

ಬಾಣಂತಿಯರಿಗೆ ಮಾಡಿಸುವ ಅಭ್ಯಂಗ ಸ್ನಾನವು ನರವ್ಯವಸ್ಥೆಯನ್ನು ಶಾಂತಗೊಳಿಸಲು ಸಹಕಾರಿ. ಮಗು ನಿದ್ದೆ ಮಾಡಿದಾಗ ತಾಯಿಯೂ ನಿದ್ದೆ ಮಾಡಬೇಕು. ಆಗ ಒತ್ತಡದ ಹಾರ್ಮೋನುಗಳು ಕಡಿಮೆಯಾಗಿ, ತಾಯಿಯ ಮನಃಸ್ಥಿತಿ ಶಾಂತವಾಗುತ್ತದೆ. ಇದರಿಂದ, ಹಾಲು ಉತ್ಪಾದನೆಗೆ ಅಗತ್ಯವಿರುವ ಹಾರ್ಮೋನ್ ಸ್ರವಿಸುವಿಕೆ ಹೆಚ್ಚುತ್ತದೆ. ಆಗಾಗ್ಗೆ ದೀರ್ಘ ಉಸಿರಾಟ, ಇಂಪಾದ ಸಂಗೀತ ಕೇಳುವುದು ಇವೆಲ್ಲವೂ ಒತ್ತಡ ನಿರ್ವಹಣೆಗೆ ನೆರವಾಗುತ್ತವೆ. ವಿಟಮಿನ್ ಡಿ, ಕ್ಯಾಲ್ಸಿಯಂ, ವಿಟಮಿನ್ ಬಿ, ಕಬ್ಬಿಣಾಂಶದ ಮಾತ್ರೆಗಳನ್ನು ಕೊಟ್ಟಿದ್ದರೆ ತಪ್ಪದೇ ಸೇವಿಸಿ. ಹೆರಿಗೆಯಾಗಿ 6 ತಿಂಗಳವರೆಗೆ ಬರೀ ಎದೆಹಾಲು, 2 ವರ್ಷದವರೆಗೆ ಎದೆಹಾಲಿನ ಜೊತೆಗೆ ಸೂಕ್ತ ಪೂರಕ ಆಹಾರವನ್ನು ಮಗುವಿಗೆ ಕೊಡುವುದನ್ನು ತಪ್ಪಿಸಬೇಡಿ.

ವಿಪರೀತ ಭಯ ಏನು ಮಾಡಲಿ?



ಅಂತರಂಗ

ಅಕ್ಷರ ದಾಮ್ಲೆ ಮನಃಶಾಸ್ತ್ರಜ್ಞ

• **ಎರಡು ವರ್ಷಗಳಿಂದ ಸುಖಾಸುಮ್ಮನೆ ವಿಪರೀತ ಎನ್ನುವಷ್ಟು ಆತಂಕ ಆಗುತ್ತದೆ. ಏನಾದರೂ ಅವಘಡ ಸಂಭವಿಸಿ ಬಿಡಬಹುದು ಅನ್ನಿಸುತ್ತಿರುತ್ತದೆ. ಹಾಗೆ ಅಂದುಕೊಂಡಾಗಲೆಲ್ಲ ಏನಾದರೊಂದು ಆಗುತ್ತಲೇ ಇರುತ್ತದೆ. ಹಾಗೆ ಅಂದುಕೊಳ್ಳುವುದಕ್ಕೆ ಸಂಕಟ ಎದುರಾಗುತ್ತದೋ ಸಂಕಟ ಎದುರಾಗುತ್ತದೆ ಎನ್ನುವ ಕಾರಣಕ್ಕೆ ಹಾಗೆಲ್ಲ ಅನ್ನಿಸುತ್ತದೋ ಅರ್ಥ ಮಾಡಿಕೊಳ್ಳಲು ಆಗಿಲ್ಲ. ಹೀಗಾಗಿ, ನಾಳೆ ಹೇಗೋ ಏನೋ ಎಂಬ ಭಯದಲ್ಲೇ ದಿನ ದೂಡುವಂತೆ ಆಗಿದೆ. ಯಾವ ಕೆಟ್ಟ ಸಮಾಚಾರ ಕೇಳಿದರೂ ಅದು ನನ್ನ ಬದುಕಿನಲ್ಲೂ ನಡೆದುಬಿಡಬಹುದು ಅನ್ನಿಸುತ್ತದೆ. ಈ ಸಂಕಟದಿಂದ ಹೊರಬರಲು ಏನು ಮಾಡಬೇಕು?**

ಶಮಾ, ನಂದಿವಳ್ಳಿ

ಜೀವನದಲ್ಲಿ ಏರುಪೇರು, ಏಳುಬೀಳು ಇದ್ದದ್ದೇ. ಇವತ್ತು ಚೆನ್ನಾಗಿದ್ದರೆ ನಾಳೆಯೂ ಹಾಗೇ ಇರಬೇಕೆಂದಿಲ್ಲ; ಹಾಗೆಯೇ ಇಂದು ಅಷ್ಟೊಂದು ಚೆನ್ನಾಗಿಲ್ಲ ಎಂದ ಮಾತ್ರಕ್ಕೆ ನಾಳೆಯೂ ಚೆನ್ನಾಗಿರದು ಎಂದೇನೂ ಇಲ್ಲ. ಆಗಾಗ್ಗೆ ಸಂಭವಿಸುತ್ತಿರುವ ಅವಘಡಗಳೂ ಜೀವನದ ಏರುಪೇರಿನ ಭಾಗವಾಗಿರಬಹುದು. ಅದಕ್ಕಾಗಿ ನೀವು ಅಷ್ಟೊಂದು ಕುಗ್ಗಬೇಕಾದ ಅಗತ್ಯವಿಲ್ಲ. ಪ್ರತಿ ಸೂರ್ಯಾಸ್ತವೂ ಮರುದಿನದ ಸೂರ್ಯೋದಯಕ್ಕೆ ನಾಂದಿ ಹಾಡುತ್ತದೆ. ಹಾಗೆಯೇ, ಪ್ರತಿ ಉದಯಕ್ಕೂ ಒಂದು ಅಸ್ತವಿದೆ. ಅಂತೆಯೇ ಜೀವನದಲ್ಲಿ ಕಷ್ಟಗಳು ಎದುರಾದಾಗ ಕುಗ್ಗದೆ, ಸಂತೋಷದ ದಿನಗಳು ಬಂದಾಗ ಅತಿಯಾಗಿ ಹಿಗ್ಗದೆ ಪ್ರತಿಯೊಂದನ್ನೂ ಸಂಪೂರ್ಣವಾಗಿ ಅನುಭವಿಸುತ್ತಾ ಅದರ ರಸವನ್ನು ಹೀರುತ್ತಾ ಸಮತೋಲನ ಕಾಯ್ದುಕೊಂಡು ಮುಂದುವರಿಯಬೇಕು. ಅದಕ್ಕೇ ಅಲ್ಲವೇ ಯುಗಾದಿಯಂದು ಬೇವನ್ನೂ ಬೆಲ್ಲವನ್ನೂ ಜೊತೆಗೆ ಸೇರಿಸಿ ಕೊಡುವುದು?

ಈ ತರ್ಕವನ್ನು ಬೌದ್ಧಿಕವಾಗಿ ಅರ್ಥೈಸಿಕೊಳ್ಳುವುದು ಸುಲಭ. ಆದರೆ, ಭಾವನಾತ್ಮಕವಾಗಿ ಅದನ್ನು ಸಂಭಾಳಿಸುವುದು ಹೇಗೆ ಎಂಬುದನ್ನು ನಾವು ಅರಿಯಬೇಕು. ಕೆಲವೊಮ್ಮೆ ಎಲ್ಲ ತಿಳಿದಿದ್ದೂ ನಿಜವಾದ ಪರಿಸ್ಥಿತಿ ಎದುರಾದಾಗ ಅದಕ್ಕೆ ವಿರುದ್ಧವಾಗಿ ವರ್ತಿಸುತ್ತೇವೆ. ಯಾಕೆಂದರೆ, ನಮ್ಮ ಜೀವನದಲ್ಲಿ ಆಗಿರುವಂತಹ ನೋವುಗಳು ನಮ್ಮ ಮನದಲ್ಲಿ ಆಳವಾದ ಗಾಯವನ್ನು ಮಾಡಿ ಹೋಗಿರುತ್ತವೆ. ಆ ಗಾಯಗಳು ಎಷ್ಟೋ ಬಾರಿ ಮೇಲಿನಿಂದ ವಾಸಿಯಾದಂತೆ ಕಂಡರೂ ಒಳಗೆ ಹಸಿಯಾಗಿಯೇ ಇರುತ್ತವೆ. ಮಾತ್ರವಲ್ಲ, ಕೆಲವೊಮ್ಮೆ ಅದರೊಳಗೆ ಕೀವು ತುಂಬಿಕೊಳ್ಳುವ ಸಾಧ್ಯತೆಯೂ ಇರುತ್ತದೆ. ಹಾಗಾಗಿ, ಜೀವನದಲ್ಲಿ ಎಷ್ಟೋ ಬಾರಿ ಸಂತೋಷದಾಯಕ ಸಂದರ್ಭಗಳು ಬಂದಾಗಲೂ ಒಂದೋ ಅದನ್ನು ಅನುಭವಿಸಲು ಸಾಧ್ಯವಾಗುವುದಿಲ್ಲ ಅಥವಾ ಯಾವಾಗ ಈ ಸಂತಸದ ದಿನಗಳು ಮುಗಿದುಹೋಗುತ್ತವೋ ಎಂಬ ಭಯ ನಮ್ಮನ್ನು ಕಾಡುತ್ತಿರುತ್ತದೆ. ಇದನ್ನು ಸರಿಪಡಿಸುವುದಕ್ಕೆ ನೀವು ಈ ಎಲ್ಲ ಪ್ರಯತ್ನಗಳನ್ನು ಮಾಡಬಹುದು:

1. ಕಠಿಣ ಪರಿಸ್ಥಿತಿ ಎದುರಿಸಲು ಮಾನಸಿಕವಾಗಿ ತಯಾರಾಗಿ. ಪ್ರತಿ ಸಮಸ್ಯೆಯನ್ನೂ ಹೇಗೆ ಬಗೆಹರಿಸಬಹುದು ಎಂದು ಯೋಚಿಸಿ.

2. ಭವಿಷ್ಯದಲ್ಲಿ ಬರಬಹುದಾದ ಕಷ್ಟದ ಕುರಿತು ಈಗಿನಿಂದಲೇ ಚಿಂತಿಸುವ ಬದಲು, ಈ ಹಿಂದೆ ಎದುರಿಸಿದಂತೆ ಮುಂದೆಯೂ ಎದುರಿಸಿದರಾಯಿತು ಎಂಬ ಮನಃಸ್ಥಿತಿಯನ್ನು ಬೆಳೆಸಿಕೊಳ್ಳಿ.

3. ಇತರರ ಜೀವನದಲ್ಲಿ ನಡೆಯುವ ಘಟನೆಗಳನ್ನು ನಿಮ್ಮ ಜೀವನಕ್ಕೆ ಅನ್ವಯಿಸಿಕೊಳ್ಳಬೇಡಿ. ಯಾಕೆಂದರೆ, ಒಂದೇ ತರಗತಿಯಲ್ಲಿ ಕಲಿಯುವ ವಿದ್ಯಾರ್ಥಿಗಳಲ್ಲಿ ಕೆಲವರು ಉತ್ತೀರ್ಣರಾಗುತ್ತಾರೆ, ಇನ್ನೊಂದಷ್ಟು ಜನ ಅನುತ್ತೀರ್ಣರಾಗುತ್ತಾರೆ. ಅವರವರ ಜೀವನದ ಸಂಕಷ್ಟಗಳಿಗೆ ಕೆಲವೊಮ್ಮೆ ಅವರೇ ಕಾರಣರಾಗಿರಬಹುದು.

4. ಜೀವನದಲ್ಲಿ ಕಷ್ಟಗಳು ಬರುವುದೇ ಅವನ್ನು ಎದುರಿಸುವ ಕ್ಷಮತೆ ಇರುವವರಿಗೆ ಎಂಬುದನ್ನು ಮರೆಯಬೇಡಿ.

ವರನಟ ಡಾ. ರಾಜ್‌ಕುಮಾರ್ ಅವರ 'ಆಡಿಸಿ ನೋಡು ಬೀಳಿಸಿ ನೋಡು ಉರುಳಿಹೋಗದು' ಗೀತೆಯ ಒಳಾರ್ಥವನ್ನು ಗ್ರಹಿಸಿ. ಆಗ ಪರಿಸ್ಥಿತಿಗಳು ಯಾವೆಲ್ಲ ರೀತಿಯಲ್ಲಿ ಬೀಳಿಸಲು ಪ್ರಯತ್ನಿಸಿದರೂ ನೀವು ಉರುಳಿಹೋಗುವುದಿಲ್ಲ. ಬದಲಾಗಿ, ಸ್ವಸ್ಥಿತಿಗೆ ಮರಳಲು ಸಾಧ್ಯವಾಗುತ್ತದೆ. ಇಷ್ಟಾದರೂ ಹಿಂದೆ ಆಗಿರುವಂತಹ ನೋವಿನ ಗಾಯವನ್ನು ಮರೆಯಲು ನಿಮಗೆ ಸಾಧ್ಯವಾಗದಿದ್ದರೆ ಮನೋಚಿಕಿತ್ಸೆಯ ಮೂಲಕ ಅದನ್ನು ವಾಸಿ ಮಾಡಬೇಕಾಗುತ್ತದೆ.

ನಾಳೆಯೇ ಕಕ್ಕಡ 18 ಆಟಿ ಪಾಯಸಕ್ಕಿದೆ ನಂಟು

• ಸಹನಾ ಕಾಂತಬೈಲು

ರಸಾಸ್ವಾದ

ಆಷಾಢಮಾಸ ಕಾಲಿಡುವ ಹೊತ್ತಿನಲ್ಲಿ, ನಾನು ದಕ್ಷಿಣ ಕನ್ನಡದಿಂದ ಕೊಡಗಿಗೆ ಮದುವೆಯಾಗಿ ಬಂದವಳು. ಈಗಿನಂತೆ ಆಗಲೂ ಜಡಿಗುಟ್ಟುವ ಮಳೆ. ದಕ್ಷಿಣ ಕನ್ನಡದವರು ಆಷಾಢ ಮಾಸಕ್ಕೆ 'ಆಟಿ' ಎಂದು ಕರೆದರೆ, ಕೊಡಗಿನವರು 'ಕಕ್ಕಡ' ಎನ್ನುತ್ತಾರೆ. ಆದರೆ ಇದು ಮಲೆನಾಡು ಹಾಗೂ ಇತರ ಪ್ರದೇಶಗಳ ಭೌಗೋಳಿಕ ಪರಿಸರ, ಸನ್ನಿವೇಶಗಳಿಗೆ ಪೂರಕವಾಗಿ ವರ್ಷಂಪ್ರತಿ ತಾರೀಕಿನಲ್ಲಿ ಕೊಂಚ ವ್ಯತ್ಯಾಸ ಹೊಂದಿರುತ್ತದೆ. ಜುಲೈ ಮಧ್ಯಭಾಗದಿಂದ ಆಗಸ್ಟ್ ಮಧ್ಯಭಾಗದವರೆಗೆ ಕಕ್ಕಡ ಮಾಸವಾಗಿದೆ. ಕಕ್ಕಡ ಎಂಬ ಪದವು ಕರ್ಕಾಟಕದಿಂದ ಕರ್ಕಾಟವಾಗಿ ಕಕ್ಕಡವಾಗಿದೆ.

ಕಕ್ಕಡ ಮಾಸವು ಕೊಡಗಿನವರಿಗೆ ವಿಶಿಷ್ಟವಾದ ತಿಂಗಳು. ಕೊಡಗು ಕೃಷಿ ಪ್ರಧಾನವಾದ ಜಿಲ್ಲೆ. ಈ ತಿಂಗಳಿನಲ್ಲಿ ಭತ್ತದ ನಾಟಿ ಮುಗಿದಿರುತ್ತದೆ. ವರ್ಷದ 11 ತಿಂಗಳು ದುಡಿಯುವ ರೈತರಿಗೆ ಕೊಂಚ ವಿಶ್ರಾಂತಿ ಸಿಗುವುದು ಈ ತಿಂಗಳಿನಲ್ಲಿ ಮಾತ್ರ. ಕಕ್ಕಡ ಮಾಸದಲ್ಲಿ ಬಿಡದೆ ಮಳೆ ಸುರಿಯುವುದರಿಂದ ಕೃಷಿ ಕೆಲಸ ಮಾಡಲೂ ಸಾಧ್ಯವಾಗುವುದಿಲ್ಲ.

ಕಕ್ಕಡ ತಿಂಗಳಿನ ಒಂದು ದಿನ ನನ್ನ ತೋಟದ ಕೆಲಸದವಳು 'ಅಕ್ಕಾ, ಇವತ್ತು ಕಕ್ಕಡ (ಆಟಿ) ಹದಿನೆಂಟು. ಆಟಿ ಪಾಯಸ ಮಾಡಲಿಲ್ವಾ?' ಎಂದು ಕೇಳಿದಳು. ಅದುವರೆಗೂ ನಾನು ಆ ಹೆಸರನ್ನೇ ಕೇಳಿರಲಿಲ್ಲ. ದಕ್ಷಿಣ ಕನ್ನಡದವರಿಗೆ ಆಷಾಢಮಾಸದಲ್ಲಿ ಮರಕೆಸುವಿನ ಪತ್ರೊಡೆಯೇ ವಿಶೇಷ ಖಾದ್ಯ. ಅದನ್ನು ನಾನು ಮಾಡಿ ತಿಂದಿದ್ದೆ, ಎಲ್ಲರಿಗೂ ಹಂಚಿದ್ದೆ.

'ಕಡ್ಲೆಬೇಳೆ ಪಾಯಸ, ಹೆಸ್ರುಬೇಳೆ ಪಾಯಸ, ಅಕ್ಕಿ ಪಾಯಸ ಗೊತ್ತು. ಅದು ಯಾವುದು ಆಟಿ ಪಾಯಸ' ಕೇಳಿದೆ. 'ಅದು ಮದ್ದು ಸೊಪ್ಪು ಅಥವಾ ಆಟಿ ಸೊಪ್ಪು ಎಂಬ ಸಸ್ಯದಿಂದ ಮಾಡುವ ಪಾಯಸ. ಕಕ್ಕಡ 18ರಂದು ಈ ಪಾಯಸವನ್ನು ಕುಡಿಯಲೇಬೇಕು ಎಂಬ ನಂಬಿಕೆ ಹಿಂದಿನಿಂದಲೂ ನಡೆದುಬಂದಿದೆ. ಕಕ್ಕಡ ಹದಿನೆಂಟಕ್ಕೆ ಈ ಸೊಪ್ಪಿಗೆ 18 ಔಷಧಿಗಳು ಬಂದು ಸೇರಿಕೊಳ್ಳುತ್ತವಂತೆ. ಇಂದು ಕೊಡಗಿನ ಎಲ್ಲರ ಮನೆಗಳಲ್ಲೂ ಆಟಿ ಪಾಯಸ ಮಾಡಿಯೇ ಮಾಡುತ್ತಾರೆ. ನಾನು ಸೊಪ್ಪು ತರುತ್ತೇನೆ, ನೀವು ಪಾಯಸ ಮಾಡಿ' ಎನ್ನುತ್ತಾ ಹೊರಗೋಡಿದಳು. ಸ್ವಲ್ಪ ಹೊತ್ತಿನಲ್ಲಿ ಎಲ್ಲಿಂದಲೋ ದಂಟಿನಿಂದ ಕೂಡಿದ ಸೊಪ್ಪಿನ ದೊಡ್ಡ ಕಟ್ಟು ತಂದಳು. 'ದಂಟಿನ ಸಮೇತ ಸೊಪ್ಪನ್ನು ನೀರಲ್ಲಿ ಕುದಿಸಿ, ಸೊಪ್ಪನ್ನು ಸೋಸಿ ತೆಗೆದು, ಆ ನೀರಲ್ಲೇ ಅಕ್ಕಿ ಬೇಯಿಸಿ ತೆಂಗಿನ ಹಾಲು, ಬೆಲ್ಲ ಸೇರಿಸಿ ಕುದಿಸಿದರೆ ಪಾಯಸ ರೆಡಿ. ತಿನ್ನುವಾಗ ತುಪ್ಪ ಮತ್ತು ಜೇನು ಬೆರೆಸಿದರೆ ಇನ್ನೂ ರುಚಿ' ಎಂದಳು.

ಅವಳು ಹೇಳಿದಂತೆ ಪಾಯಸ ಮಾಡಿದೆ. ಆಶ್ಚರ್ಯವೆಂದರೆ, ಸೊಪ್ಪಿನ ರಸದಿಂದ ಮಾಡಿದ್ದರೂ ಪಾಯಸ ಹಸಿರಾಗಿ ಇರದೆ ಕಡು ನೇರಳೆ ಬಣ್ಣದಿಂದ ಕೂಡಿತ್ತು. ಆಗ ತಾನೇ ಕಾಯಿಸಿದ ಘಮಘಮ ತುಪ್ಪ, ನಮ್ಮದೇ ತೋಟದ ಜೇನು ಬೆರೆಸಿ ಮನೆಮಂದಿಯೆಲ್ಲ ಸವಿದೆವು. ಅದ್ಭುತ ಸ್ವಾದ! ಅಂಥ ರುಚಿಯ ಪಾಯಸವನ್ನೇ ನಾನು ಕುಡಿದಿರಲಿಲ್ಲ. ಅಂದು ರಾತ್ರಿ ಮತ್ತು ಮರುದಿನ ನಾನು ಮೂತ್ರ ಮಾಡಿದಾಗ ಅದು ಕೆಂಪು ಬಣ್ಣಕ್ಕೆ ತಿರುಗಿದ್ದನ್ನು ಗಮನಿಸಿದೆ. ಡಾಕ್ಟರ್ ಹತ್ತಿರ ಹೋಗುವುದಾ ಎಂದು ವಿಚಾರ ಮಾಡುತ್ತಿರುವಾಗ ಕೆಲಸದವಳು ಬಂದಳು. ಅವಳಲ್ಲಿ ವಿಷಯ ಹೇಳಿದೆ. 'ಓ! ಅದಾ, ಹೇಳಲು ಮರೆತಿದ್ದೆ. ಆಟಿ ಪಾಯಸ ತಿಂದರೆ ಮೂತ್ರದ ಬಣ್ಣ ಕೆಂಪಾಗುತ್ತದೆ. ಅದು ಸಹಜ. ಹೆದರುವ ಅಗತ್ಯವಿಲ್ಲ' ಎಂದಳು.

ಇದಾಗಿ ಈಗ ಮೂವತ್ತು ವರ್ಷಗಳೇ ಕಳೆದಿವೆ. ಈಗಲೂ ಕೊಡಗಿನ ಮನೆ ಮನೆಗಳಲ್ಲಿ ಕಕ್ಕಡ ಮಾಸದ 18ನೇ ದಿನ ಆಟಿ ಪಾಯಸ ಮಾಡುತ್ತಾರೆ. ದೂರದ ಊರಿನಲ್ಲಿರುವವರು ಆಟಿ ಪಾಯಸ ಸೇವಿಸಲೆಂದೇ ಅಂದು ಮನೆಗೆ ಬರುತ್ತಾರೆ. ಕೊಡಗಿನ ಹೋಮ್‌ಸ್ಟೇಗಳಲ್ಲಿ, ಕೆಲವೊಂದು ಹೋಟೆಲ್‌ಗಳಲ್ಲೂ ಈ ದಿನ ಆಟಿ ಪಾಯಸ ಲಭ್ಯ. ಕಕ್ಕಡ 17ರ ದಿನವೇ ಮಾರುಕಟ್ಟೆಗಳಲ್ಲಿ, ಸಂತೆಗಳಲ್ಲಿ, ಬೀದಿ ಬದಿಯಲ್ಲಿ ಆಟಿ ಸೊಪ್ಪಿನ ದೊಡ್ಡ ಗುಡ್ಡೆ ಹಾಕಿ ಮಾರಾಟ ಮಾಡುವುದನ್ನು ಕಾಣಬಹುದು. ಆಟಿ ಸೊಪ್ಪಿನ ಗಿಡದ ವೈಜ್ಞಾನಿಕ ಹೆಸರು 'ಜಸ್ಟಿಸಿಯ ವೈನಾಡೆನ್ಸಿಸ್' (Justicia wynaadensis).



ಆಶ್ಚರ್ಯವೆಂದರೆ, ಕಕ್ಕಡ ಹದಿನೆಂಟರ ಆಸುಪಾಸು ಹೊರತುಪಡಿಸಿದರೆ ಬೇರೆ ದಿನಗಳಲ್ಲಿ ಈ ಸೊಪ್ಪಿನಿಂದ ತೆಗೆದ ನೀರಿಗೆ ವಿಶೇಷ ಪರಿಮಳವಾಗಲಿ, ನೇರಳೆ ಬಣ್ಣವಾಗಲಿ ಇರುವುದಿಲ್ಲ. ಇದು ಈ ಗಿಡದ ವೈಶಿಷ್ಟ್ಯ. ಕಕ್ಕಡ ತಿಂಗಳ ಮೊದಲ ದಿನದಿಂದ ಹದಿನೆಂಟನೇ ದಿನದ ತನಕ ಹದಿನೆಂಟು ಬಗೆಯ ಔಷಧೀಯ ಗುಣಗಳು ಇದರಲ್ಲಿ ಸೇರುತ್ತವೆ ಎಂಬುದು ಪ್ರತೀತಿ. ಅಲ್ಲದೆ ಕಕ್ಕಡ 18 ಕಳೆದ ನಂತರ ಈ ಸಸ್ಯದಲ್ಲಿ ಔಷಧೀಯ ಗುಣಗಳು ಒಂದೊಂದಾಗಿ ಕಡಿಮೆಯಾಗುತ್ತಾ ಬರುತ್ತವೆ ಎಂದು ಹಿರಿಯರು ಹೇಳುತ್ತಾರೆ. ಆಟಿ ಸೊಪ್ಪಿನಲ್ಲಿ ರೋಗನಿರೋಧಕ ಶಕ್ತಿ ಇರುವುದನ್ನು ಹಿರಿಯರು ಮನಗಂಡಿದ್ದರು.

ಅಂದಹಾಗೆ ಕಕ್ಕಡ ಮಾಸದ ಉಳಿದ ದಿನವೂ ಆಟಿ ಸೊಪ್ಪಿನಿಂದ ಪಾಯಸ ಮಾಡಿ ಕುಡಿಯಹುದು. ಕುಡಿಯುತ್ತಾರೆ ಕೂಡ. ಆದರೆ ಸೊಪ್ಪಿಗೆ 18ನೇ ದಿನಕ್ಕಿರುವ ಔಷಧೀಯ ಗುಣ ಉಳಿದ ದಿನ ಇರುವುದಿಲ್ಲ ಎಂಬುದು ಹಿರಿಯರ ಮಾತು.

ಕೊಡಗಿನ ಹೆಣ್ಣುಮಕ್ಕಳು ಇತ್ತೀಚಿನ ದಿನಗಳಲ್ಲಿ ಪಾಯಸ ಮಾತ್ರವಲ್ಲದೆ ಸೊಪ್ಪು ಕುದಿಸಿದ ನೀರನ್ನು ಬಳಸಿ ಹಲ್ವ, ತಟ್ಟೆಪುಟ್ಟು, ಇಡ್ಲಿ ಹೀಗೆ ಬಗೆಬಗೆಯ ಖಾದ್ಯಗಳನ್ನು ತಯಾರಿಸುತ್ತಾರೆ. ಕಕ್ಕಡ ಹದಿನೆಂಟನ್ನು (ಪದ್‌ನೆಟ್ಟ್) ಕೊಡಗಿನವರು ಹಬ್ಬವಾಗಿ ಆಚರಣೆ ಮಾಡುತ್ತಾರೆ. ಧೋ ಎಂದು ಮಳೆ ಸುರಿಯುವ ಆಷಾಢ ಮಾಸದಲ್ಲಿ ಥಂಡಿ ಹವೆಯ ಕಾರಣವಾಗಿ ಜ್ವರ, ಶೀತ, ಕೆಮ್ಮಿನಂತಹವುಗಳಿಂದ ಮುಕ್ತಿ ಪಡೆಯಲು ರೋಗನಿರೋಧಕ ಶಕ್ತಿಯುಳ್ಳ ಆಹಾರವನ್ನು ಸೇವಿಸಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು ಇದನ್ನು ಆಚರಿಸಲಾಗುತ್ತದೆ. ಕೊಡಗಿನ ಬೆಟ್ಟಗುಡ್ಡಗಳು, ತೋಟಗಳು, ಮನೆಯಂಗಳದಲ್ಲಿ ಈ ಸಸ್ಯ ಯಾವ ಆರೈಕೆಯೂ ಇಲ್ಲದೆ ಬೆಳೆಯುತ್ತದೆ.

ಜುಲೈ 17ರಿಂದ ಕಕ್ಕಡ ಒಂದರ ಲೆಕ್ಕಾಚಾರದಂತೆ ಈ ಸಾರಿ ನಾಳೆ (ಆ. 3) ಕಕ್ಕಡ ಹದಿನೆಂಟರ ದಿನ. ಅಂದು, ಕೊಡಗಿನ ಮನೆ ಮನೆಯಲ್ಲೂ ಘಮಘಮಿಸುವ ಆಟಿ ಪಾಯಸದ ಪರಿಮಳ. ನಾನೂ ಮಾಡುವವಳಿದ್ದೇನೆ. ನೀವು?



ಒಳಮೀಸಲು: ಅರೆಬೆತ್ತಲೆ ಮೆರವಣಿಗೆ

ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ, ಜಿಲ್ಲಾ ಕೇಂದ್ರಗಳಲ್ಲೂ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಕರ್ನಾಟಕ ಮಾದಿಗ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಶುಕ್ರವಾರ ಪ್ರತಿಭಟನೆ ನಡೆಯಿತು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಕೇಂದ್ರದ ಮಾಜಿ ಸಚಿವ ಎ.ನಾರಾಯಣಸ್ವಾಮಿ ನೇತೃತ್ವದಲ್ಲಿ ಒಕ್ಕೂಟದ ಸದಸ್ಯರು ಅರೆಬೆತ್ತಲೆ ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು.

ಕಲಬುರಗಿಯಲ್ಲಿ ಪ್ರತಿಭಟನಕಾರರು ಜಿಲ್ಲಾಧಿಕಾರಿ ಕಚೇರಿಗೆ ನುಗ್ಗಲು ಯತ್ನಿಸಿದರು. ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ರಾಜ್ಯದ 26 ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ಕಾವು ತೀವ್ರ ಸ್ವರೂಪ ಪಡೆದುಕೊಂಡಿತ್ತು. ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನಕಾರರು ಘೋಷಣೆ ಕೂಗಿದರು.

ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಎ.ನಾರಾಯಣಸ್ವಾಮಿ, 'ಒಳಮೀಸಲಾತಿಯನ್ನು ಶೀಘ್ರದಲ್ಲೇ ಜಾರಿ ಮಾಡದಿದ್ದರೆ ಸರ್ಕಾರದ ವಿರುದ್ಧ ಮಾದಿಗರು ಅಸಹಕಾರ ಚಳವಳಿ ನಡೆಸಲಿದ್ದೇವೆ. ಓಲೈಕೆಗೆ ಬಗ್ಗುವುದಿಲ್ಲ' ಎಂದು ಎಚ್ಚರಿಸಿದರು.

'ಮಾದಿಗರಿಗೆ ನ್ಯಾಯ ಲಭಿಸಿಲ್ಲ. ನಮ್ಮ ಸಹನೆಯ ಕಟ್ಟೆ ಒಡೆದಿದೆ. ನಾವು ಬೀದಿಗಿಳಿದರೆ ನಿಮ್ಮನ್ನು ಮನೆಗೆ ಕಳುಹಿಸುತ್ತೇವೆ' ಎಂದು ಎಚ್ಚರಿಸಿದರು.

'ಹಲವು ವರ್ಷಗಳಿಂದ ಆಗಿರುವ ಅನ್ಯಾಯವನ್ನು ಸರಿಪಡಿಸಿ ಒಳಮೀಸಲಾತಿ ಕಲ್ಪಿಸಬೇಕು. ಒಳಮೀಸಲಾತಿ ಜಾರಿಯಾಗದೇ ಇದ್ದರೆ ಮಾದಿಗ ಸಮುದಾಯದ ಜನರು ಹೋರಾಟಕ್ಕೆ ಸನ್ನದ್ಧರಾಗಿದ್ದಾರೆ' ಎಂದು ಎಚ್ಚರಿಸಿದರು.

ಬಿಜೆಪಿ ಶಾಸಕ ಬಸವರಾಜ ಮತ್ತಿಮಡು ಮಾತನಾಡಿ, 'ಸರ್ಕಾರವು ಕೂಡಲೇ ಒಳಮೀಸಲಾತಿ ಜಾರಿ ಮಾಡಬೇಕು. ಇಲ್ಲವೇ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ಜಾಗ ಖಾಲಿ ಮಾಡಲಿ' ಎಂದರು.

ಬಿಜೆಪಿ ರಾಜ್ಯ ವಕ್ತಾರ ಎಚ್. ವೆಂಕಟೇಶ್ ದೊಡ್ಡೇರಿ, ಎಸ್.ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಹೂಡಿ ಮಂಜುನಾಥ್ ಮೊದಲಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬೀದರ್‌ನಲ್ಲಿ ಪ್ರತಿಭಟನಕಾರರು ಕೇಶಮುಂಡನ, ಅರೆಬೆತ್ತಲೆ ಮೆರವಣಿಗೆ, ಮಾನವ ಸರಪಳಿ ನಡೆಸುವ ಮೂಲಕ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು.

ನಗರದ ಬಿ.ಆರ್. ಅಂಬೇಡ್ಕರ್ ವೃತ್ತ ಸಮೀಪದ ಪ್ರವಾಸಿ ಮಂದಿರದಲ್ಲಿ ಸೇರಿದ ಕಾರ್ಯಕರ್ತರು ಅಲ್ಲಿಂದ ಅಂಬೇಡ್ಕರ್ ವೃತ್ತದವರೆಗೆ ರ‍್ಯಾಲಿ ನಡೆಸಿ, ಕೆಲಕಾಲ ಮಾನವ ಸರಪಳಿ ನಿರ್ಮಿಸಿ, ರಸ್ತೆತಡೆ ನಡೆಸಿದರು.

ಕೊಪ್ಪಳದಲ್ಲಿ ಪ್ರತಿಭಟನಕಾರರು ಹಾಗೂ ಪೊಲೀಸರ ನಡುವೆ ವಾಗ್ವಾದ ನಡೆಯಿತು. ಪೊಲೀಸರು ದೌರ್ಜನ್ಯ ಎಸಗುತ್ತಿದ್ದಾರೆ ಎಂದು ಆರೋಪಿಸಿ ಹೋರಾಟಗಾರರು ಘೋಷಣೆ ಕೂಗಿದರು. ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲೂ ಪ್ರತಿಭಟನೆ ತೀವ್ರ ಸ್ವರೂಪ ಪಡೆದುಕೊಂಡಿತ್ತು.



ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಕರ್ನಾಟಕ ಮಾದಿಗ ಸಂಘಟನೆಗಳ ಒಕ್ಕೂಟದ ವತಿಯಿಂದ ಬೆಂಗಳೂರಿನಲ್ಲಿ ಅರೆಬೆತ್ತಲೆ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

ವಿಕಾಸ್ ಕುಮಾರ್ ಆಂತರಿಕ ಭದ್ರತೆ ಐಜಿಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಸ್ ಅಧಿಕಾರಿ ವಿಕಾಸ್ ಕುಮಾರ್ ವಿಕಾಸ್ ಅವರಿಗೆ ಆಂತರಿಕ ಭದ್ರತಾ ವಿಭಾಗದ ಐಜಿಪಿ ಹುದ್ದೆ ನೀಡಲಾಗಿದೆ.

ಆರ್‌ಸಿಬಿ ವಿಜಯೋತ್ಸವದ ವೇಳೆಯಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತದಿಂದ 11 ಮಂದಿಯ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಇತರ ಪೊಲೀಸ್ ಅಧಿಕಾರಿಗಳ ಜತೆಗೆ ವಿಕಾಸ್ ಕುಮಾರ್ ಅವರನ್ನೂ ಅಮಾನತುಗೊಳಿಸಲಾಗಿತ್ತು.

ಸರ್ಕಾರದ ಕ್ರಮವನ್ನು ಪ್ರಶ್ನಿಸಿ ವಿಕಾಸ್ ಕುಮಾರ್ ಅವರು ಕೇಂದ್ರೀಯ ಆಡಳಿತಾತ್ಮಕ ನ್ಯಾಯಮಂಡಳಿಯ ಮೆಟ್ಟಿಲೇರಿದ್ದರು. ನ್ಯಾಯಮಂಡಳಿಯು ಸರ್ಕಾರದ ಆದೇಶವನ್ನು ರದ್ದುಪಡಿಸಿತ್ತು. ಅಮಾನತುಗೊಂಡಿದ್ದ ಎಲ್ಲ ಪೊಲೀಸ್ ಅಧಿಕಾರಿಗಳ ಆದೇಶವನ್ನು ಕೆಲ ದಿನಗಳ ಹಿಂದೆ ಸರ್ಕಾರ ಹಿಂಪಡೆದಿತ್ತು.

'ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆ: ಅಂಗಾಂಗ ದಾನ ಸ್ವೀಕರಣಾ ಕೇಂದ್ರ'

ಪ್ರಜಾವಾಣಿ ವಾರ್ತೆ

ಮಂಗಳೂರು/ಉಳ್ಳಾಲ: 'ಅಂಗಾಂಗ ದಾನ ಪ್ರಕ್ರಿಯೆ ಸರಳೀಕರಿಸಲು ರಾಜ್ಯದ ಎಲ್ಲ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಅಂಗಾಂಗ ದಾನ ಸ್ವೀಕರಣಾ ಕೇಂದ್ರ ತೆರೆದು ಸೌಲಭ್ಯ ಕಲ್ಪಿಸಲಾಗುವುದು' ಎಂದು ಆರೋಗ್ಯ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಅಂಗಾಂಗ ದಾನ ಮತ್ತು ಕಸಿಗೆ ಸಂಬಂಧಿಸಿದ ರಕ್ತ ಪರೀಕ್ಷೆಗಾಗಿ ಮಂಗಳೂರಿನ ಸರ್ಕಾರಿ ವೆನ್ಲಾಕ್ ಆಸ್ಪತ್ರೆಯಲ್ಲಿ ಬೆಂಗಳೂರು ವೈದ್ಯಕೀಯ ಸೇವೆಗಳ ಟ್ರಸ್ಟ್ (ಬಿಎಂಎಸ್‌ಟಿ) ಸಹಕಾರದಲ್ಲಿ ಪ್ರಯೋಗಾಲಯ ಸ್ಥಾಪಿಸಲಾಗುವುದು. ಪ್ರಸ್ತುತ ರಕ್ತದ ಮಾದರಿಗಳನ್ನು ಪರೀಕ್ಷೆಗಾಗಿ ಬೆಂಗಳೂರಿಗೆ ಕಳುಹಿಸಲಾಗುತ್ತಿದೆ. ಮೈಸೂರು ಮತ್ತು ಶಿವಮೊಗ್ಗದಲ್ಲಿಯೂ ಇದೇ ರೀತಿಯ ಪ್ರಯೋಗಾಲಯ ಸ್ಥಾಪಿಸಲಾಗುವುದು ಎಂದು ಸಚಿವರು ಹೇಳಿದರು.

'ರಾಜ್ಯದ ಎಲ್ಲ ತಾಲ್ಲೂಕು ಆಸ್ಪತ್ರೆಗಳಲ್ಲಿ 24X7 ಸೇವೆ ದೊರೆಯುವ ನಿಟ್ಟಿನಲ್ಲಿ ತಲಾ ಇಬ್ಬರು ಸ್ತ್ರೀರೋಗ ತಜ್ಞರು, ಅರಿವಳಿಕೆ ತಜ್ಞರು ಹಾಗೂ ಒಬ್ಬರು ಅಥವಾ ಇಬ್ಬರು ಮಕ್ಕಳ ತಜ್ಞರು ಕಡ್ಡಾಯವಾಗಿ ಇರುವಂತೆ ಮಾಡಲು ಕ್ರಮ ವಹಿಸಲಾಗುವುದು. ಪ್ರಸ್ತುತ ತಾಲ್ಲೂಕು ಆಸ್ಪತ್ರೆಗಳಲ್ಲಿ ಈ ಮೂರು ತಜ್ಞ ವೈದ್ಯರ ತಲಾ ಒಂದು ಹುದ್ದೆ ಮಂಜೂರು ಇದೆ' ಎಂದು ಅವರು ತಿಳಿಸಿದರು.



ದಿನೇಶ್ ಗುಂಡೂರಾವ್

ಆರೋಗ್ಯ ಇಲಾಖೆಯ 3ಎ ನಿಯಮದ ಪ್ರಕಾರ ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆಯಡಿ ಯಾವುದೇ ಗಂಭೀರ ಕಾಯಿಲೆಗೆ (ಸುಮಾರು 300 ರೀತಿ ರೋಗಗಳು) ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಸರ್ಕಾರಿ ಆಸ್ಪತ್ರೆಯ ಮೇಲಧಿಕಾರಿಗಳ ಶಿಫಾರಸು ಪತ್ರ ಅಗತ್ಯವಿರುತ್ತದೆ. ಇನ್ನು ಮುಂದೆ ಅಗತ್ಯ ಸಂದರ್ಭಗಳಲ್ಲಿ ಕೆಳಹಂತದ ಶಿಫಾರಸು ಪತ್ರದೊಂದಿಗೆ ಖಾಸಗಿ ಮೆಡಿಕಲ್ ಕಾಲೇಜು ಆಸ್ಪತ್ರೆಗೆ ಹೋಗಲು ಅವಕಾಶ ಕಲ್ಪಿಸುವ ಸಂಬಂಧ ಮೊದಲ ಹಂತದ ಚರ್ಚೆ ನಡೆದಿದೆ. ಇದರಿಂದ ರೋಗಿಗಳಿಗೆ ಎರಡು ಕಡೆ ಅಲೆದಾಟ ತಪ್ಪಿ, ಶೀಘ್ರ ಚಿಕಿತ್ಸೆ ದೊರೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು.

890 ಔಷಧಗಳ ಖರೀದಿಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಸಂಸ್ಥೆಗಳಿಗೆ 2025–26ನೇ ಸಾಲಿಗೆ ಒಟ್ಟು ₹880.68 ಕೋಟಿ ವೆಚ್ಚದಲ್ಲಿ 890 ಬಗೆಯ ಔಷಧಗಳನ್ನು ಖರೀದಿಸಿ, ಬೇಡಿಕೆಗೆ ಅನುಸಾರ ಪೂರೈಸುವಂತೆ ಆರೋಗ್ಯ ಇಲಾಖೆಯು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮಕ್ಕೆ ಸೂಚಿಸಿದೆ.

ಇಲಾಖೆ ವ್ಯಾಪ್ತಿಯ ಆರೋಗ್ಯ ಸಂಸ್ಥೆಗಳು ಮತ್ತು ಕಾರಾಗೃಹ ಆಸ್ಪತ್ರೆಗಳು ವಾರ್ಷಿಕ ಔಷಧ ಬೇಡಿಕೆಗಳನ್ನು ಔಷಧ ತಂತ್ರಾಂಶದ ಮೂಲಕ ಸಲ್ಲಿಸಿದ್ದಾರೆ. ಒಟ್ಟು ₹12.06 ಕೋಟಿಗಳಲ್ಲಿ ₹10 ಲಕ್ಷಕ್ಕಿಂತ ಕಡಿಮೆ ಖರೀದಿ ಬೆಲೆ ಇರುವ 356 ಔಷಧಗಳನ್ನು ಜಿಲ್ಲೆಗಳಿಂದ ಅಥವಾ ಸ್ಥಳೀಯ ಆರೋಗ್ಯ ಸಂಸ್ಥೆಗಳಿಂದ ಖರೀದಿ ಮಾಡಲಾಗುವುದು. ಉಳಿದ ಔಷಧಗಳನ್ನು ನಿಗಮದಿಂದ ಕೇಂದ್ರೀಕೃತವಾಗಿ ಖರೀದಿಸಲಾಗುವುದು ಎಂದು ತಿಳಿಸಲಾಗಿದೆ.

ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ ಐವಿ ರಿಂಗರ್ ಲ್ಯಾಕ್ಟೇಟ್ ಹಾಗೂ ಐವಿ ಡಿಎನ್‌ಎಸ್ ಔಷಧ ಖರೀದಿಸಲು ₹4.99 ಕೋಟಿ ಅನುದಾನ ಬಳಕೆಗೆ ಅನುಮೋದನೆ ನೀಡಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಚಿಟಿಕೆ ಸುದ್ದಿ

ಸೌಲಭ್ಯ ಕೊರತೆ ರೋಗಿ ಹೊತ್ತು 8 ಕಿ.ಮೀ. ನಡೆದರು



ಖಾನಾಪುರ: ರಸ್ತೆ, ಸೇತುವೆ ಸೇರಿ ಸೌಲಭ್ಯ ವಂಚಿತ ತಾಲ್ಲೂಕಿನ ನೇರಸಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಂಗಳ ಗ್ರಾಮದ ನಿವಾಸಿ, ಅನಾರೋಗ್ಯ ಪೀಡಿತ ವ್ಯಕ್ತಿಯನ್ನು ಗ್ರಾಮಸ್ಥರು ಹೊತ್ತುಕೊಂಡು 8 ಕಿ.ಮೀ ನಡೆದಿದ್ದಾರೆ.

'ಗ್ರಾಮದ ಸುತ್ತಲೂ ಕಾಡು, ಹಳ್ಳ, ಹುಲಿ, ಚಿರತೆ ಸೇರಿ ವನ್ಯಮೃಗಗಳಿವೆ. ಈಗ ವಿಪರೀತ ಮಳೆ ಆಗುತ್ತಿದೆ. ಕೊಂಗಳ ಗ್ರಾಮಕ್ಕೆ ತೆರಳುವ ರಸ್ತೆಯ ಮೇಲಿನ ಭಂಡೂರಿ ಹಳ್ಳ ಮತ್ತು ಮಹದಾಯಿ ನದಿಗಳಲ್ಲಿ ನೀರು ಪ್ರವಾಹೋಪಾದಿಯಲ್ಲಿ ಹರಿಯುತ್ತಿದೆ.

'ಕುರ್ಚಿ, ಕಟ್ಟಿಗೆ ಉಪಯೋಗಿಸಿ ಡೋಲಿ ಮಾಡಿಕೊಂಡು ಗ್ರಾಮದ ವೆಂಕಟ ಗಾಂವಕರ ಅವರನ್ನು 6 ಮಂದಿ ಹೊತ್ತುಕೊಂಡು ಸಾಗಿದೆವು. ಮುಖ್ಯರಸ್ತೆ ತಲುಪಿದ ಬಳಿಕ, ಅಲ್ಲಿಂದ ವಾಹನದ ಮೂಲಕ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದೆವು' ಎಂದು ಗ್ರಾಮಸ್ಥರು ತಿಳಿಸಿದರು.

'ಕಳೆದ ವರ್ಷ ಭೀಮಗಡ ವನ್ಯಧಾಮದ ಅಮಗಾಂವ ಗ್ರಾಮದ ಮಹಿಳೆಯೊಬ್ಬರಿಗೆ ಅನಾರೋಗ್ಯ ಕಾಡಿದ್ದರಿಂದ ಹೀಗೇ ಹೊತ್ತುಕೊಂಡು 10 ಕಿ.ಮೀ ಸಾಗಿದ್ದೆವು' ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಾಂತೇಶ ರಾಹುತ ತಿಳಿಸಿದರು.

ಗುರುತು ಸಿಗದ ಶವಗಳ ವಿವರ ಸಂಗ್ರಹ

ಧರ್ಮಸ್ಥಳ: ಮುಂದುವರಿದ ಶೋಧ ಕಾರ್ಯ • 4ನೇ ದಿನ ಸಿಗದ ಅವಶೇಷ

• ಪ್ರವೀಣ್‌ಕುಮಾರ್ ಪಿ.ವಿ.

ಮಂಗಳೂರು: ಧರ್ಮಸ್ಥಳ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗುರುತು ಪತ್ತೆಯಾಗದ, ಎಷ್ಟು ಮೃತದೇಹಗಳನ್ನು ಮೂರು ದಶಕಗಳಿಂದ ಈಚೆಗೆ ವಿಲೇವಾರಿ ಮಾಡಲಾಗಿದೆ ಎಂಬ ಮಾಹಿತಿಯನ್ನು ವಿಶೇಷ ತನಿಖಾ ತಂಡವು (ಎಸ್‌ಐಟಿ) ಕಲೆಹಾಕುತ್ತಿದೆ.

ಧರ್ಮಸ್ಥಳ ಠಾಣಾ ವ್ಯಾಪ್ತಿಯಲ್ಲಿ ಈ ಹಿಂದೆ ನಡೆದಿದ್ದ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂಬ ಆರೋಪದ ಪ್ರಕರಣಕ್ಕೆ ಸಂಬಂಧಿಸಿ ತನಿಖೆ ನಡೆಸುತ್ತಿರುವ ಎಸ್‌ಐಟಿಗೆ, ಧರ್ಮಸ್ಥಳ ಗ್ರಾಮ ಪಂಚಾಯಿತಿಯು ಈ ಕುರಿತ ದಾಖಲೆಗಳನ್ನು ಶುಕ್ರವಾರ ಹಸ್ತಾಂತರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ (ಧರ್ಮಸ್ಥಳ ಠಾಣೆಯ ವ್ಯಾಪ್ತಿ ಪ್ರದೇಶವು ಈ ಹಿಂದೆ ಬೆಳ್ತಂಗಡಿ ಠಾಣೆ ವ್ಯಾಪ್ತಿಯಲ್ಲಿತ್ತು) ಮೂರು ದಶಕಗಳಿಂದ ಈಚೆಗೆ ದಾಖಲಾಗಿರುವ ಅಸಹಜ ಸಾವುಗಳ ಕುರಿತ ವಿವರಗಳನ್ನೂ ಎಸ್‌ಐಟಿ ಕಲೆಹಾಕುತ್ತಿದೆ ಎಂದು ತಿಳಿಸಿವೆ.

4ನೇ ದಿನ ಸಿಗಲಿಲ್ಲ ಅವಶೇಷ: ಧರ್ಮಸ್ಥಳದ ನೇತ್ರಾವತಿ ನದಿ ಪಕ್ಕದ ಕಾಡಿನಲ್ಲಿ ಎರಡು ಕಡೆ ಶುಕ್ರವಾರ ಶೋಧ ನಡೆದಿದ್ದು, ಮೃತದೇಹಗಳ ಯಾವುದೇ ಕುರುಹು ಪತ್ತೆಯಾಗಿಲ್ಲ.

ಬೆಳಿಗ್ಗೆ 11.30ಕ್ಕೆ ಕಾಡಿನೊಳಗೆ ತೆರಳಿದ ವಿಶೇಷ ತನಿಖಾ ತಂಡ (ಎಸ್‌ಐಟಿ) ಈ ಪ್ರಕರಣದ ಸಾಕ್ಷಿ ದೂರುದಾರ ಕಾಡಿನಲ್ಲಿ ತೋರಿಸಿದ ಏಳನೇ ಜಾಗದಲ್ಲಿ ಅಗೆಯುವ ಪ್ರಕ್ರಿಯೆಯನ್ನು ಮುಂದುವರಿಸಿತು. ಯಂತ್ರದ ಮೂಲಕ 6 ಅಡಿಗಳಷ್ಟು ಆಳಕ್ಕೆ ಅಗೆದ ಬಳಿಕವೂ ಅಲ್ಲಿ ಕುರುಹು ಸಿಗಲಿಲ್ಲ. ಹಾಗಾಗಿ ಅಗೆಯುವುದನ್ನು ನಿಲ್ಲಿಸಲಾಯಿತು. ಸಾಕ್ಷಿ ದೂರುದಾರ ತೋರಿಸಿದ್ದ ಎಂಟನೇ ಜಾಗವನ್ನು ಮಧ್ಯಾಹ್ನ ಊಟದ ವಿರಾಮದ ಬಳಿಕ ಅಗೆಯಲಾಯಿತು. ಅಲ್ಲೂ ಕುರುಹುಗಳು ಸಿಗಲಿಲ್ಲ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಶುಕ್ರವಾರ ಮಳೆ ಅಬ್ಬರ ಕಡಿಮೆಯಾಗಿತ್ತು. ಸಾಕ್ಷಿದಾರ ತೋರಿಸಿದ್ದ 7 ಮತ್ತು 8ನೇ ಜಾಗಗಳು ನೇತ್ರಾವತಿ ನದಿಯಿಂದ 10 ಮೀ ದೂರದಲ್ಲಿದ್ದವು. ಅಗೆದ ಜಾಗದಲ್ಲಿ ನೀರಿನ ಒರತೆ ಇತ್ತು. ಗುಂಡಿಯೊಳಗೆ ತುಂಬುತ್ತಿದ್ದ ನೀರನ್ನು ತೆರವುಗೊಳಿಸಿ ಕೆಲಸ ಮುಂದುವರಿಸಬೇಕಾಯಿತು. ಹಾಗಾಗಿ ಶುಕ್ರವಾರ ಎರಡು ಜಾಗಗಳಲ್ಲಿ ಮಾತ್ರ ಅಗೆಯಲು ಸಾಧ್ಯವಾಯಿತು.

ಶೋಧ ಕಾರ್ಯದಲ್ಲಿ 20 ಕಾರ್ಮಿಕರನ್ನು ಸೇರಿದಂತೆ 60 ಮಂದಿ ಭಾಗಿಯಾದರು. ಪುತ್ತೂರು ಉಪ ವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್, ಎಸ್‌ಐಟಿ ಎಸ್ಪಿ ಜಿತೇಂದ್ರ ಕುಮಾರ್ ದಯಾಮ ಹಾಗೂ ಸಾಕ್ಷಿ ದೂರುದಾರ ಶೋಧ ಕಾರ್ಯದ ವೇಳೆ ಸ್ಥಳದಲ್ಲಿದ್ದರು.

ಎಸ್‌ಐಟಿ ಡಿಐಜಿ ಎಂ.ಎನ್. ಅನುಚೇತ್ ಅವರು ಮುಂದಿನ ತನಿಖೆ ಬಗ್ಗೆ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದರು.

ಧರ್ಮಸ್ಥಳದಲ್ಲಿ ನೇತ್ರಾವತಿ ನದಿ ಪಕ್ಕದಲ್ಲಿ ಸಾಕ್ಷಿ ದೂರುದಾರ ಒಟ್ಟು 13 ಜಾಗಗಳನ್ನು ತೋರಿಸಿ, 'ಅಲ್ಲಿ ಮೃತದೇಹಗಳನ್ನು ಹೂತಿದ್ದೆ' ಎಂದು ಎಸ್‌ಐಟಿಗೆ ತಿಳಿಸಿದ್ದ. ಆತ ತೋರಿಸಿದ್ದ ಆರನೇ ಜಾಗದಲ್ಲಿ ಗಂಡಸಿನ ಮೃತದೇಹದ ಅವಶೇಷ ಗುರುವಾರ ಸಿಕ್ಕಿತ್ತು. ಉಳಿದ ಐದು ಕಡೆ ಅಗೆದಾಗ ಮೃತದೇಹದ ಯಾವುದೇ ಅವಶೇಷಗಳು ಸಿಕ್ಕಿರಲಿಲ್ಲ.



ಧರ್ಮಸ್ಥಳ ನೇತ್ರಾವತಿ ನದಿ ಪಕ್ಕದ ಕಾಡಿನಲ್ಲಿ ಮೃತದೇಹಗಳ ಅವಶೇಷ ಪತ್ತೆಗಾಗಿ ಅಗೆಯುವ ದೃಶ್ಯವು ಹೊರಗಿನವರಿಗೆ ಕಾಣಿಸಬಾರದೆಂದು ಹಸಿರು ಬಣ್ಣದ ಪರದೆಯನ್ನು ಶುಕ್ರವಾರ ಕಟ್ಟಲಾಗಿತ್ತು —ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ತನಿಖೆ ವಿವರ ಕೇಳಿ 'ಸಹಾಯವಾಣಿ'ಗೆ ಕರೆ

'ಎಸ್‌ಐಟಿ ಮಂಗಳೂರಿನಲ್ಲಿ ಆರಂಭಿಸಿರುವ ಸಹಾಯವಾಣಿಗೆ ರಾಜ್ಯ–ಹೊರರಾಜ್ಯಗಳಿಂದ ಸಾಕಷ್ಟು ಕರೆಗಳು ಬರುತ್ತಿವೆ. ಕರೆಮಾಡುವ ಬಹುತೇಕರು ತನಿಖೆಯ ಪ್ರಗತಿಯ ಬಗ್ಗೆ ಮಾಹಿತಿ ಕೇಳುತ್ತಿದ್ದಾರೆ. ಕೆಲವರು ಸಲಹೆ ನೀಡುತ್ತಿದ್ದಾರೆ. ಯಾವುದೇ ನಿರ್ದಿಷ್ಟ ದೂರು ಸಲ್ಲಿಕೆಯಾಗಿಲ್ಲ. ದೂರು ಸಲ್ಲಿಕೆಯಾದರೆ ಸ್ವೀಕರಿಸಿ, ಸಂಬಂಧಿಸಿದ ಪೊಲೀಸ್ ಠಾಣೆಗೆ ವರ್ಗಾಯಿಸಲಾಗುವುದು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಧರ್ಮಸ್ಥಳ: ಸುಳ್ಳು ಸುದ್ದಿ ಹರಡಿದರೆ ಕ್ರಮ'



ಜಿ.ಪರಮೇಶ್ವರ

ಬೆಂಗಳೂರು: 'ಧರ್ಮಸ್ಥಳ ವ್ಯಾಪ್ತಿಯಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಪ್ರಕರಣದ ವಿಚಾರದಲ್ಲಿ ಸುಳ್ಳು ಸುದ್ದಿ ಹರಡುವವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಎಚ್ಚರಿಕೆ ನೀಡಿದ್ದಾರೆ.

ಈ ಪ್ರಕರಣಗಳ ತನಿಖೆಗೆ ರಚಿಸಲಾಗಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಮುಖ್ಯಸ್ಥ ಪ್ರಣಬ್ ಮೊಹಾಂತಿ ಅವರು ಪರಮೇಶ್ವರ ಅವರನ್ನು, ವಿಧಾನಸೌಧದ ಅವರ ಕಚೇರಿಯಲ್ಲಿ ಶುಕ್ರವಾರ ಭೇಟಿ ಮಾಡಿದ್ದರು. ದೀರ್ಘ ಚರ್ಚೆಯ ನಂತರ ಮೊಹಾಂತಿ ಅವರು ಅಲ್ಲಿಂದ ತೆರಳಿದರು.

ಆನಂತರ ಸುದ್ದಿಗಾರರ ಜತೆ ಮಾತನಾಡಿದ ಪರಮೇಶ್ವರ, 'ಧರ್ಮಸ್ಥಳದ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಯುತ್ತಿದೆ. ಆದರೆ, ಕೆಲವರು ಸುಳ್ಳು ಸುದ್ದಿಗಳನ್ನು ಸೃಷ್ಟಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತಿದ್ದಾರೆ. ಜತೆಗೆ ಪ್ರಚೋದನಕಾರಿ ಪೋಸ್ಟ್‌ಗಳನ್ನು ಹಾಕುತ್ತಿದ್ದಾರೆ. ಇದರಿಂದ ಶಾಂತಿ ಕದಡುವ ಅಪಾಯವಿದೆ' ಎಂದರು.

'ದ್ವೇಷ ಉದ್ದೀಪಿಸುವಂತಹ ಪೋಸ್ಟ್‌ಗಳನ್ನು ಮಾಡುವವರನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ. ಸುಳ್ಳು ಸುದ್ದಿ, ಊಹಾಪೋಹ ವರದಿ ಮತ್ತು ವದಂತಿಗಳನ್ನು ಹರಡುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು ನಿರ್ಧರಿಸಲಾಗಿದೆ. ಗೃಹ ಇಲಾಖೆ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಲಿದ್ದಾರೆ' ಎಂದರು.

'ಪ್ರಣಬ್ ಮೊಹಾಂತಿ ಅವರನ್ನು ಕೇಂದ್ರ ಸೇವೆಗೆ ಕಳುಹಿಸಿ ಎಂದು ಕೇಂದ್ರ ಸರ್ಕಾರವು ಪತ್ರ ಬರೆದಿಲ್ಲ. ಬದಲಿಗೆ ಕೇಂದ್ರ ಸೇವೆಯ ಅರ್ಹರ ಪಟ್ಟಿಯಲ್ಲಿ ಅವರನ್ನು ಸೇರಿಸಿದೆಯಷ್ಟೆ. ಹೀಗಾಗಿ ಎಸ್‌ಐಟಿ ಮುಖ್ಯಸ್ಥರನ್ನು ಬದಲಿಸುವ ಪ್ರಶ್ನೆ ಈಗ ಇಲ್ಲ. ಆಡಳಿತಾತ್ಮಕ ವಿಚಾರಗಳ ಬಗ್ಗೆ ಚರ್ಚಿಸಲಷ್ಟೇ ಅವರು ಬಂದಿದ್ದರು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಾಕ್ಷಿ ದೂರುದಾರ ತೋರಿಸಿರುವ ಜಾಗಗಳಲ್ಲಿ ಇನ್ನೂ ಐದು ಕಡೆ ಅಗೆಯಲು ಬಾಕಿ ಇದೆ. ಆತ ತೋರಿಸಿದ 9ನೇ ಜಾಗವನ್ನು ಅಗೆಯುವ ಕಾರ್ಯ ಶನಿವಾರ ಮುಂದುವರಿಯಲಿದೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಟ್ರೋಲ್ ಕಿರುಕುಳ ನಾನೂ ಅನುಭವಿಸಿದ್ದೇನೆ: ಸುಮಲತಾ

ಮಂಡ್ಯ: 'ಸಾಮಾಜಿಕ ಮಾಧ್ಯಮಗಳಲ್ಲಿ ಟ್ರೋಲ್, ಕೀಳು ಮಾತುಗಳನ್ನು ಐದಾರು ವರ್ಷಗಳಿಂದ ಅನುಭವಿಸುತ್ತಿದ್ದೇನೆ. ಮೈಸೂರು ಜಿಲ್ಲೆಯ ಕೆ.ಆರ್. ನಗರದಲ್ಲಿ ನನ್ನ ಮೇಲೆ ಹಲ್ಲೆಯಾದಾಗ ಪೊಲೀಸರಿಗೆ ದೂರು ನೀಡಿದ್ದೆ. ಇಲ್ಲಿಯವರೆಗೆ ಯಾರನ್ನೂ ಬಂಧಿಸಿಲ್ಲ. ನ್ಯಾಯವೂ ಸಿಕ್ಕಿಲ್ಲ' ಎಂದು ಮಾಜಿ ಸಂಸದೆ ಸುಮಲತಾ ಅಂಬರೀಷ್ ದೂರಿದರು.

ಚಿತ್ರನಟಿ ರಮ್ಯಾ ವಿರುದ್ಧದ ಟ್ರೋಲ್ ಬಗ್ಗೆ ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿ, 'ಮಹಿಳೆಯರ ಕುರಿತು ಕೆಟ್ಟ ಕಮೆಂಟ್ ಮಾಡಬಾರದು. ನಾನು ರಮ್ಯಾ ಹೇಳಿಕೆ ನೋಡಿಲ್ಲ. ಪೊಲೀಸರು ತನಿಖೆ ಮಾಡುತ್ತಾರೆ. ಪ್ರತಿಯೊಬ್ಬರಿಗೂ ನ್ಯಾಯ ಸಿಗಬೇಕು' ಎಂದರು.

'ಕೆಲವರು ಅನಾಮಿಕರಾಗಿ ಪೋಸ್ಟ್ ಹಾಕುತ್ತಿದ್ದೇವೆ ಅಂದುಕೊಂಡಿದ್ದಾರೆ. ಅವರನ್ನು ಪತ್ತೆ ಹಚ್ಚಬಹುದು. ಸಾಮಾಜಿಕ ಮಾಧ್ಯಮಗಳೆಂದರೆ ಬೇರೆಯವರನ್ನು ಗುರಿಯಾಗಿಸುವ ಅಸ್ತ್ರವಲ್ಲ ವೆಂಬುದನ್ನು ಯುವಜನ ತಿಳಿಯಬೇಕು' ಎಂದರು.

ಆಳ್ವಾಸ್ ಪ್ರಗತಿ ಉದ್ಯೋಗ ಮೇಳ: 12,732 ಮಂದಿ ಭಾಗಿ



ಮೂಡುಬಿದಿರೆ (ದಕ್ಷಿಣ ಕನ್ನಡ): ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ಇಲ್ಲಿನ ವಿದ್ಯಾಗಿರಿಯಲ್ಲಿ ಏರ್ಪಡಿಸಿರುವ 15ನೇ ಆವೃತ್ತಿಯ 3 ದಿನದಗಳ ಆಳ್ವಾಸ್ ಪ್ರಗತಿ ಉದ್ಯೋಗ ಮೇಳಕ್ಕೆ ಶುಕ್ರವಾರ ಚಾಲನೆ ದೊರೆಯಿತು.

ಮೊದಲ ದಿನ 12,732 ಉದ್ಯೋಗಾಕಾಂಕ್ಷಿಗಳು, 285 ಕಂಪನಿಗಳು ಪಾಲ್ಗೊಂಡಿದ್ದವು. 11,509 ಉದ್ಯೋಗಾಕಾಂಕ್ಷಿಗಳು ಆನ್‌ಲೈನ್ ಮೂಲಕ ನೋಂದಾಯಿಸಿಕೊಂಡಿದ್ದರು. 2,307 ಮಂದಿ ಸ್ಥಳದಲ್ಲೇ ಹೆಸರು ನೋಂದಾಯಿಸಿಕೊಂಡರು. ಕಂಪನಿಗಳು ಸಂದರ್ಶನ ನಡೆಸಿ ಆಯ್ಕೆ ಮಾಡಿದ ಅಭ್ಯರ್ಥಿಗಳ ಅಂತಿಮ ವಿವರಗಳನ್ನು ಶನಿವಾರ ಪ್ರಕಟಿಸಲಿವೆ.

ಉದ್ಯೋಗ ಮೇಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನಿಡಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ಅವರು, 2007ರಲ್ಲಿ ಆಳ್ವಾಸ್ ಪ್ರಗತಿ ಉದ್ಯೋಗ ಮೇಳ ಆರಂಭವಾಗಿದ್ದು, ಈವರೆಗೆ ಸುಮಾರು 36 ಸಾವಿರ ಅಭ್ಯರ್ಥಿಗಳು ಉದ್ಯೋಗ ಪಡೆದಿದಿದ್ದಾರೆ. ಮೇಳ ಸಂಪೂರ್ಣ ಉಚಿತವಾಗಿದೆ ಎಂದರು.

ಡಿ. ಹರ್ಷೇಂದ್ರಕುಮಾರ್ ಅರ್ಜಿ: ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಮಹತ್ವದ ತೀರ್ಪು

ಧರ್ಮಸ್ಥಳ: ಮಾಧ್ಯಮ ನಿರ್ಬಂಧ ಆದೇಶ ರದ್ದು

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಕೊಲೆಯಾದ ನೂರಾರು ಶವಗಳನ್ನು ಧರ್ಮಸ್ಥಳ ಗ್ರಾಮದ ವ್ಯಾಪ್ತಿಯಲ್ಲಿ ಹೂಳಲಾಗಿದೆ ಎಂಬ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ಷೇತ್ರದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರ ತಮ್ಮ ಡಿ.ಹರ್ಷೇಂದ್ರ ಕುಮಾರ್ ವಿರುದ್ಧ ಯಾವುದೇ ಮಾನಹಾನಿ ವಿಷಯ ಪ್ರಸಾರ ಅಥವಾ ಪ್ರಕಟ ಮಾಡಬಾರದು' ಎಂದು ಮಾಧ್ಯಮಗಳನ್ನು ನಿರ್ಬಂಧಿಸಿ, ಸಿಟಿ ಸಿವಿಲ್ ಕೋರ್ಟ್ ಹೆಚ್ಚುವರಿ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ರದ್ದುಪಡಿಸಿ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಈ ಸಂಬಂಧ ಸಿಟಿ ಸಿವಿಲ್ ಕೋರ್ಟ್‌ನ 10ನೇ ಹೆಚ್ಚುವರಿ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮಂಗಳೂರಿನ ಕೋಡಿಬೈಲ್ ವಿಳಾಸ ಹೊಂದಿರುವ ಯೂ ಟ್ಯೂಬ್ ಚಾನಲ್ 'ಕುಡ್ಲ ರ‍್ಯಾಂಪೇಜ್' ಮುಖ್ಯ ಸಂಪಾದಕ ಅಜಯ್ ಬಿನ್ ರಾಮಕೃಷ್ಣ ಪೂಜಾರಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಭಾಗಶಃ ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಕಾಯ್ದಿರಿಸಿದ್ದ ತೀರ್ಪನ್ನು ಶುಕ್ರವಾರ ಪ್ರಕಟಿಸಿದೆ.

'ಈ ಪ್ರಕರಣದಲ್ಲಿನ ಸಿವಿಲ್ ದಾವೆ, ಕ್ರಿಮಿನಲ್ ಪ್ರಕ್ರಿಯೆ, ಆರೋಪ, ಪ್ರತ್ಯಾರೋಪದ ಅಂಶಗಳ ಮೇಲೆ ಈ ನ್ಯಾಯಪೀಠ ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ಆದೇಶದಲ್ಲಿ ಪರಿಗಣಿಸಲಾದ ಪ್ರತಿಬಂಧಕ ಮನವಿಯ ಅಂಶವೊಂದನ್ನು ಹೊರತುಪಡಿಸಿ ಪಕ್ಷಗಾರರ ನಡುವಿನ ಎಲ್ಲಾ ವಾದಾಂಶಗಳನ್ನು ಮುಕ್ತವಾಗಿ ಇರಿಸಲಾಗಿದೆ. ಆದಾಗ್ಯೂ, ಮಧ್ಯಂತರ ಅರ್ಜಿಯನ್ನು ತುರ್ತಾಗಿ ನಿರ್ಧರಿಸಬೇಕು' ಎಂದು ನ್ಯಾಯಪೀಠ ವಿಚಾರಣಾ ನ್ಯಾಯಾಲಯಕ್ಕೆ ತಾಕೀತು ಮಾಡಿದೆ.

'ಹಕ್ಕುಸ್ವಾಮ್ಯ, ಟ್ರೇಡ್ ಮಾರ್ಕ್‌ಗಳು, ಮಾಧ್ಯಮ ಸೋರಿಕೆಗಳು ಮತ್ತು ಪೈರಸಿಗೆ ಸಂಬಂಧಿಸಿದಂತೆ ಯಾರೊಬ್ಬರ ಹಕ್ಕುಗಳನ್ನು ಉಲ್ಲಂಘಿಸುವ ಸಾಧ್ಯತೆ ಇದೆ ಎಂಬ ಅರ್ಜಿದಾರರ ಆತಂಕದ ಹಿನ್ನೆಲೆಯಲ್ಲಿ ಅಪರಿಚಿತ ವ್ಯಕ್ತಿಗಳ ವಿರುದ್ಧ ನ್ಯಾಯಾಲಯ ಈ ರೀತಿಯ ಪೂರ್ವಭಾವಿ ತಡೆ ಆದೇಶಗಳನ್ನು ನೀಡುತ್ತದೆ. ಈ ಪ್ರಕರಣದಲ್ಲಿ, ವಿಚಾರಣೆಗೆ ಸೀಮಿತವಾಗಿ ನ್ಯಾಯಾಲಯ ಈ ಆದೇಶವನ್ನು ನೀಡಿರುವುದು ಸಮಂಜಸವಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಈ ಆದೇಶವು ಇತ್ತೀಚೆಗೆ ತನ್ನ ಬಲೆಯನ್ನು ಎಷ್ಟು ವ್ಯಾಪಕವಾಗಿ ಬೀಸಿದೆಯೆಂದರೆ, ವಾದಿ, ವಾದಿಯ ಕುಟುಂಬ ಅಥವಾ ಸ್ಥಳದ ವಿರುದ್ಧ ಯಾವುದೇ ಧ್ವನಿ ಎತ್ತುವುದನ್ನು ನ್ಯಾಯಾಂಗದ ವಿಚಾರಣಾ ಪರಿಧಿಗೆ ಸಿಲುಕಿಸುವ ಬೆದರಿಕೆಯಂತಾಗಿದೆ' ಎಂದು ನ್ಯಾಯಪೀಠ ಹೇಳಿದೆ.

ಕೋರಿಕೆ ಏನು?: 'ಸ್ವಚ್ಛತಾ ಕಾರ್ಮಿಕನೊಬ್ಬ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ನೀಡಿರುವ ದೂರಿನ ಅನ್ವಯ ದಾಖಲಾಗಿರುವ ಎಫ್‌ಐಆರ್‌ನಲ್ಲಿ, ನಮ್ಮ ವಿರುದ್ಧ ಯಾವುದೇ ಆರೋಪಗಳು ಇಲ್ಲದಿದ್ದರೂ ನಮ್ಮ ಕುಟುಂಬ, ದೇವಾಲಯ ಹಾಗೂ ಸಂಸ್ಥೆಗಳ ವಿರುದ್ಧ ಆನ್‌ಲೈನ್ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಹಾಗೂ ಮಾನಹಾನಿಕರ ಹೇಳಿಕೆಗಳನ್ನು ಬಿತ್ತರಿಸಲಾಗುತ್ತಿದ್ದು ಇದನ್ನು ನಿರ್ಬಂಧಿಸಲು ಆದೇಶಿಸಬೇಕು' ಎಂದು ಹರ್ಷೇಂದ್ರ ಕುಮಾರ್ ಅಸಲು ದಾವೆಯಲ್ಲಿ ಕೋರಿದ್ದಾರೆ.

ಈ ಅಸಲು ದಾವೆಯಲ್ಲಿನ ಮಧ್ಯಂತರ ಮನವಿಯನ್ನು ಪುರಸ್ಕರಿಸಿದ್ದ ಸಿಟಿ ಸಿವಿಲ್ ಕೋರ್ಟ್‌ನ 10ನೇ ಹೆಚ್ಚುವರಿ ನ್ಯಾಯಾಲಯದ ನ್ಯಾಯಾಧೀಶ ವಿಜಯ ಕುಮಾರ್ ರೈ, 'ಮುಂದಿನ ವಿಚಾರಣೆಯವರೆಗೆ ಡಿಜಿಟಲ್, ಸಾಮಾಜಿಕ ಅಥವಾ ಮುದ್ರಣ ಮಾಧ್ಯಮಗಳಲ್ಲಿ ಯಾವುದೇ ಮಾನಹಾನಿಕರ ವಸ್ತು–ವಿಷಯ ಪ್ರಕಟಿಸಬಾರದು ಇಲ್ಲವೇ ಹಂಚಬಾರದು' ಎಂದು ಪ್ರತಿವಾದಿಗಳು ಮತ್ತು ಅಪರಿಚಿತ ವ್ಯಕ್ತಿಗಳ ವಿರುದ್ಧ ಜುಲೈ 8ರಂದು ಏಕಪಕ್ಷೀಯ ಪ್ರತಿಬಂಧಕ ಆದೇಶ ಹೊರಡಿಸಿದ್ದರು. ಈ ಆದೇಶವನ್ನು ರದ್ದುಪಡಿಸಬೇಕು ಎಂದು ಕೋರಿ ಅಜಯ್ ಹೈಕೋರ್ಟ್ ಮೆಟ್ಟಿಲೇರಿದ್ದರು.



> ಮಾನಹಾನಿಕರ ಹೇಳಿಕೆಗಳ ನಿಷೇಧದ ಬಗ್ಗೆ ಆದೇಶ ನೀಡಲಾಗಿದೆ ಎಂಬುದೇನೋ ಸರಿ. ಆದರೆ, ಯಾವ ರೀತಿಯ ಹೇಳಿಕೆಗಳು ಮಾನಹಾನಿಕರವಾಗಿವೆ ಎಂಬುದರ ಕುರಿತಾದ ಒಂದೇ ಒಂದು ಪದವೂ ಆದೇಶದಲ್ಲಿ ಕಂಡುಬರುವುದಿಲ್ಲ.
> ನ್ಯಾ.ಎಂ.ನಾಗಪ್ರಸನ್ನ

ರೂಪಾಂತರಿತ ಆದೇಶದ ವಿಶ್ಲೇಷಣೆ

'ವಿಚಾರಣಾ ನ್ಯಾಯಾಲಯ ಏಕಪಕ್ಷೀಯವಾಗಿ ನೀಡಿರುವ ಈ ಮಧ್ಯಂತರ ತಡೆ ಆದೇಶವು, ಸಾಮಾನ್ಯವಾಗಿ ಯುನೈಟೆಡ್ ಸ್ಟೇಟ್ಸ್ (ಅಮೆರಿಕ) ಕಾನೂನು ವ್ಯವಸ್ಥೆಯಲ್ಲಿ ಅಪರಿಚಿತ ಪ್ರತಿವಾದಿಗಳಿಗೆ ಬಳಸಲಾಗುವ ಜನಪ್ರಿಯ ಜಾನ್ ಡೋ ಆದೇಶವಾಗಿದೆ. ಭಾರತೀಯ ವ್ಯವಸ್ಥೆಯಲ್ಲೂ ಇದು ಅಶೋಕ್ ಕುಮಾರ್ ಪ್ರಕರಣದಲ್ಲಿ ಸ್ಥಳೀಯ ಆದೇಶವಾಗಿ ರೂಪಾಂತರಗೊಂಡಿದೆ' ಎಂಬ ಅಂಶವನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ತಮ್ಮ ತೀರ್ಪಿನಲ್ಲಿ ಉಲ್ಲೇಖಿಸಿದ್ದಾರೆ.

'ಜಾನ್ ಡೋ ಆದೇಶದ ಪರಿಕಲ್ಪನೆ ಭಾರತೀಯ ನ್ಯಾಯಶಾಸ್ತ್ರದಲ್ಲಿ ಮನ್ನಣೆ ಪಡೆದುಕೊಂಡಿದೆಯಾದರೂ, ಇದನ್ನು ಹೆಚ್ಚಿನ ಕಾಳಜಿ ಮತ್ತು ವಿವೇಚನಾಯುಕ್ತ ದೂರದೃಷ್ಟಿಯಿಂದ ಬಳಸಬೇಕು. ಇಂತಹ ಆದೇಶಗಳು, ಸ್ವಭಾವತಃ ಗುರುತಿಸಲಾಗದ ವ್ಯಕ್ತಿಗಳಿಗೆ ವಿಸ್ತರಿಸುತ್ತವೆ ಮತ್ತು ಅತಿಯಾದ ಅಪಾಯವನ್ನು ಹೊಂದಿರುತ್ತವೆ ಎಂಬುದನ್ನು ಸದಾ ನೆನಪಿಟ್ಟುಕೊಂಡಿರಬೇಕು' ಎಂದು ವಿಶ್ಲೇಷಿಸಿದ್ದಾರೆ.

ಪ್ರಕರಣವೇನು?

'ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿ ದೇವಾಲಯ ಹಾಗೂ ಸಂಸ್ಥೆಗಳ ವಿರುದ್ಧ ಆಧಾರರಹಿತ ಸುದ್ದಿ ಬಿತ್ತರಿಸಿರುವ 4,140 ಯೂ ಟ್ಯೂಬ್ ವಿಡಿಯೊಗಳು, 932 ಫೇಸ್‌ಬುಕ್ ಪೋಸ್ಟ್‌ಗಳು, 3,584 ಇನ್‌ಸ್ಟಾಗ್ರಾಮ್ ಪೋಸ್ಟ್‌ಗಳು, 108 ಸುದ್ದಿ ಲೇಖನಗಳು, 37 ರೆಡ್ ಇಟ್ ಪೋಸ್ಟ್‌ಗಳು ಮತ್ತು 41 ಟ್ವೀಟ್‌ಗಳೂ ಸೇರಿದಂತೆ ಒಟ್ಟು 8,842 ಆನ್‌ಲೈನ್ ಲಿಂಕ್‌ಗಳ ಪಟ್ಟಿಯನ್ನು ನಿರ್ಬಂಧಿಸಬೇಕು' ಎಂದು ಕೋರಿ ಧರ್ಮಸ್ಥಳ ಸಂಸ್ಥೆಯ ಕಾರ್ಯದರ್ಶಿ ಡಿ.ಹರ್ಷೇಂದ್ರ ಕುಮಾರ್ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಹೂಡಿದ್ದಾರೆ.

'ರಾಜ್ಯಕ್ಕೆ ಏಮ್ಸ್ ಇಲ್ಲ'

ನವದೆಹಲಿ: ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆಯಡಿ ಕರ್ನಾಟಕದಲ್ಲಿ ಏಮ್ಸ್ ಸ್ಥಾಪನೆಗೆ ಅನುಮೋದನೆ ನೀಡಿಲ್ಲ ಎಂದು ಆರೋಗ್ಯ ಖಾತೆ ರಾಜ್ಯ ಸಚಿವ ಪ್ರತಾಪ್ ರಾವ್ ಜಾಧವ್ ಅವರು ಲೋಕಸಭೆಯಲ್ಲಿ ಶುಕ್ರವಾರ ಲಿಖಿತ ಉತ್ತರ ನೀಡಿದ್ದಾರೆ.

ಅತ್ಯಾಚಾರ: ಪ್ರಜ್ವಲ್ ರೇವಣ್ಣ ದೋಷಿ

ಒಂದನೇ ಪುಟದಿಂದ...

ಯಾವುದೀ ಪ್ರಕರಣ?: ಲೋಕಸಭೆಗೆ 2024ರ ಏಪ್ರಿಲ್‌ನಿಂದ ಜೂನ್ ಮಧ್ಯಭಾಗದಲ್ಲಿ ವಿವಿಧ ಹಂತಗಳಲ್ಲಿ ನಡೆದ ಚುನಾವಣೆ ವೇಳೆ ಪ್ರಜ್ವಲ್ ರೇವಣ್ಣ ಹಾಸನ ಲೋಕಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ. ಈ ವೇಳೆ ಸಂಸದನಾಗಿದ್ದ ಪ್ರಜ್ವಲ್‌ನದ್ದು ಎನ್ನಲಾದ ಲೈಂಗಿಕ ದೌರ್ಜನ್ಯ ಕೃತ್ಯಗಳ ಹಲವು ವಿಡಿಯೊಗಳು ಹಾಗೂ ಅಶ್ಲೀಲ ಫೋಟೋಗಳು ಸಾಮಾಜಿಕ ಜಾಲತಾಣದಲ್ಲಿ ಬಿತ್ತರಗೊಂಡಿದ್ದವು. ಈ ವಿಡಿಯೊಗಳ ಪೈಕಿ 48 ವರ್ಷದ ಸಂತ್ರಸ್ತೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ವಿಡಿಯೊ ಕೂಡಾ ಬಿತ್ತರಗೊಂಡಿತ್ತು.

ಪ್ರಜ್ವಲ್ ಸ್ವಯಂ ಚಿತ್ರೀಕರಿಸಿದ್ದ ಎನ್ನಲಾದ ಹತ್ತಾರು ಅಶ್ಲೀಲ ವಿಡಿಯೊಗಳು ವ್ಯಾಪಕವಾಗಿ ಬಿತ್ತರಗೊಂಡು ಸಾರ್ವಜನಿಕ ವಲಯದಲ್ಲಿ ಸಂಚಲನ ಮೂಡಿಸಿದ ಬೆನ್ನಲ್ಲೇ ಹಾಲಿ ಪ್ರಕರಣದ ಸಂತ್ರಸ್ತೆ, ತಮ್ಮ ಮನೆಯಿಂದ ಕಣ್ಮರೆಯಾಗಿದ್ದರು. ಈ ವೇಳೆ ಸಂತ್ರಸ್ತೆಯ ಪುತ್ರ 2024ರ ಮೇ 2ರಂದು ಸಂಬಂಧಿಸಿದ ಪೊಲೀಸ್ ಠಾಣೆಯಲ್ಲಿ, ಪ್ರಜ್ವಲ್ ತಂದೆಯೂ ಆಗಿರುವ, ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಮತ್ತು ಸಂಬಂಧಿ ಸತೀಶ್ ಬಾಬಣ್ಣ ವಿರುದ್ಧ 'ನನ್ನ ತಾಯಿಯ ಅಪಹರಣ ಮಾಡಲಾಗಿದೆ' ಎಂದು ಆರೋಪಿಸಿ ದೂರು ದಾಖಲಿಸಿದ್ದರು.

ಕ್ರಿಮಿನಲ್ ದೂರು ದಾಖಲಿಸಿಕೊಂಡು ಪ್ರಕರಣವನ್ನು ಭೇದಿಸಿದ್ದ ವಿಶೇಷ ತನಿಖಾ ತಂಡದ (ಎಸ್‌ಐಟಿ) ಪೊಲೀಸರು ಸಂತ್ರಸ್ತೆಯು ತೋಟದ ಮನೆಯೊಂದರಲ್ಲಿ ಇದ್ದ ಜಾಡನ್ನು ಪತ್ತೆ ಹಚ್ಚಿದ್ದರು. ವಿಚಾರಣೆ ವೇಳೆ ಸಂತ್ರಸ್ತೆಯು, 'ಪ್ರಜ್ವಲ್ ನನ್ನ ಮೇಲೆ ಬಲವಂತವಾಗಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಹಾಗೂ ಅತ್ಯಾಚಾರ ಮಾಡಿದ್ದಾರೆ' ಎಂದು ಆರೋಪಿಸಿದ್ದರು.

ಈ ಸಂಬಂಧ ಸಿಐಡಿ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಜ್ವಲ್ ವಿರುದ್ಧ, ಭಾರತೀಯ ದಂಡ ಸಂಹಿತೆ–1860ರ ಕಲಂ 376(2)(ಕೆ), 376(2)(ಎನ್), 354(ಎ)(ಬಿ)(ಸಿ), 506, 201 ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆ–2008ರ ಕಲಂ 66(ಇ) ಅಡಿ ಎಫ್‌ಐಆರ್ ದಾಖಲು ಮಾಡಲಾಗಿತ್ತು. ಬಳಿಕ ಸಂತ್ರಸ್ತೆಯನ್ನು ಸಕ್ಷಮ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಅಪರಾಧ ದಂಡ ಪ್ರಕ್ರಿಯಾ ಸಂಹಿತೆ–1973ರ (ಸಿಆರ್‌ಪಿಸಿ) ಕಲಂ 164ರ ಅಡಿ ಹೇಳಿಕೆ ದಾಖಲು ಮಾಡಿಸಲಾಗಿತ್ತು.

ಇವತ್ತು ಏನು ನಡೆಯುತ್ತದೆ?

ಅಪರಾಧಿಯನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗುತ್ತದೆ. ನ್ಯಾಯಾಧೀಶರು ಶಿಕ್ಷೆಯ ಪ್ರಮಾಣವನ್ನು ಘೋಷಿಸುವ ಮುನ್ನ, 'ಕಾನೂನು ಅಡಿಯಲ್ಲಿ ವಿಧಿಸಲಾಗುತ್ತಿರುವ ಈ ಶಿಕ್ಷೆಯ ಪ್ರಮಾಣವು ಗರಿಷ್ಠವಾಗದಂತೆ ಕಡಿಮೆ ಮಾಡಲು ಏನಾದರೂ ಸಕಾರಣಗಳಿವೆಯೇ' ಎಂದು ಅಪರಾಧಿಯನ್ನು ಪ್ರಶ್ನಿಸುತ್ತಾರೆ. ಆಗ ಅಪರಾಧಿ ಇಂತಿಂತಹ ಕಾರಣಗಳಿಗಾಗಿ ಶಿಕ್ಷೆಯ ಪ್ರಮಾಣವನ್ನು ಕಡಿಮೆ ಮಾಡಬೇಕು ಎಂದು ಕೇಳಿಕೊಳ್ಳಲು ಅವಕಾಶ ಇರುತ್ತದೆ.

ಅಪರಾಧಿ ಖುದ್ದಾಗಿ ಮಾಡುವ ಈ ಮೌಖಿಕ ಮನವಿ ಸಕಾರಣವಾಗಿದೆ ಎಂದಾದಲ್ಲಿ ಅಥವಾ ನ್ಯಾಯಾಧೀಶರಿಗೆ ಮನವರಿಕೆ ಆಗುವಂತಿದ್ದಲ್ಲಿ ಶಿಕ್ಷೆಯ ಪ್ರಮಾಣವನ್ನು ಗರಿಷ್ಠ ಮಟ್ಟದಿಂದ ಕನಿಷ್ಠತಮಕ್ಕೆ ಇಳಿಸಲು ಅವಕಾಶ ಇರುತ್ತದೆ. ನಂತರ ಈ ಹೇಳಿಕೆಯನ್ನು ಪರಿಗಣಿಸಿ ನ್ಯಾಯಾಧೀಶರು ಶಿಕ್ಷೆಯ ಪ್ರಮಾಣವನ್ನು ನಿಗದಿಗೊಳಿಸುತ್ತಾರೆ.

ಬಿ.ಕೆ. ಸಿಂಗ್ ನೇತೃತ್ವದ ಎಸ್‌ಐಟಿ

ಪ್ರಕರಣದ ತನಿಖೆ ನಡೆಸಲು ಎಡಿಜಿಪಿ ಬಿ.ಕೆ.ಸಿಂಗ್ ನೇತೃತ್ವದಲ್ಲಿ ವಿಶೇಷ ತನಿಖಾ ದಳ (ಎಸ್‌ಐಟಿ) ರಚಿಸಲಾಗಿತ್ತು. ತಂಡದಲ್ಲಿ ಐಪಿಎಸ್ ಅಧಿಕಾರಿ ಸುಮನ್ ಡಿ. ಪನ್ನೇಕರ್, ಸೀಮಾ ಲಾಟ್ಕರ್ ಇದ್ದರು. ತನಿಖಾಧಿಕಾರಿಯಾಗಿ ಬಿ.ಸುಮಾರಾಣಿ ಅವರನ್ನು ನೇಮಿಸಲಾಗಿತ್ತು.

ಪ್ರತಿಕ್ರಿಯಿಸದ ಎಚ್.ಡಿ. ರೇವಣ್ಣ

ತಮ್ಮ ಪುತ್ರ, ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ನ್ಯಾಯಾಲಯ ಶಿಕ್ಷೆ ವಿಧಿಸಿ ನೀಡಿದ ತೀರ್ಪಿನ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲು ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ ನಿರಾಕರಿಸಿದರು.

ತೀರ್ಪು ಹೊರಬೀಳುವ ವೇಳೆಗೆ ವಿಧಾನಸೌಧದಲ್ಲಿದ್ದ ರೇವಣ್ಣ ಅವರ ಪ್ರತಿಕ್ರಿಯೆ ಕೇಳಲು ಮಾಧ್ಯಮ ಪ್ರತಿನಿಧಿಗಳು ಕಾದು ನಿಂತಿದ್ದರು.

ವಿಧಾನಸೌಧದಿಂದ ಹೊರ ಬಂದ ರೇವಣ್ಣ ಅವರನ್ನು ಮಾತನಾಡಿಸಲು ಸುದ್ದಿ ವಾಹಿನಿಯ ಕ್ಯಾಮೆರಾಗಳು, ಪತ್ರಕರ್ತರು ಸುತ್ತುವರೆದಾಗ, ತಲೆ ತಗ್ಗಿಸಿ, ಮೌನವಾಗಿ ಹೊರ ನಡೆದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ 12ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ತಿಂಗಳು ಕನಿಷ್ಠ ₹10 ಸಾವಿರ ಗೌರವಧನ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿರುವ ಆಶಾ ಕಾರ್ಯಕರ್ತೆಯರು, ಇದೇ 12ರಿಂದ 14ರವರೆಗೆ ರಾಜ್ಯದಾದ್ಯಂತ ಅಹೋರಾತ್ರಿ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ, 'ಗೌರವ ಧನ ಹೆಚ್ಚಳಕ್ಕೆ ಸಂಬಂಧಿಸಿದಂತೆ ಜನವರಿ ತಿಂಗಳಲ್ಲಿ ಪ್ರತಿಭಟನೆ ನಡೆಸಿ, ₹15 ಸಾವಿರ ನಿಶ್ಚಿತ ಗೌರವಧನ ನಿಗದಿಪಡಿಸಲು ಆಗ್ರಹಿಸಲಾಗಿತ್ತು. ಆಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, 2025ರ ಏಪ್ರಿಲ್ ತಿಂಗಳಿನಿಂದ ಪ್ರತಿ ತಿಂಗಳು ಕನಿಷ್ಠ ₹10 ಸಾವಿರ ನೀಡುವುದಾಗಿ ಘೋಷಿಸಲಾಗಿತ್ತು. ಆದರೆ, ಈ ಬಗ್ಗೆ ಈವರೆಗೂ ಆದೇಶ ಹೊರಡಿಸಿಲ್ಲ. ಆದ್ದರಿಂದ ಮತ್ತೆ ಪ್ರತಿಭಟನೆಯ ಹಾದಿ ಹಿಡಿಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಮೂರು ದಿನಗಳು ರಾಜ್ಯದಾದ್ಯಂತ ಪ್ರತಿಭಟನೆ ನಡೆಸುತ್ತೇವೆ' ಎಂದರು.

'ಏಪ್ರಿಲ್ ತಿಂಗಳಿಂದ ಅನ್ವಯವಾಗುವಂತೆ ಪ್ರತಿ ತಿಂಗಳು ಕನಿಷ್ಠ ₹10 ಸಾವಿರ ಗೌರವಧನ ನೀಡುವ ಬಗ್ಗೆ ರಾಜ್ಯ ಸರ್ಕಾರ ಕೂಡಲೇ ಆದೇಶ ಹೊರಡಿಸಬೇಕು. ಆಶಾ ಕಾರ್ಯಕರ್ತೆಯರಿಗೂ ತಿಂಗಳ ಪ್ರೋತ್ಸಾಹ ಧನ ₹ 1 ಸಾವಿರ ಹೆಚ್ಚಿಸಬೇಕು. ಆಶಾಗಳ ಕಾರ್ಯನಿರ್ವಹಣೆ ಬಗ್ಗೆ ಅವೈಜ್ಞಾನಿಕ ಮೌಲ್ಯಮಾಪನ ಕೈಬಿಡಬೇಕು' ಎಂದು ಆಗ್ರಹಿಸಿದರು.

ಕೊನೆಗೂ ಈಡೇರದ ಸೋದರತ್ತೆ ನಾಗಮ್ಮ ಅವರ ಆಸೆ • ದೊಡ್ಡ ಗಾಜನೂರಿನಲ್ಲಿ ಇಂದು ಅಂತ್ಯಕ್ರಿಯೆ

ಅಪ್ಪು ಹಾದಿ ಕಾಯುತ್ತಲೇ ಕೊನೆಯುಸಿರೆಳೆದರು...

• ಬಾಲಚಂದ್ರ ಎಚ್.

ಚಾಮರಾಜನಗರ: 'ಅಪ್ಪು ನಿನಗೆ ಐವತ್ತು ವರ್ಷವಾಯ್ತಂತೆ, ಚೆನ್ನಾಗಿದ್ದೀಯಾ ಮಗನೇ, ಒಂದ್ ಸಲ ಬಂದು ನನ್ನನ್ನು ನೋಡ್ಕಂಡು ಹೋಗು ಕಂದಾ, ಕಣ್ತುಂಬ ನೋಡಿಕೊಳ್ತೀನಿ...

–ಹೀಗೆ, ನಟ ಪುನೀತ್ ರಾಜ್‌ಕುಮಾರ್ ಅವರನ್ನು ಕಾಣುವ ಅತೀವ ಹಂಬಲ ವ್ಯಕ್ತಪಡಿಸಿದ್ದ ಪ್ರೀತಿಯ ಸೋದರತ್ತೆ ನಾಗಮ್ಮನವರ ಆಸೆ ಕೊನೆಗೂ ಈಡೇರಲಿಲ್ಲ.

'ಇಂದಲ್ಲ, ನಾಳೆ ಅಪ್ಪು ಬರುತ್ತಾನೆ ಎಂದು ಕಾದು ಕುಳಿತಿದ್ದ 94 ವರ್ಷದ ಹಿರಿಯ ಜೀವ ನಾಗಮ್ಮ ಶುಕ್ರವಾರ ಜಿಲ್ಲೆಯ ಗಡಿಗೆ ಹೊಂದಿಕೊಂಡಿರುವ ತಾಳವಾಡಿ ತಾಲ್ಲೂಕಿನ ದೊಡ್ಡಗಾಜನೂರಿನಲ್ಲಿರುವ ತೋಟದ ಮನೆಯಲ್ಲಿ ವಿಧಿವಶರಾಗಿದ್ದಾರೆ.

ಅಪ್ಪು ಸಾವಿನ ಸುದ್ದಿಯೇ ತಿಳಿದಿರಲಿಲ್ಲ:

ಸಹೋದರ ಡಾ.ರಾಜಕುಮಾರ್ ಕುಟುಂಬದ ಮೇಲೆ ಅತಿಯಾದ ಪ್ರೀತಿ ಹೊಂದಿದ್ದ ನಾಗಮ್ಮನವರಿಗೆ ಪುನೀತ್ ಕಂಡರೆ ಒಂದು ಹಿಡಿಯಷ್ಟು ಹೆಚ್ಚು ಪ್ರೀತಿ. ಅಪ್ಪು ಕೂಡಾ ಸಿನಿಮಾ ಚಿತ್ರೀಕರಣಕ್ಕಾಗಿ ಜಿಲ್ಲೆಗೆ ಬಂದಾಗಲೆಲ್ಲ ಸೋದರತ್ತೆ ಭೇಟಿಯಾಗಿ ಕುಶಲೋಪರಿ ನಡೆಸುತ್ತಿದ್ದರು. ಸಲುಗೆಯಿಂದ ಕಾಲ ಕಳೆಯುತ್ತ ನಾಗಮ್ಮನವರ ಕೈರುಚಿ ಸವಿಯುತ್ತಿದ್ದರು.

ಅತಿಯಾದ ಪ್ರೀತಿ ಹೊಂದಿದ್ದರಿಂದ ಸೋದರಳಿಯನ ಸಾವಿನ ಸುದ್ದಿ ಕೇಳಿ ಆಘಾತ ಆಗಬಹುದು ಎಂಬ ಆತಂಕದಿಂದ ಅಪ್ಪು ನಿಧನದ ವಿಚಾರವನ್ನು ಕುಟುಂಬದವರು ನಾಗಮ್ಮ ಅವರಿಗೆ ತಿಳಿಸಿರಲಿಲ್ಲ. ಬದುಕಿದ್ದಷ್ಟು ದಿನ ಅಪ್ಪು ನಿಧನದ ಮಾಹಿತಿ ತಿಳಿಯಲಿಲ್ಲ.

'ನೆನಪಾದಾಗಲೆಲ್ಲ ಒಂದು ಸಲ ಮನೆಗೆ ಬಂದುಹೋಗಲು ಅಪ್ಪುಗೆ ಹೇಳಿ ಎಂದು ಕುಟುಂಬ ಸದಸ್ಯರಿಗೆ ನಾಗಮ್ಮ ಬೇಡಿಕೆ ಇರಿಸುತ್ತಿದ್ದರು. ಈಚೆಗೆ ವಿಡಿಯೊದಲ್ಲೂ ಮನದಾಳದ ಇಂಗಿತ ವ್ಯಕ್ತಪಡಿಸಿದ್ದರು. ಚಿತ್ರೀಕರಣ, ವಿದೇಶ ಪ್ರವಾಸದಲ್ಲಿರುವುದರಿಂದ ಬಿಡುವು ಸಿಗುತ್ತಿಲ್ಲ ಎಂದು ಕುಟುಂಬದವರು ಸಮಾಧಾನಪಡಿಸುತ್ತಿದ್ದರು' ಎಂದು ಡಾ.ರಾಜ್ ಕುಟುಂಬದ ಆಪ್ತ ರಾಮಮೂರ್ತಿ ಹೇಳಿದರು.

2017ರಲ್ಲಿ ತಾಯಿ ಪಾರ್ವತಮ್ಮ ನಿಧನರಾದ ಬಳಿಕ ಅಪ್ಪು, ನಾಗಮ್ಮ ಅವರಲ್ಲಿ ತಾಯಿಯ ಪ್ರೀತಿ ಕಾಣುತ್ತಿದ್ದರು. ಹಿಂದೆ ಮದ್ರಾಸ್, ಬೆಂಗಳೂರಿನಲ್ಲಿದ್ದ ಡಾ.ರಾಜಕುಮಾರ್ ನಿವಾಸದಲ್ಲಿ ಕೆಲಕಾಲ ತಂಗಿದ್ದರು, ಮಕ್ಕಳ ಜೊತೆಗೆ ಡಾ.ರಾಜ್ ಅವರ ಮಕ್ಕಳ ಪೋಷಣೆ ಮಾಡಿದ್ದರು.

'ನಂತರದ ದಿನಗಳಲ್ಲಿ ವಯೋಸಹಜ ಅನಾರೋಗ್ಯದಿಂದ ದೊಡ್ಡ ಗಾಜನೂರಿನ ತೋಟದ ಮನೆಯಲ್ಲಿ ಉಳಿದುಕೊಂಡಿದ್ದರು. ಅಪ್ಪು ಬರುವ ನಿರೀಕ್ಷೆಯಲ್ಲಿ ದಿನ ದೂಡುತ್ತಿದ್ದ ಅವರ ಅಂತಿಮ ಆಸೆ ಕೊನೆಗೂ ಈಡೇರಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು ರಾಮಮೂರ್ತಿ.

ಮುಖ್ಯಾಂಶಗಳು

- ಅಪ್ಪು ಮೃತಪಟ್ಟ ಸುದ್ದಿ ತಿಳಿದಿರಲಿಲ್ಲ
- ಅಪ್ಪು ಬರುವ ಹಾದಿ ಕಾಯುತ್ತಿದ್ದ ಸೋದರತ್ತೆ ನಾಗಮ್ಮ
- ದೊಡ್ಡಗಾಜನೂರಿನ ತೋಟದ ಮನೆಯಲ್ಲಿ ವಿಧಿವಶ



ಪುನೀತ್ ರಾಜಕುಮಾರ್ ಅವರೊಂದಿಗೆ ಸೋದರತ್ತೆ ನಾಗಮ್ಮ

ಡಾ.ರಾಜ್ ಸಹೋದರಿ ನಾಗಮ್ಮ ನಿಧನ

ಚಾಮರಾಜನಗರ: ನಟ ರಾಜಕುಮಾರ್ ಅವರ ಸಹೋದರಿ ನಾಗಮ್ಮ (94) ಶುಕ್ರವಾರ ತಾಳವಾಡಿ ತಾಲ್ಲೂಕಿನ ದೊಡ್ಡಗಾಜನೂರಿನಲ್ಲಿ ನಿಧನರಾದರು.

ಮೃತರಿಗೆ ನಾಲ್ವರು ಪುತ್ರರು, ಇಬ್ಬರು ಪುತ್ರಿಯರಿದ್ದಾರೆ. ವಯೋಸಹಜ ಅನಾರೋಗ್ಯವಿದ್ದ ಅವರು ತೋಟದ ಮನೆಯಲ್ಲಿ ವಾಸವಿದ್ದರು. ಶನಿವಾರ ಅಂತ್ಯಕ್ರಿಯೆ ನಡೆಯಲಿದ್ದು, ರಾಜ್ ಕುಟುಂಬದವರು ಪಾಲ್ಗೊಳ್ಳಲಿದ್ದಾರೆ.

ನಟರಾದ ಶಿವರಾಜ ಕುಮಾರ್, ಪುನೀತ್ ರಾಜಕುಮಾರ್ ಚಾಮರಾಜನಗರಕ್ಕೆ ಬಂದಾಗಲೆಲ್ಲ ಸೋದರತ್ತೆ ಭೇಟಿಯಾಗಿ ಕುಶಲೋಪರಿ ನಡೆಸುತ್ತಿದ್ದರು.

'ಅತ್ಯಾಚಾರ ಸಂತ್ರಸ್ತೆಯ ದಿಟ್ಟ ನಡೆ'

• ಶಿವಪ್ರಸಾದ್ ರೈ

ಮೈಸೂರು: 'ಅತ್ಯಾಚಾರ ಸಂತ್ರಸ್ತೆಯ ದಿಟ್ಟ ನಡೆಯೇ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಮೇಲಿದ್ದ ಆರೋಪ ಸಾಬೀತಾಗಲು ಪ್ರಮುಖ ಕಾರಣ' ಎಂದು ಪ್ರಕರಣದ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದ್ದಾರೆ.

'ಅತ್ಯಾಚಾರ ಆರೋಪವಾದ ಕಾರಣ ಪ್ರಕರಣವನ್ನು ಸೂಕ್ಷ್ಮವಾಗಿ ನಿರ್ವಹಿಸಬೇಕಾಗಿತ್ತು. ತಂಡವು ಆರೋಪಿಯನ್ನು ಹುಡುಕುವ ವೇಳೆಗಾಗಲೇ ಆತನೇ ನಮ್ಮ ಬಲೆಗೆ ಬಿದ್ದ. ಅಲ್ಲಿಂದ ಪ್ರಕರಣ ತಿರುವು ಪಡೆದುಕೊಂಡಿತು. ಸತತವಾಗಿ 7 ತಿಂಗಳು ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಸಿ 180 ದಾಖಲೆಗಳನ್ನು ಕೋರ್ಟ್‌ಗೆ ಸಲ್ಲಿಸಿದೆವು' ಎಂದು ತಂಡದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ತನಿಖೆಯ ವೇಳೆ ಸಂತ್ರಸ್ತೆಯು ಉತ್ತಮವಾಗಿ ಸಹಕರಿಸಿದ್ದಾರೆ. ಆಕೆ ಮಾಡಿರುವ ಆರೋಪಗಳಿಗೆ ಸ್ಪಷ್ಟನೆ ಕೇಳಲಾಗಿತ್ತು. ಪ್ರಕರಣದ ತನಿಖೆ ಮುಗಿಯುವವರೆಗೂ ಆಕೆ ತೋರಿದ ದಿಟ್ಟತನ ಮಾದರಿ' ಎಂದರು.

ಪ್ರಕರಣದ ತನಿಖೆಗಾಗಿ ಎಡಿಜಿಪಿ ಬಿ.ಕೆ.ಸಿಂಗ್ ನೇತೃತ್ವದಲ್ಲಿ ಎಸ್‌ಪಿಗಳಾಗಿದ್ದ ಸೀಮಾ ಲಾಟ್ಕರ್ ಹಾಗೂ ಸುಮನ್ ಅವರು ಎಸ್‌ಐಟಿ ತಂಡ ಮುನ್ನಡೆಸಿದ್ದರು. ಅವರೊಂದಿಗೆ 26 ಅಧಿಕಾರಿಗಳೂ ದಾಖಲೆ ಕಲೆಹಾಕುವಲ್ಲಿ ಶ್ರಮಿಸಿದ್ದರು.

'ಹಣ, ಅಧಿಕಾರದ ಎದುರು ನ್ಯಾಯ ಗೆದ್ದಿದೆ'

ಹಾಸನ: 'ಶಾಸಕ ಎಚ್.ಡಿ.ರೇವಣ್ಣ ಕುಟುಂಬದವರು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದರು. ಅಕ್ರಮಗಳಲ್ಲಿ ಭಾಗಿಯಾಗಿದ್ದರು ಎಂಬುದು ಈಗ ಜಗಜ್ಜಾಹೀರಾಗಿದೆ. ಹಣ, ಅಧಿಕಾರದ ಬಲದ ಎದುರು ನ್ಯಾಯ ಗೆದ್ದಿದೆ' ಎಂದು ಬಿಜೆಪಿ ಮುಖಂಡ, ವಕೀಲ ಜಿ.ದೇವರಾಜೇಗೌಡ ಹೇಳಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಮಹಿಳೆಯ ಅತ್ಯಾಚಾರ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ದೋಷಿ ಎಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶ ಪ್ರಕಟಿಸಿದೆ., ಕಾನೂನಿನ ಮುಂದೆ ಯಾರೂ ದೊಡ್ಡವರಲ್ಲ ಎಂಬುದನ್ನು ಇದು ಸಾಬೀತುಪಡಿಸಿದೆ. ದೇಶದ ನ್ಯಾಯಾಂಗ ವ್ಯವಸ್ಥೆಗೆ ಧನ್ಯವಾದ ತಿಳಿಸುತ್ತೇನೆ' ಎಂದರು.

'ತ್ವರಿತಗತಿಯಲ್ಲಿ ವಿಚಾರಣೆ ಪೂರ್ಣಗೊಳಿಸಿರುವುದು ನ್ಯಾಯಾಂಗ ವ್ಯವಸ್ಥೆಯ ಶಕ್ತಿಗೆ ಸಾಕ್ಷಿ. ವಿಳಂಬವಾದರೆ ಅಪರಾಧಿಗಳು ತಪ್ಪಿಸಿಕೊಳ್ಳಲು ದಾರಿ ಸಿಗುತ್ತದೆ. ಆದರೆ ಈ ಪ್ರಕರಣದಲ್ಲಿ ತ್ವರಿತವಾಗಿ ನ್ಯಾಯ ಒದಗಿಸಲಾಗಿದೆ. ಸಮಾಜಕ್ಕೆ ಒಳ್ಳೆಯ ಸಂದೇಶ ಸಿಕ್ಕಿದೆ' ಎಂದರು.

'ಪ್ರಜ್ವಲ್ ರೇವಣ್ಣ ಕಣ್ಣೀರು ಹಾಕಿದರೆ ಯಾರೂ ಭಾವುಕರಾಗಬಾರದು. ಅವರಿಂದ ಎಷ್ಟೋ ಹೆಣ್ಣುಮಕ್ಕಳ ಜೀವನ, ಕುಟುಂಬಗಳು ಹಾಳಾಗಿವೆ. ರೇವಣ್ಣ ಕುಟುಂಬದವರು ನಂಬಿಕೆಗೆ ಅನರ್ಹರು' ಎಂದು ಹೇಳಿದರು.

ಮಧ್ಯಪ್ರವೇಶಕ್ಕೆ ಒತ್ತಾಯಿಸಿ ಕೇಂದ್ರಕ್ಕೆ ಪತ್ರ ಬರೆದ ಮಹಾರಾಷ್ಟ್ರ ಸಿ.ಎಂ ದೇವೇಂದ್ರ ಫಡಣವೀಸ್

ಆಲಮಟ್ಟಿ: ಎತ್ತರ ಹೆಚ್ಚಳಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಮುಂಬೈ: ಕೃಷ್ಣಾ ನದಿಗೆ ಆಲಮಟ್ಟಿ ಬಳಿ ನಿರ್ಮಿಸಿರುವ ಅಣೆಕಟ್ಟೆಯ ಎತ್ತರ ಹೆಚ್ಚಿಸುವುದಕ್ಕೆ ಕರ್ನಾಟಕ ಸರ್ಕಾರ ಮುಂದಾಗಿದ್ದು, ಇದಕ್ಕೆ ಮಹಾರಾಷ್ಟ್ರ ಸರ್ಕಾರ ವಿರೋಧ ವ್ಯಕ್ತಪಡಿಸಿದೆ.



ದೇವೇಂದ್ರ ಫಡಣವೀಸ್

ಈ ವಿಚಾರದಲ್ಲಿ ಕೂಡಲೇ ಮಧ್ಯಪ್ರವೇಶಿಸಬೇಕು ಹಾಗೂ ಅಣೆಕಟ್ಟೆ ಎತ್ತರ ಹೆಚ್ಚಳಕ್ಕೆ ಅನುಮತಿ ನೀಡಬಾರದು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಈ ಕುರಿತು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅವರಿಗೆ ಪತ್ರ ಬರೆದಿದ್ದಾರೆ.

‘ಪ್ರಸ್ತುತ ಅಣೆಕಟ್ಟೆಯ ಎತ್ತರ 519.6 ಮೀ. ಇದ್ದು, ಇದನ್ನು 524.256 ಮೀ.ಗೆ ಹೆಚ್ಚಿಸಲು ಕರ್ನಾಟಕ ಮುಂದಾಗಿದೆ. ಇಂಥ ಕ್ರಮದಿಂದ ಕೃಷ್ಣಾ ನದಿ ಪಾತ್ರದ ಜನರಿಗೆ ತೊಂದರೆಯಾಗಲಿದೆ’ ಎಂದು ಫಡಣವೀಸ್ ಪತ್ರದಲ್ಲಿ ವಿವರಿಸಿದ್ದಾರೆ.

‘ಅಣೆಕಟ್ಟು ಎತ್ತರ ಹೆಚ್ಚಿಸುವ ನಿರ್ಧಾರವು ಮಹಾರಾಷ್ಟ್ರದ ಪಾಲಿಗೆ ಕಳವಳಕಾರಿ. ಕೃಷ್ಣಾ ನದಿ ಪಾತ್ರದಗುಂಟ ವಾಸಿಸುತ್ತಿರುವ ಎರಡೂ ರಾಜ್ಯಗಳ ಜನರ ಹಿತದೃಷ್ಟಿಯಿಂದ ಈ ನಿರ್ಧಾರವನ್ನು ಮರುಪರಿಶೀಲಿಸಬೇಕು’ ಎಂದು ಅವರು ಕರ್ನಾಟಕ ಸರ್ಕಾರಕ್ಕೂ ಮನವಿ ಮಾಡಿದ್ದಾರೆ.

ಆ.4ರಂದು ಈ ವಿಚಾರ ಕುರಿತು ಚರ್ಚಿಸಲು ಕೇಂದ್ರ ಹಾಗೂ ರಾಜ್ಯ ಅಧಿಕಾರಿಗಳ ಸಭೆ ನಡೆಯಲಿದೆ. ಮಹಾರಾಷ್ಟ್ರ ಜಲ ಸಂಪನ್ಮೂಲ ಸಚಿವ ರಾಧಾಕೃಷ್ಣ ವಿಖೆ–ಪಾಟೀಲ ಅವರು ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿ, ರಾಜ್ಯದ ಆತಂಕ ವ್ಯಕ್ತಪಡಿಸುವ ನಿರೀಕ್ಷೆ ಇದೆ. ಈ ಕಾರಣಕ್ಕೆ, ಮುಖ್ಯಮಂತ್ರಿ ಫಡಣವೀಸ್ ಬರೆದಿರುವ ಈ ಪತ್ರಕ್ಕೆ ಮಹತ್ವ ಬಂದಿದೆ.

ಪತ್ರದಲ್ಲೇನಿದೆ

- ಆಲಮಟ್ಟಿ ಅಣೆಕಟ್ಟು ನಿರ್ಮಾಣವಾದ ನಂತರ, ಕೃಷ್ಣಾ ನದಿ ಹಿನ್ನೀರಿನಿಂದ ಮಹಾರಾಷ್ಟ್ರದ ಅನೇಕ ಗ್ರಾಮಗಳು ತೊಂದರೆಗೀಡಾಗಿವೆ
- ಹೂಳು ಸಂಗ್ರಹದ ಕಾರಣ ಬ್ಯಾರೇಜುಗಳ ನೀರು ಸಂಗ್ರಹ ಸಾಮರ್ಥ್ಯ ಈಗಾಗಲೇ ಕುಸಿದಿದೆ. ಇದರಿಂದ ಪ್ರವಾಹ ಉಂಟಾದಾಗ ನೀರಿನ ಮಟ್ಟ ತಗ್ಗುವುದು ವಿಳಂಬವಾಗಿ ಮತ್ತಷ್ಟು ತೊಂದರೆಯಾಗುತ್ತಿದೆ
- ಎತ್ತರ ಹೆಚ್ಚಳ ಮಾಡುವುದರಿಂದ ಅಣೆಕಟ್ಟೆಯಲ್ಲಿ ಹೆಚ್ಚುವರಿಯಾಗಿ ನೀರು ಸಂಗ್ರಹವಾಗುತ್ತದೆ. ಇದು ಕೂಡ ಮೇಲಿಂದಮೇಲೆ ಪ್ರವಾಹ ಉಂಟಾಗಲು ಕಾರಣವಾಗಲಿದೆ

‘ಜಲಮೂಲ ಒತ್ತುವರಿಯಿಂದಲೇ ಸಾಂಗ್ಲಿಯಲ್ಲಿ ಪ್ರವಾಹ’

ಬೆಂಗಳೂರು: ‘ಮಹಾರಾಷ್ಟ್ರದ ಸಾಂಗ್ಲಿಯಲ್ಲಿನ ಜಲಾನಯನ ಪ್ರದೇಶಗಳು ವಿಪರೀತ ಒತ್ತುವರಿಯಾಗಿದ್ದು, ಪ್ರವಾಹಕ್ಕೆ ಅದೇ ಕಾರಣ. ಆಲಮಟ್ಟಿ ಅಣೆಕಟ್ಟೆಯ ಎತ್ತರ ಹೆಚ್ಚಿಸುವುದರಿಂದ ಪ್ರವಾಹ ಉಂಟಾಗುತ್ತದೆ ಎನ್ನುವ ಮಹಾರಾಷ್ಟ್ರದ ತಕರಾರಿಗೆ ಅರ್ಥವೇ ಇಲ್ಲ’ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನಾವು ಆಲಮಟ್ಟಿ ಅಣೆಕಟ್ಟೆ ನಿರ್ಮಿಸುವುದಕ್ಕೂ ಮೊದಲೇ ಸಾಂಗ್ಲಿಯಲ್ಲಿ 1964, 1976, 1994 ಮತ್ತು 1997ರಲ್ಲಿ ಭೀಕರ ಪ್ರವಾಹ ತಲೆದೋರಿತ್ತು’ ಎಂದರು.

‘ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 519.60 ಮೀಟರ್‌ನಿಂದ 524.256 ಮೀಟರ್‌ಗೆ ಹೆಚ್ಚಿಸುವುದರಿಂದ ಸಾಂಗ್ಲಿ ಮತ್ತು ಕೊಲ್ಹಾಪುರ ಜಿಲ್ಲೆಗಳಲ್ಲಿ ಪ್ರವಾಹ ಉಂಟಾಗುತ್ತದೆ ಎಂದು ಮಹಾರಾಷ್ಟ್ರ ಮಾಡುತ್ತಿರುವ ತಕರಾರನ್ನು ನ್ಯಾಯಮಂಡಳಿ, ಸುಪ್ರೀಂಕೋರ್ಟ್ ಮತ್ತು ಲೋಕಸಭೆಯು ತಿರಸ್ಕರಿಸಿದೆ. ಆದರೆ ಮಹಾರಾಷ್ಟ್ರವು ಈಗಲೂ ಅದೇ ವಾದ ಮಾಡುತ್ತಿದೆ’ ಎಂದರು.

‘ಅಣೆಕಟ್ಟೆಯ ಎತ್ತರವನ್ನು 524.256 ಮೀಟರ್‌ಗಳಿಗೆ ಹೆಚ್ಚಿಸಬಹುದು ಎಂದು ಸುಪ್ರೀಂ ಕೋರ್ಟ್ 2000ನೇ ಇಸವಿಯಲ್ಲೇ ಹೇಳಿದೆ. ಅದರ ವಿರುದ್ಧ ಮಹಾರಾಷ್ಟ್ರ ನ್ಯಾಯಮಂಡಳಿಗೆ ತಕರಾರು ಸಲ್ಲಿಸಿತು. ಆದರೆ, ಅಲ್ಲಿಯೂ ಅದರ ತಕರಾರು ತಿರಸ್ಕೃತವಾಯಿತು. ಎತ್ತರ ಹೆಚ್ಚಿಸುವುದರಿಂದ ಸಾಂಗ್ಲಿ ಮತ್ತು ಕೊಲ್ಹಾಪುರದಲ್ಲಿ ಪ್ರವಾಹ ಉಂಟಾಗುವುದಿಲ್ಲ ಎಂದು ನ್ಯಾಯಮಂಡಳಿಯು 2010 ಮತ್ತು 2013ರಲ್ಲಿ ವಿಸ್ತೃತ ವರದಿ ನೀಡಿದೆ’ ಎಂದರು.

‘ಸಾಂಗ್ಲಿಯಲ್ಲಿ ಜಲಾನಯನ ಪ್ರದೇಶಗಳ ಒತ್ತುವರಿಯಿಂದ ಪ್ರವಾಹ ತಲೆದೋರುತ್ತಿದೆ ಎಂಬುದನ್ನು ಸಾಬೀತುಪಡಿಸುವ ವರದಿ ನನ್ನ ಬಳಿ ಇದೆ. ಅದನ್ನು, ಡಿ.ಕೆ.ಶಿವಕುಮಾರ್ ಅವರಿಗೆ ತಲುಪಿಸುತ್ತೇನೆ. ಮಹಾರಾಷ್ಟ್ರದ ತಕರಾರಿಗೆ ತಕ್ಕ ಉತ್ತರ ಕೊಡುತ್ತೇವೆ. ಅಲ್ಲಿನ ಸರ್ಕಾರ ಒತ್ತುವರಿ ಸಮಸ್ಯೆಯನ್ನು ಬಗೆಹರಿಸುವ ಕಡೆಗೆ ಗಮನ ಕೊಡಬೇಕು. ಅದನ್ನು ಬಿಟ್ಟು ನಮಗೆ ಅಡ್ಡಗಾಲು ಹಾಕಬಾರದು’ ಎಂದು ಆಗ್ರಹಿಸಿದರು.



ನಾವು ಅಣೆಕಟ್ಟೆಯ ಎತ್ತರ ಹೆಚ್ಚಿಸಲು ಮುಂದಾಗಿರುವುದನ್ನು ಮರುಪರಿಶೀಲಿಸಲು ಮಹಾರಾಷ್ಟ್ರವು ಆಗ್ರಹಿಸಿರುವುದು ರಾಜಕೀಯ ದುರುದ್ದೇಶವಲ್ಲದೆ ಮತ್ತೇನಲ್ಲ
ಎಂ.ಬಿ.ಪಾಟೀಲ, ಕೈಗಾರಿಕಾ ಸಚಿವ

ದೆಹಲಿಯಲ್ಲಿ ‘ಕೈ’ ಹೋರಾಟ

ತೆರಿಗೆ ಪಾಲಿನಲ್ಲಿ ರಾಜ್ಯಕ್ಕೆ ಭಾರಿ ಅನ್ಯಾಯ– ಆಕ್ರೋಶ

ಪ್ರಜಾವಾಣಿ ವಾರ್ತೆ

ನವದೆಹಲಿ: ತೆರಿಗೆ ಪಾಲು ಹಂಚಿಕೆ ಮತ್ತು ಅನುದಾನ ನೀಡಿಕೆಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಭಾರಿ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿ ಕೆಪಿಸಿಸಿ ಕಾನೂನು ಘಟಕದ ವತಿಯಿಂದ ಜಂತರ್ ಮಂತರ್‌ನಲ್ಲಿ ಶುಕ್ರವಾರ ದೆಹಲಿ ಚಲೋ ನಡೆಸಲಾಯಿತು.

'ನಾವು ಕೇಂದ್ರಕ್ಕೆ ಕಟ್ಟುವ ತೆರಿಗೆ ವಾರ್ಷಿಕ 4.5 ಲಕ್ಷ ಕೋಟಿ. ಇದರಲ್ಲಿ ನಮಗೆ ವಾಪಸ್ ಸಿಗುವುದು ಕೇವಲ 65 ಸಾವಿರ ಕೋಟಿ. ನಾವು ಕಟ್ಟುವ ₹1 ತೆರಿಗೆಯಲ್ಲಿ ನಮಗೆ ಕೇವಲ 15 ಪೈಸೆ ವಾಪಸ್ ಬರುತ್ತಿದೆ. ವಿಶೇಷ ಅನುದಾನಗಳಿಗೂ ಕತ್ತರಿ ಹಾಕಲಾಗುತ್ತಿದೆ' ಎಂದು ಪ್ರತಿಭಟನಕಾರರು ಆರೋಪಿಸಿದರು.

'ಕೇಂದ್ರ ಸರ್ಕಾರದ ಅನ್ಯಾಯದಿಂದ 2017-18 ರಿಂದ ಈವರೆಗೂ ರಾಜ್ಯಕ್ಕೆ ಸುಮಾರು ₹2 ಲಕ್ಷ ಕೋಟಿ ನಷ್ಟವಾಗಿದೆ. ಕಳೆದ 5 ವರ್ಷಗಳಲ್ಲಿ ₹80 ಸಾವಿರ ಕೋಟಿ ಅನುದಾನ ಕಡಿಮೆಯಾಗಿದೆ' ಎಂದು ದೂರಿದರು.

‘ದೇಶದ ಒಟ್ಟಾರೆ ಜನಸಂಖ್ಯೆಯಲ್ಲಿ ಕರ್ನಾಟಕ ಶೇ 5 ರಷ್ಟು ಪಾಲು ಹೊಂದಿದೆ. ಆದರೆ, ನಾವು ದೇಶದ ಜಿಡಿಪಿಗೆ ಶೇ 8.7 ಕೊಡುಗೆ ನೀಡುತ್ತೇವೆ. ದೇಶದಲ್ಲೇ ಅತೀ ಹೆಚ್ಚು ಜಿಎಸ್‌ಟಿ ಕರ್ನಾಟಕದಿಂದ ಸಂಗ್ರಹವಾಗುತ್ತಿದೆ. ಆದರೆ, ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ನಿರಂತರ ಅನ್ಯಾಯ ಮಾಡುತ್ತಾ ನಮ್ಮನ್ನು ಶೋಷಣೆ ಮಾಡುತ್ತಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ವರ್ಷ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಇಡೀ ಸರ್ಕಾರವೇ ನವದೆಹಲಿಯಲ್ಲಿ ಪ್ರತಿಭಟನೆ ನಡೆಸಿತ್ತು. ಮುಖ್ಯಮಂತ್ರಿಯವರು ಈ ಬಗ್ಗೆ ನಿರಂತರವಾಗಿ ಧ್ವನಿ ಎತ್ತುತ್ತಲೇ ಬಂದಿದ್ದಾರೆ. ಅನೇಕ ಪತ್ರಗಳನ್ನು ಪ್ರಧಾನಿ ಮತ್ತು ಹಣಕಾಸು ಸಚಿವರಿಗೆ ಬರೆದು ನ್ಯಾಯ ಕೊಡುವಂತೆ ಮನವಿ ಮಾಡಿದ್ದಾರೆ ಅದರೆ, ಕೇಂದ್ರ ಸರ್ಕಾರ ತಾರತಮ್ಯ ಮುಂದುವರಿಸುವ ಮೂಲಕ ಕರ್ನಾಟಕದ ಅಭಿವೃದ್ಧಿ ತಡೆಯುವ ಪ್ರಯತ್ನ ಮಾಡುತ್ತಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಕೆಪಿಸಿಸಿ ಕಾನೂನು, ಮಾನವ ಹಕ್ಕುಗಳು ಹಾಗೂ ಮಾಹಿತಿ ಹಕ್ಕು ಘಟಕದ ಅಧ್ಯಕ್ಷ ಸಿ.ಎಂ. ಧನಂಜಯ, ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ, ಎಐಸಿಸಿ ಯುವ ಘಟಕದ ಮಾಜಿ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್, ಘಟಕದ ಉಪಾಧ್ಯಕ್ಷರಾದ ಮುನಿಯಪ್ಪ, ಶ್ರೀನಿವಾಸ್ ಮೂರ್ತಿ, ಪ್ರವೀಣ್ ಗೌಡ, ಗಿರೀಶ್ ಪಟೇಲ್, ಕಿರಣ್ ಪಾಲ್ಗೊಂಡಿದ್ದರು.



ದೆಹಲಿಯ ಜಂತರ್ ಮಂತರ್‌ನಲ್ಲಿ ಶುಕ್ರವಾರ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ಟ್ಯಾಂಕ್‌ನಲ್ಲಿ ಕೀಟನಾಶಕದ ಶಂಕೆ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಜಿಲ್ಲೆಯ ಹೊಸನಗರ ತಾಲ್ಲೂಕಿನ ಮಾರುತಿಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೂವಿನಕೋಣೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕುಡಿಯುವ ನೀರಿನ ಟ್ಯಾಂಕ್‌ನಲ್ಲಿ ಕೀಟನಾಶಕ ಅಂಶ ಬೆರೆಸಿರುವ ಶಂಕೆ ಹಿನ್ನೆಲೆಯಲ್ಲಿ ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಶಾಲೆಯ ಮುಖ್ಯಶಿಕ್ಷಕ ರವಿಕುಮಾರ್ ನೀಡಿದ ದೂರನ್ನು ಆಧರಿಸಿ ಕೊಲೆ ಯತ್ನ ಪ್ರಕರಣ ದಾಖಲಿಸಿಕೊಂಡಿರುವ ಹೊಸನಗರ ಠಾಣೆ ಪೊಲೀಸರು, ಶುಕ್ರವಾರ ಶಾಲೆಗೆ ತೆರಳಿ ಶಿಕ್ಷಕರು, ವಿದ್ಯಾರ್ಥಿಗಳು, ಎಸ್‌ಡಿಎಂಸಿ ಸದಸ್ಯರು ಹಾಗೂ ಗ್ರಾಮಸ್ಥರಿಂದ ಮಾಹಿತಿ ಪಡೆದರು.

ಪ್ರಯೋಗಾಲಯಕ್ಕೆ ನೀರಿನ ಮಾದರಿ: ‘ಶಾಲೆಯಲ್ಲಿ ಎರಡು ನೀರಿನ ಟ್ಯಾಂಕ್ ಇವೆ. ಅದರಲ್ಲಿ ಅಡುಗೆ ಮನೆಗೆ ನೇರ ಸಂಪರ್ಕ ಇರುವ ಟ್ಯಾಂಕ್‌ನಲ್ಲಿನ ನೀರಿನಲ್ಲಿ ಗುರುವಾರ ಕೀಟನಾಶಕದ ವಾಸನೆ ಬಂದಿತ್ತು. ಆರೋಗ್ಯ ಇಲಾಖೆ ನೀರಿನ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಪ್ರಯೋಗಾಲಯಕ್ಕೆ ಕಳುಹಿಸಿದೆ’ ಎಂದು ಡಿಡಿಪಿಐ ಎಸ್.ಆರ್.ಮಂಜುನಾಥ್ ತಿಳಿಸಿದರು.

‘ಮತ್ತೊಂದು ಟ್ಯಾಂಕ್ ಶಾಲೆಯ ಕೈತೋಟಕ್ಕೆ ಸಂಪರ್ಕ ಹೊಂದಿದೆ. ನೀರು ಕುಡಿದಿದ್ದ 18 ವಿದ್ಯಾರ್ಥಿಗಳನ್ನು ಹೊಸನಗರದ ತಾಲ್ಲೂಕು ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದು, ಸಂಜೆಯವರೆಗೂ ಎಲ್ಲರನ್ನೂ ನಿಗಾದಲ್ಲಿ ಇಡಲಾಗಿತ್ತು. ಎಲ್ಲರೂ ಆರೋಗ್ಯವಾಗಿದ್ದಾರೆ’ ಎಂದು ವೈದ್ಯರು ತಿಳಿಸಿದ್ದಾಗಿ ಅವರು ಮಾಹಿತಿ ನೀಡಿದರು.

ಘಟನೆ ಹಿನ್ನೆಲೆಯಲ್ಲಿ ಶಾಲೆಗೆ ಎರಡು ದಿನ ರಜೆ ಕೊಡಲಾಗಿದೆ.

ಮೇಲ್ಟೋಟಕ್ಕೆ ವಿಷ ಬೆರೆಸಿರುವುದು ಕಂಡುಬಂದಿದ್ದು, ಗಂಭೀರವಾಗಿ ಪರಿಗಣಿಸಿದ್ದೇವೆ. ಜಿಲ್ಲೆಯ ಎಲ್ಲ ಶಾಲೆಗಳಿಗೂ ಕುಡಿಯುವ ನೀರಿನ ಸುರಕ್ಷತೆಗೆ ಅನುಸರಿಸಬೇಕಾದ ಕ್ರಮಗಳ ಕುರಿತ (ಎಸ್‌ಒಪಿ) ಸುತ್ತೋಲೆ ಕಳಿಸಿದ್ದೇನೆ
ಎನ್.ಹೇಮಂತ್, ಶಿವಮೊಗ್ಗ ಜಿ.ಪಂ ಸಿಇಒ

‘ಕೀಟನಾಶಕ ಬೆರೆಸಿದವರಿಗೆ ಕಠಿಣ ಶಿಕ್ಷೆ’

ಬೆಂಗಳೂರು: ‘ಹೂವಿನಕೋಣೆಯ ಸರ್ಕಾರಿ ಪ್ರಾಥಮಿಕ ಶಾಲೆಯ ಕುಡಿಯುವ ನೀರಿನ ಟ್ಯಾಂಕಿಗೆ ಕಿಡಿಗೇಡಿಗಳು ಕೀಟನಾಶಕ ಬೆರೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸೂಕ್ತ ತನಿಖೆ ನಡೆಸಿ, ಕೃತ್ಯ ಎಸಗಿರುವ ದುರುಳರನ್ನು ಪತ್ತೆ ಹಚ್ಚಿ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಲು ಪೊಲೀಸರಿಗೆ ಸೂಚಿಸಿದ್ದೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ‘ಹತ್ತಾರು ಎಳೆಯ ಮಕ್ಕಳ ಮಾರಣ ಹೋಮ ನಡೆಸುವ ದುರುದ್ದೇಶ ಹೊಂದಿದ್ದ ಇದು ಯಾವ ಭಯೋತ್ಪಾದಕ ಕೃತ್ಯಗಳಿಗೂ ಕಡಿಮೆ ಇಲ್ಲ ಎನ್ನುವುದು ನನ್ನ ಭಾವನೆ’ ಎಂದಿದ್ದಾರೆ.

‘ಅಡುಗೆ ಸಿಬ್ಬಂದಿಯ ಸಮಯ ಪ್ರಜ್ಞೆಯಿಂದಾಗಿ ಘಟಿಸಬಹುದಾಗಿದ್ದ ಬಹುದೊಡ್ಡ ದುರಂತವೊಂದು ತಪ್ಪಿದೆ. ಇದಕ್ಕಾಗಿ ಶಾಲೆಯ ಅಡುಗೆ ಸಿಬ್ಬಂದಿಯನ್ನು ಅಭಿನಂದಿಸುತ್ತೇನೆ. ಕುಡಿಯುವ ನೀರಿಗೆ ವಿಷ ಬೆರೆಸುವ ಮನಸ್ಥಿತಿ ನಮ್ಮ ನಡುವೆ ಮಾನವೀಯತೆಯ ಅಧಃಪತನವನ್ನು ತೋರಿಸುತ್ತದೆ. ಈ ಬಗ್ಗೆ ಎಲ್ಲರೂ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಿದೆ’ ಎಂದು ಹೇಳಿದ್ದಾರೆ.

ರಸಗೊಬ್ಬರ: ಕೇಂದ್ರದ ಮೇಲೆ ಒತ್ತಡ ಹೇರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉತ್ತಮ ಮುಂಗಾರಿನಿಂದಾಗಿ ರಾಜ್ಯದಲ್ಲಿ ಈ ವರ್ಷ ಹೆಚ್ಚಿನ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿದೆ. ರೈತರ ಹಿತದೃಷ್ಟಿಯಿಂದ ಕೊರತೆ ಇರುವ 1.36 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರವನ್ನು ಪೂರೈಸುವಂತೆ ರಾಜ್ಯವನ್ನು ಪ್ರತಿನಿಧಿಸುವ ಸಂಸದರು ಕೇಂದ್ರದ ಮೇಲೆ ಒತ್ತಡ ಹೇರಬೇಕು’ ಎಂದು ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಆಗ್ರಹಿಸಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	121.95	15,118	10,393
ಹಾರಂಗಿ	2,859	2,855.46	4,817	3,500
ಕಬಿನಿ	2,284.00	2,281.51	8,963	8,500
ಹೇಮಾವತಿ	2,922	2,921.20	9,267	7,000
ಲಿಂಗನಮಕ್ಕಿ	1,819	1,811.40	14,694	7,541
ಸೂಪಾ (ಮೀ)	564	551.29	10,011.40	526.94
ಮಾಣಿ	595	590.51	1,890	715
ತುಂಗಭದ್ರಾ	1,633	1,625.13	46,883	35,312
ಮಲಪ್ರಭಾ	2,079.5	2,075.00	4,444	4,444
ಘಟಪ್ರಭಾ	2175	2,170.50	8,821	5,740
ಭದ್ರಾ *	186	180.3	9,345	9,345
ಆಲಮಟ್ಟಿ (ಮೀ)	519.6	518.10	1,49,090	1,20,000
ನಾರಾಯಣಪುರ (ಮೀ)	492.25	491.55	1,20,000	1,24,200

* ನೆಲಮಟ್ಟದಿಂದ

ಐದು ಸಾವಿರಕ್ಕೂ ಅಧಿಕ ಪುಟಗಳ ದಾಖಲೆ ಜಪ್ತಿ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತದಲ್ಲಿ (ಕೆಆರ್‌ಐಡಿಎಲ್) ನಡೆದಿದೆ ಎನ್ನಲಾದ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಶುಕ್ರವಾರವೂ ಲೋಕಾಯುಕ್ತ ಅಧಿಕಾರಿಗಳು ದಾಖಲೆಗಳನ್ನು ಶೋಧ ಮಾಡಿದರು.

ಸಂಸ್ಥೆಯಲ್ಲಿ ಹೊರಗುತ್ತಿಗೆಯಡಿ ಕಚೇರಿ ಸಹಾಯಕರಾಗಿ ಕೆಲಸ ಮಾಡಿದ್ದ ಕಳಕಪ್ಪ ನಿಡಗುಂದಿ ಅವರಿಗೆ ಸಂಬಂಧಿಸಿದ ಅಪಾರ ಆಸ್ತಿಯ ಪತ್ರಗಳನ್ನು ಗುರುವಾರ ವಶಕ್ಕೆ ಪಡೆದಿದ್ದರು. ಬೊಕ್ಕಸಕ್ಕೆ ₹72 ಕೋಟಿ ಸರ್ಕಾರಕ್ಕೆ ನಷ್ಟ ಉಂಟು ಮಾಡಲಾಗಿದೆ ಎನ್ನುವ ದೂರಿಗೆ ಸಂಬಂಧಿಸಿ ಎರಡನೇ ದಿನ ದಾಖಲೆಗಳನ್ನು ಶೋಧಿಸಿ 108 ಕಾಮಗಾರಿಗಳ ಅಂದಾಜು ಐದು ಸಾವಿರಕ್ಕೂ ಹೆಚ್ಚು ಪುಟಗಳ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ.

‘ಕೆಲ ದಾಖಲೆಗಳನ್ನು ಬೆಂಗಳೂರಿಗೆ ಕಳುಹಿಸಲಾಗಿದೆ. ಪರಿಶೀಲನೆ ಪೂರ್ಣಗೊಂಡ ಬಳಿಕವಷ್ಟೇ ಆಸ್ತಿಯ ಒಟ್ಟು ಮೌಲ್ಯ ತಿಳಿಯಲಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

8 ಪ್ರಜಾವಾಣಿ ಶನಿವಾರ • ಆಗಸ್ಟ್ 2, 2025

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**



ಸುಭಾಷಿತ

ಮನಸ್ಸು ಶುದ್ಧಿಯಿಲ್ಲದ ಮೇಲೆ ಮಂತ್ರದ ಫಲವೇನು?

-ಪುರಂದರದಾಸರು

ಸಂಪಾದಕೀಯ

‘ಆಪರೇಷನ್ ಸಿಂಧೂರ’ ಫಲಶ್ರುತಿ ದಿಕ್ಕುತಪ್ಪಿದ ಚರ್ಚೆ, ಅಸ್ಪಷ್ಟ ಉತ್ತರ

‘ಆಪರೇಷನ್ ಸಿಂಧೂರ’ ಮತ್ತು ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಕುರಿತು ಸಂಸತ್ತಿನಲ್ಲಿ ನಡೆದ ಚರ್ಚೆಯು ರಾಜಕೀಯ ಜಿದ್ದಾಜಿದ್ದಿಯ ಮಾತುಗಳಿಗೆ ಸೀಮಿತಗೊಂಡಿತೇ ಹೊರತು, ಚರ್ಚೆಯ ವಿಷಯದ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲುವಲ್ಲಿ ವಿಫಲವಾಗಿದೆ. ಪಾಕಿಸ್ತಾನದೊಂದಿಗೆ ಸಂಘರ್ಷ ಜಾರಿಯಲ್ಲಿದ್ದ ಸಂದರ್ಭದಲ್ಲಿ, ಭಾರತದ ಸೇನಾಪಡೆಯ ಮುಖ್ಯಸ್ಥರು ಮತ್ತು ಅಧಿಕಾರಿಗಳು ಕಾರ್ಯಾಚರಣೆಯ ಕೆಲವು ವಿವರಗಳನ್ನು ದೇಶಕ್ಕೆ ತಿಳಿಸಿದ್ದರು. ಆ ಸೀಮಿತ ಮಾಹಿತಿಯ ಹೊರತಾಗಿ, ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆಯ ಗುರಿ ಮತ್ತು ಆ ಕಾರ್ಯಾಚರಣೆಯಲ್ಲಿ ದೇಶ ಗಳಿಸಿದ್ದು ಹಾಗೂ ಕಳೆದುಕೊಂಡಿದ್ದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡುವುದು ಸರ್ಕಾರದ ಹೊಣೆಗಾರಿಕೆಯಾಗಿತ್ತು. ಮಹತ್ವದ ಕಾರ್ಯಾಚರಣೆಯ ಬಗ್ಗೆ ದೇಶಕ್ಕೆ ತಿಳಿಸಲು ಸಂಸತ್ತು ಸರಿಯಾದ ವೇದಿಕೆಯೂ ಆಗಿತ್ತು ಹಾಗೂ ಆ ಚರ್ಚೆಯ ನೇತೃತ್ವವನ್ನು ಸರ್ಕಾರವೇ ವಹಿಸಿಕೊಳ್ಳಬೇಕಾಗಿತ್ತು. ಆದರೆ, ವಿರೋಧ ಪಕ್ಷದ ಒತ್ತಾಯದ ಮೇರೆಗೆ ಕೊನೆಗೂ ಚರ್ಚೆ ನಡೆದರೂ, ಅದು ವಿಷಯದ ಬಗ್ಗೆ ಬೆಳಕು ಚೆಲ್ಲುವ ಬದಲು ರಾಜಕೀಯ ಕೆಸರೆರಚಾಟದಲ್ಲಿ ಕೊನೆಗೊಂಡಿತು.

ಪಹಲ್ಗಾಮ್‌ನಲ್ಲಿನ ಭದ್ರತಾ ವೈಫಲ್ಯ, ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆಯ ಸ್ವರೂಪ, ಇದ್ದಕ್ಕಿದ್ದಂತೆ ಘೋಷಣೆಯಾದ ಕದನ ವಿರಾಮ ಮತ್ತು ಸಂಘರ್ಷದಲ್ಲಿ ಸೇನೆಯ ಸಾಧನೆ ಹಾಗೂ ಸೇನೆಗಾದ ನಷ್ಟದ ಬಗ್ಗೆ ವಿರೋಧ ಪಕ್ಷಗಳು ಪ್ರಶ್ನೆ ಎತ್ತಿದ್ದವು. ಈ ಪ್ರಶ್ನೆಗಳಿಗೆ ನೇರ ಉತ್ತರ ಕೊಡುವ ಪ್ರಯತ್ನವನ್ನೇ ಸರ್ಕಾರ ಮಾಡಲಿಲ್ಲ. ವಿರೋಧ ಪಕ್ಷಗಳು ತಪ್ಪು ಪ್ರಶ್ನೆಗಳನ್ನು ಕೇಳುತ್ತಿದ್ದಾರೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು. ಭಾರತದ ಐದು ರಫೇಲ್ ಯುದ್ಧ ವಿಮಾನಗಳನ್ನು ಹೊಡೆದುರುಳಿಸಲಾಗಿದೆ ಎಂದು ಪಾಕಿಸ್ತಾನ ಹೇಳಿರುವುದರ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ವಿರೋಧ ಪಕ್ಷ ಕೇಳಿದ ಪ್ರಶ್ನೆಗೆ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿದಂತೆ ಆಡಳಿತ ಪಕ್ಷದ ಯಾರೊಬ್ಬರೂ ಸ್ಪಷ್ಟ ಉತ್ತರ ನೀಡಲಿಲ್ಲ; ವಿಮಾನ ಕಳೆದುಕೊಂಡಿದ್ದನ್ನು ಒಪ್ಪಿಕೊಳ್ಳಲೂ ಇಲ್ಲ, ನಿರಾಕರಿಸಲೂ ಇಲ್ಲ. ಕದನ ವಿರಾಮ ಘೋಷಣೆಯಾದುದು ತಮ್ಮಿಂದಲೇ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪದೇ ಪದೇ ಹೇಳಿಕೊಳ್ಳುತ್ತಿರುವುದಕ್ಕೆ ಸಂಬಂಧಿಸಿದ ಪ್ರಶ್ನೆಗೆ ದೊರೆತ ಉತ್ತರಗಳಲ್ಲೂ ಸ್ಪಷ್ಟತೆಯಿರಲಿಲ್ಲ. ಕಾರ್ಯಾಚರಣೆ ನಿಲ್ಲಿಸುವಂತೆ ಯಾವ ವಿದೇಶೀ ನಾಯಕರೂ ಭಾರತವನ್ನು ಕೇಳಲಿಲ್ಲ ಎನ್ನುವ ಪ್ರಧಾನಿ ಹೇಳಿಕೆ, ಕದನ ವಿರಾಮಕ್ಕೆ ಸಮರ್ಪಕ ಕಾರಣ ಆಗಿರಲಿಲ್ಲ. ಪಹಲ್ಗಾಮ್‌ನಲ್ಲಿನ ಭದ್ರತಾ ಲೋಪಕ್ಕೆ ಯಾರನ್ನೂ ಹೊಣೆಗಾರರನ್ನಾಗಿ ಏಕೆ ಮಾಡಿಲ್ಲ ಎನ್ನುವ ಪ್ರಶ್ನೆಗೂ ಸಮಾಧಾನಕರ ಉತ್ತರ ನೀಡುವಲ್ಲಿ ಸರ್ಕಾರ ವಿಫಲವಾಗಿದೆ.



ರಾಷ್ಟ್ರದ ಸುರಕ್ಷತೆಗೆ ಸಂಬಂಧಿಸಿದ ಚರ್ಚೆಯನ್ನು ಜವಾಬ್ದಾರಿಯಿಂದ ನಿಭಾಯಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ಮಹತ್ವದ ಚರ್ಚೆ ರಾಜಕೀಯ ತಿಕ್ಕಾಟದಲ್ಲಿ ಕೊನೆಗೊಂಡುದು ದುರದೃಷ್ಟಕರ.

‘ಆಪರೇಷನ್ ಸಿಂಧೂರ’ ಚರ್ಚೆಯ ಕೇಂದ್ರವಾಗಿದ್ದರೂ, ಕಾಂಗ್ರೆಸ್ ಸರ್ಕಾರಗಳ ಅವಧಿಯಲ್ಲಿನ ನೀತಿಗಳಲ್ಲಿ ದೋಷಗಳಿದ್ದವು ಎಂದು ಎತ್ತಿ ಆಡುವುದರಲ್ಲಿ ಸರ್ಕಾರ ಉತ್ಸಾಹ ವ್ಯಕ್ತಪಡಿಸಿತು. ಕಾಂಗ್ರೆಸ್ ಪಕ್ಷದ ತಪ್ಪುಗಳನ್ನು ನೆನಪಿಸುವುದರ ಜೊತೆಗೆ, ದೇಶದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಅವರನ್ನು ಟೀಕಿಸಲಾಯಿತು. ಭಾರತ ಮತ್ತು ಪಾಕಿಸ್ತಾನದ ವಿಭಜನೆ ಹಾಗೂ 1971ರ ಯುದ್ಧದ ಸಂದರ್ಭದಲ್ಲಿ ಅಂದಿನ ಕಾಂಗ್ರೆಸ್ ಸರ್ಕಾರದ ಹೊಣೆಗಾರಿಕೆಯನ್ನು ಟೀಕಿಸಿ, ಕಾಂಗ್ರೆಸ್ ಅನ್ನು ಪಾಕಿಸ್ತಾನದ ಬೆಂಬಲಿಗ ಎಂದು ಸರ್ಕಾರ ಕರೆಯಿತು. ರಾಷ್ಟ್ರದ ಸುರಕ್ಷತೆಗೆ ಸಂಬಂಧಿಸಿದಂತೆ ನಡೆಯಬೇಕಾಗಿದ್ದ ಗಂಭೀರ ಚರ್ಚೆ, ರಾಜಕೀಯ ಆರೋಪಗಳ ಆಡುಂಬೊಲವಾದುದು ದುರದೃಷ್ಟಕರ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ವಿದೇಶಾಂಗ ನೀತಿ ಹಾಗೂ ವಿದೇಶಗಳೊಂದಿಗಿನ ಸಂಬಂಧಗಳು ಹಾಗೂ ಸಂಘರ್ಷದ ಸಂದರ್ಭಗಳಲ್ಲಿ ಪಕ್ಷ ರಾಜಕೀಯವನ್ನು ಮೀರಿದ ರಾಜಕೀಯ ಒಮ್ಮತವನ್ನು ದೇಶ ಕಂಡಿದೆ. ಆದರೆ, ಆ ಒಮ್ಮತ ಈಗ ಕಾಣಿಸುತ್ತಿಲ್ಲ. ಈ ಒಡಕಿನಲ್ಲಿ ಎಲ್ಲ ರಾಜಕೀಯ ಪಕ್ಷಗಳ ಪಾತ್ರವೂ ಇರಬಹುದಾದರೂ, ದೇಶದ ಸುರಕ್ಷತೆಗೆ ಸಂಬಂಧಿಸಿದ ಮಹತ್ವಪೂರ್ಣ ಚರ್ಚೆಯನ್ನು ರೂಪಿಸುವಲ್ಲಿ ಕೇಂದ್ರ ಸರ್ಕಾರ ತನ್ನ ಹೊಣೆಗಾರಿಕೆಯನ್ನು ಪ್ರದರ್ಶಿಸುವಲ್ಲಿ ವಿಫಲವಾಗಿದೆ ಎಂದೇ ಹೇಳಬೇಕಾಗಿದೆ.

ಚಾಟಿ

ಬಿತ್ತಿದಂತೆ ಬೆಳೆ



ಬಿತ್ತಿ ಬೆಳೆಯುತ್ತಿರುವುದು ಹಿಂಸೆ- ಅಶ್ಲೀಲತೆ ಸಿನಿಮಾಗಳ ಕಳೆ. ಜೊತೆಗೆ, ಹೊಡಿ ಬಡಿ ಪ್ರೇಕ್ಷಕರು! ಈ ಬೆಳೆಯಿಂದ ಇನ್ನ್ಯಾವ ಒಳ್ಳೆಯ ಸಂಸ್ಕೃತಿ ನಿರೀಕ್ಷಿಸಬಹುದು?

ಪ್ರೇಮನಾಥ್ ಎ.ಎಸ್., ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಕೆಎಂಎಫ್, ಫೇಸ್‌ಬುಕ್‌ನಿಂದ

ಕಿಡಿನುಡಿ



ರಾಜ್ಯ ಸರ್ಕಾರ ಆಗಸ್ಟ್ 15ರೊಳಗೆ ಒಳಮೀಸಲಾತಿ ಘೋಷಿಸದಿದ್ದರೆ, ಜಿಲ್ಲಾ ಕೇಂದ್ರಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣಕ್ಕೆ ಬರುವ ಸಚಿವರಿಗೆ ಕಪ್ಪುಬಟ್ಟೆ ಪ್ರದರ್ಶಿಸಿ, ಘೇರಾವ್ ಹಾಕುತ್ತೇವೆ. ತಾಲ್ಲೂಕು, ಗ್ರಾಮಗಳಲ್ಲಿನ ಪರಿಶಿಷ್ಟ ಸಮುದಾಯದವರ ಮನೆಗಳ ಮೇಲೆ ರಾಷ್ಟ್ರಧ್ವಜದ ಬದಲು ಕಪ್ಪು ಬಾವುಟ ಹಾರಿಸುತ್ತೇವೆ.

ಹನುಮಂತಪ್ಪ ಆಲ್ಕೋಡ, ಅಧ್ಯಕ್ಷ ರಾಜ್ಯ ಆದಿ ಜಾಂಬವ ಮಾದಿಗರ ಸಂಘ

25 ವರ್ಷಗಳ ಹಿಂದೆ

ಬುಧವಾರ, 2-8-2000

• ವೀರಪ್ಪನ್ ಬಳಿ ಸಂಧಾನಕ್ಕೆ ತೆರಳಿದ ಗೋಪಾಲ್

ಚೆನ್ನೈ, ಆಗಸ್ಟ್ 1 (ಯುಎನ್‌ಐ, ಪಿಟಿಐ)– ಕನ್ನಡದ ವರನಟ ಡಾ. ರಾಜ್‌ಕುಮಾರ್ ಅವರ ಬಿಡುಗಡೆಗೆ ವೀರಪ್ಪನ್ ಜತೆ ಸಂಧಾನ ನಡೆಸಲು ‘ನಕ್ಕೀರನ್’ ಸಂಪಾದಕ ಗೋಪಾಲ್ ಇಂದು ಸಂಜೆ ಕಾಡಿಗೆ ತೆರಳಿದರು.

ಗೋಪಾಲ್ ಅವರು, ತಮ್ಮನ್ನು ಭೇಟಿ ಮಾಡಿದ ನಂತರ ಕಾಡಿಗೆ ತೆರಳಿದರು ಎಂದು ಹೆಚ್ಚುವರಿ ಡಿಜಿಪಿ ಎ.ಎಕ್ಸ್. ಅಲೆಕ್ಸಾಂಡರ್ ಅವರು ತಿಳಿಸಿದ್ದಾರೆ. ಗೋಪಾಲ್ ಅವರು, ಸಂಧಾನಕ್ಕೆ ಕಾಡಿಗೆ ತೆರಳುವುದನ್ನು ಅವರು ಕರ್ನಾಟಕ ಸರ್ಕಾರಕ್ಕೂ ತಿಳಿಸಿದ್ದಾರೆ. ನಾಳೆಯೇ ಗೋಪಾಲ್ ಅವರು, ವೀರಪ್ಪನ್ ಭೇಟಿ ಮಾಡಲಿದ್ದಾರೆ.

• ಕಾಶ್ಮೀರ: 24 ಮಂದಿ ಸಾಮೂಹಿಕ ಹತ್ಯೆ

ಶ್ರೀನಗರ, ಆಗಸ್ಟ್ 1 (ಯುಎನ್‌ಐ)– ಹಿಜಬುಲ್ ಮುಜಾಹಿದ್ದೀನ್ ಉಗ್ರಗಾಮಿ ಸಂಘಟನೆ ‘ಕದನ ವಿರಾಮ’ ಘೋಷಿಸಿದ ಬಳಿಕ ಕಾಶ್ಮೀರ ಕಣಿವೆಯಲ್ಲಿ ಇಂದು ನಡೆದ ಹಿಂಸೆಯಲ್ಲಿ 11 ಮಂದಿ ಅಮರನಾಥ ಯಾತ್ರಿಗಳು ಸೇರಿದಂತೆ 24 ಮಂದಿ ಸತ್ತಿದ್ದಾರೆ. ಪಹಲ್ಗಾಮ್‌ನ ಆರೂ ಸೇತುವೆ ಬಳಿ ಉಗ್ರಗಾಮಿಗಳ ಒಂದು ಗುಂಪು ಊಟ ಮಾಡುತ್ತಿದ್ದ ಯಾತ್ರಾರ್ಥಿಗಳ ಮೇಲೆ ಮನಸೇಚ್ಛೆ ಗುಂಡು ಹಾರಿಸಿದೆ.

75 ವರ್ಷಗಳ ಹಿಂದೆ

ಬುಧವಾರ, 2-8-1950

• ಅನ್ನ ಮಂತ್ರಿಗಳೊಡನೆ ಮುನ್ಷಿಯವರ ಚರ್ಚೆ

ನವದೆಹಲಿ, ಆಗಸ್ಟ್ 1– ಭಾರತ ಸರ್ಕಾರದ ಆಹಾರ ಸಚಿವ ಕೆ.ಎಂ. ಮುನ್ಷಿ ಅವರು ಆಗಸ್ಟ್ ಮೂರನೆಯ ವಾರದಲ್ಲಿ ದೆಹಲಿಯಲ್ಲಿ ಎಲ್ಲ ಸಂಸ್ಥಾನಗಳ ಆಹಾರ ಮಂತ್ರಿಗಳ ಹಾಗೂ ಮುಖ್ಯಮಂತ್ರಿಗಳ ಸಮಾವೇಶವೊಂದನ್ನು ಕರೆದಿದ್ದಾರೆ.

ಆಹಾರ ಪರಿಸ್ಥಿತಿಯನ್ನು ಮುಖ್ಯವಾಗಿ 1948ರ ಸೆಪ್ಟೆಂಬರ್‌ನಲ್ಲಿ ಹತೋಟಿಯನ್ನು ಮತ್ತೆ ಹಾಕಿದಾಗ ಆದ ಪ್ರತಿಕ್ರಿಯೆಗಳ ಬಗ್ಗೆ ಈ ಸಭೆಯಲ್ಲಿ ಪರಿಶೀಲಿಸಲಾಗುವುದು.

• ಪೂರ್ವ ಬಂಗಾಳ ಅಲ್ಪಸಂಖ್ಯಾತರಲ್ಲಿ ಭದ್ರತಾ ಭರವಸೆಯಿಲ್ಲ

ದೆಹಲಿ, ಆಗಸ್ಟ್ 1– ‘ಪಾಕಿಸ್ತಾನಕ್ಕೆ ಸೇರಿದ ಪೂರ್ವ ಬಂಗಾಳದ ಅಲ್ಪಸಂಖ್ಯಾತರ ಮನಸ್ಸಿನಲ್ಲಿ ಭದ್ರತೆಯ ಭರವಸೆಯು ಇಲ್ಲದಂತಾಗಿದೆಯೆಂದು ಹೇಳುತ್ತಿರುವುದು ನಿಜ’ ಎಂಬುದಾಗಿ ಇಂದು ಭಾರತ ಪಾರ್ಲಿಮೆಂಟ್‌ನಲ್ಲಿ ಮಹಾ ಪ್ರಧಾನಿ ಪಂಡಿತ್ ನೆಹರೂ ಅವರು, ಎಚ್.ವಿ. ಕಾಮತ್ ಅವರು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ತಿಳಿಸಿದರು.

ಅಹಿಂಸೆ ದೌರ್ಬಲ್ಯವಲ್ಲ, ಅನಿವಾರ್ಯ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

‘ಬ್ರಿಟಿಷರ ವಿರುದ್ಧ ಮಹಾತ್ಮ ಗಾಂಧಿಯವರ ಅಹಿಂಸಾತ್ಮಕ ಹೋರಾಟದ ಬದಲು ಸಶಸ್ತ್ರ ಕ್ರಾಂತಿ ನಡೆಸಿದ್ದರೆ ಬೇಗ ಸ್ವಾತಂತ್ರ್ಯ ಸಿಗುತ್ತಿತ್ತು. ಅಹಿಂಸಾತ್ಮಕ ಹೋರಾಟ ನಿಷ್ಪ್ರಯೋಜಕ’ ಎಂಬ ವಾದ ಸರಣಿ ಪ್ರಸ್ತುತ ದಿನಗಳಲ್ಲಿ ಬಹುವಾಗಿ ಚಲಾವಣೆಯಲ್ಲಿದೆ. ಇದನ್ನು ವ್ಯಂಗ್ಯವಾಗಿ, ‘ಚರಕದಿಂದ ಸ್ವಾತಂತ್ರ್ಯ ಬರುವುದಿಲ್ಲ; ನೂಲು ಬರುತ್ತದೆ ಅಷ್ಟೆ’ ಎಂದೂ ಹೇಳಲಾಗುತ್ತದೆ. ಈ ಎಲ್ಲ ವಾದಗಳ ಉದ್ದೇಶ, ಗಾಂಧೀಜಿಯವರ ತೇಜೋವಧೆ ಮಾಡುವುದರ ಹೊರತು ಬೇರೇನಲ್ಲ ಎನ್ನುವುದು ಯಾರಿಗಾದರೂ ಗೊತ್ತಾಗುವ ವಿಷಯ. ಆದರೂ, ಈ ಬಗ್ಗೆ ಒಂದು ಐತಿಹಾಸಿಕ ಪರಿಶೀಲನೆಯ ಅಗತ್ಯವಿದೆ.

ಹಿಂಸಾತ್ಮಕ ಹೋರಾಟದಿಂದ ಬ್ರಿಟಿಷರನ್ನು ಮಣಿಸಬಹುದಾಗಿದ್ದ ಸಾಧ್ಯತೆ ಎಷ್ಟು ಎಂದು ಗೊತ್ತಾಗಬೇಕಾದರೆ, ಬ್ರಿಟಿಷರ ಯುದ್ಧ ಇತಿಹಾಸವನ್ನು ನೋಡಬೇಕು.

ಕೈಗಾರಿಕಾ ಕ್ರಾಂತಿಯ ನಂತರ ಬ್ರಿಟನ್ ಯಾವ ರೀತಿ ಸೈನಿಕ ಸನ್ನದ್ಧತೆಯನ್ನು ಹೊಂದಿತ್ತು ಎಂದರೆ, ಬ್ರಿಟಿಷ್ ಸೈನ್ಯ ಭಾಗವಹಿಸಿದ್ದ ಯುದ್ಧಗಳಲ್ಲಿ ಅದು ಸೋತದ್ದೇ ಇಲ್ಲ. ಫ್ರಾನ್ಸ್ ಮತ್ತು ಬ್ರಿಟನ್ ನಡುವೆ ನಡೆದ ಸಪ್ತ ವಾರ್ಷಿಕ ಯುದ್ಧ (1754–1763)ದಲ್ಲಿ ಬ್ರಿಟಿಷರೇ ಗೆದ್ದರು. 1854–56ರಲ್ಲಿ ರಷ್ಯಾದೊಂದಿಗೆ ಬ್ರಿಟನ್, ಫ್ರಾನ್ಸ್, ಆಟೋಮನ್ ಸಾಮ್ರಾಜ್ಯ, ಸಾರ್ಡೀನಿಯ ಹಾಗೂ ಪೀಡ್‌ಮಾಂಟ್‌ಗಳು, ಡ್ಯೂಕ್ ಆಫ್ ವೆಲ್ಲಿಂಗ್ಟನ್ ನಾಯಕತ್ವದಲ್ಲಿ ನಡೆಸಿದ ಕ್ರಿಮಿಯಾ ಯುದ್ಧದಲ್ಲಿಯೂ ವೆಲ್ಲಿಂಗ್ಟನ್ ಸೇನೆಯೇ ಗೆದ್ದಿತು. 1899–1902ರ ಬಾಯೆರ್ ಕದನ, 1842ರಲ್ಲಿ ಚೀನಾದಲ್ಲಿ ನಡೆದ ಓಪಿಯಮ್ ಕದನದಲ್ಲೂ ಬ್ರಿಟಿಷರೇ ಗೆದ್ದರು. 1815ರ ವಾಟರ್ಲೂ ಕದನದಲ್ಲಿ ನೆಪೋಲಿಯನ್ ಬೋನೋಪಾರ್ಟೆಯನ್ನೂ ಬ್ರಿಟಿಷರು ಸೋಲಿಸಿದರು. 20ನೆಯ ಶತಮಾನದ ಎರಡು ಜಾಗತಿಕ ಯುದ್ಧಗಳಲ್ಲೂ ಬ್ರಿಟಿಷರು ಇದ್ದ ಕಡೆಯೇ ಅಂತಿಮ ಗೆಲುವು ಆಗಿತ್ತು. 1775–1783ರ ಅಮೆರಿಕ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷರು ಸೋತದ್ದು ಹೌದು; ಆದರೆ, ಅಲ್ಲಿ ಬ್ರಿಟಿಷರನ್ನು ಎದುರಿಸಿದ್ದು ಅಮೆರಿಕವನ್ನೇ ತಾಯ್ನಾಡಾಗಿ ಪರಿಗಣಿಸಿ ನೆಲಸಿದ ಬ್ರಿಟಿಷರೇ ಆಗಿದ್ದರೇ ಹೊರತು ಅಮೆರಿಕದ ಮೂಲ ನಿವಾಸಿಗಳಾದ ರೆಡ್ ಇಂಡಿಯನ್ಸ್ ಅಲ್ಲ.

ಯುದ್ಧಗಳ ತರುವಾಯ ಐರ್ಲೆಂಡನ್ನು ವಿಭಜಿಸುವುದನ್ನೆಲ್ಲ ಮಾಡಿ, ಡೊಮಿನಿಯನ್ ಸ್ಟೇಟಸ್ ಕೊಟ್ಟು, ಬ್ರಿಟಿಷರು ಐರ್ಲೆಂಡ್ ಅನ್ನು ಬಿಟ್ಟುಕೊಟ್ಟಿದ್ದರು. ಆದರೆ, ಐರ್ಲೆಂಡಿನ ವಿಚಾರದಲ್ಲಿ ನೂರು ವರ್ಷಗಳಿಂದ ‘ಹೋಂ ರೂಲ್’ ಬೇಡಿಕೆಯ ಚಳವಳಿ ನಡೆದಿತ್ತು. ಹೋರಾಟದ ಹಿಂದೆ ತಾತ್ವಿಕ ಮತ್ತು ವೈಚಾರಿಕ ಸಂಗತಿಗಳಿದ್ದವು. ಹಾಗೆ ನೋಡಿದರೆ, ಭಾರತ ಬ್ರಿಟಿಷರ ಅಧೀನದಲ್ಲಿದ್ದಾಗಲೂ ವೈಚಾರಿಕ ಪ್ರಶ್ನೆಗಳಿಗೆ ಬ್ರಿಟಿಷರು ಸಾಪೇಕ್ಷವಾಗಿ ಸ್ಪಂದಿಸಿದ್ದರು. ಈಸ್ಟ್ ಇಂಡಿಯಾ ಕಂಪನಿ ಭಾರತದಲ್ಲಿ ವಿಧಿಸುತ್ತಿರುವ ತೆರಿಗೆಯ ಅತಿರೇಕವನ್ನು ನೋಡಿ ಕನಲಿದ ಎಡ್ಮಂಡ್ ಬರ್ಕ್, ‘ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿರುವುದು ಕ್ರಿಮಿನಲ್ ತೆರಿಗೆ’ ಎಂದು ಬ್ರಿಟನ್‌ನ ಸಂಸತ್‌ನಲ್ಲಿ ಸರ್ಕಾರದ ಗಮನ ಸೆಳೆದ ನಂತರ, ಈಸ್ಟ್ ಇಂಡಿಯಾ ಕಂಪನಿಯನ್ನು ನಿಯಂತ್ರಿಸುವ 1773ರ ರೆಗ್ಯುಲೇಟಿಂಗ್ ಕಾಯ್ದೆ ಜಾರಿಗೆ ಬಂದಿತ್ತು.

ಗಾಂಧೀಜಿ ಹುಟ್ಟುವ ಮೊದಲೇ ಭಾರತದಲ್ಲಿ ನಡೆದ ಸಾವಿರಾರು ಸಶಸ್ತ್ರ ಹೋರಾಟಗಳನ್ನು ಬ್ರಿಟಿಷರು ದಮನಿಸಿದ್ದರು. ಸಾಗರದ ಮೇಲೆ ಪರಮಾಧಿಕಾರವನ್ನು ಸ್ಥಾಪಿಸುವುದಕ್ಕಾಗಿಯೇ ಪೋರ್ಚುಗೀಸರ ಫ್ರಾನ್ಸಿಸ್ಕೊ ಡಿ ಅಲ್ಮೆಡಾ ‘ಬ್ಲೂ ವಾಟರ್ ಪಾಲಿಸಿ’ಯನ್ನು 1505ರಲ್ಲಿ ಜಾರಿಗೆ ತಂದಿದ್ದು, ನಂತರದ ಸುಮಾರು ನೂರು ವರ್ಷಗಳ ಕಾಲ ಪೋರ್ಚುಗೀಸರದ್ದೇ ಪರಮಾಧಿಕಾರವಿತ್ತು. ಅಂತಹ ಪೋರ್ಚುಗೀಸರ ಸಾಗರ ಪರಮಾಧಿಕಾರವನ್ನೂ ಬ್ರಿಟಿಷರು ಲೆಕ್ಕಿಸಲಿಲ್ಲ. ಛತ್ರಪತಿ ಶಿವಾಜಿ ಮಹಾರಾಜರ ನೌಕಾದಳ, ಪೋರ್ಚುಗೀಸರು ಮತ್ತು ಬ್ರಿಟಿಷರನ್ನು ಕೆಲವು ಪ್ರಕರಣಗಳಲ್ಲಿ ಕರಾವಳಿ ತೀರದಲ್ಲಿ ತಡೆದದ್ದೂ ಇದೆ. ಆದರೆ, ಮಟ್ಟ ಹಾಕಲು ಆಗಲಿಲ್ಲ.

> ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅಹಿಂಸೆ ಪ್ರಮುಖ ಅಸ್ತ್ರವಾಗಿತ್ತು. ಅಹಿಂಸೆಯ ಪರಿಕಲ್ಪನೆ ಗಾಂಧೀಜಿ ಅವರ ದೌರ್ಬಲ್ಯ ಆಗಿರದೆ, ವಾಸ್ತವವಾದಿ ನಡೆಯಾಗಿತ್ತು. ಅಜೇಯ ಬ್ರಿಟಿಷ್ ಸಾಮ್ರಾಜ್ಯವನ್ನು ಮಣಿಸುವ ಹಾಗೂ ಸಂಘರ್ಷದಲ್ಲಿ ಭಾರತೀಯರನ್ನು ಭಾರತೀಯರೇ ಕೊಂದುಕೊಳ್ಳುವುದನ್ನು ತಪ್ಪಿಸುವ ದಾರ್ಶನಿಕ ಪ್ರಜ್ಞೆಯಿಂದ ರೂಪುಗೊಂಡಿತ್ತು.

1760ರ ಸುಮಾರಿಗೆ, ಮರಾಠರ ನೌಕಾದಳವನ್ನು ಬ್ರಿಟಿಷರು ಸಂಪೂರ್ಣವಾಗಿ ನಾಶಪಡಿಸಿದರು. ರಾಜೇಂದ್ರ ಚೋಳನ (971–1044) ತರುವಾಯ ಸಶಕ್ತ ನೌಕಾದಳದ ಮಹತ್ವವನ್ನು ಶಿವಾಜಿ (1630–80) ಅರಿತಿದ್ದರು. ಆದರೆ, ರಾಜೇಂದ್ರ ಚೋಳನ ನೌಕಾದಳಕ್ಕೆ ಸಮುದ್ರವನ್ನು ದಾಟಿ ಹೋಗಿ ಯುದ್ಧ ಮಾಡುವ ಸಾಮರ್ಥ್ಯವಿತ್ತು. ನಂತರದ 600 ವರ್ಷಗಳಲ್ಲಿ ಯುರೋಪ್‌ನಲ್ಲಿ ತಂತ್ರಜ್ಞಾನದ ಕ್ರಾಂತಿ ನಡೆದಿತ್ತು. ಆದ್ದರಿಂದ ಸಮುದ್ರವನ್ನು ದಾಟಿ ಯುರೋಪಿಯನ್ನರನ್ನು ಎದುರಿಸಬಲ್ಲಷ್ಟು ಸಶಕ್ತ ಹಡಗುಗಳನ್ನು ನಿರ್ಮಿಸಲು ಶಿವಾಜಿಗಾಗಲೀ ನಂತರದ ಮರಾಠರಿಗಾಗಲೀ ಸಾಧ್ಯವಾಗಿರಲಿಲ್ಲ.

ಭಾರತೀಯರು ಒಗ್ಗಟ್ಟಾಗಿ ಸೇರಿದ್ದರೆ ಬ್ರಿಟಿಷರನ್ನು ಸೋಲಿಸಬಹುದಿತ್ತು ಎಂದು ಊಹಾತ್ಮಕ ತರ್ಕವನ್ನು ಮಾಡಬಹುದು. ಆದರೆ, ಭೂಮಿಯ ಮೇಲೆ ಬ್ರಿಟಿಷರನ್ನು ಸೋಲಿಸಿದರೂ ಬ್ರಿಟಿಷರ ನೌಕಾದಳವನ್ನು ಎದುರಿಸಬಲ್ಲ ನೌಕಾದಳ ಭಾರತದ ಎಲ್ಲ ರಾಜರು ಸೇರಿದಾಗಲೂ ಇತ್ತು ಎನ್ನಲು ಯಾವ ಸಾಕ್ಷಿಯೂ ಸಿಗುವುದಿಲ್ಲ. ಅಂದರೆ, ಸಶಸ್ತ್ರ ಯುದ್ಧದ ಮೂಲಕ ಬ್ರಿಟಿಷರನ್ನು ಬ್ರಿಟನ್ ತನಕ ಹಿಮ್ಮೆಟ್ಟಿಸಲು ಭಾರತದಲ್ಲಿ ವ್ಯವಸ್ಥೆಗಳೇ ಇರಲಿಲ್ಲ. ಬ್ರಿಟನ್ನಿನ ಸೈನಿಕ ಶಕ್ತಿಯ ಇತಿಹಾಸದ ಅರಿವಿದ್ದವರು ಅಹಿಂಸಾತ್ಮಕ ಹೋರಾಟದ ಹೊರತು ಬೇರೆ ಏನನ್ನೂ ಮಾಡಲು ಸಾಧ್ಯವಿರಲಿಲ್ಲ. ಸುಭಾಷ್‌ಚಂದ್ರ ಬೋಸರು ಬ್ರಿಟಿಷ್ ವಿರೋಧಿ ಯುರೋಪಿಯನ್ನರೊಂದಿಗೆ ಸೇರಿ ಯುದ್ಧದ ಮೂಲಕ ಬ್ರಿಟಿಷರನ್ನು ಹಿಮ್ಮೆಟ್ಟಿಸುವ ಯೋಜನೆಯನ್ನು ರೂಪಿಸಿದ್ದರು. 2ನೆಯ ಜಾಗತಿಕ ಯುದ್ಧದಲ್ಲಿ ಜರ್ಮನಿ ಮತ್ತು ಜಪಾನ್ ಮೇಲುಗೈ ಪಡೆದಿದ್ದರೆ ಅದು ಸಾಧ್ಯವಾಗಬಹುದಾಗಿತ್ತು. ಆದರೆ, ಆ ಯುದ್ಧದಲ್ಲೂ ಬ್ರಿಟಿಷರೇ ಮೇಲುಗೈ ಪಡೆದಿದ್ದರು.

ಅಹಿಂಸಾತ್ಮಕ ಹೋರಾಟದ ಎರಡನೆಯ ಅನಿವಾರ್ಯತೆ ಯಾರ ವಿರುದ್ಧ ಹೋರಾಟ ಎಂಬುದನ್ನು ಅವಲಂಬಿಸಿದೆ. ಭಾರತದಲ್ಲಿನ ಬ್ರಿಟಿಷ್ ಸೈನ್ಯದಲ್ಲಿದ್ದ ಸೈನಿಕರು, ಪೊಲೀಸರು ಭಾರತೀಯರೇ ಆಗಿದ್ದರು. ಬ್ರಿಟಿಷ್ ದಳಗಳಿಗೆ ಬ್ರಿಟಿಷರು ಭಾರತೀಯ ಸಿಬ್ಬಂದಿಯನ್ನು ನೇಮಿಸಿಕೊಂಡಿದ್ದರು. ಆಗ ಸ್ವಾತಂತ್ರ್ಯ ಹೋರಾಟಗಾರರು ಬಾಂಬ್ ದಾಳಿ ನಡೆಸಿದ್ದರೆ, ಬಹುಮಟ್ಟಿಗೆ ಅವರು ಬ್ರಿಟಿಷ್ ಸೇನೆ ಮತ್ತು ಪೊಲೀಸ್ ಇಲಾಖೆಯಲ್ಲಿದ್ದ ಭಾರತೀಯರನ್ನೇ ಕೊಲ್ಲಬೇಕಾದ ಪರಿಸ್ಥಿತಿ ಬರುತ್ತಿತ್ತು. ಗಾಂಧಿಯವರ ಅಹಿಂಸಾತ್ಮಕ ಹೋರಾಟವು ಭಾರತೀಯರು ಭಾರತೀಯರನ್ನೇ ಕೊಲ್ಲುವುದನ್ನು ತಪ್ಪಿಸಿತ್ತು.

ಗಾಂಧಿಯವರ ಅಹಿಂಸೆ ಹೋರಾಟದ ಒಂದು ಅಸ್ತ್ರವಾಗಲು, ಹೋರಾಟ ಯಾರ ವಿರುದ್ಧ ಎನ್ನುವ ಕುರಿತ ಗಾಂಧಿಯವರ ವೈಚಾರಿಕ ಸ್ಪಷ್ಟತೆಯೂ ಕಾರಣವಾಗಿತ್ತು. ಗಾಂಧಿಯವರ ಹೋರಾಟ ಬ್ರಿಟಿಷರ ವಿರುದ್ಧವಾಗಿರಲಿಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿತ್ವದ ವಿರುದ್ಧ ಮಾತ್ರವೇ ಆಗಿತ್ತು. ಬ್ರಿಟಿಷರು ಭಾರತೀಯರಾಗಿ ನೆಲಸಿ ಭಾರತೀಯ ಆಡಳಿತವನ್ನು ಸ್ವೀಕರಿಸುವುದಿದ್ದರೆ, ಅದಕ್ಕೆ ಗಾಂಧಿಯವರ ವಿರೋಧ ಇರಲಿಲ್ಲ. ಈ ಧೋರಣೆಯಿಂದಾಗಿ ಬ್ರಿಟಿಷ್ ಪ್ರಭುತ್ವ ಮಾತ್ರ ವಿರೋಧಿಯ ಸ್ಥಾನಕ್ಕೆ ಬಂದಿತು. ಬ್ರಿಟಿಷ್ ಪೌರರು ವಿರೋಧಿಯ ಸ್ಥಾನದಲ್ಲಿರಲಿಲ್ಲ. ಸಾಕಷ್ಟು ಬ್ರಿಟಿಷ್ ಪೌರರು ಗಾಂಧಿಯವರ ಪರ ಇದ್ದರು. ಹಲಗಲಿಯ ಬೇಡರ ದಂಗೆ, ಸಂತಾಲ ದಂಗೆಯಂತಹ ಯಾವುದೇ ಸಶಸ್ತ್ರ ಬಂಡಾಯಗಳಲ್ಲಿ ಬಂಡಾಯವನ್ನು ದಮನಿಸಿದ ನಂತರ ಬ್ರಿಟಿಷ್ ಸರ್ಕಾರ ಬಂಡಾಯಗಾರರ ಬೇಡಿಕೆಗಳನ್ನು ಈಡೇರಿಸಲಿಲ್ಲ. ಆದರೆ, ಚಂಪಾರಣ್ ಸತ್ಯಾಗ್ರಹ, ಬಾರ್ಡೋಲಿ ಸತ್ಯಾಗ್ರಹದಲ್ಲಿ ಸತ್ಯಾಗ್ರಹಿಗಳ ಬೇಡಿಕೆಗಳನ್ನು ಈಡೇರಿಸಲಾಗಿತ್ತು. ಇದು ಅಹಿಂಸಾತ್ಮಕ ಹೋರಾಟದ ಶಕ್ತಿ. ದಕ್ಷಿಣ ಆಫ್ರಿಕಾದಲ್ಲೂ ಗಾಂಧಿ ಬ್ರಿಟಿಷರ ವಿರುದ್ಧ ಅಹಿಂಸಾತ್ಮಕ ಹೋರಾಟವನ್ನು ಯಶಸ್ವಿಗೊಳಿಸಿದ್ದರು. ಉಪ್ಪಿನ ಸತ್ಯಾಗ್ರಹದ ನಂತರ ಗಾಂಧಿ- ಇರ್ವಿನ್ ಒಪ್ಪಂದವೇ ಆಗಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು.

ಮ್ಯಾಂಚೆಸ್ಟರ್‌ನ ಬಟ್ಟೆಗಳನ್ನು ತಂದು ಭಾರತದಲ್ಲಿ ಮಾರುವ ಜವಳಿ ಉದ್ಯಮವು ಬ್ರಿಟಿಷರಿಗೆ ಅಪಾರ ಲಾಭದಾಯಕ ಉದ್ಯಮವಾಗಿತ್ತು. ಚರಕ ಚಳವಳಿಯು ಬ್ರಿಟಿಷರ ಜವಳಿ ವ್ಯಾಪಾರವನ್ನು ದುರ್ಬಲಗೊಳಿಸಿತ್ತು. ಗಾಂಧಿ ಅವರು ದುಂಡು ಮೇಜಿನ ಪರಿಷತ್ತಿಗೆ ಲಂಡನ್‌ಗೆ ಹೋಗಿದ್ದಾಗ, ಈತ ತಮ್ಮ ಉದ್ಯೋಗವನ್ನು ತೆಗೆದವನು ಎಂದು ಮ್ಯಾಂಚೆಸ್ಟರ್‌ನ ಬಟ್ಟೆ ಗಿರಣಿಗಳ ನೌಕರರಾಗಿದ್ದವರು ಗಾಂಧಿಯವರ ವಿರುದ್ಧ ಪ್ರತಿಭಟನೆಗಳನ್ನು ಮಾಡಿದ್ದರು.

ತೆರಿಗೆ ನಿರಾಕರಣಾ ಚಳವಳಿ ಬ್ರಿಟಿಷರ ಬೊಕ್ಕಸಕ್ಕೆ ಹಣ ಹೋಗದಂತೆ ತಡೆಯುವ ಕೆಲಸವನ್ನು ಮಾಡಿತು. ಕ್ವಿಟ್ ಇಂಡಿಯಾ ಚಳವಳಿಯ ನಂತರ ವೈಸರಾಯ್ ವವೆಲ್ ಬ್ರಿಟಿಷ್ ಸರ್ಕಾರಕ್ಕೆ ಬರೆದ ಪತ್ರದಲ್ಲಿ ಖಜಾನೆ ಬರಿದಾಗಿರುವುದರ ಪ್ರಸ್ತಾಪವನ್ನೂ ಮಾಡಿದ್ದರು. ಆದ್ದರಿಂದಲೇ ಗಾಂಧಿ ಒಬ್ಬ ಮಹಾನ್ ವಾಸ್ತವವಾದಿ. ಬ್ರಿಟಿಷರನ್ನು ಎದುರಿಸಲು ಅಹಿಂಸಾತ್ಮಕ ಹೋರಾಟದ ಹೊರತು ಅನ್ಯಮಾರ್ಗವಿಲ್ಲ ಎಂಬುದನ್ನು ಕಂಡುಕೊಂಡವರಾಗಿದ್ದರು. ಅಂತಹ ಹೋರಾಟಕ್ಕೆ ಧಾರ್ಮಿಕ ಮತ್ತು ಅಧ್ಯಾತ್ಮದ ತಳಹದಿಯನ್ನು ಒದಗಿಸಿದ್ದರಿಂದ ಅಹಿಂಸಾತ್ಮಕ ಸತ್ಯಾಗ್ರಹಕ್ಕೆ ಪರಂಪರೆಯ ಶಕ್ತಿ ಮತ್ತು ಉದಾತ್ತತೆಯ ಸ್ವರೂಪವೂ ಬಂದಿತ್ತು.



ವಾಚಕರ ವಾಣಿ

ಮೇಯುವವರಿಗೆ ಬೇಲಿ ತೆಗೆದಂತೆ...

ಬೆಂಗಳೂರಿನ ನೂರಾರು ಕೆರೆಗಳ ಸಾವಿರಾರು ಎಕರೆ ಜಾಗವನ್ನು ಭೂ ಮಾಫಿಯಾ ನುಂಗಿದೆ. ಅವರಿಗೆ ಮತ್ತಷ್ಟು ಅನುಕೂಲ ಮಾಡಿಕೊಡಲು, ‘ಕೆಟಿಸಿಡಿಎ-2024’ರ ಕಾಯ್ದೆಗೆ ತಿದ್ದುಪಡಿ ತರಲು ಸರ್ಕಾರ ಮುಂದಾಗಿದೆ.

ಬೆಂಗಳೂರು ವಿಸ್ತಾರವಾಗುತ್ತಿದೆ. ಜನಸಂಖ್ಯೆ ಮತ್ತು ವಾಹನಗಳ ಹೆಚ್ಚಳದಿಂದ ಹವಾಮಾನದಲ್ಲಿ ವಿಪರೀತ ಏರುಪೇರು ಆಗುತ್ತಿದೆ. ಅದಕ್ಕೆ ಅನುಗುಣವಾಗಿ ಇರುವ ಕೆರೆಗಳು- ಜಲಮೂಲಗಳನ್ನು ರಕ್ಷಣೆ ಮಾಡಿ, ಹಸಿರು ವಲಯಗಳನ್ನು ಹೆಚ್ಚಿಸಬೇಕಿದೆ. ಕೆರೆ ಒತ್ತುವರಿ ತೆರವುಗೊಳಿಸಲು ಕಠಿಣ ಕ್ರಮ ಕೈಗೊಳ್ಳಬೇಕಾದ ಸರ್ಕಾರವೇ ಒತ್ತುವರಿಗೆ ಉತ್ತೇಜನ ನೀಡುವ ಕಾನೂನು ತಿದ್ದುಪಡಿಗೆ ಹೊರಟಿರುವುದು ವಿಷಾದನೀಯ.

ಸರ್ಕಾರದ ತಪ್ಪು ನೀತಿಗಳನ್ನು ಖಂಡಿಸಬೇಕಾದ ವಿರೋಧ ಪಕ್ಷಗಳೂ ಉಸಿರೆತ್ತುತ್ತಿಲ್ಲ. ಸರ್ಕಾರದ ಈ ನಿರ್ಧಾರವನ್ನು ಸಾರ್ವಜನಿಕರು ಹಾಗೂ ಪರಿಸರಾಸಕ್ತರು ವಿರೋಧಿಸಬೇಕಿದೆ.

ವಿಶಾಲಾಕ್ಷಿ ಶರ್ಮಾ, ಬೆಂಗಳೂರು

ಗ್ರಂಥಾಲಯ: ಪುಸ್ತಕ ಖರೀದಿ ನಡೆಯಲಿ

ಸಾರ್ವಜನಿಕ ಗ್ರಂಥಾಲಯ ಇಲಾಖೆಯು, 2021ರಲ್ಲಿ ಪ್ರಕಟವಾದ ಕೃತಿಗಳನ್ನು ಈ ವರ್ಷ ಆಯ್ಕೆ ಮಾಡಿದೆ. ಆದರೆ, ಪುಸ್ತಕ ಖರೀದಿಗಾಗಿ ಯಾವ ಪ್ರಕಾಶಕರಿಗೂ ‘ಆದೇಶ ಪತ್ರ’ವನ್ನು ಕಳುಹಿಸುತ್ತಿಲ್ಲ. ಏಕೆಂದರೆ, ಪುಸ್ತಕ ಖರೀದಿಗೆ ಅಗತ್ಯವಾದ ಹಣವನ್ನು ಸರ್ಕಾರ ಮಂಜೂರು ಮಾಡಿಲ್ಲ ಎಂದು ಇಲಾಖೆಯ ಅಧಿಕಾರಿಗಳು ಹೇಳುತ್ತಿದ್ದಾರೆ. ಗ್ರಂಥಾಲಯದ ಹೆಸರಿನಲ್ಲಿ ಸಂಗ್ರಹಿಸುವ ತೆರಿಗೆ ಹಣವನ್ನು ಸರ್ಕಾರ ತನ್ನಲ್ಲೇ ಉಳಿಸಿಕೊಂಡಿದೆ. ಆ ಹಣವನ್ನು ಬಿಡುಗಡೆ ಮಾಡದಿದ್ದರೆ, ಪುಸ್ತಕಗಳ ಖರೀದಿಯಾದರೂ ಹೇಗೆ ಸಾಧ್ಯ? ಲೇಖಕರು, ಪ್ರಕಾಶಕರಿಗೆ ನಷ್ಟವಾಗದಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿ.

ಎ.ಆರ್. ನಾರಾಯಣಘಟ್ಟ, ಬೆಂಗಳೂರು

ಈಗ ಅಂಚೆ ಕಚೇರಿ ವಿಲೀನ ಸರದಿ!

ಒಂದೆರಡು ವರ್ಷಗಳ ಹಿಂದೆ ಕೇಂದ್ರ ಸರ್ಕಾರ ಹಲವು ರಾಷ್ಟ್ರೀಯ ಬ್ಯಾಂಕ್‌ಗಳನ್ನು ವಿಲೀನಗೊಳಿಸಿತ್ತು. ಪ್ರಸಕ್ತ ವರ್ಷದಲ್ಲಿ ಗ್ರಾಮೀಣ ಬ್ಯಾಂಕ್‌ಗಳನ್ನೂ ವಿಲೀನಗೊಳಿಸಿದೆ. ಇದೇ ರೀತಿ ಈಗ ಅಂಚೆ ಇಲಾಖೆಯಲ್ಲೂ ವಿಲೀನದ ಸೂತ್ರವನ್ನು ಜಪಿಸುತ್ತಿದೆ. ಇದು ಒಂದರ್ಥದಲ್ಲಿ ‘ಅಳೋವ್ನ ಮೇಲೆ ಗಳ ಬಿತ್ತು’ ಎಂಬ ಗಾದೆ ಮಾತಿನಂತಾಗಿದೆ. ರಾಜ್ಯದ ಹಲವು ಅಂಚೆ ಕಚೇರಿಗಳಲ್ಲಿ ಲಾಭದ ಪ್ರಮಾಣ ಕಡಿಮೆಯಿದೆ. ಇಂತಹ ಕಚೇರಿಗಳನ್ನು ಮುಚ್ಚಿ, ಹತ್ತಿರದ ದೊಡ್ಡ ಕಚೇರಿಗಳೊಂದಿಗೆ ವಿಲೀನ ಮಾಡುವ ಬಗ್ಗೆ ಕೇಂದ್ರ ಅಂಚೆ ನಿರ್ದೇಶನಾಲಯದಿಂದ ಕೆಲವು ಕಚೇರಿಗಳಿಗೆ ಸೂಚನೆ ನೀಡಲಾಗಿದೆ. ಇದರಿಂದ ಅಂಚೆ ಕಚೇರಿಗಳಲ್ಲಿ ಖಾತೆ ತೆರೆದು ಠೇವಣಿ ಇಟ್ಟಿರುವ ಹಿರಿಯ ನಾಗರಿಕರು, ಮಹಿಳೆಯರು, ವಿದ್ಯಾರ್ಥಿಗಳು, ಅಂಗವಿಕಲರು, ಮಧ್ಯಮ ವರ್ಗ ಹಾಗೂ ಬಡವರಿಗೆ ತೊಂದರೆಯಾಗುವುದು ಖಚಿತ. ಬಹುತೇಕ ಹಳ್ಳಿಗಳಲ್ಲಿ ಬಸ್ ಸಂಚಾರ ವ್ಯವಸ್ಥೆಯೇ ಇಲ್ಲ. ಬಹುದೂರದಲ್ಲಿರುವ ಅಂಚೆ ಕಚೇರಿಗೆ ಸೇವೆ ಪಡೆಯಲು ಅವರು ಹೋಗುವುದು ದೂರದ ಮಾತು!

ಸುಚಿನ್ ಆಸೂರಿ, ಬೆಂಗಳೂರು

ಸಂಪಾದಕೀಯ: ಯುವಜನರಿಗೆ ಪ್ರೇರಣೆ

ಕೆಎಎಸ್, ಐಎಎಸ್ ಹಾಗೂ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವ ಅಭ್ಯರ್ಥಿಗಳಿಗೆ ‘ಪ್ರಜಾವಾಣಿ’ ಸಂಪಾದಕೀಯ ಬರಹಗಳು ಅತ್ಯಂತ ಉಪಯುಕ್ತ. ಯಾವುದೇ ವಿಷಯವನ್ನು ನಿರ್ದಿಷ್ಟ ಪದಗಳಲ್ಲಿ ವಿವರಿಸುವ, ವಿಶ್ಲೇಷಿಸುವ ರೀತಿ ಶ್ಲಾಘನೀಯ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನೀಡುವ ಪ್ರಬಂಧಗಳಿಗೆ ಮತ್ತು ಪ್ರಶ್ನೆಗಳಿಗೆ ಹೇಗೆ ಉತ್ತರಿಸಬೇಕು ಹಾಗೂ ವಿಷಯಗಳನ್ನು ಗ್ರಹಿಸುವುದು ಹೇಗೆ ಎನ್ನುವ ತಿಳಿವಳಿಕೆಯೊಂದಿಗೆ ಅಗತ್ಯ ಮಾಹಿತಿಯೂ ‘ಪ್ರಜಾವಾಣಿ’ ಸಂಪಾದಕೀಯ ಬರಹಗಳಿಂದ ದೊರೆಯುತ್ತಿದೆ.

ಜಗದೀಶ ಬಿ.ಜಿ., ಧಾರವಾಡ

ಬೀದಿನಾಯಿಗಳಿಗೆ ಇನ್ನೆಷ್ಟು ಬಲಿ?

ಬೆಂಗಳೂರಿನ ಕೊಡಿಗೇಹಳ್ಳಿಯ ಕೆಂಪೇಗೌಡ ನಗರದಲ್ಲಿ ಬೀದಿನಾಯಿಗಳ ದಾಳಿಗೆ ಹಿರಿಯ ನಾಗರಿಕರೊಬ್ಬರು ಮೃತಪಟ್ಟಿರುವುದು ವರದಿಯಾಗಿದೆ. ಈ ಘಟನೆಯು ಸಾರ್ವಜನಿಕ ಸ್ಥಳಗಳಲ್ಲಿ ನಾಗರಿಕರ ಸುರಕ್ಷತೆ ಕುರಿತಂತೆ ಗಂಭೀರ ಪ್ರಶ್ನೆಗಳನ್ನು ಎತ್ತಿದೆ. ನಾಗರಿಕರು ಅನೇಕ ಬಾರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ದೂರು ನೀಡಿದ್ದರೂ ಬೀದಿನಾಯಿಗಳ ಉಪಟಳ ನಿಗ್ರಹಕ್ಕೆ ಮುಂದಾಗದಿರುವುದು ದುರದೃಷ್ಟಕರ. ಬೀದಿನಾಯಿಗಳಿಗೆ ಪೌಷ್ಟಿಕ ಆಹಾರ ನೀಡಲು ಕೋಟ್ಯಂತರ ರೂಪಾಯಿ ಖರ್ಚು ಮಾಡಲು ಸಿದ್ಧವಿರುವ ಬಿಬಿಎಂಪಿ ಆಡಳಿತವು, ನಾಗರಿಕರು ಬೀದಿನಾಯಿಗಳಿಗಿಂತಲೂ ಕನಿಷ್ಠ ಎಂಬ ಧೋರಣೆ ತಳೆದಂತಿದೆ.

ಎಂ.ಎಸ್. ಅಲ್ಲಮ ಪ್ರಭು, ಬೆಂಗಳೂರು

ಟ್ರಂಪ್ ಸ್ನೇಹ ಸಹನೀಯವೇ?

ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ಸರಕುಗಳ ಮೇಲೆ ಡೊನಾಲ್ಡ್ ಟ್ರಂಪ್ ಆಡಳಿತವು ಶೇ 25ರಷ್ಟು ಸುಂಕ ಹೇರಿದೆ. ಇದರಿಂದ ಭಾರತಕ್ಕೆ ಅಲ್ಪ ತೊಂದರೆ ಆಗಬಹುದು. ಈ ಗರ್ವದ ಬೆದರಿಕೆಗೆ ಭಾರತ ಹೆದರಬೇಕಿಲ್ಲ. ಅಮೆರಿಕವು ಭಾರತವನ್ನು ಯಾವಾಗಲೂ ವ್ಯಾಪಾರಿ ದೃಷ್ಟಿಯಿಂದಲೇ ನೋಡಿದೆ. ಪರಮಾಣು ವಿಷಯಕ್ಕೆ ಸಂಬಂಧಿಸಿದಂತೆ ಭಾರತಕ್ಕೆ ಸೂಪರ್ ಕಂಪ್ಯೂಟರ್ ಕೊಡುವುದಿಲ್ಲವೆಂದು ಹೇಳಿತ್ತು. ಆದರೆ, ದೇಶದ ವಿಜ್ಞಾನಿಗಳು ಅದನ್ನು ಸವಾಲಾಗಿ ಸ್ವೀಕರಿಸಿ, ಸೂಪರ್ ಕಂಪ್ಯೂಟರ್ ‘ಪರಮ್’ ಅಭಿವೃದ್ಧಿಪಡಿಸಿದ್ದರು. ಯಾವ ದೇಶವನ್ನೂ ನಾವು ಶಾಶ್ವತ ಸ್ನೇಹಿತರೆಂದು ಭಾವಿಸಬೇಕಿಲ್ಲ. ನಮ್ಮದೇ ಆದ ಶಕ್ತಿ ಬೆಳೆಸಿಕೊಳ್ಳಬೇಕು. ಒಂದು ದಾರಿ ಮುಚ್ಚಿದರೆ ಮತ್ತೊಂದು ದಾರಿ ತೆರೆಯುತ್ತದೆ.

ಅತ್ತಿಹಳ್ಳಿ ದೇವರಾಜ್, ಬೆಂಗಳೂರು

ಚುರುಮುರಿ





ಮನೆಗೆ ಪೊಲೀಸ್

• ಸಿ.ಎಸ್. ರಾಜು

‘ಮನೇಲಿ ಯಾರಿದ್ದೀರಿ?’ ಎನ್ನುತ್ತಾ ಪೊಲೀಸರು ಒಳಬಂದರು.

ಗಾಬರಿಯಾದ ಶಂಕ್ರಿ, ‘ಒಳಗೆ ಬನ್ನಿ ಸಾರ್, ಜನ ತಪ್ಪು ತಿಳಿದುಕೊಳ್ತಾರೆ, ಪೊಲೀಸ್ ಸ್ಟೇಷನ್ ಮೆಟ್ಟಿಲು ಹತ್ತದ ಗೌರವಸ್ಥರು ನಾವು’ ಎಂದ.

‘ಮನೆ ಮನೆಗೆ ಪೊಲೀಸ್’ ಕಾರ್ಯಕ್ರಮ ಕಣ್ರೀ. ಏನಾದ್ರೂ ಪ್ರಾಬ್ಲಂ ಇದೆಯೇ?’

‘ಒಂದಾ ಎರಡಾ ಸಾರ್... ಮನೆ ಸಾಲ ತೀರಿಲ್ಲ, ಮಗನ ಮದುವೆಗೆ ಹೆಣ್ಣು ಸೆಟ್ಟಾಗ್ತಿಲ್ಲ, ನನಗೆ ಮಂಡಿ ನೋವು, ಗಂಡನಿಗೆ ಸೊಂಟ ನೋವು’ ಅಂದಳು ಸುಮಿ.

‘ಅವು ನಾವು ಬಗೆಹರಿಸೋ ಪ್ರಾಬ್ಲಂಗಳಲ್ಲ’.

‘ಪಕ್ಕದ ಮನೆಯವನು ನಮ್ಮ ಮನೆ ಮುಂದೆ ಕಾರು ನಿಲ್ಲಿಸ್ತಾನೆ, ಕೇಳಿದ್ರೆ ರಸ್ತೆ ನಿಮ್ಮಪ್ಪಂದಾ ಅಂತ ಜಗಳಕ್ಕೆ ಬರ್ತಾನೆ ಸಾರ್’.

‘ರಾತ್ರಿಯೆಲ್ಲಾ ಬೀದಿನಾಯಿಗಳು ಬೊಗಳಾಡಿ ನಮ್ಮ ನಿದ್ರೆ ಹಾಳುಮಾಡ್ತವೆ’ ಸುಮಿಯ ಸಂಕಟ.

ಅಷ್ಟರಲ್ಲಿ ಪೊಲೀಸರ ಮೊಬೈಲ್ ರಿಂಗಾಯ್ತು. ಮಾತನಾಡಿ ಮುಖ ಕಿವುಚಿಕೊಂಡರು.

‘ದೊಡ್ಡ ಸಾಹೇಬರ ಫೋನಾ ಸಾರ್?’

‘ಅಲ್ಲಾರೀ, ನನ್ನ ಹೆಂಡ್ತಿ ಫೋನ್ ಮಾಡಿದ್ಲು... ಅವರಿವರ ಮನೆಗೆ ಹೋಗಿ ಕ್ಷೇಮ ವಿಚಾರಿಸ್ತೀರಿ, ನಮ್ಮ ಮನೆಯ ಕಷ್ಟಸುಖ ಕೇಳಿದ್ರಾ?’ ಅಂತ ಸಿಟ್ಟು ಮಾಡಿಕೊಂಡಳು.

‘ನಿಮ್ಮ ಹೆಂಡ್ತಿ ಕೇಳುವುದರಲ್ಲಿ ನ್ಯಾಯ ಇದೆ ಸಾರ್’ ಅಂದಳು ಸುಮಿ.

‘ಏನು ನ್ಯಾಯಾನೋ, ಹಬ್ಬಹರಿದಿನಗಳಲ್ಲಿ ರಜೆ ಹಾಕಿ ಮನೇಲಿರೋದಿಲ್ಲ, ಸಂಬಂಧಿಗಳ ಮದುವೆ, ಗೃಹ ಪ್ರವೇಶಕ್ಕೆ ಹೋಗೋದಿಲ್ಲ. ಹೆಂಡ್ತಿ, ಮಕ್ಕಳ ಜೊತೆ ಯಾತ್ರೆಗೆ ಹೋಗಲಿಲ್ಲ, ಜಾತ್ರೆ ನೋಡಲಿಲ್ಲ ಅಂತ ಸದಾ ಆಕ್ಷೇಪ ಮಾಡ್ತಾಳೆ’.

‘ನಿಮ್ಮ ಕೆಲಸದ ಒತ್ತಡ ಹೆಂಡ್ತಿಗೆ ಅರ್ಥವಾಗ್ತಿಲ್ಲ, ಪಾಪ!’

‘ಯಾವುದೋ ಆಕ್ಸಿಡೆಂಟ್ ಆಯ್ತು ಅಂತ ನಡುರಾತ್ರಿ ಮನೆಬಿಟ್ಟೆ, ಪ್ರೊಸೀಜರ್ಸ್ ಮುಗಿಸಿ, ಈ ಡ್ಯೂಟಿಗೆ ಬಂದಿದ್ದೇನೆ. ಇನ್ನೂ ಮನೆಗೆ ಹೋಗಿಲ್ಲ, ಸಿಟ್ಟಾಗಿದ್ದಾಳೆ...’ ಎಂದುಕೊಂಡು ಪೊಲೀಸರು ಹೊರಟರು.

ಸಂಗತ

ಶವದ ಪಂಚನಾಮೆ: ಹಾಗೆಂದರೇನು?

ನಿಗೂಢ ಸಾವಿನ ಪ್ರಕರಣಗಳಲ್ಲಿ ಶವದ ಪಂಚನಾಮೆಗೆ ವಿಶೇಷ ಮಹತ್ವ. ಸಾವಿಗೆ ಕಾರಣವಾದ ಸಾಧ್ಯತೆಗಳನ್ನು ಅರ್ಥ ಮಾಡಿಕೊಳ್ಳಲು ಪಂಚನಾಮೆ ಸಹಾಯಕ.

• ಸಿ.ಎಚ್. ಹನುಮಂತರಾಯ

ಒಬ್ಬ ವ್ಯಕ್ತಿಯ ನಿಗೂಢ ಸಾವಿನ ಕಾರಣವನ್ನು ತಿಳಿಯಲು ಪಂಚನಾಮೆ ಜರುಗಿಸಲಾಗುತ್ತದೆ. ಇದನ್ನು ‘ಶವ ತನಿಖಾ ಪಂಚನಾಮೆ’ ಎನ್ನಲಾಗುತ್ತದೆ. ಸಾಮಾನ್ಯ ಕಾನೂನು ಅರ್ಥದಲ್ಲಿ ಇದು ಶವದ ಮೇಲೆ ಪಂಚರ ಸಮಕ್ಷಮ ನಡೆಸಲಾಗುವ ಒಂದು ಪ್ರಕ್ರಿಯೆ. ಈ ಪ್ರಕ್ರಿಯೆ, ಪೊಲೀಸ್ ತನಿಖಾಧಿಕಾರಿ ಅಥವಾ ಕಾರ್ಯನಿರ್ವಾಹಕ ದಂಡಾಧಿಕಾರಿ ಅಥವಾ ಮ್ಯಾಜಿಸ್ಟ್ರೇಟರು ಜರುಗಿಸುವ ತನಿಖೆಯ ಭಾಗವಾಗಿರುತ್ತದೆ.

ಶವ ತನಿಖಾ ಪ್ರಕ್ರಿಯೆಗಳಲ್ಲಿ ಮೂರು ವಿಧಗಳಿರುತ್ತವೆ. ಮೊದಲನೆಯದು, ಪ್ರಕರಣದ ತನಿಖೆಯನ್ನು ತನಿಖಾಧಿಕಾರಿಯೇ ಪಂಚರ ಸಮಕ್ಷಮ ಜರುಗಿಸುವುದು. ಪಂಚರು ಎಂದರೆ, ಶವದ ಮಹಜರು ಜರುಗಿದ್ದನ್ನು ಖುದ್ದು ಹಾಜರಿದ್ದು ಎಲ್ಲವನ್ನೂ ಗಮನಿಸುವ ವ್ಯಕ್ತಿ ಅಥವಾ ಮಹಜರು ಪಂಚ ಸಾಕ್ಷಿ. ಇವರಲ್ಲಿ ಸ್ಥಳೀಯವಾದ ಇಬ್ಬರು ಗೌರವಾನ್ವಿತ ವ್ಯಕ್ತಿಗಳು ಇರುತ್ತಾರೆ.

ಶವ ತನಿಖಾ ಪ್ರಕ್ರಿಯೆಯ ಎರಡನೆಯ ವಿಧ: ಕಾರ್ಯನಿರ್ವಾಹಕ ದಂಡಾಧಿಕಾರಿ ತನಿಖೆಯನ್ನು ನಡೆಸುವುದು. ವ್ಯಕ್ತಿಯು ಅಪಘಾತದಲ್ಲಿ ಮರಣ ಹೊಂದಿದರೆ, ಅದು ಅಸಹಜವಾದ ಸಾವಾಗಿದ್ದರೆ, ಆತ್ಮಹತ್ಯೆಯಂತಹ ಪ್ರಕರಣವಾಗಿದ್ದಲ್ಲಿ, ಇತರೆ ಯಾರೋ ಕೊಲೆಯನ್ನು ಮಾಡಿರಬಹುದು ಎನ್ನುವ ಅನುಮಾನ ಇದ್ದಲ್ಲಿ, ಪ್ರಾಣಿಯಿಂದ ಸಾವು ಸಂಭವಿಸಿದ್ದಲ್ಲಿ, ಅಥವಾ ಯಂತ್ರದಿಂದ ಮರಣ ಹೊಂದಿರಬಹುದಾದ ಸಂದರ್ಭದಲ್ಲಿ ವಿಷಯ ತಿಳಿದ ತನಿಖಾಧಿಕಾರಿ, ಆ ಸಾವಿಗೆ ಮೇಲ್ನೋಟಕ್ಕೆ ಕಂಡುಬರಬಹುದಾದ ಕಾರಣವನ್ನು ತಿಳಿಯಲು ಸ್ಥಳೀಯ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರಿಗೆ ಪ್ರಕರಣದ ಬಗ್ಗೆ ತಿಳಿಸಬೇಕಾಗುತ್ತದೆ. ಆಗ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ-2023ರ ಕಲಂ 194ರ ಅಡಿಯಲ್ಲಿ ಶವದ ಮೇಲೆ ಪಂಚನಾಮೆ ಜರುಗಿಸಲಾಗುತ್ತದೆ.

ಮೂರನೆಯದು, ನ್ಯಾಯಿಕ ದಂಡಾಧಿಕಾರಿ (ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್) ನಡೆಸುವ ಪಂಚನಾಮೆ. ಪೊಲೀಸ್ ವಶದಲ್ಲಿದ್ದ ಸಂದರ್ಭದಲ್ಲಿ ಮೃತಪಟ್ಟಿದ್ದರೆ ಅಥವಾ ಅತ್ಯಾಚಾರಕ್ಕೆ ತುತ್ತಾಗಿ ಮರಣ ಹೊಂದಿದ್ದರೆ, ಕಡ್ಡಾಯವಾಗಿ ನ್ಯಾಯಿಕ ದಂಡಾಧಿಕಾರಿ, ಪೊಲೀಸ್ ತನಿಖಾಧಿಕಾರಿ ಮತ್ತು ಪಂಚರ ಸಮಕ್ಷಮದಲ್ಲಿ ಬಿಎನ್‌ಎಸ್‌ಎಸ್ ಕಲಂ 196ರ ಅಡಿಯಲ್ಲಿ ಪಂಚನಾಮೆ ಜರುಗಿಸಿ ವರದಿ ಸಿದ್ಧಪಡಿಸಬೇಕಾಗಿರುತ್ತದೆ.

ಈ ಪಂಚನಾಮೆಯನ್ನು ನಡೆಸುವಾಗ ಪಂಚರು, ಶವದ ಸಂಬಂಧಿಗಳಿಂದಾಗಲೀ, ತಿಳಿವಳಿಕೆ ಇರುವವರಾಗಲೀ ಲಭ್ಯವಿದ್ದಲ್ಲಿ ಅವರ ಹೇಳಿಕೆ ಪಡೆಯುವುದು ಕಡ್ಡಾಯ. ಶವದ ಮೇಲಿರುವ ಬಟ್ಟೆ, ಗಾಯದ ಗುರುತುಗಳು, ಯಾವುದಾದರೂ ಆಯುಧ ಉಪಯೋಗಿಸಿರುವ ಬಗ್ಗೆ ದೊರೆಯಬಹುದಾದ ಸುಳಿವುಗಳನ್ನು ಪತ್ತೆ ಹಚ್ಚಿ ಪಂಚನಾಮೆ ವರದಿಯನ್ನು ಸಿದ್ಧಪಡಿಸಬೇಕು. ಸಾವಿನ ಬಗ್ಗೆ ಮೇಲ್ನೋಟಕ್ಕೆ ತಮಗೆ ಕಂಡುಬರುವ ಅಭಿಪ್ರಾಯವನ್ನು ಪಂಚರು ದಾಖಲಿಸಬೇಕು. ಈ ಸಮಯದಲ್ಲಿ ಪಂಚರ ಸಹಿ ಪಡೆಯುವುದು ಕಡ್ಡಾಯ.



ಅತ್ಯಾಚಾರ, ವರದಕ್ಷಿಣೆ ಕಿರುಕುಳ, ಪೊಲೀಸ್ ವಶದಲ್ಲಿದ್ದಾಗ ಸಂಭವಿಸಿದ ಸಾವಿನ ಪ್ರಕರಣಗಳಲ್ಲಿ ಕಡ್ಡಾಯವಾಗಿ ಶವ ತನಿಖೆಯನ್ನು ಸ್ಥಳೀಯ ಮ್ಯಾಜಿಸ್ಟ್ರೇಟ್, ಪಂಚರ ಸಮಕ್ಷಮದಲ್ಲಿ ಬಿಎನ್‌ಎಸ್‌ಎಸ್ ಕಾಯ್ದೆಯ ಕಲಂ 196ರ ಅಡಿಯಲ್ಲಿ ನಡೆಸಿ ವರದಿ ಸಿದ್ಧಪಡಿಸಬೇಕಾಗಿರುತ್ತದೆ.

ಕೊಲೆ ಅಥವಾ ಅಸಹಜ ಸಾವಿನ ನಂತರ ಶವವನ್ನು ಹೂತು ಹಾಕಿದ್ದು, ಅದರ ಕುರಿತು ಅನುಮಾನವಿದ್ದರೆ, ಸರಿಯಾದ ಕಾರಣವನ್ನು ತಿಳಿಯುವ ಸಲುವಾಗಿ ಶವವನ್ನು ಹೊರತೆಗೆಯುವ ಪ್ರಕ್ರಿಯೆಯನ್ನು ತನಿಖಾಧಿಕಾರಿಯೂ ಆದ ಕಾರ್ಯನಿರ್ವಾಹಕ ದಂಡಾಧಿಕಾರಿ (ಎಕ್ಸಿಕ್ಯುಟೀವ್ ಮ್ಯಾಜಿಸ್ಟ್ರೇಟ್-ತಹಶೀಲ್ದಾರ್, ಕಂದಾಯ ಉಪವಿಭಾಗಾಧಿಕಾರಿ ಅಥವಾ ಜಿಲ್ಲಾಧಿಕಾರಿ) ಅಥವಾ ಮ್ಯಾಜಿಸ್ಟ್ರೇಟ್ ಅನುಮತಿಯ ಮೇರೆಗೆ ಜರುಗಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಹೂತಿರುವ ಶವವನ್ನು ಹೊರ ತೆಗೆದಾಗ ಶವದ ಪಂಚನಾಮೆಯನ್ನು ಕಡ್ಡಾಯವಾಗಿ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅಥವಾ ಸ್ಥಳೀಯ ಮ್ಯಾಜಿಸ್ಟ್ರೇಟರೇ ಬಿಎನ್‌ಎಸ್‌ಎಸ್ ಕಲಂ 196 ಹಾಗೂ ಕರ್ನಾಟಕ ಪೊಲೀಸ್ ಕೈಪಿಡಿ-1965ರ ಆರ್ಡರ್ 1396 ಉಪ ನಿಯಮ (29) ಮತ್ತು (30)ರ ಅಡಿಯಲ್ಲಿ ಪಂಚರು, ವೈದ್ಯರು ಹಾಗೂ ಸಂಬಂಧಿಕರ ಸಮಕ್ಷಮ ಜರುಗಿಸಬೇಕಾಗಿರುತ್ತದೆ.

ಈ ಎಲ್ಲ ಸಂದರ್ಭಗಳಲ್ಲಿಯೂ ಸಾವಿನ ಖಚಿತ ಕಾರಣವನ್ನು ತಿಳಿಯಲು ವಿಧಿ ವಿಜ್ಞಾನ ವೈದ್ಯರಿಂದ ಶವವನ್ನು ಪರೀಕ್ಷೆಗೆ ಒಳಪಡಿಸಬೇಕಾಗುತ್ತದೆ. ಬೋನ್ ಮ್ಯಾರೊ ಇರುವಂತಹ ಮೂಳೆಗಳನ್ನು ಆಯ್ಕೆ ಮಾಡಿಕೊಂಡಾಗ ಅದರ ಮೂಲಕ ರಕ್ತದಲ್ಲಿನ ಕಣಗಳನ್ನು ಬೇರ್ಪಡಿಸಿ ಮುಂದಿನ ತನಿಖೆಯನ್ನು ಶವದ ಗುರುತು ಅಂದರೆ ಯಾವ ವ್ಯಕ್ತಿಯದ್ದು ಎಂದು ಖಚಿತಪಡಿಸಿಕೊಳ್ಳಲು ಸಹಾಯಕವಾಗುತ್ತದೆ. ಆ ತಜ್ಞರಿಂದ ಹೊರಬೀಳುವ ಸಾವಿನ ಕಾರಣವು ನಂಬಲು ಅರ್ಹವಾದದ್ದು ಎಂದು ಕಾನೂನು ಚೌಕಟ್ಟಿನಲ್ಲಿ ಭಾವಿಸಬಹುದಾಗಿದೆ.

ಕೆಲವು ಪ್ರಕರಣಗಳಲ್ಲಿ ಶವ ತನಿಖೆಯನ್ನು ಪೊಲೀಸ್ ತನಿಖಾಧಿಕಾರಿಯ ಬದಲಿಗೆ ಎಕ್ಸಿಕ್ಯುಟೀವ್ ಮ್ಯಾಜಿಸ್ಟ್ರೇಟ್-ತಹಶೀಲ್ದಾರ್, ಕಂದಾಯ ಉಪವಿಭಾಗಾಧಿಕಾರಿ ಅಥವಾ ಜಿಲ್ಲಾಧಿಕಾರಿ ಅಥವಾ ನ್ಯಾಯಿಕ ದಂಡಾಧಿಕಾರಿ- ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟರ ಉಪಸ್ಥಿತಿಯನ್ನು ಕಡ್ಡಾಯಗೊಳಿಸಲಾಗುತ್ತದೆ. ಇದಕ್ಕೆ ಕಾರಣ, ಪೊಲೀಸ್ ತನಿಖೆಯ ಬಗ್ಗೆ ಇರುವ ಅನುಮಾನ ಅಥವಾ ತನಿಖೆಯನ್ನು ಯಾವುದೇ ಲೋಪವಿಲ್ಲದೆ ಜರುಗಿಸಬೇಕು ಎನ್ನುವುದೇ ಆಗಿರುತ್ತದೆ.

(ಲೇಖಕ: ಹೈಕೋರ್ಟ್‌ನ ಹಿರಿಯ ವಕೀಲರು)

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಭಾರತದಿಂದ ಆಮದು ಮಾಡಿಕೊಳ್ಳುವ ಎಲ್ಲ ವಸ್ತುಗಳ ಮೇಲೆ ಶೇ 25ರಷ್ಟು ಸುಂಕ ಹೇರುವುದಾಗಿ ಅಮೆರಿಕ ಘೋಷಿಸಿರುವುದು ದೇಶದ ಉದ್ಯಮ ರಂಗದಲ್ಲಿ ಆತಂಕ ಮೂಡಿಸಿದೆ. ಇದರಿಂದ ಜುಲೈ ಮತ್ತು ಸೆಪ್ಟೆಂಬರ್ ನಡುವಿನ ದೇಶದ ಒಟ್ಟು ರಫ್ತಿನಲ್ಲಿ ಶೇ 10ರಷ್ಟು ಸರಕುಗಳ ಮೇಲೆ ಪರಿಣಾಮ ಬೀರಬಹುದು ಎಂದು ಹೇಳಲಾಗುತ್ತಿದೆ. ಜತೆಗೆ, ಹರಳುಗಳು ಮತ್ತು ಆಭರಣ, ಔಷಧಗಳು, ಜವಳಿ, ಎಲೆಕ್ಟ್ರಾನಿಕ್ಸ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಹೆಚ್ಚು ಪರಿಣಾಮ ಉಂಟಾಗಬಹುದು ಎಂದು ವಿಶ್ಲೇಷಿಸಲಾಗುತ್ತಿದೆ. ದೇಶದ ಜಿಡಿಪಿ ಅಂದಾಜಿನಲ್ಲಿ ಶೇ 0.30ರಷ್ಟು ಕುಸಿತ ಉಂಟಾಗಬಹುದು ಎಂದು ಅಂದಾಜಿಸಲಾಗಿದೆ. ಇದು ಟ್ರಂಪ್ ಅವರ ಒತ್ತಡ ತಂತ್ರವಾಗಿದ್ದು, ಮುಂದಿನ ದಿನಗಳಲ್ಲಿ ಸುಂಕದ ಪ್ರಮಾಣ ಕಡಿಮೆ ಆಗಬಹುದು ಎನ್ನುವ ಮಾತುಗಳೂ ಕೇಳಿಬರುತ್ತಿವೆ

ಟ್ರಂಪ್ 25% ಸುಂಕ: ಪರಿಣಾಮ ಏನು?

ಪ್ರಜಾವಾಣಿ ವಾರ್ತೆ

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ದತ್ತಾಂಶದ ಪ್ರಕಾರ, 2024–25ನೇ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ದರ ಶೇ 6.5 ದಾಖಲಾಗಿತ್ತು. ಕೋವಿಡ್ ಸಾಂಕ್ರಾಮಿಕದ ನಂತರ ಮೊದಲ ಬಾರಿಗೆ ಭಾರತ ಇಷ್ಟು ಕಡಿಮೆ ಆರ್ಥಿಕ ಬೆಳವಣಿಗೆಯನ್ನು ದಾಖಲಿಸಿತ್ತು. ಈಗ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದಿಂದ ಆಮದಾಗುವ ಎಲ್ಲ ವಸ್ತುಗಳ ಮೇಲೆ ಶೇ 25ರಷ್ಟು ಸುಂಕ ವಿಧಿಸಿರುವುದರಿಂದ ದೇಶದ ಆರ್ಥಿಕ ಪ್ರಗತಿಯ ಮೇಲೆ ಪರಿಣಾಮ ಬೀರುವ ಆತಂಕ ಎದುರಾಗಿದೆ.

ಸುಂಕ ಹೇರಿಕೆಯಿಂದ ದೇಶದ ವಿವಿಧ ವಲಯಗಳ ಮೇಲೆ ಪರಿಣಾಮ ಬೀರಲಿದ್ದು, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜಿಡಿಪಿ ದರ ಶೇ 6ಕ್ಕೆ ಕುಸಿಯಬಹುದು ಎಂದು ಆರ್ಥಿಕ ತಜ್ಞರು ಅಂದಾಜಿಸಿದ್ದಾರೆ. ರೇಟಿಂಗ್ ಸಂಸ್ಥೆಯಾದ ಬರ್ಕ್ಲೀಸ್, ಈ ವರ್ಷ ಜಿಡಿಪಿಯು ಶೇ 0.30ರಷ್ಟು ಕುಸಿಯಬಹುದು ಎಂದು ಅಂದಾಜಿಸಿದ್ದರೆ, ಶೇ 0.20ರಷ್ಟು ಕುಸಿಯಬಹುದು ಎಂದು ನೋಮುರ ಹೇಳಿದೆ.

ಅಮೆರಿಕ ಭಾರತದ ಅತಿ ದೊಡ್ಡ ವ್ಯಾಪಾರ ಪಾಲುದಾರ ದೇಶ. ಭಾರತದ ಒಟ್ಟು ರಫ್ತಿನಲ್ಲಿ ಅಮೆರಿಕದ ಪಾಲು ಶೇ 18ರಷ್ಟು. ಅಮೆರಿಕದಿಂದ ಭಾರತವು ಶೇ 6.22ರಷ್ಟು ಸರಕುಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಎರಡು ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರದ ಪ್ರಮಾಣ ಶೇ 10.73ರಷ್ಟಿದೆ. ಭಾರತವು ಅಮೆರಿಕದಿಂದ ಆಮದು ಮಾಡಿಕೊಳ್ಳುವುದಕ್ಕಿಂತಲೂ ಹೆಚ್ಚು ಸರಕುಗಳನ್ನು ಅಲ್ಲಿಗೆ ರಫ್ತು ಮಾಡುತ್ತಿದೆ. ಹೀಗಾಗಿ ಅಮೆರಿಕದ ಸುಂಕ ಹೆಚ್ಚಳದ ತೀರ್ಮಾನವು ಭಾರತದ ಸರಕುಗಳ ಮೇಲೆ, ಆರ್ಥಿಕ ಬೆಳವಣಿಗೆಯ ಮೇಲೆ ಅಲ್ಪಕಾಲದ ಮಟ್ಟಿಗಾದರೂ ಪರಿಣಾಮ ಬೀರಲಿದೆ.

ಅಮೆರಿಕವು ಇತರೆ ಕೆಲವು ದೇಶಗಳ ಮೇಲೆ ಕಡಿಮೆ ಸುಂಕ ವಿಧಿಸುತ್ತಿದೆ. ಬಾಂಗ್ಲಾದೇಶದ ಮೇಲೆ ಶೇ 20, ಬ್ರಿಟನ್ ಶೇ 10, ಅಫ್ಗಾನಿಸ್ತಾನದ ಶೇ 15, ಪಾಕಿಸ್ತಾನದ ಶೇ 19 ಮತ್ತು ಶ್ರೀಲಂಕಾ ಮೇಲೆ ಶೇ 20ರಷ್ಟು ಸುಂಕ ವಿಧಿಸುತ್ತಿದೆ. ಇವುಗಳಿಗೆ ಹೋಲಿಸಿದರೆ, ಭಾರತಕ್ಕೆ ವಿಧಿಸಿರುವ ಸುಂಕದ ಪ್ರಮಾಣ ಹೆಚ್ಚಾಗಿದೆ. ಇದರಿಂದಾಗಿ ಅಮೆರಿಕದಲ್ಲಿ ಭಾರತದ ಸರಕುಗಳ ಮಾರಾಟದ ಬೆಲೆ ಹೆಚ್ಚಾಗುತ್ತದೆ. ಅವು ತುಟ್ಟಿ ಆಗುವುದರಿಂದ ಜನ ಅವುಗಳನ್ನು ಖರೀದಿಸುವುದು ಕಡಿಮೆ ಆಗಿ, ನಿಧಾನಕ್ಕೆ ಆ ವಸ್ತುಗಳಿಗೆ ಬೇಡಿಕೆ ಕಡಿಮೆ ಆಗುತ್ತದೆ. ಹೆಚ್ಚು ಕಾಲ ಪರಿಸ್ಥಿತಿ ಹೀಗೇ ಇದ್ದರೆ, ಭಾರತದ ಸರಕುಗಳು ಅಲ್ಲಿನ ಗ್ರಾಹಕರ ಕೈಗೆಟುಕದಂತಾಗಿ, ಮಾರುಕಟ್ಟೆಯಿಂದ ಕಣ್ಮರೆಯಾದರೂ ಅಚ್ಚರಿಯೇನಿಲ್ಲ.



ಯಾವ ಸರಕುಗಳ ಮೇಲೆ ಪರಿಣಾಮ?: ಔಷಧ, ಎಲೆಕ್ಟ್ರಾನಿಕ್ಸ್, ಮುತ್ತು/ಹರಳು, ಆಭರಣ, ಜವಳಿ, ಸಿದ್ಧ ಉಡುಪು ಸೇರಿದಂತೆ ಹಲವು ವಸ್ತುಗಳು ಭಾರತದಿಂದ ಅಮೆರಿಕಕ್ಕೆ ಹೆಚ್ಚಿನ ಪ್ರಮಾಣದಲ್ಲಿ ರಫ್ತಾಗುತ್ತಿವೆ. ಇವುಗಳಿಗೆ ಸಂಬಂಧಿಸಿದ ಉದ್ಯಮಿಗಳು ಅಮೆರಿಕದ ಸುಂಕ ಹೇರಿಕೆಯ ಪರಿಣಾಮಗಳ ಬಗ್ಗೆ ಸಹಜವಾಗಿಯೇ ಆತಂಕಗೊಂಡಿದ್ದಾರೆ. ಔಷಧಿಗಳಿಗೆ ಸುಂಕ ಅನ್ವಯವಾಗುವುದಿಲ್ಲ ಎಂದು ಹೇಳಲಾಗುತ್ತಿದೆಯಾದರೂ, ಟ್ರಂಪ್ ಅವರ ನಿಯಮಗಳ ಬಗ್ಗೆ ಉದ್ಯಮ ರಂಗದಲ್ಲಿ ಆತಂಕ ಇದ್ದೇ ಇದೆ.

ಕಡಿಮೆ ಬೆಲೆಯ, ಉತ್ತಮ ಗುಣಮಟ್ಟದ ಜೆನರಿಕ್ ಔಷಧಗಳ ಉತ್ಪಾದನೆಗೆ ಭಾರತವು ಜಾಗತಿಕ ಮಟ್ಟದಲ್ಲಿ ಹೆಸರಾಗಿದೆ. ಅಮೆರಿಕದ ಅಗತ್ಯವಾಗಿರುವ ಔಷಧಗಳ ಪೈಕಿ ಶೇ 47ರಷ್ಟು ಭಾರತದಿಂದಲೇ ರಫ್ತಾಗುತ್ತಿವೆ. 2025ನೇ ಆರ್ಥಿಕ ವರ್ಷದಲ್ಲಿ ಭಾರತದಿಂದ ಅಮೆರಿಕಕ್ಕೆ ₹96 ಸಾವಿರ ಕೋಟಿ ಮೊತ್ತದ ಔಷಧಗಳು ರಫ್ತಾಗಿದ್ದು, ಒಟ್ಟು ರಫ್ತಿನಲ್ಲಿ ಇದರ ಪಾಲು ಶೇ 35ರಷ್ಟು ಆಗಿದೆ. ಇಷ್ಟು ಪ್ರಮಾಣದ ಅಗತ್ಯ ಔಷಧಗಳು ತುಟ್ಟಿಯಾದರೆ, ಅದು ಭಾರತದ ಮೇಲಷ್ಟೇ ಅಲ್ಲದೇ ಅಮೆರಿಕದ ಗ್ರಾಹಕರು ಮತ್ತು ಅಲ್ಲಿನ ಆರೋಗ್ಯ ಸೇವೆಗಳ ಮೇಲೂ ಪರಿಣಾಮ ಬೀರಬಹುದು ಎನ್ನಲಾಗುತ್ತಿದೆ.


ಇದಲ್ಲದೇ, ತಮಿಳುನಾಡಿನ ತಿರುಪ್ಪೂರು, ಕೊಯಮತ್ತೂರು ಪ್ರದೇಶಗಳಿಂದ ಭಾರಿ ಪ್ರಮಾಣದಲ್ಲಿ ಜವಳಿ ಮತ್ತು ನೇಯ್ಗೆ ಉತ್ಪನ್ನಗಳು ಅಮೆರಿಕಕ್ಕೆ ರಫ್ತಾಗುತ್ತಿವೆ. ಈ ವಲಯದ ದೇಶದ ಒಟ್ಟು ರಫ್ತಿನಲ್ಲಿ ತಿರುಪ್ಪೂರ್‌ನ ಪಾಲು ಶೇ 55. 2024–25ರಲ್ಲಿ ನೇಯ್ಗೆ ಉತ್ಪನ್ನಗಳಲ್ಲಿ ತಿರುಪ್ಪೂರ್ ₹ 40 ಸಾವಿರ ಕೋಟಿ ಮೌಲ್ಯದ ಉತ್ಪನ್ನಗಳನ್ನು ರಫ್ತು ಮಾಡಿದ್ದು, 2026–27ನೇ ಆರ್ಥಿಕ ವರ್ಷದಲ್ಲಿ ಅದನ್ನು ಶೇ 10– ಶೇ 15ರಷ್ಟು ಹೆಚ್ಚಿಸಬೇಕು ಎನ್ನುವ ಉದ್ದೇಶ ಹೊಂದಿವೆ. ಆದರೆ, ಪ್ರಸ್ತುತ ಟ್ರಂಪ್ ಘೋಷಿಸಿರುವ ಸುಂಕದಿಂದ ಇಲ್ಲಿನ ಉದ್ದಿಮೆಗಳಲ್ಲಿ ಆತಂಕ, ಅನಿಶ್ಚಿತತೆ ತಲೆದೋರಿದೆ.

ಇದೇ ರೀತಿ ಆಂಧ್ರಪ್ರದೇಶದ ಸಿಗಡಿ ಉದ್ಯಮವೂ ಸಂಕಷ್ಟಕ್ಕೆ ಸಿಲುಕಲಿದೆ. 2023-24ನೇ ಆರ್ಥಿಕ ವರ್ಷದಲ್ಲಿ ₹22,307 ಕೋಟಿ ಮೊತ್ತದ ಮತ್ಸ್ಯ ಆಹಾರೋತ್ಪನ್ನಗಳು ಭಾರತದಿಂದ ಅಮೆರಿಕಕ್ಕೆ ರಫ್ತಾಗಿವೆ. ಅದರಲ್ಲಿ ಸಿಗಡಿ ಪಾಲು ಶೇ 92. ದೇಶದ ಶೇ 75ರಷ್ಟು ಸಿಗಡಿ ಆಂಧ್ರಪ್ರದೇಶದಿಂದಲೇ ರಫ್ತಾಗುತ್ತಿದೆ. ಆಂಧ್ರದ ಪೂರ್ವ ಮತ್ತು ಪಶ್ಚಿಮ ಗೋದಾವರಿ ಜಿಲ್ಲೆಗಳು, ಕೃಷ್ಣಾ, ಗುಂಟೂರು ಮತ್ತು ನೆಲ್ಲೂರು ಜಿಲ್ಲೆಗಳ ಎರಡು ಲಕ್ಷ ಹೆಕ್ಟೇರ್‌ಗಳಲ್ಲಿ ಮತ್ಸ್ಯಕೃಷಿ ನಡೆಯುತ್ತಿದೆ. ಇದು ಈ ಭಾಗದ ಆರ್ಥಿಕತೆಯ ಮೂಲಾಧಾರವಾಗಿದೆ. ಅಮೆರಿಕದ ಸುಂಕ ಹೇರಿಕೆಯ ನಿರ್ಧಾರವು ಈ ಭಾಗದ 10 ಲಕ್ಷ ಕುಟುಂಬಗಳ ಮೇಲೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪರಿಣಾಮ ಬೀರಲಿದೆ ಎನ್ನಲಾಗುತ್ತಿದೆ.

ದ್ವಿಪಕ್ಷೀಯ ಮಾತುಕತೆ: ಭಾರತ ಮತ್ತು ಅಮೆರಿಕದ ನಡುವೆ ದ್ವಿಪಕ್ಷೀಯ ವ್ಯಾಪಾರ ಮಾತುಕತೆ ನಡೆಯುತ್ತಿದ್ದು, ಅದು ಇನ್ನೂ ಅಂತಿಮಗೊಂಡಿಲ್ಲ. ಕೃಷಿ ಮತ್ತು ಹೈನು ಉತ್ಪನ್ನಗಳ ವಲಯವನ್ನು ಅಮೆರಿಕದ ಉತ್ಪನ್ನಗಳಿಗೆ ಮುಕ್ತಗೊಳಿಸಲು ಭಾರತವು ಒಪ್ಪುತ್ತಿಲ್ಲ. ಉಕ್ಕು, ಅಲ್ಯೂಮಿನಿಯಂ ಮತ್ತು ಆಟೊಮೊಬೈಲ್ ಬಿಡಿ ಭಾಗಗಳ ಮೇಲೆ ಹೆಚ್ಚು ಸುಂಕ ವಿಧಿಸಬಾರದು ಎನ್ನುವ ಭಾರತದ ಬೇಡಿಕೆಯನ್ನು ಅಮೆರಿಕ ಒಪ್ಪುತ್ತಿಲ್ಲ. ಹೀಗಾಗಿ ಅಮೆರಿಕದ ಅಧ್ಯಕ್ಷ ಟ್ರಂಪ್ ಅವರು ಭಾರತದ ಬಗೆಗೆ ಕೋಪ ಹೊಂದಿದ್ದಾರೆ ಎನ್ನಲಾಗಿದೆ. ಈ ಮಾತುಕತೆ ಅಖೈರುಗೊಳ್ಳುವವರೆಗೆ ಅಮೆರಿಕ ಪ್ರವೇಶಿಸುವ ಭಾರತದ ಸರಕುಗಳ ಮೇಲೆ ಶೇ 25ರಷ್ಟು ಸುಂಕ ಬೀಳಲಿದೆ. ಆಗಸ್ಟ್ ತಿಂಗಳ ಮಧ್ಯಭಾಗದಲ್ಲಿ ಮಾತುಕತೆ ಪುನರಾರಂಭಗೊಳ್ಳಲಿದ್ದು, ನಂತರದಲ್ಲಿ ಸುಂಕದ ಪ್ರಮಾಣ ಕಡಿಮೆ ಆಗುವ ವಿಶ್ವಾಸ ಭಾರತದ ಉದ್ಯಮ ರಂಗದಲ್ಲಿದೆ. ಅಲ್ಲಿಯವರೆಗಾದರೂ ಶೇ 25ರಷ್ಟು ಸುಂಕವನ್ನು ಭಾರತ ಭರಿಸಲೇಬೇಕಿದ್ದು, ಇದು ದೇಶದ ಉದ್ಯಮ ರಂಗದ ಮೇಲೆ ಹಲವು ರೀತಿಯ ಪರಿಣಾಮಗಳನ್ನು ಬೀರಲಿದೆ.

ರಷ್ಯಾದಿಂದ ಇಂಧನ ಮತ್ತು ರಕ್ಷಣಾ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳುತ್ತಿರುವುದರಿಂದ ಭಾರತದ ಮೇಲೆ ಸುಂಕ ಹೇರುವುದರ ಜತೆಗೆ ದಂಡವನ್ನೂ ವಿಧಿಸುವುದಾಗಿ ಟ್ರಂಪ್ ಘೋಷಿಸಿದ್ದಾರೆ. ಆದರೆ, ದಂಡದ ಪ್ರಮಾಣ ಎಷ್ಟು ಎನ್ನುವುದನ್ನು ಅವರು ಸ್ಪಷ್ಟಪಡಿಸಿಲ್ಲ. ಇದು ಟ್ರಂಪ್ ಅವರ ಒತ್ತಡ ತಂತ್ರ ಎಂದು ಕೆಲವರು ವಿಶ್ಲೇಷಿಸುತ್ತಿದ್ದಾರೆ. ತಮ್ಮ ದೇಶದ ಹಿತಾಸಕ್ತಿ ಸಾಧಿಸಿಕೊಳ್ಳಲು ಟ್ರಂಪ್ ಅವರು ಏಕಾಏಕಿ ಭಾರಿ ಪ್ರಮಾಣದಲ್ಲಿ ಸುಂಕ ಹೇರುವುದು, ನಂತರ ಆ ಪ್ರಮಾಣವನ್ನು ಇಳಿಸುವುದು ಚೀನಾ ಸೇರಿದಂತೆ ಹಲವು ದೇಶಗಳ ವಿಚಾರದಲ್ಲಿ ಈಗಾಗಲೇ ಸಾಬೀತಾಗಿದೆ. ಭಾರತದ ವಿಚಾರದಲ್ಲೂ ಅದು ಪುನರಾವರ್ತನೆ ಆಗಬಹುದು ಎಂದು ಕೆಲವು ಆರ್ಥಿಕ ತಜ್ಞರು ಹೇಳುತ್ತಿದ್ದಾರೆ. ಸದ್ಯಕ್ಕೆ ಪರಿಸ್ಥಿತಿ ಅನಿಶ್ಚಿತವಾಗಿದ್ದು, ಭಾರತದ ಉದ್ಯಮ ರಂಗದಲ್ಲಿ ಆತಂಕ ನೆಲಸಿದೆ.

•ರಫ್ತಿಗೆ ಹೊಡೆತ •ಜಿಡಿಪಿ ಕುಸಿಯುವ ಭೀತಿ •ಔಷಧ, ಗಾರ್ಮೆಂಟ್ಸ್ ಉದ್ಯಮದ ಮೇಲೆ ಪ್ರಭಾವ •ಉದ್ಯೋಗಕ್ಕೂ ಕುತ್ತು



₹11.30 ಲಕ್ಷ ಕೋಟಿ
2024–25ರಲ್ಲಿ ಭಾರತ ಮತ್ತು ಅಮೆರಿಕದ ನಡುವೆ ನಡೆದಿದ್ದ ಸರಕುಗಳ ವ್ಯಾಪಾರ ಮೌಲ್ಯ

₹7.61 ಲಕ್ಷ ಕೋಟಿ
2024–25ರಲ್ಲಿ ಭಾರತವು ಅಮೆರಿಕಕ್ಕೆ ರಫ್ತು ಮಾಡಿರುವ ವಸ್ತುಗಳ ಮೌಲ್ಯ

₹3.69 ಲಕ್ಷ ಕೋಟಿ
2024–25ರಲ್ಲಿ ಭಾರತವು ಅಮೆರಿಕದಿಂದ ಆಮದು ಮಾಡಿಕೊಂಡ ವಸ್ತುಗಳ ಮೌಲ್ಯ

₹3.92 ಲಕ್ಷ ಕೋಟಿ
ದ್ವಿಪಕ್ಷೀಯ ವ್ಯಾಪಾರದಲ್ಲಿ ಭಾರತ ಹೊಂದಿರುವ ಮಿಗತೆ ಮೌಲ್ಯ


ರಾಜ್ಯದ ಮೇಲೂ ಪ್ರಭಾವ

ಭಾರತದ ಉತ್ಪನ್ನಗಳಿಗೆ ಟ್ರಂಪ್ ವಿಧಿಸಿರುವ ಶೇ 25ರ ಸುಂಕದಿಂದ ರಾಜ್ಯದ ಉದ್ದಿಮೆಗಳ ಮೇಲೂ ಪರಿಣಾಮ ಬೀರುವುದು ಖಚಿತವಾದರೂ, ತೀವ್ರ ಹೊಡೆತವೇನೂ ಬೀಳದು ಎಂದು ಉದ್ಯಮ ಪ್ರತಿನಿಧಿಗಳು ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಪ್ರಕಾರ, 2023–24ನೇ ಸಾಲಿನಲ್ಲಿ ರಾಜ್ಯದಿಂದ ಅಂದಾಜು ₹4 ಲಕ್ಷ ಕೋಟಿ ಮೌಲ್ಯದ ವಸ್ತುಗಳನ್ನು ಅಮೆರಿಕಕ್ಕೆ ರಫ್ತು ಮಾಡಲಾಗಿದೆ. ರಾಜ್ಯದಿಂದ ಪ್ರಮುಖವಾಗಿ ಕೃಷಿ ಉತ್ಪನ್ನಗಳು, ಐಟಿ ಹಾರ್ಡ್‌ವೇರ್/ಎಲೆಕ್ಟ್ರಾನಿಕ್ಸ್ ಗಾರ್ಮೆಂಟ್ಸ್, ವಾಹನಗಳ ಬಿಡಿ ಭಾಗಗಳನ್ನು ರಫ್ತು ಮಾಡಲಾಗುತ್ತದೆ. ಈ ಪೈಕಿ ಐಟಿ ಕ್ಷೇತ್ರದ ಕೊಡುಗೆ ಶೇ 42ರಷ್ಟಿದೆ. ಸುಂಕದ ಕಾರಣಕ್ಕೆ ರಫ್ತಿನ ಪ್ರಮಾಣ ಸ್ವಲ್ಪ ಕಡಿಮೆಯಾಗಬಹುದು. ಆದರೆ, ಪೂರ್ಣವಾಗಿ ನಿಲ್ಲದು ಎಂದು ಹೇಳುತ್ತಾರೆ ಉದ್ಯಮಿಗಳು.

‘ಶೇ 25ರಷ್ಟು ತೆರಿಗೆ ಎಂದರೆ ದೊಡ್ಡ ಸಂಖ್ಯೆ. ಖಂಡಿತವಾಗಿಯೂ ರಾಜ್ಯದ ಕೈಗಾರಿಕೆಗಳ ಮೇಲೆ ಪರಿಣಾಮ ಬೀರಲಿದೆ. ಆದರೆ, ರಫ್ತು ಪೂರ್ಣವಾಗಿ ಸ್ಥಗಿತಗೊಳ್ಳದು. ಈಗ ಇಲ್ಲಿಂದ ರಫ್ತು ಮಾಡುವ ವಸ್ತುಗಳ ಮೇಲೆ ಸುಂಕ ವಿಧಿಸುವುದರಿಂದ ಅಲ್ಲಿ ನಮ್ಮ ದೇಶದ ಉತ್ಪನ್ನಗಳ ಬೆಲೆ ಹೆಚ್ಚಾಗಲಿದೆ. ಹಾಗಾಗಿ, ಗ್ರಾಹಕರು ಖರೀದಿಯನ್ನು ಸ್ವಲ್ಪ ಕಡಿಮೆ ಮಾಡಬಹುದು. ಹೀಗಾದಾಗ, ಬೇಡಿಕೆ ಕುಸಿಯುವುದರಿಂದ ರಫ್ತಿನ ಪ್ರಮಾಣ ಇಳಿಯಬಹುದು. ಆದರೆ, ಆ ಪ್ರಮಾಣ ಹೆಚ್ಚಿರಲಾರದು’ ಎಂದು ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ.ಬಾಲಕೃಷ್ಣ ‘ಪ್ರಜಾವಾಣಿ’ಗೆ ತಿಳಿಸಿದರು.

‘ತೀವ್ರವಾಗಿರದು’



ಸುಂಕ ಹೆಚ್ಚಳದಿಂದಾಗಿ ರಾಜ್ಯದಿಂದ ಅಮೆರಿಕಕ್ಕೆ ಆಗುವ ರಫ್ತಿನ ಮೇಲೆ ಹೆಚ್ಚು ಪರಿಣಾಮ ಬೀರದು ಎನ್ನುವುದು ನಮ್ಮ ಅಂದಾಜು. ಈಗ ಶೇ 25ರಷ್ಟು ಸುಂಕ ವಿಧಿಸಲಾಗಿದ್ದರೂ, ಎರಡೂ ರಾಷ್ಟ್ರಗಳ ನಡುವೆ ವ್ಯಾಪಾರ ಒಪ್ಪಂದ ಮಾತುಕತೆ ನಡೆಯುತ್ತಿದೆ. ಸುಂಕ ಕಡಿಮೆ ಆದರೂ ಆಗಬಹುದು. ಸದ್ಯದ ಮಟ್ಟಿಗೆ ನಮ್ಮ ರಫ್ತಿನಲ್ಲಿ ಶೇ 10ರಷ್ಟು ಕಡಿಮೆಯಾಗಬಹುದು. ಭಾರತ ಹಲವು ದೇಶಗಳೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುತ್ತಿದೆ. ಇತ್ತೀಚೆಗೆ ಬ್ರಿಟನ್ ಜೊತೆಗಿನ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಸುಂಕ ವಿನಾಯಿತಿಗಳನ್ನು ಘೋಷಿಸಲಾಗಿದೆ. ಒಂದು ವೇಳೆ ಅಮೆರಿಕದ ಸುಂಕದಿಂದಾಗಿ ಅಲ್ಲಿಗೆ ಮಾಡಲಾಗುವ ರಫ್ತಿನ ಮೇಲೆ ಪರಿಣಾಮ ಬಿದ್ದರೂ, ಬ್ರಿಟನ್ ಸೇರಿದಂತೆ ನಾವು ಒಪ್ಪಂದ ಮಾಡಿಕೊಂಡ ಇತರ ರಾಷ್ಟ್ರಗಳೊಂದಿಗಿನ ರಫ್ತು ವ್ಯವಹಾರ ಹೆಚ್ಚಲಿದೆ

ಎಂ.ಜಿ.ಬಾಲಕೃಷ್ಣ, ಎಫ್‌ಕೆಸಿಸಿಐ ಅಧ್ಯಕ್ಷ

ಭಾರತ–ರಷ್ಯಾ ಸ್ನೇಹ: ಟ್ರಂಪ್ ಕೆಂಗಣ್ಣು

ಡೊನಾಲ್ಡ್ ಟ್ರಂಪ್ ಅವರು ಭಾರತದ ಮೇಲೆ ಶೇ 25ರಷ್ಟು ಸುಂಕ ವಿಧಿಸುವುದಕ್ಕೆ ಕಾರಣವಾಗಿರುವ ಅಂಶಗಳಲ್ಲಿ ರಷ್ಯಾದೊಂದಿಗೆ ಭಾರತ ಹೊಂದಿರುವ ರಕ್ಷಣಾ ಮತ್ತು ವ್ಯಾಪಾರ ಸಂಬಂಧವೂ ಒಂದು. ಮೊದಲಿನಿಂದಲೂ ಭಾರತ ಮತ್ತು ರಷ್ಯಾ ನಡುವಿನ ಬಾಂಧವ್ಯ ಉತ್ತಮವಾಗಿದೆ. ಭಾರತವು ಯುದ್ಧವಿಮಾನಗಳು ಸೇರಿದಂತೆ ರಕ್ಷಣಾ ಸಲಕರಣೆಗಳು ಮತ್ತು ಸೇನಾ ತಂತ್ರಜ್ಞಾನವನ್ನು ರಷ್ಯಾದಿಂದ ಖರೀದಿಸುತ್ತಿದೆ. ಜಾಗತಿಕ ವೇದಿಕೆಗಳಲ್ಲಿ ಅದು ಯಾವಾಗಲೂ ಭಾರತವನ್ನು ಬೆಂಬಲಿಸುತ್ತಲೇ ಬಂದಿದೆ. ಅಮೆರಿಕದೊಂದಿಗೆ ನಡೆಸಲಾಗುತ್ತಿರುವ ವ್ಯಾಪಾರಕ್ಕೆ ಹೋಲಿಸಿದರೆ, ರಷ್ಯಾದೊಂದಿಗೆ ಭಾರತದ ವ್ಯಾಪಾರ ಕಡಿಮೆ. ಆದರೆ, ನಾಲ್ಕು ವರ್ಷಗಳಿಂದ ದ್ವಿಪಕ್ಷೀಯ ವ್ಯಾಪಾರ ಹೆಚ್ಚಾಗಿದೆ.

ರಷ್ಯಾ ಉಕ್ರೇನ್ ಮೇಲೆ ಯುದ್ಧ ಸಾರಿದ ನಂತರ, ಅಮೆರಿಕವು ರಷ್ಯಾದ ಮೇಲೆ ಹಲವು ನಿರ್ಬಂಧಗಳನ್ನು ವಿಧಿಸಿತು. ಆ ಬಳಿಕ ಭಾರತವು ಅಂತರರಾಷ್ಟ್ರೀಯ ಮಾರುಕಟ್ಟೆಗಿಂತ ಕಡಿಮೆ ಬೆಲೆಯಲ್ಲಿ ರಷ್ಯಾದಿಂದ ಕಚ್ಚಾ ತೈಲವನ್ನು ಖರೀದಿ ಮಾಡಲು ಆರಂಭಿಸಿತು. ಇದನ್ನು ಅಮೆರಿಕ, ಯುರೋಪಿನ ರಾಷ್ಟ್ರಗಳು ವಿರೋಧಿಸಿದವು. ಅದಕ್ಕೆ ಸೊಪ್ಪು ಹಾಕದ ಭಾರತವು ಈಗ ಖರೀದಿಯನ್ನು ಇನ್ನಷ್ಟು ಹೆಚ್ಚಿಸಿದೆ. ಈಗ ಪ್ರತಿ ದಿನ 20.8 ಕೋಟಿ ಬ್ಯಾರೆಲ್‌ಗಳಷ್ಟು ತೈಲವನ್ನು ಖರೀದಿಸುತ್ತಿದೆ. ಚೀನಾದ ನಂತರ ರಷ್ಯಾದಿಂದ ಹೆಚ್ಚು ತೈಲವನ್ನು ಖರೀದಿಸುತ್ತಿರುವ ರಾಷ್ಟ್ರ ಭಾರತ.

ಉಕ್ರೇನ್ –ರಷ್ಯಾ ಯುದ್ಧವನ್ನು ನಿಲ್ಲಿಸಲು ಟ್ರಂಪ್ ನಡೆಸುತ್ತಿರುವ ಯತ್ನ ವಿಫಲವಾಗುತ್ತಿದೆ. ಟ್ರಂಪ್ ಮಾತನ್ನು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಕೇಳುತ್ತಿಲ್ಲ. ಚೀನಾ ಮತ್ತು ಭಾರತವು ಭಾರಿ ಪ್ರಮಾಣದಲ್ಲಿ ತೈಲ ಖರೀದಿಸುತ್ತಿರುವುದರಿಂದ ರಷ್ಯಾಕ್ಕೆ ಆರ್ಥಿಕವಾಗಿ ಅನುಕೂಲವಾಗುತ್ತಿದ್ದು, ಶಾಂತಿ ಮಾತುಕತೆಗೆ ಬಾರದೆ ಯುದ್ಧ ಮುಂದುವರಿಸುತ್ತಿದೆ ಎಂಬುದು ಟ್ರಂಪ್ ಕೋಪಕ್ಕೆ ಕಾರಣ. ತೈಲ ಖರೀದಿಸದಂತೆ ಟ್ರಂಪ್ ಆಡಳಿತ ಭಾರತದ ಮೇಲೆ ಒತ್ತಡ ಹಾಕುತ್ತಲೇ ಇದೆ. ಆದರೆ, ಭಾರತ ಅದಕ್ಕೆ ಬಗ್ಗಿಲ್ಲ.

ಜತೆಗೆ, ಭಾರತದಲ್ಲಿ ರಷ್ಯಾದ ರಕ್ಷಣಾ ಸಲಕರಣೆಗಳ ತಯಾರಿಕೆ ಸೇರಿದಂತೆ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಒಪ್ಪಂದಗಳನ್ನು ನಡೆಸಲು ಎರಡೂ ರಾಷ್ಟ್ರಗಳು ಸಮ್ಮತಿಸಿವೆ. ಅಮೆರಿಕದ ಎಫ್ 35 ಯುದ್ಧವಿಮಾನಗಳು ಸೇರಿದಂತೆ ರಕ್ಷಣಾ ಸಲಕರಣೆಗಳನ್ನು ಭಾರತ ಖರೀದಿಸಬೇಕು ಎಂದು ಟ್ರಂಪ್ ಬಯಸಿದ್ದಾರೆ. ಈ ವಿಚಾರದಲ್ಲೂ ಕೇಂದ್ರ ಸರ್ಕಾರ ಸ್ಪಷ್ಟವಾದ ನಿರ್ಧಾರ ತಳೆದಿಲ್ಲ. ಇದು ಕೂಡ ಟ್ರಂಪ್ ಅವರಿಗೆ ಕಸಿವಿಸಿ ಉಂಟುಮಾಡಿದೆ ಎಂದು ಹೇಳಲಾಗುತ್ತಿದೆ.



ಉಕ್ರೇನ್–ರಷ್ಯಾ ಯುದ್ಧಕ್ಕೂ ಮುನ್ನ ಭಾರತ ಮತ್ತು ರಷ್ಯಾ ನಡುವಿನ ದ್ವಿಪಕ್ಷೀಯ ವ್ಯಾಪಾರ ಮೌಲ್ಯ ₹88,354 ಕೋಟಿ (1,010 ಡಾಲರ್) ಇತ್ತು. ಅದೀಗ ಆರು ಪಟ್ಟು ಹೆಚ್ಚಾಗಿದೆ. 2024–25ರ ಅಂಕಿ ಅಂಶಗಳ ಪ್ರಕಾರ, ದ್ವಿಪಕ್ಷೀಯ ವ್ಯಾಪಾರ ಮೌಲ್ಯ ₹6 ಲಕ್ಷ ಕೋಟಿಗೆ ಏರಿಕೆಯಾಗಿದೆ. ಇದರಲ್ಲಿ, ಸಿಂಹಪಾಲು ದುಡ್ಡನ್ನು ಭಾರತವು ತೈಲ ಖರೀದಿಗಾಗಿ ರಷ್ಯಾಗೆ ನೀಡಿದೆ. 2030ರ ವೇಳೆಗೆ 10 ಸಾವಿರ ಕೋಟಿ ಡಾಲರ್‌ಗೆ (₹8.75 ಲಕ್ಷ ಕೋಟಿ) ಹೆಚ್ಚಿಸಲು ಎರಡೂ ರಾಷ್ಟ್ರಗಳು ಉದ್ದೇಶಿಸಿವೆ.


ಆಧಾರ: ಪಿಟಿಐ, ವೈಟ್‌ಹೌಸ್.ಜಿಒವಿ, ಬ್ಲೂಮ್‌ಬರ್ಗ್, ಆನಂದ್ ರಾಠಿ ರಿಸರ್ಚ್, ನುವಾಮ ರಿಸರ್ಚ್, ಮಾಧ್ಯಮ ವರದಿಗಳು

ಸುಂಕದ ಹೊರೆ: ಯಾರ ಮೇಲೆ ಎಷ್ಟು? (%ಗಳಲ್ಲಿ)


ವಲಯ	ಭಾರತ (ರಫ್ತುದಾರ)	ಅಮೆರಿಕ (ಆಮದುದಾರ)	ಗ್ರಾಹಕ (ಅಮೆರಿಕನ್ನರು)
ಔಷಧ	50-60	30	10-20
ಜವಳಿ ಮತ್ತು ಉಡುಪು	40-50	30-40	10-20
ವಾಹನಗಳ ಬಿಡಿಭಾಗಗಳು	30-40	40	20-30
ಆಭರಣಗಳು	30-40	30-40	20-30
ಎಂಜಿನಿಯರಿಂಗ್ ಸರಕುಗಳು	50-60	30	10-20
ಐಟಿ ಹಾರ್ಡ್‌ವೇರ್/ಎಲೆಕ್ಟ್ರಾನಿಕ್ಸ್	30-40	30-40	20-30

ಕಲೆ: ದೀಪಕ್ ಹರಿಚಂದನ್

ಭಾರತ ಅಮೆರಿಕಕ್ಕೆ ರಫ್ತು ಮಾಡುತ್ತಿರುವ ಪ್ರಮುಖ ವಸ್ತುಗಳು ಮತ್ತು ಮೌಲ್ಯ (ಕೋಟಿಗಳಲ್ಲಿ)



ಪ್ರಮುಖ ರಾಷ್ಟ್ರಗಳ ಮೇಲೆ ವಿಧಿಸಲಾಗಿರುವ ಸುಂಕ



ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

02 ಆಗಸ್ಟ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಅಷ್ಟಮಿ ಗಂ. 7-24 **ನಕ್ಷತ್ರ:** ವಿಶಾಖ ಆಹೋರಾತ್ರ **ಯೋಗ:** ಶುಕ್ಲ (ಶುಕ್ರ) **ಆಹೋರಾತ್ರ ಕರಣ:** ಬವ ಗಂ. 7-24, ಕರ್ಕಾಟಕ ಮಾಸದ 17 ನೇ ದಿನ. **ಮಳೆ ನಕ್ಷತ್ರ :** ಪುಷ್ಯ 4 ನೇ ಪಾದ. **ರಾಹುಕಾಲ :** ಬೆಳಿಗ್ಗೆ 09-00 10-30 , **ಸೂರ್ಯೋದಯ :** 06-19 ಸೂರ್ಯಾಸ್ತ : 06-54, **ಮುಸ್ಲಿಂ ದಿನಾಂಕ :** 07 ಸಫರ್, **ಅದೃಷ್ಟ ಸಂಖ್ಯೆ :** 1, 4

ಮೇಷ: ದಿನಾಂತ್ಯದಲ್ಲಿ ಬಿರುಸಿನ ಚಟುವಟಿಕೆಗಳಿಂದ ಬಿಡುವು ಮಾಡಿಕೊಂಡು ಮನೆಯವರೊಡನೆ ಕಾಲ ಕಳೆಯಲು ಅಪೇಕ್ಷಿಸುವಿರಿ. ಮಕ್ಕಳ ರೋಗತಜ್ಞರಿಗೆ ವಿಶೇಷ ಸವಾಲೊಂದು ಎದುರಾಗುವ ಸಂಭವವಿದೆ.

ವೃಷಭ: ಸಿದ್ಧ ಉಡುಪಗಳ ವ್ಯಾಪಾರಸ್ಥರು ರಫ್ತು ವ್ಯಾಪಾರದಿಂದ ಹೇರಳ ಲಾಭ ಪಡೆಯುವಿರಿ. ಬಲವಾದ ಕಾರಣವಿಲ್ಲದೆ ಯಾರ ಮೇಲೂ ಕೋಪಿಸಿಕೊಳ್ಳ ಬೇಡಿ. ಮನಃಪೂರ್ವಕವಾಗಿ ಮಾಡಿದ ಕೆಲಸಕ್ಕೆ ಶ್ಲಾಘನೆ ಸಿಗಲಿದೆ.

ಮಿಥುನ: ಭವಿಷ್ಯ ಹೇಗೆ ಇರಬೇಕೆಂಬ ಸ್ಪಷ್ಟ ನಿರ್ಧಾರ ಮತ್ತು ಆಸೆ ಇರುವುದರಿಂದ ಅದನ್ನು ನನಸಾಗಿಸಲು ಕಠಿಣ ಶ್ರಮ ಅಗತ್ಯವೆನಿಸಲಿದೆ. ದಾಂಪತ್ಯದಲ್ಲಿನ ಭಿನ್ನಾಭಿಪ್ರಾಯಗಳು ದೂರಾಗಲಿವೆ.

ಕರ್ಕಾಟಕ: ಹೊಸ ಬಂಡವಾಳ ಹೂಡಿಕೆಗೆ ಉತ್ತಮ ಸಮಯ. ವಿಭಿನ್ನ ರೀತಿಯ ಕೆಲಸವನ್ನು ಸ್ನೇಹಿತರಿಂದ ಪಡೆಯುವಿರಿ. ಕೃಷಿ ಕೆಲಸದಲ್ಲಿ ಯಶಸ್ಸು ಗಳಿಸುವಿರಿ. ಪುಸ್ತಕ ಪ್ರಕಾಶಕರಿಗೆ ತಿದ್ದುಪಡಿ ಕೆಲಸ ತಲೆನೋವಾಗಬಹುದು.

ಸಿಂಹ: ಅಗ್ನಿ ಪರೀಕ್ಷೆಯಂಥ ದೊಡ್ಡ ಯೋಜನೆಗಳಲ್ಲಿ ಜಯ ಗಳಿಸುವಿರಿ. ರಾಜಕೀಯ ಪಕ್ಷವೊಂದನ್ನು ಬೆಂಬಲಿಸುವ ಬಗ್ಗೆ ಕಾರ್ಯ ಕೈಗೊಳ್ಳುವಿರಿ. ವ್ಯವಹಾರದ ನಿರ್ಣಯ ಕೈಗೊಳ್ಳುವಾಗ ಸಮಾಧಾನದಿಂದ ವರ್ತಿಸಿ.

ಕನ್ಯಾ: ನಾಯಕತ್ವದ ಪಟ್ಟ ಹೊರುವ ನಿಮ್ಮ ಸಾಮರ್ಥ್ಯವು ಕೆಲವರ ಕಣ್ಣಿಗೆ ಕೆಂಪಾಗಿ ಕಾಣುತ್ತದೆ. ಮುನ್ನುಗ್ಗಿ ಕಾರ್ಯ ನಿರ್ವಹಿಸಿ. ಮಧ್ಯಾಹ್ನದ ನಂತರದ ಪ್ರಯಾಣವನ್ನು ಮಾಡದಿರುವುದು ಉತ್ತಮ.

ತುಲಾ: ಸ್ನೇಹಿತನೊಂದಿಗೆ ಮುನಿಸಿನ ತೆರೆಯನ್ನು ಬದಿಗೆ ಸರಿಸಿ ಉತ್ತಮ ಸಮಯ ಅನುಭವಿಸುವಿರಿ. ಈಟಿಯಲ್ಲಿ ಇರಿಯುವಂಥ ಮಾತುಗಳ ಮೇಲೆ ಹಿಡಿತವಿರಲಿ. ಮಾರ್ಗದಲ್ಲಿ ಮತ್ತು ಪ್ರಯತ್ನದಲ್ಲಿ ನಂಬಿಕೆ ಇರಲಿ.

ವೃಶ್ಚಿಕ: ಸಂಘ ಸಂಸ್ಥೆಗಳ ವಿಚಾರವನ್ನು ಮುಕ್ತವಾಗಿ ಚರ್ಚಿಸಿ ನಂತರ ಕೆಲಸಗಳನ್ನು ಕಾರ್ಯರೂಪಕ್ಕೆ ತನ್ನಿ. ಸಮಪಾಲು ಸಮ ಬಾಳು ಎಂಬ ನಿಮ್ಮ ಧ್ಯೇಯವನ್ನು ಕಿರಿಯರು ಗೌರವಿಸುವುದರ ಜತೆಗೆ ಪಾಲಿಸುತ್ತಾರೆ.

ಧನು: ಕೋರ್ಟ್ ಕಚೇರಿ ಕೆಲಸಗಳಲ್ಲಿ ಜಯ ಸಿಗಲಿದ್ದು, ಸಮಸ್ಯೆಗಳು ಬಗೆ ಹರಿಯುತ್ತವೆ. ಅನಾರೋಗ್ಯವಂತರಿಗೆ ಆರೋಗ್ಯದಲ್ಲಿ ಚೇತರಿಕೆ ಕಂಡುಬರುತ್ತದೆ. ಆದಾಯದ ಎರಡರಷ್ಟು ಖರ್ಚು ಸಂಭವಿಸಬಹುದು.

ಮಕರ: ಒತ್ತಡ ತರುವಂಥ ಕೆಲಸಗಳಿಂದ ದೂರವಿರುವ ಪ್ರಯತ್ನ ಮಾಡಿ. ಸ್ಪರ್ಧೆಯಲ್ಲಿ ಜಯಗಳಿಸುವಿರಿ. ಪ್ರಾಮಾಣಿಕವಾಗಿ ಸಂಪಾದನೆ ಮಾಡುತ್ತಿರುವ ನಿಮಗೆ ಶತ್ರುಗಳ ಭಯ ಬೇಡವೆ ಬೇಡ. ರಕ್ಷಣಾ ಕೆಲಸಗಾರರು ಜಾಗ್ರತರಾಗಿರಿ.

ಕುಂಭ: ಕಾರ್ಯದ ನಿಮಿತ್ತ ಕುಟುಂಬದ ಸದಸ್ಯರನ್ನು ಎದುರು ಹಾಕಿಕೊಳ್ಳ ಬೇಕಾದ ಪರಿಸ್ಥಿತಿಗಳು ಎದುರಾಗಬಹುದು. ಸಾಮರ್ಥ್ಯವನ್ನು ಸಂಪೂರ್ಣವಾಗಿ ಉಪಯೋಗಿಸಿ. ಕಲಹಗಳಲ್ಲಿ ಮೌನವಾಗಿರಿ.

ಮೀನ: ಜೀವನದಲ್ಲಿ ನಡೆದ ಹಲವು ಹಾಸ್ಯ ಪ್ರಸಂಗಗಳನ್ನು ಸ್ನೇಹಿತರೊಂದಿಗೆ ನೆನೆಯುವಿರಿ. ನೂತನ ವಾಹನ ಕೊಳ್ಳುವ ಯೋಚನೆಯನ್ನು ಮಾಡುವವರಿಗೆ ಸಕಾಲ. ಲೇವಾದೇವಿ ನಡೆಸುವವರು ಲಾಭ ಹೊಂದುವಿರಿ.

ಪದಬಂಧ 6122

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಸವತಿಯ ಪುತ್ರ (4)
3.ರಾಜನ ದರ್ಬಾರು (4)
5.ಒಲುಮೆಯಿಂದಲೇ ಮಾಡಿದ ಒತ್ತಾಯ (3)
6.ಅಶ್ವವನ್ನೇರಲು ಬಳಸುವ ಬಳೆ (3)
8.ಮರುಳನ ಹತ್ತಿರವೇ ನೀಚ ವ್ಯಕ್ತಿ ನಿಂತಿದ್ದಾನಲ್ಲಾ! (3)
9.ಕಣ್ಣು ಮುಚ್ಚಿ ತೆಗೆಯುವಷ್ಟು ಕಾಲ (3)
10.ಕೈಯ್ಯಲ್ಲಿರುವ ಹಣ (3)
12.ಮುದ್ರಣ ನಗರಿ ಎಂದು ಹೆಸರು ಪಡೆದ ಜಿಲ್ಲೆ (3)
14.ಯುದ್ಧದ ನಗಾರಿ (4)
15.ದೃಢಕಾಯವನ್ನು ಹೀಗೂ ಹೇಳುತ್ತಾರೆ (4)

ಮೇಲಿಂದ ಕೆಳಕ್ಕೆ
1.ಮತ್ತೇರಿದ ಆನೆ (4)
2.ಛೇ!ಗಲ್ಲಿಯ ಆಜುಬಾಜು ಎಲ್ಲಾ ಕಡೆ ಕೊಳೆ! (3)
3.ಜುಲುಮೆಯಿಂದ ಮೂಡಿತೇ ಈ ಪ್ರೀತಿ? (3)
4.ಕುಳ್ಳನಲ್ಲ!ಭಾರೀ ಶ್ರೀಮಂತ! (4)
7.ಹರುಷ ತೋರುತ್ತಿರುವ ಗಂಡು ವ್ಯಕ್ತಿ(3)
8.ಸ್ವೀಕರಿಸಲು ಹಿತವಲ್ಲದ ದಾನ (3)
9.ಉತ್ತರವೇ ಇಲ್ಲದ ಮೌನ (4)
11.ಕೆಟ್ಟ ಅದೃಷ್ಟವಿದು (4)
12.ದೊಡ್ಡ ಹಾರೆ ಇಲ್ಲಿದೆ (3)
13.ಧ್ವನಿಯ ನಡುಕ (3)



6121ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಮಪದ 4.ಪರೋಕ್ಷ
5.ನಿಘಂಟು 6.ಸರಸ
10.ವಿನಿಯೋಗ 11.ಜೀವಚ್ಛವ
12.ಸುದಿನ 14.ವಲ್ಲಭ
16.ಬುರುಜು 17.ವಿಧಾನಸೌಧ

ಮೇಲಿಂದ ಕೆಳಕ್ಕೆ:
1.ಪಕ್ಷ 2.ಮಧುರ 3.ದನಿ
6.ಸವಿಗನಸು 7.ಸಹಜೀವನ
8.ಭವಿಷ್ಯ 9.ಬವಣೆ
13.ದಿವಾನ 15.ಭವಿ
16.ಬುಧ

ಸುಡೊಕು 6506

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		7	1		2		6	
	1	5		3		8		9
2		4				1		7
	6	8		5			4	1
						7	9	
9	4			2				
3	7			8		9		5
		6					8	
	8		3		5	6		2

6505 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

ಚಟಕೆ ಸುದ್ದಿ

ಬೆಳ್ಳಿ ದರ ಕೆ.ಜಿಗೆ ₹2,500 ಇಳಿಕೆ




ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಇಳಿಕೆಯಾಗಿದೆ.

ಬೆಳ್ಳಿ ದರವು ಕೆ.ಜಿಗೆ ₹2,500 ಇಳಿಕೆಯಾಗಿ, ₹1,09,500ರಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹400 ಕಡಿಮೆಯಾಗಿ, ₹97,620 ಆಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ₹300 ಇಳಿಕೆಯಾಗಿ, ₹97,500ಕ್ಕೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ದರ ಕಡಿಮೆಯಾಗಿದೆ. ಹೀಗಾಗಿ, ದೇಶದ ಚಿನಿವಾರ ಪೇಟೆಯಲ್ಲೂ ಬೆಲೆ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,768
ಇಂದಿನ ಅಂತ್ಯ:	24,565
ದಿನದ ಕನಿಷ್ಠ:	24,535
	203

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು		
	100 ಕ್ಕೆ	₹480
	12 ಕ್ಕೆ	₹66
ಮೈಸೂರು:	100 ಕ್ಕೆ	₹490

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹382-610
ದ್ವಿತಳಿ (ಬಿ.ವಿ)	₹460-766

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹201
ಆರ್‌ಎಸ್‌ಎಸ್-5	₹195
ಗುಡ್ ಲಾಟ್	₹179

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ)	(10 ಕೆ.ಜಿಗೆ)
ಶೇಂಗಾ (ರಿಫೈನ್ಡ್)	₹1375 (1415)
ಸೋಯಾ (ರಿಫೈನ್ಡ್)	₹1235 (1235)
ಸೂರ್ಯಕಾಂತಿ (ರಿಫೈನ್ಡ್)	₹1380 (1365)
ಪಾಮೋಲಿನ್	₹1210 (1200)

ಕೊಬ್ಬರಿ ಧಾರಣೆ (ಕ್ವಿಂಟಲ್)	
ಅರಸೀಕೆರೆ	₹17000-20000
ಹುಣಸೂರು	₹15500-15500
ಮಂಗಳೂರು	₹9000-20000

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್)	
ದೊಡ್ಡ	₹1200-1600
ಮಧ್ಯಮ	₹800-1200
ಸಣ್ಣ	₹500-800

ಮುಂಬೈ ಧಾರಣೆ (ಶೇಂಗಾ)	
01-08-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7300-7400
ದಪ್ಪ ಗುಜರಾತ್ (ಹೊಸ)	8300-8400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1385 (1425)
ಒಂದು ವಾರದ ಡೆಲಿವರಿ	1380 (1420)
ಪಾಮ್ ವಾರದ ಡೆಲಿವರಿ	1208 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1260 (1275)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	98,250 (98,250)
ಬೆಳ್ಳಿ ಕೆ.ಜಿಗೆ	1,10,300 (1,10,300)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ವಾಣಿಜ್ಯ ಸಿಲಿಂಡರ್ ದರ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ₹33.50 ಕಡಿಮೆ ಮಾಡಿದ್ದರೆ, ವಿಮಾನಗಳಲ್ಲಿ ಬಳಸುವ ಇಂಧನದ (ಎಟಿಎಫ್) ಬೆಲೆಯನ್ನು ಶೇಕಡ 3ರಷ್ಟು ಹೆಚ್ಚಿಸಿವೆ.

ಹೊಸ ದರವು ಶುಕ್ರವಾರ ದಿಂದಲೇ ಜಾರಿಗೆ ಬಂದಿದೆ.

ವಾಣಿಜ್ಯ ಉದ್ದೇಶಕ್ಕೆ ಬಳಸುವ 19 ಕೆ.ಜಿ ತೂಕದ ಸಿಲಿಂಡರ್ ಬೆಲೆಯು ನವದೆಹಲಿಯಲ್ಲಿ ₹1,631.50ಕ್ಕೆ ತಗ್ಗಿದೆ. ಈ ಸಿಲಿಂಡರ್ ಬೆಲೆಯನ್ನು ಸತತ ಐದನೆಯ ಬಾರಿಗೆ ಇಳಿಕೆ ಮಾಡಲಾಗಿದೆ.

ಮನೆಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ವ್ಯತ್ಯಾಸ ಆಗಿಲ್ಲ. ಪ್ರಸ್ತುತ ₹853 ಇದೆ.

ಎಟಿಎಫ್ ಬೆಲೆಯು ₹2,677 ಹೆಚ್ಚಳವಾಗಿದೆ. ದೆಹಲಿಯಲ್ಲಿ ಪ್ರತಿ ಕಿಲೋ ಲೀಟರ್‌ಗೆ (ಒಂದು ಕಿಲೋ ಲೀಟರ್ ಎಂದರೆ ಒಂದು ಸಾವಿರ ಲೀಟರ್) ₹92,021 ಆಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಂಧನ ದರ, ವಿದೇಶಿ ವಿನಿಮಯ ದರಕ್ಕೆ ಅನುಗುಣವಾಗಿ ತೈಲ ಮಾರಾಟ ಕಂಪನಿಗಳು ಪ್ರತಿ ತಿಂಗಳು ಈ ದರ ಪರಿಷ್ಕರಣೆ ಮಾಡುತ್ತವೆ.

‘ಭಾರತಕ್ಕಿಂತ ಅಮೆರಿಕಕ್ಕೆ ಹೆಚ್ಚು ನಷ್ಟ’

ಸುಂಕ ಹೆಚ್ಚಳವು ಅಮೆರಿಕದ ಜಿಡಿಪಿ, ಹಣದುಬ್ಬರ, ಡಾಲರ್ ಮೇಲೆ ಪರಿಣಾಮ ಬೀರುವ ನಿರೀಕ್ಷೆ: ಎಸ್‌ಬಿಐ ರಿಸರ್ಚ್

ನವದೆಹಲಿ (ಪಿಟಿಐ): ಭಾರತದ ಮೇಲೆ ಅಮೆರಿಕ ವಿಧಿಸಿರುವ ಹೆಚ್ಚಿನ ಸುಂಕವು, ಭಾರತಕ್ಕಿಂತ ಅಮೆರಿಕದ ಜಿಡಿಪಿ ಮತ್ತು ಹಣದುಬ್ಬರದ ಮೇಲೆ ಹೆಚ್ಚಿನ ಪರಿಣಾಮ ಬೀರಲಿದೆ. ಈ ಸುಂಕ ಹೇರಿಕೆಯು ಅಮೆರಿಕದ ‘ಕೆಟ್ಟ ವ್ಯಾಪಾರ ನಿರ್ಧಾರವಾಗಿದೆ’ ಎಂದು ಎಸ್‌ಬಿಐ ರಿಸರ್ಚ್ ತಿಳಿಸಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತದಿಂದ ಆಮದು ಮಾಡಿಕೊಳ್ಳಲಾಗುವ ಎಲ್ಲ ಸರಕುಗಳ ಮೇಲೆ ಶೇ 25ರಷ್ಟು ಸುಂಕ ವಿಧಿಸಲು ತೀರ್ಮಾನಿಸಿದ್ದಾರೆ.

ಭಾರತಕ್ಕೆ ಅಧಿಕ ಸುಂಕ ವಿಧಿಸಿರುವುದು, ಭಾರತಕ್ಕಿಂತ ಅಮೆರಿಕದ ಮೇಲೆಯೇ ಹೆಚ್ಚು ನಕಾರಾತ್ಮಕ ಪರಿಣಾಮ ಬೀರಲಿದೆ. ಅಮೆರಿಕದ ಆರ್ಥಿಕತೆ ಕುಂಠಿತಗೊಳ್ಳುವ, ಡಾಲರ್ ಮೌಲ್ಯವೂ ಕುಸಿಯುವ ಸಾಧ್ಯತೆ ಇದೆ. 2026ರ ವೇಳೆಗೆ ಅಮೆರಿಕದ ಹಣದುಬ್ಬರ ಶೇ 2ಕ್ಕಿಂತ ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಎಸ್‌ಬಿಐ ರಿಸರ್ಚ್ ಶುಕ್ರವಾರ ಹೇಳಿದೆ.

ಸುಂಕ ಹೆಚ್ಚಳದಿಂದ ವಸ್ತುಗಳ ಬೆಲೆ ಏರಿಕೆಯಾಗಲಿದೆ. ಇದರಿಂದ ಅಲ್ಪಾವಧಿಯಲ್ಲಿ ಅಮೆರಿಕದ ಕುಟುಂಬವೊಂದಕ್ಕೆ ಸರಾಸರಿ ₹2.10 ಲಕ್ಷ ನಷ್ಟ ಉಂಟಾಗುವ ಅಂದಾಜಿದೆ. ಕಡಿಮೆ ಆದಾಯ ಹೊಂದಿರುವ ಕುಟುಂಬಗಳು ₹1.13 ಲಕ್ಷ ನಷ್ಟ ಅನುಭವಿಸಿದರೆ, ಹೆಚ್ಚಿನ ಆದಾಯ ಹೊಂದಿರುವ ಕುಟುಂಬಗಳು ₹4.37 ಲಕ್ಷ ನಷ್ಟ ಕಾಣುವ ನಿರೀಕ್ಷೆಯಿದೆ ಎಂದು ಎಸ್‌ಬಿಐ ಗ್ರೂಪ್‌ನ ಮುಖ್ಯ ಆರ್ಥಿಕ ಸಲಹೆಗಾರರಾದ ಸೌಮ್ಯಕಾಂತಿ ಘೋಷ್ ಅಭಿಪ್ರಾಯಪಟ್ಟಿದ್ದಾರೆ.



ಈ ಮೊದಲು ಕೆಲವು ಸರಕುಗಳಿಗೆ ಅಮೆರಿಕವು ಕಡಿಮೆ ಸುಂಕ ವಿಧಿಸುತ್ತಿತ್ತು. ವಜ್ರ, ಸ್ಮಾರ್ಟ್‌ಫೋನ್‌ಗಳು, ಔಷಧ ಉತ್ಪನ್ನ ಹಾಗೂ ಇತರೆ ವಸ್ತುಗಳಿಗೆ ಗರಿಷ್ಠ ಸುಂಕ ಶೇ 10.8ರಷ್ಟಿತ್ತು. ಇದೀಗ ಈ ಎಲ್ಲ ಸರಕುಗಳ ಮೇಲೆ ಶೇ 25ರಷ್ಟು ಸುಂಕ ತೆರಬೇಕಿದೆ ಎಂದು ತಿಳಿಸಿದೆ.

ಅಮೆರಿಕದ ಒಟ್ಟು ಔಷಧಗಳ ಬೇಡಿಕೆಯ ಪೈಕಿ, ಭಾರತ ಪೂರೈಸುವ ಔಷಧಗಳ ಪ್ರಮಾಣ ಶೇ 47ರಷ್ಟು. ಒಂದು ವೇಳೆ ಅಮೆರಿಕ, ಔಷಧಗಳ ತಯಾರಿಕೆಯನ್ನು ಬೇರೆ ದೇಶಗಳಿಗೆ ಅಥವಾ ದೇಶದಲ್ಲಿನ ಉತ್ಪಾದನಾ ಘಟಕಗಳಿಗೆ ವಹಿಸಿದಲ್ಲಿ, ಪೂರ್ಣ ಪ್ರಮಾಣದಲ್ಲಿ ಉತ್ಪಾದನಾ ಚಟುವಟಿಕೆಗಳು ಆರಂಭಗೊಳ್ಳುವುದಕ್ಕೆ ಕನಿಷ್ಠ 3ರಿಂದ 5 ವರ್ಷ ಬೇಕಾಗುತ್ತದೆ. ಇದು ಔಷಧಿ ಕೊರತೆಯನ್ನು ಹೆಚ್ಚಿಸುವುದಲ್ಲದೆ, ಅಮೆರಿಕದ ನಾಗರಿಕರು ಹೆಚ್ಚಿನ ದರ ನೀಡಿ ಔಷಧ ಖರೀದಿಸಬೇಕಾಗಬಹುದು. ಅಲ್ಲದೆ ಇದು ಔಷಧ ಕಂಪನಿಗಳ ಗಳಿಕೆಯ ಮೇಲೂ ಪರಿಣಾಮ ಬೀರಲಿದೆ ಎಂದೂ ಎಸ್‌ಬಿಐ ರಿಸರ್ಚ್ ತಿಳಿಸಿದೆ.

ಸುಂಕ: ಜಿಡಿಪಿ ಪರಿಷ್ಕರಣೆ

2025–26ರ ಆರ್ಥಿಕ ವರ್ಷದ ದೇಶದ ಜಿಡಿಪಿ ಬೆಳವಣಿಗೆಯನ್ನು ಫಿಚ್ ರೇಟಿಂಗ್ಸ್ ಸಂಸ್ಥೆ ಪರಿಷ್ಕರಿಸಿದೆ.


ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜಿಡಿಪಿ ಬೆಳವಣಿಗೆ ಶೇ 6.4ರಷ್ಟು ಇರಲಿದೆ ಎಂದು ಏಪ್ರಿಲ್‌ನಲ್ಲಿ ಅಂದಾಜಿಸಿತ್ತು. ಆದರೆ, ಭಾರತದ ಸರಕುಗಳ ಮೇಲೆ ಅಮೆರಿಕ ಹೆಚ್ಚಿನ ಸುಂಕ ವಿಧಿಸುವುದಾಗಿ ಹೇಳಿದ್ದರಿಂದ ಅಂದಾಜನ್ನು ಪರಿಷ್ಕರಿಸಿದ್ದು, ಶೇ 6.3ಕ್ಕೆ ಇಳಿಸಿದೆ.

ಸುಂಕ ಹೇರಿಕೆಯು ಭಾರತದ ಕಂಪನಿಗಳ ಮೇಲೆ ಕಡಿಮೆ ಪ್ರಮಾಣದಲ್ಲಿ ಪ್ರಭಾವ ಬೀರುವ ನಿರೀಕ್ಷೆ ಇದೆ ಎಂದು ಹೇಳಿದೆ.

ಸೆನ್ಸೆಕ್ಸ್ 585 ಅಂಶ ಕುಸಿತ

ಮುಂಬೈ (ಪಿಟಿಐ): ಭಾರತದ ಸರಕುಗಳ ಮೇಲೆ ಅಮೆರಿಕವು ಸುಂಕ ವಿಧಿಸಿದ್ದರಿಂದ ಶುಕ್ರವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿವೆ.


ಲೋಹ, ಐ.ಟಿ, ಫಾರ್ಮಾ ಮತ್ತು ದೂರಸಂಪರ್ಕ ಕಂಪನಿಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದು, ವಿದೇಶಿ ಬಂಡವಾಳದ ಹೊರಹರಿವು ಸಹ ಸೂಚ್ಯಂಕಗಳ ಇಳಿಕೆಗೆ ಕಾರಣವಾದವು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.



ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 585 ಅಂಶ ಇಳಿಕೆಯಾಗಿ, 80,599ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 203 ಅಂಶ ಕಡಿಮೆಯಾಗಿ, 24,565ಕ್ಕೆ ಕೊನೆಗೊಂಡಿದೆ.

ಸನ್ ಫಾರ್ಮಾ, ಟಾಟಾ ಸ್ಟೀಲ್, ಮಾರುತಿ ಸುಜುಕಿ, ಟಾಟಾ ಮೋಟರ್ಸ್, ಇನ್ಫೊಸಿಸ್, ಭಾರ್ತಿ ಏರ್‌ಟೆಲ್ ಮತ್ತು ಟೆಕ್ ಮಹೀಂದ್ರ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಟ್ರೆಂಟ್, ಏಷ್ಯನ್ ಪೇಂಟ್ಸ್, ಹಿಂದೂಸ್ತಾನ್ ಯೂನಿಲಿವರ್, ಐಟಿಸಿ, ಕೋಟಕ್ ಮಹೀಂದ್ರ ಬ್ಯಾಂಕ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ, ಜಪಾನ್, ಶಾಂಘೈ ಮತ್ತು ಹಾಂಗ್ ಕಾಂಗ್ ಇಳಿಕೆ ಕಂಡಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಗುರುವಾರದ ವಹಿವಾಟಿನಲ್ಲಿ ₹5,588 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.39ರಷ್ಟು ಇಳಿಕೆಯಾಗಿದೆ. ಪ್ರತೀ ಬ್ಯಾರೆಲ್ ದರವು 71.42 ಡಾಲರ್ ಆಗಿದೆ.





ಜಿಎಸ್‌ಟಿ ಸಂಗ್ರಹ ಹೆಚ್ಚಳ

ನವದೆಹಲಿ (ಪಿಟಿಐ): ಜುಲೈ ತಿಂಗಳಿನಲ್ಲಿ ದೇಶದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ₹1.96 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ಇದು ಹಿಂದಿನ ವರ್ಷದ ಜುಲೈ ತಿಂಗಳಲ್ಲಿ ಆಗಿದ್ದ ವರಮಾನ ಸಂಗ್ರಹಕ್ಕೆ ಹೋಲಿಸಿದರೆ ಶೇಕಡ 7.5ರಷ್ಟು ಹೆಚ್ಚು ಎಂದು ತಿಳಿಸಿದೆ.

2024ರ ಜುಲೈನಲ್ಲಿ ₹1.82 ಲಕ್ಷ ಕೋಟಿ ಸಂಗ್ರಹವಾಗಿತ್ತು. ಪ್ರಸಕ್ತ ವರ್ಷದ ಜೂನ್‌ನಲ್ಲಿ ₹1.84 ಲಕ್ಷ ಕೋಟಿ ಸಂಗ್ರಹವಾಗಿದೆ.

ಏಪ್ರಿಲ್‌ನಲ್ಲಿ ದಾಖಲೆಯ ₹2.37 ಲಕ್ಷ ಕೋಟಿ ಸಂಗ್ರಹವಾಗಿತ್ತು. ದೇಶಿ ವಹಿವಾಟುಗಳ ಮೂಲಕ ಸಂಗ್ರಹವಾದ ಜಿಎಸ್‌ಟಿ ವರಮಾನ ಶೇ 6.7ರಷ್ಟು ಹೆಚ್ಚಳವಾಗಿದ್ದು, ₹1.43 ಲಕ್ಷ ಕೋಟಿಯಾಗಿದೆ. ಆಮದು ವಹಿವಾಟು ಮೂಲಕ ₹52,712 ಕೋಟಿ ಸಂಗ್ರಹವಾಗಿದೆ. ಜಿಎಸ್‌ಟಿ ಮರುಪಾವತಿ ಮೊತ್ತ ಶೇ 66ರಷ್ಟು ಹೆಚ್ಚಳವಾಗಿದ್ದು, ₹27,147 ಕೋಟಿಯಾಗಿದೆ ಎಂದು ತಿಳಿಸಿದೆ.

ಅಡಿಕೆ ಧಾರಣೆ

ಕುಮಟಾ		ಸಿದ್ದಾಪುರ		ಕುಂದಾಪುರ	
ಚಾಲಿ	39669-43009	ಚಾಲಿ	25555-32300	ಹಳೆ ಚಾಲಿ	12400-23899
ಚಿಪ್ಪು	26029-31029	ಚಾಲಿ	34569-43300	ರಾಶಿ	43879-47899
ಕೋಕ	7019-22999	ಕೋಕ	17619-24519	**ಯಲ್ಲಾಪುರ**	
ಫ್ಯಾಕ್ಟರಿ	4899-29000	ಕೆಂಪುಗೋಟು	20619-22299	ಕೆಂಪುಗೋಟು	62779-68899
ಹೊಸಚಾಲಿ	36029-42809	ಬಿಳಿಗೋಟು	43699-48999	ಬಿಳಿಗೋಟು	18611-33199
ಶಿವಮೊಗ್ಗ		ರಾಶಿ	28199-31819	ಚಾಲಿ	3310-44699
ಬೆಟ್ಟೆ	54999-60700	**ಶಿರಸಿ**		ಕೋಕ	9900-18602
ಗೊರಬಲು	16189-32687	ಬೆಟ್ಟೆ	21169-39701	ಕೆಂಪುಗೋಟು	17099-25499
ರಾಶಿ	46309-57911	ಬಿಳಿಗೋಟು	24699-35999	ರಾಶಿ	40119-56409
ಸರಕು	60010-86300	ಚಾಲಿ	38018-44200	ಚಟ್ಟಿ	28906-37169

‘ಬ್ರಿಡ್ಜ್ ಟು ಬೆಂಗಳೂರು ಸಂವಾದದಲ್ಲಿ ಸಿ.ಎಂ ಸಿದ್ದರಾಮಯ್ಯ ವಿಶ್ವಾಸ

‘ಬೆಂಗಳೂರು ಡೀಪ್ ಟೆಕ್ ರಾಜಧಾನಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ನಗರವನ್ನು ದಕ್ಷಿಣ ಏಷ್ಯಾದ ಡೀಪ್ ಟೆಕ್ ರಾಜಧಾನಿಯನ್ನಾಗಿ ಮಾಡಲು ರಾಜ್ಯ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಹೇಳಿದರು.

ಬೆಂಗಳೂರು ಟೆಕ್ ಶೃಂಗಸಭೆ -2025ರ ಅಂಗವಾಗಿ ಇಲ್ಲಿ ನಡೆದ ರೋಡ್ ಶೋನ ಭಾಗವಾಗಿ ‘ಬ್ರಿಡ್ಜ್ ಟು ಬೆಂಗಳೂರು’ ರಾಜತಾಂತ್ರಿಕ ಸಂವಾದದಲ್ಲಿ ಅವರು ಮಾತನಾಡಿದರು.

ಭಾರತದಲ್ಲಿ ಎಂಜಿನಿಯರಿಂಗ್, ವಿಜ್ಞಾನ ಮತ್ತು ವಿನ್ಯಾಸ ಪ್ರತಿಭೆಗಳ ಅತ್ಯಧಿಕ ಸಾಂದ್ರತೆಯಿರುವ ನಗರವು ಈಗ ಜಾಗತಿಕವಾಗಿ ಅಗ್ರ 5 ಎಐ ಪ್ರತಿಭಾನ್ವಿತ ನಗರಗಳಲ್ಲಿ ಸ್ಥಾನ ಪಡೆದಿದೆ. ಉದಯೋನ್ಮುಖ ಎಐ ಕೇಂದ್ರಗಳಲ್ಲಿ ಸ್ಯಾನ್ ಫ್ರಾನ್ಸಿಸ್ಕೋ ನಂತರ ಎರಡನೇ ಸ್ಥಾನದಲ್ಲಿದೆ ಎಂದು ಅವರು ಹೇಳಿದರು.

‘ರಾಜ್ಯವು ಎಲ್ಲರನ್ನೊಳಗೊಳ್ಳುವ ಅಭಿವೃದ್ಧಿಯಲ್ಲಿ ಬದ್ಧತೆ ಹೊಂದಿದೆ. ನಮ್ಮ ಹೊಸ ಅವಿಷ್ಕಾರ ಜಿಲ್ಲೆಗಳಾದ ಬೆಂಗಳೂರು, ಮೈಸೂರು ಹಾಗೂ ಬೆಳಗಾವಿ ಸಂಶೋಧನೆ ಹಾಗೂ ಉದ್ಯೋಗದಲ್ಲಿ ಪ್ರತಿ ಕಾಣಲಿವೆ. ಮಂಗಳೂರಿನಲ್ಲಿ ಫಿನ್ ಟೆಕ್ ಯೋಜನೆ ಹಾಗೂ ಹುಬ್ಬಳ್ಳಿ- ಧಾರವಾಡದಲ್ಲಿ ಡ್ರೋನ್ ಅಭಿವೃದ್ಧಿ ಯೋಜನೆಗಳು ನಮ್ಮ ಸಮತೋಲಿತ ಬೆಳವಣಿಗೆಯಲ್ಲಿನ ದೂರದೃಷ್ಟಿಯನ್ನು ಬಿಂಬಿಸುತ್ತವೆ’ ಎಂದರು.

‘ಕರ್ನಾಟಕ ಕೇವಲ ಸಾಂಸ್ಕೃತಿಕ ಕೇಂದ್ರವಾಗಲ್ಲ; ಬದಲಿಗೆ ಆರೋಗ್ಯ ಆರ್ಥಿಕ ಶಕ್ತಿಕೇಂದ್ರ, 337 ಬಿಲಿಯನ್ ಡಾಲರ್ ಜಿಎಸ್‌ಡಿಪಿ ಹೊಂದಿರುವ ನಾವು ಭಾರತದ ನಾಲ್ಕನೇ ದೊಡ್ಡ ಆರ್ಥಿಕತೆ ಹೊಂದಿದ್ದು ರಾಷ್ಟ್ರದ ಜಿಡಿಪಿಗೆ ಶೇ 9ರಷ್ಟು ಕೊಡುಗೆ ನೀಡುತ್ತಿದ್ದೇವೆ’ ಎಂದು ಅವರು ಹೇಳಿದರು.



ವಿವಿಧ ದೇಶಗಳ ಪ್ರತಿನಿಧಿಗಳ ಜೊತೆ ಸಿದ್ದರಾಮಯ್ಯ ಹಸ್ತಲಾಘವ ಮಾಡಿದರು

ನಮ್ಮ ಬಿಯಾಂಡ್ ಬೆಂಗಳೂರು ಯೋಜನೆಯು ಮೈಸೂರು, ಮಂಗಳೂರು, ಹುಬ್ಬಳ್ಳಿ- ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಬೆಳವಣಿಗೆ ಪಸರಿಸುತ್ತಿದ್ದು, ಪ್ರತಿ ಪ್ರದೇಶವೂ ಏಳಿಗೆಯಾಗುವುದನ್ನು ಖಾತ್ರಿಪಡಿಸುತ್ತಿದೆ ಎಂದರು.

ಕರ್ನಾಟಕ ವಿಶ್ವದೊಂದಿಗೆ ಪಾಲುದಾರಿಕೆಗೆ ಸಿದ್ಧವಾಗಿದೆ. ತಂತ್ರಜ್ಞಾನ, ಪ್ರವಾಸೋದ್ಯಮ ಅಥವಾ ಪ್ರತಿಭೆಯ ಮೂಲಕ ಜಾಗತಿಕ ಸಹಯೋಗವು ಒಟ್ಟು ಯಶಸ್ಸಿಗೆ ರಹದಾರಿಯಾಗಿದೆ ಎಂದು ಅವರು ತಿಳಿಸಿದರು.

ಕರ್ನಾಟಕವು ಭಾರತದ ಐಟಿ ಕ್ಷೇತ್ರದ ರಫ್ತಿಗೆ ಸುಮಾರು 64 ಬಿಲಿಯನ್ ಡಾಲರ್‌ನಷ್ಟು ಕೊಡುಗೆ ನೀಡಿದೆ. ಇದು ರಾಷ್ಟ್ರದ ಒಟ್ಟು ರಫ್ತಿನ ಮೂರನೇ ಒಂದು ಭಾಗವಾಗಿದೆ ಎಂದರು.

ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಮಾತನಾಡಿ, ತಂತ್ರಜ್ಞಾನ ಶೃಂಗದ ಮೂಲಕ ಪರಿಹಾರಗಳನ್ನು ಕಂಡು ಹಿಡಿಯಲು ಹಾಗೂ ಆಲೋಚನೆಗಳನ್ನು ಹಂಚಿಕೊಳ್ಳಲಿದ್ದೇವೆ. ನಮ್ಮ ಕರ್ನಾಟಕವನ್ನು ಬ್ರ್ಯಾಂಡ್ ಮಾಡಬೇಕಿದೆ. ನೆರೆರಾಷ್ಟ್ರಗಳ ಸಹಾಯ ಬೇಕು. ನಮ್ಮ ನೀತಿ ಉದ್ಯಮಗಳಿಗೆ ಎಲ್ಲ ಸವಲತ್ತುಗಳನ್ನು ಒದಗಿಸಲಾಗುವುದು ಎಂದರು.

ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ‘ನವೆಂಬರ್ 18 ರಿಂದ 20 ರವರೆಗೆ ಬೆಂಗಳೂರು ಅಂತರ-ರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ ಈ ಶೃಂಗ ನಡೆಯಲಿದೆ. ಸೆಮಿಕಂಡಕ್ಟರ್, ಆರೋಗ್ಯ ಹಾಗೂ ಹವಾಮಾನ ತಂತ್ರಜ್ಞಾನಗಳಲ್ಲಿ ಆವಿಷ್ಕಾರಗಳನ್ನು ಕೈಗೊಳ್ಳಲಾಗುವುದು. 60 ದೇಶಗಳ ಸುಮಾರು 1200 ಪ್ರದರ್ಶಕರು, 600 ಭಾಷಣಕಾರರು ಹಾಗೂ 1 ಲಕ್ಷ ಜನರು ಭಾಗವಹಿಸುವ ನಿರೀಕ್ಷೆಯಿದೆ’ ಎಂದರು.

ತಯಾರಿಕಾ ಚಟುವಟಿಕೆ ಸದೃಢ

ಮುಂಬೈ (ಪಿಟಿಐ): ದೇಶದ ತಯಾರಿಕಾ ವಲಯದ ಬೆಳವಣಿಗೆಯು ಜುಲೈನಲ್ಲಿ 16 ತಿಂಗಳ ಗರಿಷ್ಠ ಮಟ್ಟಕ್ಕೆ ದಾಖಲಾಗಿದೆ ಎಂದು ಎಸ್‌ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷಾ ವರದಿಯು ಶುಕ್ರವಾರ ತಿಳಿಸಿದೆ.

ಸೂಚ್ಯಂಕವು ಜೂನ್‌ನಲ್ಲಿ 58.4 ಇದ್ದದ್ದು, ಜುಲೈನಲ್ಲಿ 59.1ಕ್ಕೆ ಹೆಚ್ಚಳ ಕಂಡಿದೆ ಎಂದು ತಿಳಿಸಿದೆ.

ಪಿಎಂಐ ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಬೆಳವಣಿಗೆ ಎಂದು ಗುರುತಿಸಲಾಗುತ್ತದೆ.

‘ಜುಲೈನಲ್ಲಿ ದೇಶದ ತಯಾರಿಕಾ ವಲಯದ ಪ್ರಗತಿ 59.1 ದಾಖಲಾಗಿದೆ. ಹೊಸ ಆರ್ಡರ್ ಗಳಿಂದಾಗಿ ಬೇಡಿಕೆ ಹೆಚ್ಚಿದೆ ಮತ್ತು ತಯಾರಿಕೆಯಲ್ಲಿ ತ್ವರಿತ ಏರಿಕೆಯಾಗಿದೆ. ಇದು ಸೂಚ್ಯಂಕ ಏರಿಕೆಗೆ ಕಾರಣವಾಗಿದೆ’ ಎಂದು ಎಚ್‌ಎಸ್‌ಬಿಸಿಯ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ಹೇಳಿದ್ದಾರೆ.

ಸಮೀಕ್ಷೆ ಪ್ರಕಾರ, ಒಟ್ಟಾರೆ ಮಾರಾಟವು ಐದು ವರ್ಷದಲ್ಲಿ ಹೆಚ್ಚಳವಾಗಿದೆ. ಇದೇ ವೇಳೆ ತಯಾರಿಕೆಯು 15 ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ.

ಮುಂಬರುವ 12 ತಿಂಗಳಿನಲ್ಲಿ ಉತ್ಪಾದನೆ ಹೆಚ್ಚಳವಾಗುವ ನಿರೀಕ್ಷೆಯನ್ನು ದೇಶದ ತಯಾರಕರು ಹೊಂದಿದ್ದಾರೆ. ಆದರೆ, ಹೆಚ್ಚಿದ ಸ್ಪರ್ಧಾತ್ಮಕತೆ ಮತ್ತು ಹಣದುಬ್ಬರದ ವ್ಯಾಪಾರದ ವಿಶ್ವಾಸವನ್ನು ಮೂರು ವರ್ಷದ ಕನಿಷ್ಠ ಮಟ್ಟಕ್ಕೆ ಇಳಿಸಿದೆ. ತಯಾರಿಕೆ ಮತ್ತು ಉತ್ಪಾದನ ವೆಚ್ಚವು ಜುಲೈನಲ್ಲಿ ಏರಿಕೆಯಾಗಿದೆ ಎಂದು ಹೇಳಿದ್ದಾರೆ.

ನೌಕಾಪಡೆಗೆ ‘ಹಿಮಗಿರಿ’ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ ಆ್ಯಂಡ್ ಎಂಜಿನಿಯರ್ಸ್ ಲಿಮಿಟೆಡ್ (ಜಿಆರ್‌ಎಸ್‌ಇ) ತನ್ನ ಸುಧಾರಿತ ಮಾರ್ಗದರ್ಶಿ ಕ್ಷಿಪಣಿಯುಳ್ಳ ನೌಕೆ ‘ಹಿಮಗಿರಿ’ಯನ್ನು ಭಾರತೀಯ ನೌಕಾಪಡೆಗೆ ಹಸ್ತಾಂತರಿಸಿದೆ.

ಭಾರತೀಯ ನೌಕಾಪಡೆಯ ಪ್ರಾಜೆಕ್ಟ್ 17ಎ ಅಡಿಯಲ್ಲಿ ಜಿಆರ್‌ಎಸ್‌ಇ ನಿರ್ಮಿಸುತ್ತಿರುವ ಮೂರು ಯುದ್ಧ ನೌಕೆಗಳಲ್ಲಿ ‘ಹಿಮಗಿರಿ’ಯು ಮೊದಲನೆಯದ್ದಾಗಿದೆ.

ಹಿಮಗಿರಿ, ಜಿಆರ್‌ಎಸ್‌ಇ ನಿರ್ಮಿಸಿ ಪೂರೈಸುತ್ತಿರುವ 801ನೇ ಹಡಗು. ಇವುಗಳಲ್ಲಿ 112 ಯುದ್ಧ ನೌಕೆಗಳಿವೆ. 149 ಮೀಟರ್ ಉದ್ದ, 6,670 ಟನ್ ತೂಕವನ್ನು ಹೊಂದಿವೆ. ಈ ಯುದ್ಧ ಹಡಗುಗಳ ಮೌಲ್ಯ ₹21,833 ಕೋಟಿಗೂ ಹೆಚ್ಚಾಗಿದೆ.

ಈ ಯುದ್ಧ ನೌಕೆಯನ್ನು ಪೂರ್ವ ನೌಕಾ ಕಮಾಂಡ್‌ನ ಮುಖ್ಯ ಸಿಬ್ಬಂದಿ ಅಧಿಕಾರಿ (ತಾಂತ್ರಿಕ) ರಿಯರ್ ಅಡ್ಮಿರಲ್ ರವನೀಶ್ ಸೇಠ್ ಸ್ವೀಕರಿಸಿದರು.

ಚೀನಾ ಉದ್ಯಮ: ₹100 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೀನಾದ ಜವಳಿ ಉದ್ಯಮಿ ಪಾಲ್ ಪು ಅವರು ಕರ್ನಾಟಕದ ಜವಳಿ ಕ್ಷೇತ್ರದಲ್ಲಿ ₹100 ಕೋಟಿ ಹೂಡಲು ಮುಂದೆ ಬಂದಿದ್ದಾರೆ.

ಜವಳಿ ಸಚಿವ ಶಿವಾನಂದ ಪಾಟೀಲ ಅವರನ್ನು ‘ಪಾಲ್’ ಪು ಶುಕ್ರವಾರ ಭೇಟಿ ಮಾಡಿ ಜವಳಿ ಉದ್ಯಮ ಸ್ಥಾಪನೆ ಕುರಿತು ಮಾತುಕತೆ ನಡೆಸಿದರು.

ಆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಪಾಟೀಲ ಅವರು, ‘ಪಾಲ್ ಪು ಅವರು ಸೆಪ್ಟೆಂಬರ್‌ವರೆಗೆ ಕರ್ನಾಟಕದಲ್ಲೇ ಇದ್ದು, ಯೋಜನಾ ಸ್ಥಳವನ್ನು ಅಂತಿಮಗೊಳಿಸಲಿದ್ದಾರೆ’ ಎಂದರು.

ಉತ್ತರ ಕರ್ನಾಟಕದಲ್ಲಿ ತಕ್ಷಣಕ್ಕೆ ಅಗತ್ಯ ಮೂಲಸೌಕರ್ಯ ಇರುವ ಜಮೀನು ಲಭ್ಯವಿದೆ. ವರ್ಷದಲ್ಲಿ 365 ದಿನ ನೀರು, ವಿದ್ಯುತ್, ರಾಷ್ಟ್ರೀಯ ಹೆದ್ದಾರಿ, ವಿಮಾನಯಾನ ಸೌಲಭ್ಯ ಇರುವ ಕಡೆ ಅಗತ್ಯ ಪ್ರಮಾಣದ ಭೂಮಿ ಒದಗಿಸಲಾಗುವುದು ಎಂದು ಪಾಟೀಲ ತಿಳಿಸಿದರು.

‘ಇದಕ್ಕೆ ಸಮ್ಮತಿಸಿದ ಉದ್ಯಮಿ ಪು ಅವರು, ಮೊದಲ ಹಂತದಲ್ಲಿ ಮೈಸೂರು ಭಾಗದಲ್ಲಿ, ಎರಡನೆಯ ಹಂತದಲ್ಲಿ ಉತ್ತರ ಕರ್ನಾಟಕದಲ್ಲಿ ಉದ್ಯಮ ಸ್ಥಾಪನೆ ಮಾಡಲಾಗುವುದು ಎಂದು ಭರವಸೆ ನೀಡಿದರು. ಮೊದಲ ಹಂತದ ಯೋಜನೆಯಲ್ಲಿ ₹100 ಕೋಟಿ ಹೂಡಿಕೆ ಮಾಡಲಿದ್ದು, ಐದು ಸಾವಿರ ಜನರಿಗೆ ಉದ್ಯೋಗ ನೀಡಲಿದ್ದಾರೆ. ತಕ್ಷಣವೇ ಬಂಡವಾಳ ಹೂಡಲು ಸಿದ್ಧರಿದ್ದು, 20 ಎಕರೆ ಜಮೀನು ಅಗತ್ಯವಿದೆ’ ಎಂದು ಹೇಳಿದರು.

ಉದ್ಯಮ ಸ್ಥಾಪನೆಗೆ ಸೂಕ್ತವಾದ ಸ್ಥಳಗಳನ್ನು ಪಾಲ್ ಪು ಅವರಿಗೆ ತೋರಿಸಿ, ಅವರಿಗೆ ಸೂಕ್ತ ಎನಿಸಿದ ನಿವೇಶನ ಮಂಜೂರಾತಿಗೆ ಕ್ರಮ ಕೈಗೊಳ್ಳಿ ಎಂದು ಸಭೆಯಲ್ಲಿ ಭಾಗವಹಿಸಿದ್ದ ಜವಳಿ ಇಲಾಖೆ ಅಧಿಕಾರಿಗಳಿಗೆ ಸಚಿವರು ನಿರ್ದೇಶನ ನೀಡಿದರು.

ಜಾಗತಿಕ ಅರ್ಥವ್ಯವಸ್ಥೆ ಮೇಲೆ ಪ್ರಹಾರ

ಒಂದನೇ ಪುಟದಿಂದ...

ಅಮೆರಿಕದೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವುದಕ್ಕೆ ಶುಕ್ರವಾರ ಕೊನೆಯ ದಿನವಾಗಿತ್ತು. ಈಗ, ಒಪ್ಪಂದ ಕುರಿತು ಮತ್ತಷ್ಟು ಮಾತುಕತೆ ಅವಕಾಶ ಕಲ್ಪಿಸಲಾಗಿದ್ದು, ಹೊಸ ಸುಂಕಗಳು ಆಗಸ್ಟ್ 7ರಿಂದ ಜಾರಿಯಾಗಲಿವೆ. ಇದು ಅನೇಕ ರಾಷ್ಟ್ರಗಳು ನಿರಾಳಗೊಳ್ಳುವಂತೆ ಮಾಡಿದೆ.

ಬ್ರೆಜಿಲ್‌ಗೆ ಶೇ 50ರಷ್ಟು ಸುಂಕ ವಿಧಿಸಲಾಗುವುದು ಎಂದು ಈ ಮೊದಲು ಟ್ರಂಪ್ ಘೋಷಿಸಿದ್ದರು. ಈಗ ಹೊರಡಿಸಿರುವ ಕಾರ್ಯಕಾರಿ ಆದೇಶದಲ್ಲಿ ಈ ಸುಂಕದ ಪ್ರಮಾಣ ಶೇ 10ರಷ್ಟು ಎಂದು ಉಲ್ಲೇಖಿಸಲಾಗಿದೆ. ಬ್ರೆಜಿಲ್‌ನಿಂದ ಆಮದು ಮಾಡಿಕೊಳ್ಳುವ ಕೆಲ ಸರಕುಗಳಿಗೆ ಸಂಬಂಧಿಸಿ ಪ್ರತ್ಯೇಕ ಕ್ರಮಕ್ಕೆ ಟ್ರಂಪ್ ಆದೇಶ ನೀಡಿದ್ದು, ಹೀಗಾಗಿ, ಇವು ಶೇ 40ರಷ್ಟು ಸುಂಕದ ವ್ಯಾಪ್ತಿಗೆ ಬರಲಿವೆ.

‘ಕೆನಡಾದಿಂದ ಆಮದು ಮಾಡಿಕೊಳ್ಳಲಾಗುವ ಸರಕುಗಳ ಮೇಲೆ ಶೇ 35ರಷ್ಟು ಸುಂಕ ವಿಧಿಸಲಾಗುತ್ತದೆ. ಈ ಕುರಿತು ಮಾತುಕತೆ ನಡೆಸುವ ಸಂಬಂಧ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಕರೆ ಮಾಡಿದ್ದರು. ಆದರೆ, ಅವರೊಂದಿಗೆ ಮಾತನಾಡಲಿಲ್ಲ’ ಎಂದು ಟ್ರಂಪ್ ಹೇಳಿದ್ದರು.

ಈಗ ಕೆನಡಾ ಕೂಡ ಟ್ರಂಪ್ ಕೆಂಗಣ್ಣಿಗೆ ಗುರಿಯಾಗಿದೆ. ಈ ಮೊದಲು ಕೆನಡಾ ಮೇಲೆ ಶೇ 25ರಷ್ಟು ಸುಂಕ ಹೇರುವುದಾಗಿ ಟ್ರಂಪ್ ಹೇಳಿದ್ದರು. ಗುರುವಾರ ಈ ಕುರಿತ ಆದೇಶವನ್ನು ತಿದ್ದುಪಡಿ ಮಾಡಿ, ಸುಂಕದ ಪ್ರಮಾಣವನ್ನು ಶೇ 35ಕ್ಕೆ ಹೆಚ್ಚಳ ಮಾಡಲಾಗಿದೆ.

ಹಲವು ಬದಲಾವಣೆ

ಆರಂಭದಲ್ಲಿ, ಆಫ್ರಿಕ ರಾಷ್ಟ್ರವಾದ ಲೆಸೊಥೊ ಮೇಲೆ ಶೇ 50ರಷ್ಟು ಸುಂಕ ಹೇರುವುದಾಗಿ ಟ್ರಂಪ್ ಬೆದರಿಕೆ ಹಾಕಿದ್ದರು. ಈಗ ಈ ದೇಶದ ಮೇಲೆ ಶೇ 15ರಷ್ಟು ಸುಂಕ ವಿಧಿಸಲಾಗುತ್ತದೆ.

ತೈವಾನ್ ಮೇಲೆ ಶೇ 20, ಪಾಕಿಸ್ತಾನ–ಶೇ 19, ಇಸ್ರೇಲ್, ಐಸ್‌ಲ್ಯಾಂಡ್, ನಾರ್ವೆ, ಫಿಜಿ, ಘಾನಾ, ಗಯಾನಾ ಮತ್ತು ಈಕ್ವಡಾರ್‌ಗಳಿಗೆ ಶೇ 15ರಷ್ಟು ಸುಂಕ ವಿಧಿಸಲಾಗುತ್ತದೆ ಎಂದು ಕಾರ್ಯಕಾರಿ ಆದೇಶದಲ್ಲಿ ಹೇಳಲಾಗಿದೆ.

ಸ್ವಿಟ್ಜರ್‌ಲೆಂಡ್ ಮೇಲೆ ಶೇ 39ರಷ್ಟು ಸುಂಕ ವಿಧಿಸಲಾಗುತ್ತದೆ.

ಭಾರತಕ್ಕೆ ಶೇ 25ರಷ್ಟು ‘ಹೊಂದಾಣಿಕೆ ಮಾಡಲಾದ ಪ್ರತಿ ಸುಂಕ’ ವಿಧಿಸಲಾಗಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ರಷ್ಯಾದಿಂದ ಶಸ್ತ್ರಾಸ್ತ್ರಗಳನ್ನು ಹಾಗೂ ಇಂಧನ ಖರೀದಿ ಮಾಡುತ್ತಿರುವುದರಿಂದ ಭಾರತಕ್ಕೆ ‘ದಂಡ’ ವಿಧಿಸುವುದಾಗಿ ಟ್ರಂಪ್ ಇತ್ತೀಚೆಗೆ ಘೋಷಿಸಿದ್ದಾರೆ. ಆದರೆ, ಈ ಕುರಿತು ಕಾರ್ಯಕಾರಿ ಆದೇಶದಲ್ಲಿ ಯಾವುದೇ ಉಲ್ಲೇಖವಿಲ್ಲ.

‘ಅಮೆರಿಕದೊಂದಿಗೆ ಭಾರತವು ಶೀಘ್ರವೇ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ಭರವಸೆ ಇದೆ. ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಭಾರತವು ಅತಿಯಾದ ಸುಂಕ ವಿಧಿಸುತ್ತಿದೆ. ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳಿಗೆ ಶೇ 25ರಷ್ಟು ಸುಂಕ ವಿಧಿಸುತ್ತಿರುವುದರಿಂದ ದ್ವಿಪಕ್ಷೀಯ ...

ಟ್ರಂಪ್ ಹೇಳಿಕೆಗೆ ಭಾರತ ತಿರುಗೇಟು

ಒಂದನೇ ಪುಟದಿಂದ...

‘ಉಭಯ ದೇಶಗಳ ನಡುವಿನ ಪಾಲುದಾರಿಕೆ ಹಲವು ಸಂಕಷ್ಟಗಳನ್ನು ಎದುರಿಸಿಯೂ ಮುಂದುವರಿದಿದೆ. ಭವಿಷ್ಯದಲ್ಲಿಯೂ ಇದು ಮುಂದುವರಿಯಲಿದೆ ಎಂಬ ವಿಶ್ವಾಸ ನಮಗಿದೆ’ ಎಂದು ಹೇಳಿದ್ದಾರೆ.

‘ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿ ಎರಡೂ ದೇಶಗಳು ದೃಢವಾದ ಪಾಲುದಾರಿಕೆ ಹೊಂದಿವೆ’ ಎಂದು ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದರು.

‘ಇಂಧನ ಖರೀದಿ ಕುರಿತು ಮತ್ತೊಂದು ಪ್ರಶ್ನೆಗೆ, ‘ಬೇರೆ ದೇಶಗಳಿಂದ ಇಂಧನ ಖರೀದಿಸುವ ವಿಚಾರವು ನಮ್ಮ ರಾಷ್ಟ್ರೀಯ ಹಿತಾಸಕ್ತಿಯನ್ನು ಆಧರಿಸಿದೆ. ಪ್ರಚಲಿತ ಜಾಗತಿಕ ಸನ್ನಿವೇಶಗಳು ಹಾಗೂ ಮಾರುಕಟ್ಟೆ ವಿದ್ಯಮಾನಗಳ ಆಧಾರದಲ್ಲಿ ಇಂಧನ ಖರೀದಿ ಪ್ರಕ್ರಿಯೆ ನಡೆಯುತ್ತದೆ’ ಎಂದು ಹೇಳಿದರು.

ವ್ಯಾಪಾರ ಒಪ್ಪಂದ ಕುರಿತು ಹಲವು ಪ್ರಶ್ನೆಗಳು ಉದ್ಭವಿಸಿವೆ’ ಎಂದು ಏಷ್ಯಾ ಸೊಸೈಟಿ ಪಾಲಿಸಿ ಇನ್‌ಸ್ಟಿಟ್ಯೂಟ್ (ಎಎಸ್‌ಪಿಐ) ಹಿರಿಯ ಉಪಾಧ್ಯಕ್ಷೆ ಅಪರ್ಣಾ ಪಾಂಡೆ ಹೇಳಿದ್ದಾರೆ.

‘ಅಮೆರಿಕಕ್ಕೆ ಸಾಗುತ್ತಿರುವ ಹಾಗೂ ಆಗಸ್ಟ್ 7ರ ಒಳಗಾಗಿ ಅಮೆರಿಕಕ್ಕೆ ಪ್ರವೇಶ ಪಡೆಯಲಿರುವ ಹಡಗುಗಳಲ್ಲಿನ ಸರಕುಗಳಿಗೆ ಈ ಸುಂಕದಿಂದ ವಿನಾಯಿತಿ ನೀಡಲಾಗಿದೆ’ ಎಂದು ಭಾರತೀಯ ರಫ್ತು ಸಂಘಟನೆಗಳ ಮಹಾ ಒಕ್ಕೂಟ (ಎಫ್‌ಐಇಒ) ಪ್ರಧಾನ ನಿರ್ದೇಶಕ ಅಜಯ್ ಸಹಾಯ್ ಹೇಳಿದ್ದಾರೆ.

‘ಅಕ್ಟೋಬರ್ 5ರ ಒಳಗೆ ಬಳಕೆ ಉದ್ದೇಶದ ಸರಕುಗಳಿಗೆ ಕೂಡ ಪ್ರತಿಸುಂಕದಿಂದ ವಿನಾಯಿತಿ ನೀಡಲಾಗಿದೆ. ಹೀಗಾಗಿ, ರಫ್ತುದಾರರು ಅಮೆರಿಕಕ್ಕೆ ಕಳುಹಿಸಿರುವ ಅಥವಾ ಈ ವಾರದಲ್ಲಿ ಕಳುಹಿಸಲಾಗುತ್ತಿರುವ ಸರಕುಗಳ ರಫ್ತುದಾರರಿಗೆ ತಕ್ಷಣದ ಪರಿಹಾರ ಸಿಕ್ಕಂತಾಗಿದೆ.


‘ಸವಾಲಿನ ಕೆಲಸ’: ಬೇರೆ ಬೇರೆ ದೇಶಗಳಿಗೆ ವಿಧಿಸಿರುವ ಸುಂಕದ ಪ್ರಮಾಣದಲ್ಲಿ ವ್ಯತ್ಯಾಸ ಇದೆ. ಈ ಕಾರಣಕ್ಕೆ, ಸುಂಕ ಹೆಚ್ಚಳ ಮಾಡಿ ಹೊರಡಿಸಿರುವ ಕಾರ್ಯಕಾರಿ ಆದೇಶವನ್ನು ಅನುಷ್ಠಾನಕ್ಕೆ ತರುವಲ್ಲಿ ಅಮೆರಿಕದ ಕಸ್ಟಮ್ ಅಧಿಕಾರಿಗಳಿಗೆ ಹಲವು ಸವಾಲುಗಳು ಎದುರಾಗಲಿವೆ ಎಂದು ಕಟ್ಟರ್ ಹೇಳುತ್ತಾರೆ.

‘ಹೊಸ ಸುಂಕಗಳಿಂದಾಗಿ ಅಮೆರಿಕ ದಲ್ಲಿನ ಹಲವಾರು ಕಂಪನಿಗಳು ಕೂಡ ಸವಾಲು ಎದುರಿಸಬೇಕಾಗುತ್ತದೆ. ವಸ್ತುಗಳ ಪೂರೈಕೆ ಜಾಲದಲ್ಲಿ ಉಂಟಾಗುವ ವ್ಯತ್ಯಯವೂ ಇದಕ್ಕೆ ಕಾರಣ. ಅಲ್ಲದೆ, ಅಮೆರಿಕಕ್ಕೆ ಸರಕುಗಳನ್ನು ರಫ್ತು ಮಾಡುವ ದೇಶಗಳು ಕಾರ್ಯಕಾರಿ ಆದೇಶಕ್ಕೆ ತಕ್ಕಂತೆ ನಡೆದುಕೊಳ್ಳುತ್ತವೆಯೇ ಎಂದು ಕಾದುನೋಡಬೇಕಾಗಿದೆ. ಅಗ ಹೆಚ್ಚುವರಿ ಸುಂಕ ಹೇರುವ ಸಾಧ್ಯತೆಯೂ ಇದೆ’ ಎಂದು ಕಟ್ಟರ್ ವಿಶ್ಲೇಷಿಸುತ್ತಾರೆ.

ಟ್ರಂಪ್ ಅಜ್ಞಾನಿ: ದೇವೇಗೌಡ ಕಿಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತದ ಆರ್ಥಿಕತೆ ಸತ್ತಿದೆ ಎಂದಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆಗೆ ಅಸಮಾಧಾನ ವ್ಯಕ್ತಪಡಿಸಿರುವ ಮಾಜಿ ಪ್ರಧಾನಮಂತ್ರಿ ಎಚ್‌.ಡಿ. ದೇವೇಗೌಡ, ‘ಬಹುಶಃ ಟ್ರಂಪ್ ಕುರುಡರಾಗಿರಬೇಕು ಅಥವಾ ಅಜ್ಞಾನಿ ಆಗಿರಬೇಕು’ ಎಂದು ಟೀಕಿಸಿದ್ದಾರೆ.



ಎಚ್‌.ಡಿ. ದೇವೇಗೌಡ

ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಟ್ರಂಪ್ ವರ್ತನೆ, ಭಾಷೆ, ಅವರ ಹೇಳಿಕೆಯ ಇತ್ತೀಚಿನ ಅಂಶಗಳ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಭಾರತದಲ್ಲಿ ಒಬ್ಬ ಸಣ್ಣ ವ್ಯಾಪಾರಿ ಮತ್ತು ಬಡವರ್ತಿ ಕೂಡ ತನ್ನ ವ್ಯವಹಾರ ಮತ್ತು ಜೀವನವನ್ನು ನಡೆಸಲು ತುಂಬಾ ಬಹಳ ಘನತೆ, ಸಮಗ್ರತೆ ಮತ್ತು ಮಾನವೀಯತೆಯಿಂದ ನಡೆಸುತ್ತಿದ್ದಾನೆ. ಈ ಮೂಲಕ ಟ್ರಂಪ್ ಅವರಿಗೆ ಅನೇಕ ಪಾಠಗಳನ್ನು ಕಲಿಸಬಹುದು. ಎಲ್ಲರಿಂತ ನಾನು ಕೂಡ ಭಾರತದ ಆರ್ಥಿಕತೆಯ ಬಗ್ಗೆ ಟ್ರಂಪ್ ಅವರ ಅಭಿಪ್ರಾಯ ತೀವ್ರ ಆಘಾತ ತಂದಿದೆ ...

... ರಾಷ್ಟ್ರ ಮುಖ್ಯಸ್ಥರನ್ನು ನಾನು ಕಂಡಿಲ್ಲ’ ಎಂದು ಅವರು ಹೇಳಿದ್ದಾರೆ.

ಟ್ರಂಪ್ ಅವರು ಭಾರತದೊಂದಿಗೆ ಮಾತ್ರವಲ್ಲ, ಜಗತ್ತಿನಾದ್ಯಂತ ಪ್ರತಿ ದೇಶದೊಂದಿಗೆ ಕೆಟ್ಟದಾಗಿ ವರ್ತಿಸಿದ್ದಾರೆ. ಅವರು ತಮ್ಮ ದೀರ್ಘಕಾಲದ ಮಿತ್ರರಾಷ್ಟ್ರಗಳನ್ನು ಸಹ ಬಿಟ್ಟಿಲ್ಲ. ಅವರಲ್ಲಿ ಮೂಲಭೂತವಾಗಿ ಏನೋ ಸಮಸ್ಯೆ ಇದೆ. ರಾಜತಾಂತ್ರಿಕತೆ ಅಥವಾ ರಾಜಕೀಯದ ಮೂಲಕ ಅದನ್ನು ಪತ್ತೆ ಹಚ್ಚಲು ಅಥವಾ ಪರಿಹರಿಸಲು ಸಾಧ್ಯವಿಲ್ಲ. ಅವರು ಕೂಡ ಸ್ವಭಾವದ ಬಗ್ಗೆ ಇದಕ್ಕಿಂತ ಹೆಚ್ಚಿಗೆ ಹೇಳುವುದು ಸರಿಯಲ್ಲ ಎಂದಿದ್ದಾರೆ.

ಟ್ರಂಪ್ ಹೇಳಿಕೆಗಳನ್ನು ಆನಂದಿಸಿ ಭಾರತದಲ್ಲಿ ಅವರ ಭ್ರಮೆಯ ವಕ್ತಾರರಾಗಲು ಹೊರಟಿರುವ ವಿರೋಧ ಪಕ್ಷದ ಕೆಲ ನಾಯಕರಿಗೆ ಎಚ್ಚರಿಕೆಯ ಮಾತು ಹೇಳ ಬಯಸುತ್ತೇನೆ. ಅವರ ಹತಾಶೆಯನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ, ಅವರು ತಮ್ಮನ್ನು ತಮ್ಮ ಪಕ್ಷಗಳಿಗೆ ಹಾನಿ ಮಾಡಿಕೊಳ್ಳಬಾರದು ಮತ್ತು ಟ್ರಂಪ್ ಅವರೊಂದಿಗೆ ಇತಿಹಾಸ ಕಸದಬುಟ್ಟಿಗೆ ಎಸೆಯಲ್ಪಡಬಾರದು ಎಂದು ಎಚ್ಚರಿಕೆ ನೀಡಿದ್ದಾರೆ.

ಸಿಇಟಿ/ನೀಟ್: ಸೀಟು ಹಂಚಿಕೆಯ ತಾತ್ಕಾಲಿಕ ಪಟ್ಟಿ

ಬೆಂಗಳೂರು: ಎಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ಸೇರಿದಂತೆ ವೃತ್ತಿಪರ ಕೋರ್ಸ್‌ಗಳ ಮೊದಲ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶುಕ್ರವಾರ ಪ್ರಕಟಿಸಿದೆ.

ಆಕ್ಷೇಪಣೆಗಳು ಇದ್ದಲ್ಲಿ ಆಗಸ್ಟ್ 2ರಂದು ಬೆಳಿಗ್ಗೆ 11 ಗಂಟೆ ಒಳಗೆ ಇ-ಮೇಲ್ ಮೂಲಕ ಕೆಇಎಗೆ ಸಲ್ಲಿಸಬಹುದು. ಅದನ್ನು ಪರಿಶೀಲಿಸಿದ ಬಳಿಕ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಂತಿಮ ಪಟ್ಟಿ ಪ್ರಕಟಣೆ ಬಳಿಕ ವೈದ್ಯಕೀಯ ಕೋರ್ಸ್ ಹೊರತುಪಡಿಸಿ, ಎಂಜಿನಿಯರಿಂಗ್, ಕೃಷಿ ಇತ್ಯಾದಿ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ವೇಳಾಪಟ್ಟಿ ಪ್ರಕಟಿಸಲಾಗುತ್ತದೆ. ರಾಷ್ಟ್ರ ಮಟ್ಟದಲ್ಲಿ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಹೋಮಿಯೋಪಥಿ ಕೋರ್ಸ್‌ಗಳ ಮೊದಲ ಸುತ್ತಿನ ಸೀಟು ಹಂಚಿಕೆಯ ಪಟ್ಟಿ ಇನ್ನೂ ಪ್ರಕಟವಾಗದ ಕಾರಣ, ಆ ಕೋರ್ಸ್‌ಗಳ ಪ್ರವೇಶಕ್ಕೆ ಸದ್ಯಕ್ಕೆ ರಾಜ್ಯದಲ್ಲೂ ಅವಕಾಶ ಇರುವುದಿಲ್ಲ. ಅಲ್ಲಿ ಪಟ್ಟಿ ಪ್ರಕಟವಾದ ನಂತರ ಆ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಆರಂಭಿಸಲಾಗುತ್ತದೆ.

ಅಭ್ಯರ್ಥಿಗಳು ತಮಗೆ ಸಿಕ್ಕಿರುವ ಸೀಟು ಇಷ್ಟ ಇದೆಯೊ, ಇಲ್ಲವೊ ಎಂಬುದನ್ನು ಕಡ್ಡಾಯವಾಗಿ 'ಛಾಯ್ಸ್' ದಾಖಲಿಸುವುದರ ಮೂಲಕ ತಿಳಿಸಬೇಕು. ಒಂದು ವೇಳೆ 'ಛಾಯ್ಸ್' ದಾಖಲಿಸದೇ ಇದ್ದಲ್ಲಿ, ಅಂತಹವರನ್ನು ನಂತರದ ಸುತ್ತಿನಲ್ಲಿ ಸೀಟು ಹಂಚಿಕೆಗೆ ಪರಿಗಣಿಸುವುದಿಲ್ಲ. ಅಲ್ಲದೆ ಅವರನ್ನು ಇಡೀ ಪ್ರಕ್ರಿಯೆಯಿಂದಲೇ ಹೊರ ಹಾಕಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

'ಪ್ರತಿವರ್ಷ ಕ್ವಾಂಟಮ್ ಶೃಂಗ'

ಮೊದಲ ಆವೃತ್ತಿಯ ಯಶಸ್ಸಿನ ನಂತರ ಸಚಿವ ಎನ್.ಎಸ್. ಬೋಸರಾಜು ಆಶಯ

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ಕ್ವಾಂಟಮ್ ಸಮಾವೇಶದ ಮೊದಲ ಆವೃತ್ತಿ ವಿಶ್ವ-ಭೂಪಟದಲ್ಲಿ ಹೊಸ ಮೈಲುಗಲ್ಲು ಸ್ಥಾಪಿಸಿದ್ದು, ಇದನ್ನು ಪ್ರತಿವರ್ಷ ಆಯೋಜಿಸಲಾಗುತ್ತದೆ' ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಹೇಳಿದರು.

'ಕ್ವಾಂಟಮ್ ಇಂಡಿಯಾ– ಬೆಂಗಳೂರು ಸಮಾವೇಶ - 2025'ದ ಸಮಾರೋಪದಲ್ಲಿ ಶುಕ್ರವಾರ ಮಾತನಾಡಿದ ಅವರು, 'ಎರಡು ದಿನದ ಈ ಸಮಾವೇಶಕ್ಕೆ ಅಭೂತಪೂರ್ವ ಪ್ರತಿಕ್ರಿಯೆ ದೊರೆತಿದೆ. 1,951 ಕ್ಕೂ ಹೆಚ್ಚು ಪ್ರತಿನಿಧಿಗಳೂ ದೇಶ ಹಾಗೂ ವಿದೇಶದ ವಿವಿಧ ಭಾಗಗಳಿಂದ ಭಾಗವಹಿಸಿದ್ದರು. ನೊಬೆಲ್ ಪ್ರಶಸ್ತಿ ಪುರಸ್ಕೃತರು ಕ್ವಾಂಟಮ್ ಕ್ಷೇತ್ರದಲ್ಲಿರುವ ಅವಕಾಶಗಳು, ಅವುಗಳನ್ನು ಉಪಯೋಗಿಸಿಕೊಳ್ಳುವ ನಿಟ್ಟಿನಲ್ಲಿ ಸಲಹೆಗಳನ್ನು ನೀಡಿದ್ದಾರೆ' ಎಂದು ತಿಳಿಸಿದರು.

'ರಾಷ್ಟ್ರೀಯ ಕ್ವಾಂಟಮ್ ಮಿಷನ್‌ನ ಅಧ್ಯಕ್ಷರು ಸಮಾವೇಶದಲ್ಲಿ ಭಾಗಿಯಾಗಿ, ಕರ್ನಾಟಕ ರಾಜ್ಯ ಈ ಕ್ಷೇತ್ರದಲ್ಲಿ ಮುಂಚೂಣಿ ಸ್ಥಾನಪಡೆದುಕೊಳ್ಳುವ ಎಲ್ಲಾ ರೀತಿಯ ಅರ್ಹತೆಗಳನ್ನು ಹೊಂದಿರುವುದನ್ನು ಹೇಳಿದ್ದಾರೆ' ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ನಡೆದ ದುಂಡು ಮೇಜಿನ ಸಭೆಯಲ್ಲಿ, ಆಸ್ಟ್ರೇಲಿಯಾ, ಆಸ್ಟ್ರಿಯಾ, ಬಾಂಗ್ಲಾದೇಶ, ಕೆನಡಾ, ಡೆನ್ಮಾರ್ಕ್, ಫಿನ್‌ಲ್ಯಾಂಡ್, ಫ್ರಾನ್ಸ್, ಜರ್ಮನಿ, ಇಸ್ರೇಲ್, ಇಟಲಿ, ಜಪಾನ್, ನೇಪಾಳ, ನೆದರ್ಲೆಂಡ್, ಓಮನ್, ಸೌದಿ ಅರೇಬಿಯಾ, ಸಿಂಗಪುರ, ಇಂಗ್ಲೆಂಡ್, ಅಮೆರಿಕ ಸೇರಿದಂತೆ ವಿವಿಧ ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ರಾಜ್ಯದಲ್ಲಿ ಕ್ವಾಂಟಮ್ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಿರುವ ಕ್ರಮಗಳ ಅಳವಡಿಕೆಯ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಗಿದೆ. ಹಲವು ದೇಶಗಳ ಪ್ರತಿನಿಧಿಗಳು ರಾಜ್ಯದ ಜೊತೆ ಕೈಜೋಡಿಸಿ, ಉದ್ದಿಮೆಗಳನ್ನು ಸ್ಥಾಪಿಸಲು, ಹೂಡಿಕೆಗೆ ಒಲವು ತೋರಿಸಿದ್ದಾರೆ ಎಂದು ಬೋಸರಾಜು ಮಾಹಿತಿ ನೀಡಿದರು.

'ಜಾಗತಿಕ ಕ್ವಾಂಟಮ್ ಶಕ್ತಿ ಕೇಂದ್ರವಾಗಿ ಕರ್ನಾಟಕವನ್ನು ರೂಪಿಸಲು ಹಿರಿಯ ಪ್ರಾಥಮಿಕ ಶಾಲಾ ಮಟ್ಟದಲ್ಲಿ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಸ್ಟ್ರೀಮ್ ಲ್ಯಾಬ್ಸ್ ಯೋಜನೆಯ ಮೂಲಕ 'ಕ್ವಾಂಟಮ್ ಪಠ್ಯಕ್ರಮ' ಪರಿಚಯಿಸಲಾಗುವುದು. ವಿದ್ಯಾರ್ಥಿಗಳಿಗೆ ಮೀಸಲಾದ ಡಿಎಸ್‌ಟಿ– ಪಿಎಚ್‌ಡಿ ಫೆಲೋಶಿಪ್‌ಗಳನ್ನು ವಿಸ್ತರಿಸಲಾಗುವುದು. ಈ ಫೆಲೋಶಿಪ್‌ಗಳು ಕ್ವಾಂಟಮ್ ಕಂಪ್ಯೂಟಿಂಗ್, ಕ್ವಾಂಟಮ್ ಸಂವಹನ ಮತ್ತು ಕ್ವಾಂಟಮ್ ಸೆನ್ಸಿಂಗ್, ಕ್ವಾಂಟಮ್ ಸಾಧನಗಳಂತಹ ಪ್ರಮುಖ ಕ್ಷೇತ್ರಗಳಲ್ಲಿ ಸಾಮರ್ಥ್ಯ ವೃದ್ಧಿಗೆ ಸಹಕಾರಿಯಾಗಲಿದೆ' ಎಂದು ಹೇಳಿದರು.



ಕ್ವಾಂಟಮ್ ಸಮಾವೇಶದಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಡಾ.ಡೇವಿಡ್ ಗ್ರೋಸ್ ಮತ್ತು ಡಂಕನ್ ಹಲ್ಡೇನ್ ಅವರು, 'ಅತ್ಯುತ್ತಮ ಪೋಸ್ಟರ್' ಪ್ರಶಸ್ತಿ ಪಡೆದ ಐಐಎಸ್‌ಸಿ–ಬೆಂಗಳೂರಿನ ತಂಡದ ವಿದ್ಯಾರ್ಥಿಗೆ ವಿತರಿಸಿದರು. ಎನ್.ಎಸ್.ಬೋಸರಾಜು, ಎಂ.ಸಿ.ಸುಧಾಕರ್ ಉಪಸ್ಥಿತರಿದ್ದರು

ಐಐಐಟಿ– ಧಾರವಾಡ, ರಾಯಚೂರು ಜೊತೆ ಕ್ಯೂಪೈಎಐ ಒಪ್ಪಂದ

ಕ್ವಾಂಟಮ್ ಸಮಾವೇಶದಲ್ಲಿ ಐಐಐಟಿ– ಧಾರವಾಡ ಹಾಗೂ ರಾಯಚೂರು ಸಂಸ್ಥೆಗಳು ಕ್ಯೂಪೈಎಐ ಜೊತೆ ಕ್ಯೂ-ವಿದ್ಯಾ 8 ಕ್ಯೂಬಿಟ್ ಕ್ವಾಂಟಮ್ ಕಂಪ್ಯೂಟರ್ ರೂಪಿಸಲು ಒಪ್ಪಂದ ಮಾಡಿಕೊಂಡಿವೆ. ಈ ಯೋಜನೆಯು ಟ್ರೇನ್-ದಿ-ಟ್ರೈನರ್ಸ್ ಕಾರ್ಯಕ್ರಮಗಳನ್ನು ಆರಂಭಿಸಿ, ಕ್ವಾಂಟಮ್ ಸಂಶೋಧಕರನ್ನು ಸದೃಢಗೊಳಿಸಿ, ಕ್ವಾಂಟಮ್ ತಂತ್ರಜ್ಞಾನಗಳ ಸಾಮರ್ಥ್ಯ ವೃದ್ಧಿಗೆ ನೆರವಾಗುವ ಉದ್ದೇಶ ಹೊಂದಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ತಿಳಿಸಿದರು.

'ಕ್ವಾಂಟಮ್ ಸಮಾವೇಶಕ್ಕೆ 500 ಪ್ರತಿನಿಧಿಗಳನ್ನು ನಿರೀಕ್ಷಿಸಲಾಗಿತ್ತು. ಆದರೆ, 1951 ಪ್ರತಿನಿಧಿಗಳು ನೋಂದಣಿ ಮಾಡಿಕೊಂಡಿದ್ದರು. ಒಟ್ಟು 24 ಗೋಷ್ಠಿಗಳಲ್ಲಿ, 19 ದೇಶಗಳ 75ಕ್ಕೂ ಹೆಚ್ಚು ಪ್ರತಿನಿಧಿಗಳು ಕ್ವಾಂಟಮ್ ಕ್ಷೇತ್ರ ಬೆಳವಣಿಗೆ, ಹೊಸ ಸಾಧ್ಯತೆಗಳ ಬಗ್ಗೆ ಮಾಹಿತಿ ಒದಗಿಸಿದರು' ಎಂದರು.

ಶಾರುಕ್– ವಿಕ್ರಾಂತ್ 'ಅತ್ಯುತ್ತಮ ನಟ'

ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ; ರಾಣಿ ಮುಖರ್ಜಿ 'ಅತ್ಯುತ್ತಮ ನಟಿ'


ಪ್ರಜಾವಾಣಿ ವಾರ್ತೆ/ ಪಿಟಿಐ



ಶಾರುಕ್ ಖಾನ್



ವಿಕ್ರಾಂತ್ ಮೇಸಿ



ರಾಣಿ ಮುಖರ್ಜಿ

ನವದೆಹಲಿ: 2023ನೇ ಸಾಲಿನ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ಶುಕ್ರವಾರ ಘೋಷಿಸಲಾಗಿದ್ದು, ಬಾಲಿವುಡ್ ನಟ ಶಾರುಕ್ ಖಾನ್ ಮತ್ತು ವಿಕ್ರಾಂತ್ ಮೇಸಿ ಅವರು 'ಅತ್ಯುತ್ತಮ ನಟ' ಪ್ರಶಸ್ತಿಯನ್ನು ಹಂಚಿಕೊಂಡಿದ್ದಾರೆ.

'ಮಿಸ್ಸೆಸ್ ಚಟರ್ಜಿ ವರ್ಸಸ್ ನಾರ್ವೆ' ಚಿತ್ರದ ಅಭಿನಯಕ್ಕಾಗಿ ಬಾಲಿವುಡ್ ನಟಿ ರಾಣಿ ಮುಖರ್ಜಿ ಅವರು 'ಅತ್ಯುತ್ತಮ ನಟಿ' ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಶಾರುಕ್ ಅವರು ತಮ್ಮ 37 ವರ್ಷಗಳ ವೃತ್ತಿಜೀವನದಲ್ಲಿ ಅತ್ಯುತ್ತಮ ನಟನೆಗಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪಡೆದಿರುವುದು ಇದೇ ಮೊದಲು. 'ಜವಾನ್' ಚಿತ್ರದ ಅಭಿನಯಕ್ಕಾಗಿ ಅವರಿಗೆ ಈ ಗೌರವ ಸಂದಿದೆ. ವಿಕ್ರಾಂತ್ ಅವರು 'ಟ್ವೆಲ್ತ್ ಫೇಲ್' ಚಿತ್ರದ ಅಭಿನಯಕ್ಕೆ ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ.

71ನೇ ರಾಷ್ಟ್ರೀಯ ಪ್ರಶಸ್ತಿ ಇದಾಗಿದ್ದು, ಪುರಸ್ಕೃತರ ಪಟ್ಟಿಯನ್ನು ತೀರ್ಪುಗಾರರ ಮಂಡಳಿಯ ಅಧ್ಯಕ್ಷ, ಚಲನಚಿತ್ರ ನಿರ್ಮಾಪಕ ಅಶುತೋಷ್ ಗೋವಾರಿಕರ್ ಘೋಷಿಸಿದರು.

ವಿಧು ವಿನೋದ್ ಚೋಪ್ರಾ ನಿರ್ದೇಶನದ 'ಟ್ವೆಲ್ತ್ ಫೇಲ್' ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಯನ್ನು ಪಡೆದರೆ, 'ದಿ ಕೇರಳ ಸ್ಟೋರಿ' ಚಿತ್ರಕ್ಕಾಗಿ ಸುದಿಪ್ತೋ ಸೇನ್ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಯನ್ನು ಪಡೆದರು.

ಚಿತ್ರ ನಿರ್ಮಾಪಕ ಕರಣ್ ಜೋಹರ್ ಅವರ 'ರಾಕಿ ಔರ್ ರಾಣಿ ಕಿ ಪ್ರೇಮ್ ಕಹಾನಿ' ಸಿನಿಮಾಗೆ ಅತ್ಯುತ್ತಮ ಮನರಂಜನಾ ಸಿನಿಮಾ ಪ್ರಶಸ್ತಿ ಲಭಿಸಿದೆ. ಮೇಘನಾ ಗುಲ್ಜಾರ್ ಅವರ 'ಸ್ಯಾಮ್ ಬಹಾದೂರ್' ಸಿನಿಮಾ ರಾಷ್ಟ್ರೀಯ, ಸಾಮಾಜಿಕ ಮತ್ತು ಪರಿಸರ ಮೌಲ್ಯಗಳನ್ನು ಉತ್ತೇಜಿಸುವ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಪಡೆದುಕೊಂಡಿದೆ.

ಹಿಂದಿ ಸಿನಿಮಾಗಳು ಪ್ರಮುಖ ವಿಭಾಗಗಳಲ್ಲಿ ಪ್ರಾಬಲ್ಯ ಸಾಧಿಸಿದರೆ, ಪ್ರಾದೇಶಿಕ ಸಿನಿಮಾಗಳು ಅತ್ಯುತ್ತಮ ಪೋಷಕ ನಟ, ಪೋಷಕ ನಟಿ ಮತ್ತು ತಾಂತ್ರಿಕ ವಿಭಾಗಗಳಲ್ಲಿ ಹೆಚ್ಚು ಪ್ರಶಸ್ತಿಗಳನ್ನು ಗೆದ್ದುಕೊಂಡವು.

ಮಲಯಾಳ ಸಿನಿಮಾ 'ಪೂಕ್ಕಳಂ'ನ ಅಭಿನಯಕ್ಕಾಗಿ ವಿಜಯರಾಘವನ್, ತಮಿಳು ಸಿನಿಮಾ 'ಪಾರ್ಕಿಂಗ್'ನ ಅಭಿನಯಕ್ಕಾಗಿ ಮುತ್ತುಪೆಟ್ಟೈ ಸೋಮು ಭಾಸ್ಕರ್ ಅತ್ಯುತ್ತಮ ಪೋಷಕ ನಟ ಪ್ರಶಸ್ತಿಯನ್ನು ಹಂಚಿಕೊಂಡರು.

ಮಲಯಾಳ ಚಿತ್ರ 'ಉಳ್ಳೊಝುಕ್ಕ್'ನ ಅಭಿನಯಕ್ಕಾಗಿ ಊರ್ವಶಿ ಮತ್ತು ಗುಜರಾತಿ ಸಿನಿಮಾ 'ವಶ್'ನ ಅಭಿನಯಕ್ಕಾಗಿ ಜಾನಕಿ ಬೋದೀವಾಲಾ ಅವರು ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿ ಗೆದ್ದುಕೊಂಡರು.

ಕನ್ನಡದ ಅತ್ಯುತ್ತಮ ಚಿತ್ರ 'ಕಂದೀಲು'

ಕೆ.ಯಶೋಧ ಪ್ರಕಾಶ್ ನಿರ್ದೇಶನದ 'ಕಂದೀಲು' ಕನ್ನಡದ ಅತ್ಯುತ್ತಮ ಚಿತ್ರವಾಗಿ ಹೊರಹೊಮ್ಮಿದೆ. ಚಿದಾನಂದ ನಾಯ್ಕ್ ಅವರ 'ಸೂರ್ಯಕಾಂತಿ ಹೂಗೆ ಮೊದಲು ಗೊತ್ತಾಗಿದ್ದು' ಸಿನಿಮಾ ನಾನ್ ಫೀಚರ್ ವಿಭಾಗದಲ್ಲಿ 'ಅತ್ಯುತ್ತಮ ಚಿತ್ರಕಥೆ' ಪ್ರಶಸ್ತಿಯನ್ನು ಗೆದ್ದುಕೊಂಡಿದೆ.

ಅತ್ಯುತ್ತಮ ಪ್ರಾದೇಶಿಕ ಸಿನಿಮಾ ವಿಭಾಗದಲ್ಲಿ ಕನ್ನಡದ 'ಕಂದೀಲು' ಅಲ್ಲದೆ, ರೊಂಗಾಟಾಪು 1982 (ಅಸ್ಸಾಮಿ), ಡೀಪ್ ಫ್ರಿಜ್ (ಬೆಂಗಾಳಿ), ಪಾರ್ಕಿಂಗ್ (ತಮಿಳು), ಶ್ಯಾಮ್ಚಿ ಆಯಿ (ಮರಾಠಿ), ಪುಷ್ಕರ (ಒಡಿಯಾ), ಗಾಡ್ಡೆ ಗಾಡ್ಡೆ ಚಾ (ಪಂಜಾಬಿ) ಮತ್ತು ಭಗವಂತ್ ಕೇಸರಿ (ತೆಲುಗು) ಸಿನಿಮಾಗಳಿಗೆ ಪ್ರಶಸ್ತಿ ಲಭಿಸಿದವು.

ಮತ ಕಳವು: ಬಿಜೆಪಿಗೆ ಚುನಾವಣಾ ಆಯೋಗ ನೆರವು ಸಾಬೀತಿಗೆ ಸಿದ್ಧ

'ಆಟಂ ಬಾಂಬ್' ಇದೆ– ರಾಹುಲ್ ಗಾಂಧಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಆಡಳಿತಾರೂಢ ಬಿಜೆಪಿಯ 'ಮತಕಳ್ಳತನ' ಕೃತ್ಯಕ್ಕೆ ಚುನಾವಣಾ ಆಯೋಗವು ನೆರವಾಗಿದೆ ಎಂದು ಶುಕ್ರವಾರ ಪುನರುಚ್ಚರಿಸಿದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಈ ಆರೋಪವನ್ನು ಸಾಬೀತು ಪಡಿಸಲು ತಮ್ಮ ಬಳಿ 'ಆಟಂ ಬಾಂಬ್' ಇದೆ ಎಂದು ಹೇಳಿದರು.



ರಾಹುಲ್ ಗಾಂಧಿ

ಈ ಕುರಿತು ಕಾಂಗ್ರೆಸ್ ಸಂಗ್ರಹಿಸಿರುವ ದಾಖಲೆ ಮತ್ತು ಪುರಾವೆಗಳನ್ನು ಅವರು 'ಆಟಂ ಬಾಂಬ್'ಗೆ ಹೋಲಿಕೆ ಮಾಡಿ ಮಾತನಾಡಿದರು.

'ನಮ್ಮ ಬಳಿ ಇರುವ ಈ ಆಟಂ ಬಾಂಬ್ ಸ್ಫೋಟಿಸಿದಾಗ ಚುನಾವಣಾ ಆಯೋಗದವರಿಗೆ ತಪ್ಪಿಸಿಕೊಳ್ಳಲು ದೇಶದಲ್ಲಿ ಜಾಗವೇ ಇರುವುದಿಲ್ಲ' ಎಂದು ಅವರು ವ್ಯಂಗ್ಯವಾಡಿದರು.

ಸುದ್ದಿಗಾರರ ಜತೆ ಮಾತನಾಡಿದ ರಾಹುಲ್, 'ಮತ ಕಳ್ಳತನದಲ್ಲಿ ತೊಡಗಿಸಿಕೊಳ್ಳುವ ಮೂಲಕ ದೇಶದ್ರೋಹ ಕೆಲಸ ಮಾಡಿರುವ ಚುನಾವಣಾ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳ ಲಾಗುವುದು. ಅವರು ಎಷ್ಟೇ ಹಿರಿಯ ಅಥವಾ ಕಿರಿಯ ಅಧಿಕಾರಿಯಾದರೂ ಬಿಡುವುದಿಲ್ಲ' ಎಂದರು.

ಶೇ100ರಷ್ಟು ಪುರಾವೆ: 'ಮತ ಕಳ್ಳತನ ನಡೆಯುತ್ತಿದೆ ಎಂದು ನಾನು ಈ ಹಿಂದೆಯೇ ಹೇಳಿದ್ದೆ. ಚುನಾವಣಾ ಆಯೋಗವೇ ಇದರಲ್ಲಿ ಭಾಗಿ ಆಗಿರುವುದಕ್ಕೆ ನನ್ನ ಬಳಿ ಸ್ಪಷ್ಟವಾದ ಪುರಾವೆಗಳಿವೆ. ಅತ್ಯಂತ ಜವಾಬ್ದಾರಿಯಿಂದ ಇದನ್ನು ಹೇಳುತ್ತಿದ್ದೇನೆ. ಶೇ 100ರಷ್ಟು ಪುರಾವೆಗಳಿವೆ' ಎಂದು ರಾಹುಲ್ ಹೇಳಿದರು. 'ಈ ದಾಖಲೆಗಳನ್ನು ನಾನು ಬಿಡುಗಡೆ ಮಾಡಿದ ಕೂಡಲೇ ಎಲ್ಲವೂ ಸ್ಪಷ್ಟವಾಗಿ ದೇಶದ ಜನರಿಗೆ ಗೊತ್ತಾಗುತ್ತದೆ. ಆಯೋಗ ಯಾರಿಗಾಗಿ ಈ ಕೃತ್ಯದಲ್ಲಿ ತೊಡಗಿದೆ? ಬಿಜೆಪಿಗಾಗಿ ಎಂಬುದು ಇದರಿಂದ ತಿಳಿಯುತ್ತದೆ. ಈ ಬಗ್ಗೆ ಯಾವುದೇ ಅನುಮಾನ ಇಲ್ಲ. ಎಲ್ಲವೂ ಮುಕ್ತ ಮತ್ತು ಸ್ಪಷ್ಟವಾಗಿದೆ' ಎಂದು ಅವರು ತಿಳಿಸಿದರು.

'ಲೋಕಸಭಾ ಚುನಾವಣೆ ವೇಳೆ ಮಧ್ಯಪ್ರದೇಶದಲ್ಲಿ ಅಕ್ರಮ ನಡೆದ ಬಗ್ಗೆ ಅನುಮಾನಗಳು ಮೂಡಿದ್ದವು. ಮಹಾರಾಷ್ಟ್ರದಲ್ಲಿ ಈ ಅನುಮಾನ ಗಟ್ಟಿಯಾಯಿತು. ಅಲ್ಲಿ ಮತದಾರರ ಪಟ್ಟಿಯಲ್ಲಿ ಒಂದು ಕೋಟಿ ಮತದಾರರು ಸೇರಿದ್ದರು. ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು, ಸಂಶೋಧನೆಗೆ ಇಳಿದೆವು. ಅದಕ್ಕೆ ಆರು ತಿಂಗಳೇ ಹಿಡಿಯಿತು. ಅಲ್ಲಿ ದೊರೆತಿರುವ ಪುರಾವೆಗಳು ನಿಜವಾಗಿಯೂ 'ಆಟಂ ಬಾಂಬ್'ನಂತಿದೆ. ಅದು ಸ್ಫೋಟಿಸಿದರೆ, ಆಯೋಗ ಅದನ್ನು ಮುಚ್ಚಿಡಲು ಸಾಧ್ಯವೇ ಇಲ್ಲ' ಎಂದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲೂ ಸಾಕಷ್ಟು ಮತಕಳ್ಳತನ ಆಗಿದೆ. ಈ ಬಗ್ಗೆ ಶೇ 100ರಷ್ಟು ಪುರಾವೆ ಲಭ್ಯವಿದ್ದು, ಆಯೋಗದ ಬಳಿ ಬರುತ್ತೇವೆ ಎಂದು ರಾಹುಲ್ ಎಚ್ಚರಿಸಿದರು.

ನೀರಿನಂತೆ ಹರಿಯಿರಿ– ಬಿಜೆಪಿ

ರಾಹುಲ್ ಗಾಂಧಿ ಅವರು ಚುನಾವಣಾ ಆಯೋಗದ ಮೇಲೆ ಪ್ರಜಾಪ್ರಭುತ್ವ ವಿರೋಧಿ ಮತ್ತು ಅಗೌರವದ ಭಾಷೆಯನ್ನು ಬಳಸಿದ್ದಾರೆ ಎಂದು ಟೀಕಿಸಿರುವ ಬಿಜೆಪಿ, 'ನೀವು ಬಾಂಬಿನಂತೆ ಸ್ಫೋಟಿಸಬೇಡಿ, ನೀರಿನಂತೆ ಹರಿಯಿರಿ' ಎಂದು ಹೇಳಿದೆ.

'ಪ್ರಜಾಪ್ರಭುತ್ವದ ಮೇಲೆ ನಾವು ನಂಬಿಕೆ ಇಟ್ಟಿದ್ದೇವೆ. ನೀವು ಆಟಂ ಬಾಂಬ್ ಸ್ಫೋಟಿಸಿದರೆ, ನಾವು ಸಂವಿಧಾನವನ್ನು ರಕ್ಷಿಸುತ್ತೇವೆ' ಎಂದು ಬಿಜೆಪಿ ನಾಯಕ ಸಂಬಿತ್ ಪಾತ್ರ ತಿಳಿಸಿದರು. 'ವಿರೋಧ ಪಕ್ಷಕ್ಕೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲ. ಹೀಗಾಗಿ ಅವರು ಬಾಂಬ್ ಸ್ಫೋಟಿಸುವುದಾಗಿ ಹೇಳುತ್ತಿದ್ದಾರೆ' ಎಂದು ಅವರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಬೇಜವಾಬ್ದಾರಿ ಹೇಳಿಕೆಗಳನ್ನು ನಿರ್ಲಕ್ಷಿಸಿ

ರಾಹುಲ್ ಅವರ ಆರೋಪಗಳನ್ನು ಆಧಾರರಹಿತ ಎಂದು ಕರೆದಿರುವ ಚುನಾವಣಾ ಆಯೋಗ, ಇಂತಹ ಬೇಜವಾಬ್ದಾರಿ ಹೇಳಿಕೆಗಳನ್ನು ನಿರ್ಲಕ್ಷಿಸಿ ಎಂದು ತನ್ನ ಅಧಿಕಾರಿಗಳಿಗೆ ತಿಳಿಸಿದೆ.

'ನಿತ್ಯ ಹೀಗೆ ಆಧಾರರಹಿತವಾಗಿ ಬೆದರಿಸುತ್ತಿರುವವರನ್ನು ನಿರ್ಲಕ್ಷಿಸುವುದೇ ಸೂಕ್ತ. ಪಾರದರ್ಶಕ ಮತ್ತು ನ್ಯಾಯಯುತವಾಗಿ ಕೆಲಸ ಮಾಡುತ್ತಿರುವ ಆಯೋಗದ ಸಿಬ್ಬಂದಿ ಇಂತಹ ಹೇಳಿಕೆಗಳಿಗೆಲ್ಲ ಗಮನ ಕೊಡಬಾರದು' ಎಂದು ಅದು ಅಧಿಕಾರಿ ಮತ್ತು ಸಿಬ್ಬಂದಿಗೆ ಹೇಳಿದೆ.

'ನಾಟಕ ಬಿಟ್ಟು ನ್ಯಾಯಾಲಯ ಮೆಟ್ಟಿಲು ಹತ್ತಿ'

ಬೆಂಗಳೂರು: ರಾಜಾಜಿನಗರ ಕ್ಷೇತ್ರದಲ್ಲಿ 'ಮತ ಕಳ್ಳತನ' ಆಗಿರುವುದಕ್ಕೆ ರಾಹುಲ್ ಗಾಂಧಿ ಬಳಿ ಯಾವುದೇ ದಾಖಲೆಗಳು ಇದ್ದರೆ ನಾಟಕ ಮಾಡುವುದನ್ನು ಬಿಟ್ಟು ನ್ಯಾಯಾಂಗವನ್ನು ಸಂಪರ್ಕಿಸಲಿ ಎಂದು ರಾಜಾಜಿನಗರ ಕ್ಷೇತ್ರದ ಬಿಜೆಪಿ ಶಾಸಕ ಎಸ್.ಸುರೇಶ್‌ಕುಮಾರ್ ಹೇಳಿದ್ದಾರೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಮಹದೇವಪುರ ಮತ್ತು ರಾಜಾಜಿನಗರದಲ್ಲಿ 'ಮತ ಕಳ್ಳತನ' ಮಾಡಲಾಗಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿರುವ ಸುರೇಶ್‌ಕುಮಾರ್, ಇವರ ನಾಟಕ ಪ್ರಜ್ಞಾವಂತ ಮತದಾರರಿಗೆ ಮಾಡುತ್ತಿರುವ ಅವಮಾನ ಮತ್ತು ಪ್ರಜಾಪ್ರಭುತ್ವದ ಅಣಕ ಎಂದು ತಿಳಿಸಿದ್ದಾರೆ.

2009 ಮತ್ತು ಆ ಬಳಿಕ ನಡೆದ ಎಲ್ಲ ಲೋಕಸಭಾ ಚುನಾವಣೆಗಳಲ್ಲಿ ರಾಜಾಜಿನಗರ ಕ್ಷೇತ್ರದಲ್ಲಿ ಬಿಜೆಪಿ ಸತತವಾಗಿ ಮುನ್ನಡೆ ಸಾಧಿಸಿದೆ. ಕಾಂಗ್ರೆಸ್ ನಾಯಕರು ಆರೋಪಿಸಿರುವಂತೆ ಮತಗಳ ಕಳವು ಮಾಡುವ ಪ್ರಶ್ನೆ ಎಲ್ಲಿಂದ ಉದ್ಭವಿಸುತ್ತದೆ ಎಂದು ಅವರು ಪ್ರಶ್ನಿಸಿದ್ದಾರೆ.

'2024ರ ಏಪ್ರಿಲ್‌ನಲ್ಲಿ ಲೋಕಸಭಾ ಚುನಾವಣೆ ನಡೆದು, ಮೇ ತಿಂಗಳಿನಲ್ಲಿ ಫಲಿತಾಂಶ ಬಂದಿತ್ತು. ಈಗ ನಾವು 2025ರ ಆಗಸ್ಟ್‌ನಲ್ಲಿದ್ದೇವೆ. ಫಲಿತಾಂಶ ಬಂದ 16 ತಿಂಗಳ ಬಳಿಕ ಈ ವಿಷಯವನ್ನು 'ಸಂಶೋಧಿಸಿ' ಜನರ ದಾರಿ ತಪ್ಪಿಸುವ ಹತಾಶ ಪ್ರಯತ್ನದಲ್ಲಿದ್ದಾರೆ' ಎಂದಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುದ್ಧಿವಂತ, ಪ್ರಬುದ್ಧ, ಅನುಭವಿ ರಾಜಕೀಯ ನಾಯಕ. ಆದರೆ ಅವರು ರಾಹುಲ್ ಗಾಂಧಿಯವರ ಅಸಂಬದ್ಧ ನಿಲುವಿಗೆ ಸಹಮತ ವ್ಯಕ್ತಪಡಿಸಿದ್ದಾರೆ. ಸಿದ್ದರಾಮಯ್ಯ ಅವರು ತಮ್ಮ ಹುದ್ದೆ ಉಳಿಸಿಕೊಳ್ಳುವ ಒತ್ತಡಕ್ಕೆ ಸಿಲುಕಿದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ.

ಸೇವೆಯಿಂದ ವಜಾ: ಆದೇಶ ಎತ್ತಿಹಿಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ದಾಖಲೆ ಸಲ್ಲಿಸಿ ಚಾಲಕನ ಹುದ್ದೆ ಪಡೆದುಕೊಂಡಿದ್ದ ಆರೋಪದಡಿ ನೌಕರರೊಬ್ಬರನ್ನು ಸೇವೆಯಿಂದ ವಜಾಗೊಳಿಸಿದ್ದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ (ಬಿಎಂಟಿಸಿ) ಕ್ರಮವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.



'ನಕಲಿ ದಾಖಲೆ ಸಲ್ಲಿಸಿ ಚಾಲಕ ಹುದ್ದೆಗೆ 1988ರಲ್ಲಿ ಸೇರ್ಪಡೆಗೊಂಡಿದ್ದ ಬೆಂಗಳೂರು ಪೂರ್ವ ತಾಲ್ಲೂಕಿನ ದೊಡ್ಡಗುಬ್ಬಿ ಬಳಿಯ ಯರಪ್ಪನ ಹಳ್ಳಿ ನಿವಾಸಿ ಮಾಲೂರಪ್ಪ ಅವರನ್ನು ವಜಾಗೊಳಿಸಿರುವ ಬಿಎಂಟಿಸಿ ಕ್ರಮದಲ್ಲಿ ಯಾವುದೇ ದೋಷವಿಲ್ಲ' ಎಂದು ಏಕಸದಸ್ಯ ನ್ಯಾಯಪೀಠ ಹೊರಡಿಸಿದ್ದ ಆದೇಶವನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಎತ್ತಿಹಿಡಿದಿದೆ.

ಪ್ರಕರಣವೇನು?: ಬದಲಿ ಚಾಲಕನ ಹುದ್ದೆಗೆ ಕನಿಷ್ಠ ನಾಲ್ಕನೇ ತರಗತಿಯವರೆಗೆ ಶಿಕ್ಷಣ ಪಡೆದಿರಬೇಕು ಎಂಬ ಷರತ್ತು ವಿಧಿಸಲಾಗಿತ್ತು. ಆದರೆ 1ನೇ ತರಗತಿಯವರೆಗೆ ಮಾತ್ರ ಅಧ್ಯಯನ ಮಾಡಿದ್ದ ಮಾಲೂರಪ್ಪ, ತಾವು 9ನೇ ತರಗತಿ ಅಧ್ಯಯನ ಮಾಡಿರುವುದಾಗಿ 1990ರಲ್ಲಿ ನಕಲಿ ಶಾಲಾ ವರ್ಗಾವಣೆ ಪ್ರಮಾಣಪತ್ರ (ಟಿಸಿ) ಸಲ್ಲಿಸಿದ್ದರು. ಈ ಆರೋಪಕ್ಕೆ ಸಂಬಂಧಿಸಿದಂತೆ ಬಿಎಂಟಿಸಿ ಅವರ ವಿರುದ್ಧ ಇಲಾಖಾ ವಿಚಾರಣೆ ಆರಂಭಿಸಿತ್ತು.

ಒಂದು ದಶಕಕ್ಕೂ ಹೆಚ್ಚು ಕಾಲ ವಿಚಾರಣೆ ನಡೆಸಿದ್ದ ಬಿಎಂಟಿಸಿ 2002ರಲ್ಲಿ ಪೂರ್ಣಗೊಳಿಸಿತ್ತು. ನಂತರ 2005ರಲ್ಲಿ ಮಾಲೂರಪ್ಪ ಅವರನ್ನು ಸೇವೆಯಿಂದ ವಜಾ ಗೊಳಿಸಿತ್ತು. ಇದನ್ನು ಪ್ರಶ್ನಿಸಿ ಮಾಲೂರಪ್ಪ ಕಾರ್ಮಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಇದಾದ 11 ವರ್ಷಗಳ ಬಳಿಕ ಕಾರ್ಮಿಕ ನ್ಯಾಯಾಲಯ, 'ಅರ್ಜಿದಾರರು ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಅವರನ್ನು ಸೇವೆಯಿಂದ ವಜಾಗೊಳಿಸುವುದು ಕಠಿಣ ಕ್ರಮ ಎನಿಸುತ್ತದೆ. ಹೀಗಾಗಿ, ಯಾವುದೇ ಹಿಂಬಾಕಿ ಪಾವತಿ ಮಾಡದೆ, ಮೂರು ವರ್ಷಗಳ ಕಾಲ ವೇತನ ಹೆಚ್ಚಳ ಮಾಡದೆ ಸೇವೆಯಲ್ಲಿ ಮುಂದುವರೆಸಿ' ಎಂದು ನಿರ್ದೇಶಿಸಿತ್ತು.

ಕಾರ್ಮಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ ಬಿಎಂಟಿಸಿ 2017ರಲ್ಲಿ ಹೈಕೋರ್ಟ್ ಮೆಟ್ಟಿಲೇರಿತ್ತು. ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, ಕಾರ್ಮಿಕ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಿತ್ತು. ಮಾಲೂರಪ್ಪ ಅವರನ್ನು ವಜಾಗೊಳಿಸಿದ್ದ ಬಿಎಂಟಿಸಿ ಕ್ರಮವನ್ನು ಎತ್ತಿಹಿಡಿದಿತ್ತು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ: ವಿಪಕ್ಷಗಳ ಸದಸ್ಯರ ಪ್ರತಿಭಟನೆ

ನಡೆಯದ ಲೋಕಸಭೆ, ರಾಜ್ಯಸಭಾ ಕಲಾಪ

ನವದೆಹಲಿ (ಪಿಟಿಐ): ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ವಿಸ್ತೃತ ಚರ್ಚೆಗೆ ಅವಕಾಶ ನೀಡುವಂತೆ ಒತ್ತಾಯಿಸಿ ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಸದಸ್ಯರು ಶುಕ್ರವಾರ ಪ್ರತಿಭಟನೆ ನಡೆಸಿದ್ದರಿಂದ ಇಡೀ ದಿನ ಸದನ ಕಲಾಪ ನಡೆಯಲಿಲ್ಲ.

ಲೋಕಸಭೆಯಲ್ಲಿ ಬೆಳಿಗ್ಗೆ 10 ಗಂಟೆಗೆ ಸದನ ಆರಂಭಗೊಳ್ಳುತ್ತಿದ್ದಂತೆಯೇ, ಸದಸ್ಯರು ಘೋಷಣೆ ಕೂಗಿ, ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು. ಸದನ ನಡೆಸಲು ಅವಕಾಶ ನೀಡಬೇಕು ಎಂದು ಕೋರಿ ಸ್ಪೀಕರ್ ಓಂ ಬಿರ್ಲಾ ಅವರು ಮನವಿ ಮಾಡಿದರು. ಆದರೂ, ಸದಸ್ಯರು ಘೋಷಣೆ ಕೂಗುವುದನ್ನು ಮುಂದುವರಿಸಿದರು. ಇದರಿಂದ ಪ್ರಶ್ನೋತ್ತರ ಅವಧಿಗೆ ತೊಂದರೆ ಉಂಟಾಯಿತು. ಹೀಗಾಗಿ, ಕಲಾಪವನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.



ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ವಿಸ್ತೃತ ಚರ್ಚೆ ಹಾಗೂ ಹಿಂದಕ್ಕೆ ಪಡೆಯಲು ಒತ್ತಾಯಿಸಿ ವಿರೋಧ ಪಕ್ಷಗಳ ಸದಸ್ಯರು ಶುಕ್ರವಾರ ಲೋಕಸಭೆಯಲ್ಲಿ ಪ್ರತಿಭಟಿಸಿದರು —ಪಿಟಿಐ ಚಿತ್ರ

ಮಧ್ಯಾಹ್ನ 2 ಗಂಟೆಗೆ ಸದನ ಆರಂಭಗೊಂಡರೂ, ಸದಸ್ಯರು ಘೋಷಣೆಗಳನ್ನು ಕೂಗುವುದನ್ನು ಮುಂದುವರಿಸಿದರು. ಇದರ ಮಧ್ಯೆಯೇ, ಗೋವಾ ವಿಧಾನಸಭೆಯಲ್ಲಿ ಪರಿಶಿಷ್ಟ ಪಂಗಡದ ಸಮುದಾಯದವರಿಗೆ ಮೀಸಲಾತಿ ನೀಡುವ ಕುರಿತ ಮಸೂದೆ ಮಂಡಿಸಲು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಮುಂದಾದರು. ಆದರೆ, ವಿರೋಧ ಪಕ್ಷಗಳು ಘೋಷಣೆಗಳನ್ನು ಮುಂದುವರಿಸಿದರು. ಸದನವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು.

ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ಕೆಲವು ಸದಸ್ಯರು ಸಭಾಪತಿಗಳ ಪೀಠದ ಬಳಿ ಧಾವಿಸಲು ಮುಂದಾದರು. ಇದಕ್ಕೆ ಮಾರ್ಷಲ್‌ಗಳು ಅವಕಾಶ ನೀಡಲಿಲ್ಲ. ಇದಕ್ಕೆ ಕೆಲವು ಮುಖಂಡರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಇಡೀ ಸದನವನ್ನು 'ಅರೆ ಸೇನಾ ಪಡೆಗಳು' ಹಿಡಿತಕ್ಕೆ ತೆಗೆದುಕೊಳ್ಳಲು ಯತ್ನಿಸುತ್ತಿವೆ ಎಂದು ದೂರಿದರು.

ಸದನವನ್ನು ಕೆಲಕಾಲ ಮುಂದೂಡಲಾಯಿತು. ಮಧ್ಯಾಹ್ನ 12 ಗಂಟೆ ವೇಳೆಗೆ ಸದನ ಪುನಃ ಆರಂಭಗೊಂಡ ವೇಳೆ ಟಿಎಂಸಿ, ಡಿಎಂಕೆ ಸಂಸದರು ಮತ್ತೆ ಪೀಠದ ಮುಂಭಾಗಕ್ಕೆ ನುಗ್ಗಲು ಯತ್ನಿಸಿದರು. ಪ್ರವೇಶ ದ್ವಾರದಲ್ಲಿಯೇ ಭದ್ರತಾ ಸಿಬ್ಬಂದಿ ತಡೆದರು. ಕೆಲವು ಮಹಿಳಾ ಸಂಸದರು ಒಳಗಡೆ ನುಗ್ಗಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಹೈಕೋರ್ಟ್ 4ನೇ ಪೀಠ

ಮುಂಬೈ(ಪಿಟಿಐ): ಬಾಂಬೆ ಹೈಕೋರ್ಟ್‌ನ 4ನೇ ಪೀಠವನ್ನು ಕೊಲ್ಹಾಪುರದಲ್ಲಿ ಸ್ಥಾಪಿಸಲಾಗಿದೆ. ಪೀಠವು ಆಗಸ್ಟ್ 18ರಂದು ಕಾರ್ಯಾರಂಭ ಮಾಡಲಿದ್ದು, ಹೈಕೋರ್ಟ್ ಮುಖ್ಯ-ನ್ಯಾಯಮೂರ್ತಿ ಅಲೋಕ್ ಆರಾಧೆ ಅಧಿಸೂಚನೆ ಹೊರಡಿಸಿದ್ದಾರೆ.

ಆ.3ಕ್ಕೆ ಸಮತ್ವ ಫೌಂಡೇಷನ್ ವಾರ್ಷಿಕೋತ್ಸವ

ಬೆಂಗಳೂರು: ಸಮತ್ವ ಫೌಂಡೇಷನ್ ತನ್ನ ಆರನೇ ವಾರ್ಷಿಕೋತ್ಸವವನ್ನು ಆ.3ರಂದು ಗಿರಿನಗರದ ಸಂಸ್ಕೃತ ಭಾರತಿಯ ಅಕ್ಷರ ಸಭಾಂಗಣದಲ್ಲಿ ಹಮ್ಮಿಕೊಂಡಿದೆ. ಬೆಳಿಗ್ಗೆ 9ರಿಂದ ರಾತ್ರಿ 9 ರವರೆಗೆ ವಿವಿಧ ಕಾರ್ಯಕ್ರಮ ನಡೆಯಲಿವೆ. ಎಂ.ಬಿ. ಹರಿಹರನ್ ಮತ್ತು ಎಸ್. ಅಶೋಕ್ (ಬೆಂಗಳೂರು ಸಹೋದರರು), ರಮಣ ಬಾಲಚಂದ್ರನ್, ಅರ್ಜುನ್ ಕುಮಾರ್ ಅವರ ಗಾಯನ ಮತ್ತು ವಾದ್ಯ ಪ್ರದರ್ಶನಗಳು ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬಿಹಾರ: ಮತದಾರರ ಕರಡು ಪಟ್ಟಿ ಪ್ರಕಟ

ಪಟ್ನಾ (ಪಿಟಿಐ): ಚುನಾವಣಾ ಆಯೋಗವು ಬಿಹಾರದಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸಿದ ಬಳಿಕ ಮತದಾರರ ಕರಡು ಪಟ್ಟಿಯನ್ನು ಶುಕ್ರವಾರ ಪ್ರಕಟಿಸಿದೆ.

ರಾಜ್ಯದಾದ್ಯಂತ ಕ್ರೋಢೀಕರಿಸಿದ ಮತದಾರರ ಪಟ್ಟಿ ಲಭ್ಯವಾಗಿಲ್ಲ. ಆದರೆ, ಮತದಾರರು ತಮ್ಮ ಹೆಸರನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದಾಗಿದೆ. ಸೆ.1ರವರೆಗೂ ಈ ಕರಡುಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶವಿದೆ.

ವಿಶೇಷ ಸಮಗ್ರ ಪರಿಷ್ಕರಣೆ ಆರಂಭಕ್ಕೂ ಮುನ್ನ, ಜೂನ್ ತಿಂಗಳಲ್ಲಿ ರಾಜ್ಯದಲ್ಲಿ 7.93 ಕೋಟಿ ನೋಂದಾಯಿತ ಮತದಾರರಿದ್ದರು ಎಂದು ಆಯೋಗ ತಿಳಿಸಿದೆ. ಇದೀಗ ಪ್ರಕಟಗೊಂಡಿರುವ ಕರಡು ಪಟ್ಟಿಯಲ್ಲಿ ಒಟ್ಟು ಎಷ್ಟು ಮತದಾರರಿದ್ದಾರೆ ಎಂಬುದು ಗೊತ್ತಾಗಿಲ್ಲ.

ಜುಲೈ 25ರ ವೇಳೆಗೆ ಪರಿಷ್ಕರಣೆ ಪ್ರಕ್ರಿಯೆ ಮುಗಿದಿದ್ದು, 7.23 ಕೋಟಿ ಮತದಾರರು ತಮ್ಮ ದಾಖಲೆ ಸಲ್ಲಿಸಿದ್ದಾರೆ. 35 ಲಕ್ಷ ಜನರು ಶಾಶ್ವತವಾಗಿ ವಲಸೆ ಹೋಗಿದ್ದಾರೆ. 22 ಲಕ್ಷ ಮಂದಿ ಮೃತಪಟ್ಟಿದ್ದಾರೆ. 7 ಲಕ್ಷ ಜನರು ಒಂದಕ್ಕಿಂತ ಹೆಚ್ಚು ಕಡೆ ಮತದಾರರಾಗಿ ನೋಂದಾಯಿಸಿದ್ದಾರೆ. 1.2 ಲಕ್ಷ ಮತದಾರರು ದಾಖಲೆ ಸಲ್ಲಿಸಿಲ್ಲ ಎಂದು ಆಯೋಗ ಹೇಳಿದೆ.

ಮಾರ್ಷಲ್‌ಗಳ ವರ್ತನೆಗೆ ಕಿಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರ ಮತ್ತು ಇತರ ರಾಜ್ಯಗಳಲ್ಲಿನ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರೋಧಿಸಿ ರಾಜ್ಯಸಭೆಯ ಸಭಾಪತಿಯ ಪೀಠದ ಮುಂಭಾಗ ಪ್ರತಿಭಟಿಸಲು ಮುಂದಾದಾಗ ಮಾರ್ಷಲ್‌ಗಳು ಅಡ್ಡಿಪಡಿಸಿದ್ದು ಸರಿಯಲ್ಲ ಎಂದು ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟದ ಸದಸ್ಯರು ಶುಕ್ರವಾರ ಆಕ್ಷೇಪಿಸಿದರು.

ರಾಜ್ಯಸಭೆಯನ್ನು ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಏನಾದರೂ ವಶಕ್ಕೆ ಪಡೆದಿದೆಯೇ ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

ಸದನವು ಮಧ್ಯಾಹ್ನ 12 ಗಂಟೆಗೆ ಮತ್ತೆ ಸೇರಿದಾಗ, ತೃಣಮೂಲ ಕಾಂಗ್ರೆಸ್, ಡಿಎಂಕೆ ಸದಸ್ಯರು ಸಭಾಪತಿಯ ಪೀಠದ ಮುಂಭಾಗ ಪ್ರವೇಶಿಸಲು ಮುಂದಾದರು. ಆಗ ಅವರನ್ನು ಮಾರ್ಷಲ್‌ಗಳು ತಡೆದರು. ಇದು ವಿರೋಧ ಪಕ್ಷಗಳ ಆಕ್ರೋಶಕ್ಕೆ ಕಾರಣವಾಗಿದೆ.

ಮಾರ್ಷಲ್‌ಗಳ ಕ್ರಮವನ್ನು ವಿರೋಧಿಸಿ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಉಪಸಭಾಪತಿ ಹರಿವಂಶ್ ಅವರಿಗೆ ಪತ್ರ ಬರೆದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. 'ಸದಸ್ಯರು ತಮ್ಮ ಪ್ರಜಾಪ್ರಭುತ್ವದ ಹಕ್ಕು ಚಲಾಯಿಸುವಾಗ ಸಿಐಎಸ್‌ಎಫ್ ಸಿಬ್ಬಂದಿ ಸದನದೊಳಗೆ ಓಡೋಡಿ ಬರುವುದನ್ನು ನೋಡಿ ಆಶ್ಚರ್ಯ ಮತ್ತು ಆಘಾತವಾಯಿತು' ಎಂದು ಖರ್ಗೆ ಪತ್ರದಲ್ಲಿ ಹೇಳಿದ್ದಾರೆ.

'ಗುರುವಾರ ಮತ್ತು ಶುಕ್ರವಾರ ಈ ದೃಶ್ಯಗಳನ್ನು ನೋಡಿದ್ದೇವೆ. ನಮ್ಮ ಸಂಸತ್ತು ಈ ಮಟ್ಟಕ್ಕೆ ಇಳಿದಿದೆಯೇ? ಸಿಐಎಸ್‌ಎಫ್ ಸಿಬ್ಬಂದಿಯಿಂದ ಇಂತಾ ವರ್ತನೆ ಮರುಕಳಿಸಬಾರದು ಎಂದು ನಿರೀಕ್ಷಿಸುತ್ತೇವೆ' ಎಂದು ತಿಳಿಸಿದ್ದಾರೆ.

> **ಕೆಲ ಸದಸ್ಯರು ಆಕ್ರಮಣಕಾರಿಯಾಗಿ ನಡೆದುಕೊಂಡರು. ಅದಾಗ್ಯೂ ಸದನದೊಳಗಿನ ಭದ್ರತಾ ವಿಷಯ ಸಭಾಪತಿ ನೋಡಿಕೊಳ್ಳುತ್ತಾರೆಯೇ ಹೊರತು ಸರ್ಕಾರವಲ್ಲ**
> **ಕಿರಣ್ ರಿಜಿಜು,** ಸಂಸದೀಯ ವ್ಯವಹಾರ ಸಚಿವ

ಸಾಲ ವಂಚನೆ: ಅನಿಲ್ ಅಂಬಾನಿಗೆ ಸಮನ್ಸ್

ನವದೆಹಲಿ (ಪಿಟಿಐ): ಕೋಟ್ಯಂತರ ರೂಪಾಯಿ ಬ್ಯಾಂಕ್ ಸಾಲ ವಂಚನೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಆ.5ರಂದು ವಿಚಾರಣೆಗೆ ಹಾಜರಾಗುವಂತೆ ರಿಲಯನ್ಸ್ ಸಮೂಹದ ಅಧ್ಯಕ್ಷ ಅನಿಲ್ ಅಂಬಾನಿ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಸಮನ್ಸ್ ಜಾರಿ ಮಾಡಿದೆ.

ಪ್ರಕರಣ ದಾಖಲಾಗಿರುವ ದೆಹಲಿಯ ಇ.ಡಿ ಕೇಂದ್ರ ಕಚೇರಿಯಲ್ಲೇ ವಿಚಾರಣೆಗೆ ಹಾಜರಾಗುವಂತೆ ಅನಿಲ್ ಅವರಿಗೆ ಸೂಚಿಸಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಅನಿಲ್ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಿದೆ. ಮುಂದಿನ ದಿನಗಳಲ್ಲಿ ಸಮೂಹಕ್ಕೆ ಸೇರಿದ ಕಾರ್ಯನಿರ್ವಾಹಕರಿಗೂ ಸಮನ್ಸ್ ನೀಡಲಾಗುವುದು ಎಂದು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಸೆ.9ರಂದು ಉಪ ರಾಷ್ಟ್ರಪತಿ ಚುನಾವಣೆ

ಧನಕರ್ ರಾಜೀನಾಮೆ ನೀಡಿದ ಬಳಿಕ ತೆರವಾದ ಹುದ್ದೆ

ನವದೆಹಲಿ (ಪಿಟಿಐ): 'ಜಗದೀಪ್ ಧನಕರ್ ರಾಜೀನಾಮೆಯಿಂದ ತೆರವಾಗಿರುವ ಉಪ ರಾಷ್ಟ್ರಪತಿ ಸ್ಥಾನಕ್ಕೆ ಸೆಪ್ಟೆಂಬರ್ 9ರಂದು ಮತದಾನ ನಡೆಯಲಿದೆ' ಎಂದು ಚುನಾವಣಾ ಆಯೋಗ ಶುಕ್ರವಾರ ತಿಳಿಸಿದೆ.

ಆಗಸ್ಟ್ 7ರಂದು ಈ ಸಂಬಂಧ ಅಧಿಸೂಚನೆ ಪ್ರಕಟಿಸಲಿದ್ದು, ಆಗಸ್ಟ್ 21 ರಂದು ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದೆ. ಒಂದು ದಿನದ ನಂತರ ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಆ. 25ರವರೆಗೆ ನಾಮಪತ್ರ ವಾಪಸ್ ಪಡೆಯಬಹುದು.

ಅವಿರೋಧ ಆಯ್ಕೆಯಾಗದಿದ್ದರೆ, ಚುನಾವಣೆ ನಡೆಯಲಿದೆ. ಇದಕ್ಕಾಗಿ ಆಯೋಗವು ಅಗತ್ಯ ಸಿದ್ಧತೆ ಮಾಡಿಕೊಂಡಿದೆ. ಸೆ.9ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನೂತನ ಸಂಸತ್ ಭವನದ ಮೊದಲ ಮಹಡಿಯಲ್ಲಿರುವ 'ವಸುಧಾ' ಎಫ್–101 ಕೊಠಡಿಯಲ್ಲಿ ಮತದಾನ ನಡೆಯಲಿದೆ. ಅದೇ ದಿನ, ಫಲಿತಾಂಶ ಪ್ರಕಟಗೊಳ್ಳಲಿದೆ. ಜುಲೈ 21ರಂದು ಧನಕರ್ ಅವರ ದಿಢೀರ್ ರಾಜೀನಾಮೆ ಬಳಿಕ ಉಪ ರಾಷ್ಟ್ರಪತಿ ಹುದ್ದೆ ಖಾಲಿ ಉಳಿದಿದೆ.

ಉಪರಾಷ್ಟ್ರಪತಿ ಆಯ್ಕೆಯ ಚುನಾವಣೆಯಲ್ಲಿ ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು, ನಾಮನಿರ್ದೇಶನಗೊಂಡ ಸದಸ್ಯರು ಮತದಾನ ಮಾಡಲು ಅವಕಾಶವಿದೆ. ಅದರಂತೆ, ರಾಜ್ಯಸಭೆಯ 233 ಚುನಾಯಿತ ಸದಸ್ಯರು, 12 ನಾಮನಿರ್ದೇಶಿತ ಸದಸ್ಯರು ಹಾಗೂ ಲೋಕಸಭೆಯ 543 ಸಂಸದರು ಮತದಾನ ಮಾಡುವ ಅರ್ಹತೆ ಹೊಂದಿರುತ್ತಾರೆ.

ರಾಜ್ಯಸಭೆಯ ಐದು ಸ್ಥಾನಗಳು ಖಾಲಿ ಉಳಿದಿದ್ದು, ಪಶ್ಚಿಮ ಬಂಗಾಳದ ಬಶಿರ್‌ಹಾಟ್ ಲೋಕಸಭಾ ಕ್ಷೇತ್ರವು ಖಾಲಿ ಇರುವ ಕಾರಣ ಒಟ್ಟು ಸದಸ್ಯತ್ವವು 782ಕ್ಕೆ ಇಳಿದಿದೆ. ಆಡಳಿತಾರೂಢ ಎನ್‌ಡಿಎ ಒಕ್ಕೂಟ 422 ಸದಸ್ಯರನ್ನು ಹೊಂದಿದ್ದು, ಸರಳ ಬಹುಮತ ಹೊಂದಿದೆ.

ಕಾಂಗ್ರೆಸ್‌ನಿಂದ ಸ್ಪರ್ಧೆಯ ಸುಳಿವು

ಎನ್‌ಡಿಎ ಸರಳ ಬಹುಮತ ಹೊಂದಿದ್ದರೂ ಕೂಡ, ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸೂಚನೆ ನೀಡಿದೆ.

'ವಿರೋಧ ಪಕ್ಷದಿಂದ ಅಭ್ಯರ್ಥಿ ಕಣಕ್ಕಿಳಿಸುವ ಕುರಿತು ಒಮ್ಮತ ಮೂಡಿಲ್ಲ. ಆದರೆ, ಸರ್ಕಾರ ಅಥವಾ ಪ್ರಧಾನಿ ನರೇಂದ್ರ ಮೋದಿ ಜೊತೆಗೆ ಒಮ್ಮತ ಮೂಡಲು ಸಾಧ್ಯವೇ ಇಲ್ಲ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈ ರಾಮ್ ರಮೇಶ್ ತಿಳಿಸಿದ್ದಾರೆ.

ಇಂಗ್ಲೆಂಡ್‌ಗೆ ಭಾರತದ ವೇಗಿಗಳ ತಿರುಗೇಟು

ಐದನೇ ಟೆಸ್ಟ್ • ಹಸಿರು ಅಂಗಳದಲ್ಲಿ ಬೌಲರ್‌ಗಳ ಮೆರೆದಾಟ • ಸಿರಾಜ್, ಪ್ರಸಿದ್ಧಗೆ ತಲಾ 4 ವಿಕೆಟ್

• ಸಿಡ್ನಿ ಕಿರಣ್

ಲಂಡನ್: ವೇಗದ ಬೌಲರ್‌ಗಳು ಓವಲ್ ಕ್ರೀಡಾಂಗಣದ ಹಸಿರು ಅಂಗಣದಲ್ಲಿ ತಮ್ಮ ಪಾರಮ್ಯ ಮುಂದುವರಿಸಿದರು. ಭಾರತ ಮತ್ತು ಇಂಗ್ಲೆಂಡ್ ತಂಡಗಳ ಬ್ಯಾಟರ್‌ಗಳು ಪರದಾಡಿದರು. ಅದರಿಂದಾಗಿ ಐದನೇ ಟೆಸ್ಟ್ ಪಂದ್ಯದ ಎರಡನೇ ದಿನದಾಟವಾದ ಶುಕ್ರವಾರ ಉಭಯ ತಂಡಗಳು ಸಮಬಲದ ಹೋರಾಟ ನಡೆಸಿದವು.



ಅರ್ಧಶತಕ ದಾಖಲಿಸಿದ ಯಶಸ್ವಿ ಜೈಸ್ವಾಲ್

ಗುರುವಾರ ಆತಿಥೇಯ ತಂಡದ ಬೌಲರ್‌ಗಳು ಪ್ರತಾಪ ಮೆರೆದಿದ್ದರು. ವೇಗಿ ಗಸ್ ಅಟ್ಕಿನ್ಸನ್ (2.4–1–2–3) ಅವರ ಅಮೋಘ ಸ್ಪೆಲ್‌ನಲ್ಲಿ ಭಾರತದ ಪ್ರಮುಖ ಬ್ಯಾಟರ್‌ಗಳು ಪೆವಿಲಿಯನ್ ಸೇರಿದ್ದರು. ಅವರು ಮತ್ತೆರಡು ವಿಕೆಟ್ ಪಡೆದು (33ಕ್ಕೆ5) ಪಂಚಗುಚ್ಛ ಪೂರ್ಣಗೊಳಿಸಿಕೊಂಡರು. ಅವರಿಗೆ ಉತ್ತಮ ಬೆಂಬಲ ನೀಡಿದ ಜೋಶ್ ಟಂಗ್ (57ಕ್ಕೆ3) ಅವರಿಂದಾಗಿ ಭಾರತ ತಂಡದ ಮೊದಲ ಇನಿಂಗ್ಸ್ ಬೇಗ ಮುಕ್ತಾಯವಾಯಿತು. 69.4 ಓವರ್‌ಗಳಲ್ಲಿ 224 ರನ್ ಗಳಿಸಿತು. ಇದರಲ್ಲಿ ಮೊದಲ ದಿನದಾಟದಲ್ಲಿ ಭಾರತವು 6ಕ್ಕೆ 204 ರನ್ ಪೇರಿಸಿತ್ತು. ಎರಡನೇ ದಿನದಲ್ಲಿ 20 ರನ್‌ಗಳ ಅಂತರದಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡಿತು.

ಇಂಗ್ಲೆಂಡ್ ಇನಿಂಗ್ಸ್ ಆರಂಭ ಚೆನ್ನಾಗಿತ್ತು. ಆರಂಭಿಕ ಜೋಡಿ ಜಾಕ್ ಕ್ರಾಲಿ (64 ರನ್) ಮತ್ತು ಬೆನ್ ಡಕೆಟ್ (43 ರನ್) ಅವರ ಬೀಸಾಟ ರಂಗೇರಿತು. ಅದರಿಂದಾಗಿ ಊಟದ ವಿರಾಮದ ಹೊತ್ತಿಗೆ 16 ಓವರ್‌ಗಳಲ್ಲಿ 1 ವಿಕೆಟ್‌ಗೆ 109 ರನ್ ಗಳಿಸಿತು.

ಇಲ್ಲಿಂದ ಮುಂದೆ ಭಾರತದ ಬೌಲರ್‌ಗಳು ಆರ್ಭಟಿಸಿದರು. ಮೊಹಮ್ಮದ್ ಸಿರಾಜ್ (86ಕ್ಕೆ4), ಪ್ರಸಿದ್ಧ ಕೃಷ್ಣ (62ಕ್ಕೆ4) ಮತ್ತು ಆಕಾಶ್ ದೀಪ್ (80ಕ್ಕೆ1) ಬ್ಯಾಟರ್‌ಗಳನ್ನು ಕಾಡಿದರು. ಹೀಗಾಗಿ, ಇಂಗ್ಲೆಂಡ್ 51.2 ಓವರ್‌ಗಳಲ್ಲಿ 247 ರನ್ ಗಳಿಸಿ ಆಲೌಟ್ ಆಯಿತು.

ಎರಡನೇ ಇನಿಂಗ್ಸ್ ಆರಂಭಿಸಿದ ಭಾರತ ಎರಡನೇ ದಿನದಾಟದ ಮುಕ್ತಾಯಕ್ಕೆ 18 ಓವರ್‌ಗಳಲ್ಲಿ 2 ವಿಕೆಟ್‌ಗೆ 75 ರನ್ ಗಳಿಸಿದೆ. ಮೊದಲ ಇನಿಂಗ್ಸ್‌ನ 23 ರನ್‌ಗಳ ಹಿನ್ನಡೆಯನ್ನು ಚುಕ್ತಾಗೊಳಿಸಿ, 52 ರನ್ ಮುನ್ನಡೆ ಸಾಧಿಸಿದೆ.

ಹಸಿರು ಅಂಕಣದಲ್ಲಿ ಚೆಂಡಿನ ವೇಗ, ಬೌನ್ಸ್ ಮತ್ತು ಸ್ವಿಂಗ್‌ಗಳು ಉನ್ನತಮಟ್ಟದಲ್ಲಿದ್ದವು. ಆದರೂ ಕ್ರಾಲಿ ಮತ್ತು ಡಕೆಟ್ ಅವರು ಒಂಚೂರೂ ವಿಚಲಿತರಾಗಲಿಲ್ಲ. 'ಬಾಝ್‌ಬಾಲ್' ಆಟ ಮುನ್ನೆಲೆಗೆ ತಂದರು. ಅದರಲ್ಲೂ 5.7 ಅಡಿ ಎತ್ತರದ ಎಡಗೈ ಬ್ಯಾಟರ್ ಡಕೆಟ್ ಅವರು ಆಕಾಶ್ ಮತ್ತು ಸಿರಾಜ್ ಅವರ ಎಸೆತಗಳನ್ನು ಕ್ರೀಸ್‌ನಿಂದ ಮುನ್ನುಗ್ಗಿ ಬಂದು ಆಡಿದರು. ಚೆಂಡನ್ನು ಕವರ್ಸ್ ಪೊಸಿಷನ್ ದಾಟಿಸುವುತ್ತಲೇ ಹೆಚ್ಚು ಗಮನವಿಟ್ಟರು. ಅಲ್ಲದೇ ಸ್ಕೂಪ್ ಮತ್ತು ರಿವರ್ಸ್ ಸ್ವೀಪ್‌ಗಳ ಮೂಲಕವೂ ರನ್ ಸೂರೆ ಮಾಡಿದರು.



ವಿಕೆಟ್ ಪಡೆದ ಸಂಭ್ರಮದಲ್ಲಿ ಪ್ರಸಿದ್ಧಕೃಷ್ಣ ಮತ್ತು ಮೊಹಮ್ಮದ್ ಸಿರಾಜ್ ಚಿತ್ರಗಳು: ಪಿಟಿಐ/ಎಎಫ್‌ಪಿ

ಇನ್ನೊಂದು ಬದಿಯಲ್ಲಿ ಆರೂವರೆ ಅಡಿ ಎತ್ತರದ ಕ್ರಾಲಿ ಅವರ ಮನಮೋಹಕ ಡ್ರೈವ್‌ಗಳ ಆಟಕ್ಕೆ ತಡೆಯೊಡ್ಡುವ ಬೌಲರ್‌ಗಳ ಪ್ರಯತ್ನಕ್ಕೆ ಫಲ ಸಿಗಲಿಲ್ಲ. ಆಗಸ್ಟ್ 5ರಿಂದ ಆರಂಭವಾಗಲಿರುವ ಹಂಡ್ರೆಡ್ ಬಾಲ್ ಕ್ರಿಕೆಟ್‌ಗಾಗಿ ಕ್ರಾಲಿ ಅವರು ಪೂರ್ವಾಭ್ಯಾಸ ನಡೆಸುವ ರೀತಿಯಲ್ಲಿ ಇಲ್ಲಿ ಆಡಿದರು!

ಸ್ವಿಂಗ್ ಆಗಿ ಬರುತ್ತಿದ್ದ ಎಸೆತಗಳನ್ನು ಎದುರಿಸುವಲ್ಲಿ ಅವರು ನಿಖರವಾಗಿ ಪಾದಚಲನೆ ಪ್ರದರ್ಶಿಸಿದರು. ಇದ ರಿಂದಾಗಿ ಬಹಳ ಹೊತ್ತು ಬೌಲರ್‌ಗಳಿಗೆ ಪರಿಹಾರದ ದಾರಿ ಸಿಗಲಿಲ್ಲ. ಆದರೆ ಊಟಕ್ಕೆ ಸ್ವಲ್ಪ ಹೊತ್ತಿಗೆ ಮುನ್ನ ಆಕಾಶ್ ಮೊದಲ ಬೇಟೆಯಾಡಿದರು. ಡೆಕೆಟ್ ಅವರು ಕಟ್ ಮಾಡಲು ಯತ್ನಿಸಿದ ಚೆಂಡು ವಿಕೆಟ್‌ಕೀಪರ್ ಧ್ರುವ ಜುರೇಲ್ ಗ್ಲೌಸ್ ಸೇರಿತು. ಆಕಾಶ್ ಸಂಭ್ರಮಿಸಿದರು. ಉಳಿದ ಬೌಲರ್‌ಗಳಲ್ಲಿ ಹುರುಪು ಪುಟಿದೆದ್ದಿತು.

ಪ್ರಸಿದ್ಧ ಎಸೆತದಲ್ಲಿ ರವೀಂದ್ರ ಜಡೇಜಗೆ ಕ್ಯಾಚಿತ್ತ ಕ್ರಾಲಿ ಆಟಕ್ಕೂ ತೆರೆಬಿತ್ತು. 'ಸಿಂಹದ ಗುಂಡಿಗೆ'ಯ ಬೌಲರ್ ಸಿರಾಜ್ ಗರ್ಜನೆಗೆ ಇಂಗ್ಲೆಂಡ್ ಬ್ಯಾಟಿಂಗ್ ಪಡೆ ತತ್ತರಿಸಿತು. ಹಂಗಾಮಿ ನಾಯಕ ಓಲಿ ಪೋಪ್, ಜೋ ರೂಟ್ ಮತ್ತು ಜೇಕಬ್ ಬೆಥೆಲ್ ಅವರೆಲ್ಲರೂ ಸಿರಾಜ್ ಬೀಸಿದ ಎಲ್‌ಬಿಡಬ್ಲ್ಯು ಬಲೆಯಲ್ಲಿ ಬಿದ್ದರು. ಅರ್ಧಶತಕ ಗಳಿಸಿದ ಹ್ಯಾರಿ ಬ್ರೂಕ್ (53;64ಎ) ಕೂಡಾ ಕೊನೆಯಲ್ಲಿ ಸಿರಾಜ್‌ಗೆ ವಿಕೆಟ್ ಒಪ್ಪಿಸಿದರು.

ಇನ್ನೊಂದು ಕಡೆಯಿಂದ ಕನ್ನಡಿಗ ಪ್ರಸಿದ್ಧಕೃಷ್ಣ ಅವರೂ ಸಿರಾಜ್ ಅವರೊಂದಿಗೆ ಜೊತೆಯಾಟವಾಡಿದರು. ಜೆಮಿ ಸ್ಮಿತ್, ಜೆಮಿ ಓವರ್ಟನ್ ಮತ್ತು ಗಸ್ ಅಟ್ಕಿನ್ಸನ್ ವಿಕೆಟ್‌ಗಳನ್ನು ಬುಟ್ಟಿಗೆ ಹಾಕಿಕೊಂಡರು. ಸರಣಿಯ ಮೊದಲ ಎರಡು ಟೆಸ್ಟ್‌ಗಳಲ್ಲಿ ಆಡಿದ್ದ ಪ್ರಸಿದ್ಧ ನಂತರದ ಎರಡರಲ್ಲಿ ಸ್ಥಾನ ಪಡೆದಿರಲಿಲ್ಲ. ಈಗ ಇಲ್ಲಿ ಸಿಕ್ಕ ಅವಕಾಶವನ್ನು ಉತ್ತಮವಾಗಿ ಬಳಸಿಕೊಂಡರು.

ಜೈಸ್ವಾಲ್ ಆಸರೆ: ಭಾರತದ ಎಡಗೈ ಬ್ಯಾಟರ್ ಯಶಸ್ವಿ ಜೈಸ್ವಾಲ್ (ಔಟಾಗದೇ 51;49ಎ) ಎರಡನೇ ಇನಿಂಗ್ಸ್‌ನಲ್ಲಿ ಅರ್ಧಶತಕ ದಾಖಲಿಸಿ ಭಾರತ ತಂಡಕ್ಕೆ ಆಸರೆಯಾಗಿದ್ದಾರೆ. ಅವರು ಎರಡು ಜೀವದಾನ ಪಡೆದರು. ಅನುಭವಿ ಕೆ.ಎಲ್.ರಾಹುಲ್ (7) ಮತ್ತು ಸಾಯಿ ಸುದರ್ಶನ್ (11) ಮತ್ತೆ ನಿರಾಸೆ ಮೂಡಿಸಿದರು. ಜೈಸ್ವಾಲ್ ಅವರೊಂದಿಗೆ ಆಕಾಶ್ ದೀಪ್ (ಔಟಾಗದೇ 4) ಮೂರನೇ ದಿನಕ್ಕೆ ಆಟವನ್ನು ಕಾಯ್ದಿರಿಸಿದ್ದಾರೆ.

ವೋಕ್ಸ್‌ಗೆ ಗಾಯ: ಪಂದ್ಯದಿಂದ ನಿರ್ಗಮನ

ಲಂಡನ್: ಓವಲ್ ಕ್ರೀಡಾಂಗಣದಲ್ಲಿ ಆತಿಥೇಯ ಇಂಗ್ಲೆಂಡ್‌ಗೆ ಶುಕ್ರವಾರ ಮತ್ತೊಂದು ಸಮಸ್ಯೆ ಎದುರಾಯಿತು. ತಂಡದ ಪ್ರಮುಖ ವೇಗಿ ಕ್ರಿಸ್ ವೋಕ್ಸ್ ಅವರು ಗಾಯಗೊಂಡು ಪಂದ್ಯದಿಂದಲೇ ನಿರ್ಗಮಿಸಿದರು. ಈಗಾಗಲೇ ಗಾಯದಿಂದಾಗಿ ನಾಯಕ ಬೆನ್ ಸ್ಟೋಕ್ಸ್ ಕೂಡ ಈ ಪಂದ್ಯದಲ್ಲಿ ಆಡುತ್ತಿಲ್ಲ. ಅವರು ಈ ಸರಣಿಯಲ್ಲಿ 17 ವಿಕೆಟ್‌ಗಳನ್ನು ಪಡೆದಿದ್ದರು.

ಸ್ಟೋಕ್ಸ್ ಗೈರು ಹಾಜರಿಯಲ್ಲಿ ತಂಡದ ಬೌಲಿಂಗ್ ಸಾರಥ್ಯ ಕ್ರಿಸ್ ವೋಕ್ಸ್ ಮೇಲೆ ಇತ್ತು. ಆದರೆ ಮೊದಲ ದಿನದಾಟದ 57ನೇ ಓವರ್‌ನಲ್ಲಿ ಭಾರತದ ಬ್ಯಾಟರ್ ಕರುಣ್ ನಾಯರ್ ಅವರು ಕವರ್ ಡ್ರೈವ್ ಮಾಡಿದರು. ಚೆಂಡನ್ ಬೌಂಡರಿ ದಾಟದಂತೆ ತಡೆಯಲು ವೋಕ್ಸ್ ಪ್ರಯತ್ನಿಸಿದರು. ಡೈವ್ ಮಾಡಿದ 36 ವರ್ಷದ ವೋಕ್ಸ್ ಜಾಹೀರಾತು ಫಲಕಕ್ಕೆ ಡಿಕ್ಕಿ ಹೊಡೆದರು. ಇದರಿಂದಾಗಿ ಅವರ ಎಡಭುಜಕ್ಕೆ ಬಲವಾದ ಪೆಟ್ಟು ಬಿತ್ತು. ನೋವಿನಿಂದ ಪರಿತಪಿಸಿದ ಅವರಿಗೆ ಫಿಸಿಯೊ ಪ್ರಥಮ ಚಿಕಿತ್ಸೆ ನೀಡಿದರು. ಆದರೆ ಅವರು ಮೈದಾನ ತೊರೆಯಬೇಕಾಯಿತು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್:
ಭಾರತ: 224 (69.4 ಓವರುಗಳಲ್ಲಿ) (ಗುರುವಾರ: 6ಕ್ಕೆ 204)
ಕರುಣ್ ಎಲ್‌ಬಿಡಬ್ಲ್ಯು ಬಿ ಟಂಗ್ 57 (109ಎ, 4x8)
ಸುಂದರ್ ಸಿ ಓವರ್ಟನ್ ಬಿ ಅಟ್ಕಿನ್ಸನ್ 26 (55ಎ, 4x3)
ಆಕಾಶ್ ದೀಪ್ ಔಟಾಗದೇ 0 (7ಎ)
ಸಿರಾಜ್ ಬಿ ಅಟ್ಕಿನ್ಸನ್ 0 (4ಎ)
ಪ್ರಸಿದ್ಧ ಸಿ ಸ್ಮಿತ್ ಬಿ ಅಟ್ಕಿನ್ಸನ್ 0 (2ಎ)
ಇತರೆ: 38 (ಬೈ 12, ಲೆಗ್‌ಬೈ 6, ನೋಬಾಲ್ 4, ವೈಡ್ 16)
ವಿಕೆಟ್ ಪತನ: 7–218 (ಕರುಣ್ ನಾಯರ್, 66.5), 8–220 (ವಾಷಿಂಗ್ಟನ್ ಸುಂದರ್, 67.4), 9–224 (ಮೊಹಮ್ಮದ್ ಸಿರಾಜ್, 69.2), 10–224 (ಪ್ರಸಿದ್ಧ ಕೃಷ್ಣ, 69.4)
ಬೌಲಿಂಗ್: ಕ್ರಿಸ್ ವೋಕ್ಸ್ 14–1–46–1; ಗಸ್ ಅಟ್ಕಿನ್ಸನ್ 21.4–8–33–5; ಜೋಶ್ ಟಂಗ್ 16–4–57–3; ಜೇಮಿ ಓವರ್ಟನ್ 16–0–66–0; ಬೆಥೆಲ್ 2–1–4–0
ಇಂಗ್ಲೆಂಡ್: 247 (51.2 ಓವರುಗಳಲ್ಲಿ)
ಕ್ರಾಲಿ ಸಿ ಜಡೇಜ ಬಿ ಪ್ರಸಿದ್ಧ 64 (57ಎ, 4x14)
ಡಕೆಟ್ ಸಿ ಜುರೆಲ್ ಬಿ ಆಕಾಶ್ 43 (38ಎ, 4x5, 6x2)
ಪೋಪ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 22 (44ಎ, 4x4)
ರೂಟ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 29 (45, 6x2)
ಬ್ರೂಕ್ ಬಿ ಸಿರಾಜ್ 53 (64ಎ, 4x5, 6x1)
ಬೆಥೆಲ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 6 (14ಎ)
ಸ್ಮಿತ್ ಸಿ ರಾಹುಲ್ ಬಿ ಪ್ರಸಿದ್ಧ 8 (22ಎ, 4x1)
ಓವರ್ಟನ್ ಎಲ್‌ಬಿಡಬ್ಲ್ಯು ಬಿ ಪ್ರಸಿದ್ಧ 0 (4ಎ)
ಅಟ್ಕಿನ್ಸನ್ ಸಿ ಆಕಾಶ್ ಬಿ ಪ್ರಸಿದ್ಧ 11 (16ಎ, 4x2)
ಟಂಗ್ ಔಟಾಗದೇ 0 (7ಎ)
ಕ್ರಿಸ್ ವೋಕ್ಸ್ (ಗಾಯಗೊಂಡು ಗೈರು)
ಇತರೆ: 11 (ಬೈ 6, ಲೆಗ್‌ಬೈ 2, ನೋಬಾಲ್ 3)
ವಿಕೆಟ್ ಪತನ: 1–92 (ಬೆನ್ ಡಕೆಟ್, 12.5), 2–129 (ಜಾಕ್ ಕ್ರಾಲಿ, 21.1), 3–142 (ಓಲಿ ಪೋಪ್, 24.4), 4–175 (ಜೋ ರೂಟ್, 32.6), 5–195 (ಜೇಕಬ್ ಬೆಥೆಲ್, 36.4), 6–215 (ಜೇಮಿ ಸ್ಮಿತ್ 42.1), 7–215 (ಜೇಮಿ ಓವರ್ಟನ್, 42.5), 8-235 (ಗಸ್ ಅಟ್ಕಿನ್ಸನ್, 46.5), 9-247 (ಹ್ಯಾರಿ ಬ್ರೂಕ್, 51.2)
ಬೌಲಿಂಗ್: ಮೊಹಮ್ಮದ್ ಸಿರಾಜ್ 16.2–1–86–4; ಆಕಾಶ್ ದೀಪ್ 17–0–80–1; ಪ್ರಸಿದ್ಧ ಕೃಷ್ಣ 16–1–62–4; ರವೀಂದ್ರ ಜಡೇಜ 2–0–11–0
ಎರಡನೇ ಇನಿಂಗ್ಸ್: ಭಾರತ 2ಕ್ಕೆ 75 (18 ಓವರ್‌ಗಳಲ್ಲಿ)
ಜೈಸ್ವಾಲ್ ಔಟಾಗದೇ 51 (49ಎ, 4x7, 6x2)
ರಾಹುಲ್ ಸಿ ರೂಟ್ ಬಿ ಟಂಗ್ 7 (28ಎ, 4x1)
ಸುದರ್ಶನ್ ಎಲ್‌ಬಿಡಬ್ಲ್ಯು ಬಿ ಅಟ್ಕಿನ್ಸನ್ 11 (29ಎ, 4x1)
ಆಕಾಶ್ ದೀಪ್ ಔಟಾಗದೇ 4 (2ಎ, 4x1)
ಇತರೆ: 2 (ಲೆಗ್‌ಬೈ 2)
ವಿಕೆಟ್ ಪತನ: 1-46 (ಕೆ.ಎಲ್.ರಾಹುಲ್ 9.5), 2-70 (ಸಾಯಿ ಸುದರ್ಶನ್, 17.2)
ಬೌಲಿಂಗ್: ಗಸ್ ಅಟ್ಕಿನ್ಸನ್ 6–2–26–1, ಜೋಶ್ ಟಂಗ್ 7–1–25–1, ಜೆಮಿ ಓವರ್ಟನ್ 5–1–22–0

ಫುಟ್‌ಬಾಲ್: ಜಮೀಲ್ ಕೋಚ್



ನವದೆಹಲಿ (ಪಿಟಿಐ): ಮಾಜಿ ಅಂತರರಾಷ್ಟ್ರೀಯ ಆಟಗಾರ ಖಾಲಿದ್ ಜಮೀಲ್ ಅವರು 13 ವರ್ಷಗಳ ನಂತರ ಭಾರತ ಫುಟ್‌ಬಾಲ್ ತಂಡಕ್ಕೆ ತರಬೇತುದಾರನಾದ ಮೊದಲ ಭಾರತೀಯ ಎನಿಸಿದರು. ಅವರು ಸ್ಟೀಫನ್ ಕಾನ್‌ಸ್ಟಂಟೇನ್ ಮತ್ತು ಸ್ಟೆಫಾನ್ ಟರ್ಕೊವಿಕ್ ಅವರ ಪೈಪೋಟಿ ಮೀರಿನಿಂತರು.

ಸಾವಿಯೊ ಮೆದೀರಾ ಅವರು ರಾಷ್ಟ್ರೀಯ ತಂಡವನ್ನು ಮುನ್ನಡೆಸಿದ ಭಾರತದ ಕೊನೆಯ ಕೋಚ್ ಆಗಿದ್ದರು. ಅವರು 2011–12ನೇ ಸಾಲಿಗೆ ಕೋಚ್ ಆಗಿದ್ದರು. ಈಗ ಜಮೀಲ್ ಮೇಲೆ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಭರವಸೆ ಇಟ್ಟಿದೆ.

ಅಷ್ಟೇನೂ ಪರಿಚಿತವಲ್ಲದ ಐಜ್ವಾಲ್ ಫುಟ್‌ಬಾಲ್ ಕ್ಲಬ್ ತಂಡವನ್ನು 2017ರಲ್ಲಿ ಜಮೀಲ್ ಅವರು ಐ–ಲೀಗ್ ಚಾಂಪಿಯನ್ ಆಗಿ ರೂಪಿಸಿದ್ದರು. ಕೆಲಸಮಯದಿಂದ ಪರದಾಡುತ್ತಿರುವ ಭಾರತ ತಂಡಕ್ಕೆ ಚೈತನ್ಯ ನೀಡಬೇಕಾದ ಸವಾಲು ಈಗ 48 ವರ್ಷ ವಯಸ್ಸಿನ ಜಮೀಲ್ ಮುಂದಿದೆ.

ಜಮೀಲ್ ಈಗ ಐಎಸ್‌ಎಲ್‌ನಲ್ಲಿ ಜೆಮ್ಷೆಡ್‌ಪುರ ಎಫ್‌ಸಿ ತಂಡದ ಕೋಚಿಂಗ್ ಹೊಣೆ ಹೊತ್ತಿದ್ದಾರೆ.

ಈ ಹುದ್ದೆಯ ರೇಸ್‌ನಲ್ಲಿದ್ದ ಕಾನ್‌ಸ್ಟಂಟೇನ್ ಅವರು ಈ ಹಿಂದೆಯೂ ಭಾರತ ತಂಡದ ಹೆಡ್ ಕೋಚ್ ಆಗಿದ್ದರು. ಟರ್ಕೊವಿಕ್ ಅವರು ಸ್ಲೊವಾಕಿಯಾ ರಾಷ್ಟ್ರೀಯ ತಂಡದ ಕೋಚಿಂಗ್ ಹೊಣೆ ಹೊತ್ತಿದ್ದರು. ಮಾಜಿ ಫುಟ್‌ಬಾಲ್ ತಾರೆ ಐ.ಎಂ.ವಿಜಯನ್ ನೇತೃತ್ವದ ಎಐಎಫ್‌ಎಫ್ ತಾಂತ್ರಿಕ ಸಮಿತಿ ಮೂವರು ಹೆಸರನ್ನು ಶಾರ್ಟ್‌ಲಿಸ್ಟ್ ಮಾಡಿತ್ತು.

ಮನೊಲೊ ಮಾರ್ಕ್ವೆಝ್ ಅವರು ಈವರೆಗೆ ತಂಡದ ಹೆಡ್ ಕೋಚ್ ಆಗಿದ್ದರು. ಕಳೆದ ತಿಂಗಳು ಅವರು ಎಐಎಫ್‌ಎಫ್ ಸಮ್ಮತಿಯೊಡನೆ ಈ ಹುದ್ದೆ ತೊರೆದಿದ್ದರು. ತಂಡ ಅವರ ಅವಧಿಯಲ್ಲಿ ನಿರೀಕ್ಷಿತ ಮಟ್ಟ ತಲುಪಿರಲಿಲ್ಲ.

'ಫೆಡರೇಷನ್‌ನ ಕಾರ್ಯಕಾರಿ ಸಮಿತಿ ನೂತನ ಕೋಚ್ ಆಗಿ ಜಮೀಲ್ ಅವರನ್ನು ನೇಮಕ ಮಾಡಿದೆ. ಆದರೆ ಅವರ ಅವಧಿ ಇನ್ನೂ ನಿಗದಿಪಡಿಸಿಲ್ಲ. ಅವರ ಜೊತೆ ಮತ್ತು ನಮ್ಮಲ್ಲಿ ಮಾತನಾಡಿಕೊಂಡು ನಿರ್ಧರಿಸುತ್ತೇವೆ. ಅವರ ವೇತನದ ಬಗ್ಗೆಯೂ ಚರ್ಚೆ ನಡೆಸಬೇಕಾಗಿದೆ' ಎಂದು ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಪಿಟಿಐಗೆ ತಿಳಿಸಿದರು.

'ಜಮೀಲ್ ಮೂರು ವರ್ಷದ ಅವಧಿ ಬಯಸಿದ್ದಾರೆ. ಆದರೆ ಕಾರ್ಯಕಾರಿ ಸಮಿತಿಯ ಕೆಲವು ಸದಸ್ಯರು 1–2 ವರ್ಷ ಇರಲೆಂದು ಹೇಳುತ್ತಿದ್ದಾರೆ. ಆದರೆ ಅದು 2–3 ವರ್ಷ ಇರಲಿದೆ. ಅವರ ನಿರ್ವಹಣೆ ಆಧಾರದಲ್ಲಿ ಇರಲಿದೆ' ಎಂದರು.

ಕೇಂದ್ರೀಯ ವಿದ್ಯಾಲಯಗಳ ರಾಷ್ಟ್ರೀಯ ಕ್ರೀಡಾಕೂಟ ಇಂದಿನಿಂದ

ಬೆಂಗಳೂರು: ಕೇಂದ್ರೀಯ ವಿದ್ಯಾಲಯಗಳ ಸಂಘಟನೆಯು 54ನೇ ರಾಷ್ಟ್ರೀಯ ಕ್ರೀಡಾಕೂಟವನ್ನು ಆಯೋಜಿಸುತ್ತಿದ್ದು, ಟೇಕ್ವಾಂಡೊ, ಈಜು, ಕಬಡ್ಡಿ ಹಾಗೂ ಕ್ರಿಕೆಟ್ ಸ್ಪರ್ಧೆಗಳು ಬೆಂಗಳೂರಿನಲ್ಲಿ ನಡೆಯಲಿವೆ. ಹೆಬ್ಬಾಳದಲ್ಲಿನ ಕೆ.ವಿ. ಶಾಲಾ ಆವರಣದಲ್ಲಿ ಶನಿವಾರ ಕೂಟಕ್ಕೆ ಚಾಲನೆ ಸಿಗಲಿದೆ.

ಬಾಲಕಿಯರ ವಿಭಾಗದ ಟೇಕ್ವಾಂಡೊ ಸ್ಪರ್ಧೆಗಳು ಜಾಲಹಳ್ಳಿಯ ಕೆ.ವಿ. ಶಾಲೆಯಲ್ಲಿ ಆ.2ರಿಂದ (ಶನಿವಾರ) ಆ.6ರ ವರೆಗೆ ನಡೆಯಲಿವೆ. ಈಜು ಸ್ಪರ್ಧೆಗಳು ಕೆ.ವಿ. ಎಎಸ್‌ಸಿ ಕೇಂದ್ರದಲ್ಲಿ (ಬಾಲಕರ ವಿಭಾಗ) ಹಾಗೂ ಕೆ.ವಿ ಎಂಇಜಿ ಅ್ಯಂಡ್ ಸೆಂಟರ್‌ನಲ್ಲಿ (ಬಾಲಕಿಯರ ವಿಭಾಗ) ನಡೆಯಲಿವೆ. 14 ವರ್ಷದೊಳಗಿನವರ, 17 ವರ್ಷದೊಳಗಿನವರ ಹಾಗೂ 19 ವರ್ಷದೊಳಗಿನವರ ವಿಭಾಗದಲ್ಲಿ ಸ್ಪರ್ಧೆ ಇರಲಿದೆ.

ಕಬಡ್ಡಿ ಸ್ಪರ್ಧೆಗಳು ಹೆಬ್ಬಾಳದ ಕೆ.ವಿ. ಶಾಲೆ, ಕೆ.ವಿ. ಡಿಆರ್‌ಡಿಒ, ಕೆ.ವಿ. ಎಂಇಜಿ ಹಾಗೂ ಯಲಹಂಕದ ಕೆ.ವಿ. ಎಎಫ್‌ಎಸ್‌ನಲ್ಲಿ ನಡೆಯಲಿವೆ. 14 ವರ್ಷದೊಳಗಿನವರ ಹಾಗೂ 17 ವರ್ಷದೊಳಗಿನವರ ವಿಭಾಗದಲ್ಲಿ ಈ ಸ್ಪರ್ಧೆಗಳು ನಡೆಯಲಿವೆ.

14 ವರ್ಷದೊಳಗಿನ ಬಾಲಕರ ವಿಭಾಗದ ಕ್ರಿಕೆಟ್ ಸ್ಪರ್ಧೆಯು ಯಲಹಂಕದ ಕೆ.ವಿ. ಆರ್‌ಡಬ್ಲ್ಯುಎಫ್‌ನಲ್ಲಿ ಅಕ್ಟೋಬರ್ 13ರಿಂದ 19ರ ವರೆಗೆ ಆಯೋಜಿಸಲಾಗಿದೆ.





ಲಕ್ಷ್ಯ ಸೇನ್ ತರುಣ್

ಮಕಾವ್ ಓಪನ್ ಸೆಮಿಗೆ ಲಕ್ಷ್ಯ, ತರುಣ್

ಮಕಾವ್ (ಪಿಟಿಐ): ಭಾರತದ ಅಗ್ರಮಾನ್ಯ ಆಟಗಾರ ಲಕ್ಷ್ಯ ಸೇನ್ ಹಾಗೂ ತರುಣ್ ಮನ್ನೇಪಲ್ಲಿ ಅವರು ಮಕಾವ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಸಿಂಗಲ್ಸ್ ವಿಭಾಗದಲ್ಲಿ ಶುಕ್ರವಾರ ಸೆಮಿಫೈನಲ್ ತಲುಪಿದರು.

23 ವರ್ಷ ವಯಸ್ಸಿನ ತರುಣ್ 21–12, 13–21, 21–18 ರಿಂದ ಚೀನಾದ ಹು ಝೆ ಅವರನ್ನು ಮಣಿಸಿದರು.

ಎರಡನೇ ಶ್ರೇಯಾಂಕದ ಲಕ್ಷ್ಯ 21–14, 18–21, 21–14 ರಿಂದ ಚೀನಾದ ಷುವಾನ್ ಶೆನ್ ಝು ಎದುರು ಜಯ ಸಾಧಿಸಿದರು. 63 ನಿಮಿಷ ನಡೆದ ಈ ಪಂದ್ಯದಲ್ಲಿ ಲಕ್ಷ್ಯ ಅವರು ತೀವ್ರ ಪೈಪೋಟಿ ಎದುರಿಸಬೇಕಾಯಿತು.

ಅಂತಿಮ ನಾಲ್ಕರ ಸುತ್ತಿನಲ್ಲಿ ಲಕ್ಷ್ಯ ಅವರು ಇಂಡೊನೇಷ್ಯಾದ ಅಲ್ವಿ ಫರ್ಹಾನ್ ಎದುರು ಹಾಗೂ ತರುಣ್ ಅವರು ಮಲೇಷ್ಯಾದ ಜಸ್ಟಿನ್ ಹೋ ವಿರುದ್ಧ ಸೆಣಸಬೇಕಿದೆ.

ಸಾತ್ವಿಕ್–ಚಿರಾಗ್ ಜೋಡಿ ನಿರ್ಗಮನ: ಪ್ರಶಸ್ತಿ ಗೆಲ್ಲುವ ಭರವಸೆಯಲ್ಲಿದ್ದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಜೋಡಿಗೆ ಮಲೇಷ್ಯಾದ ಚೂಂಗ್ ಹಾನ್ ಜಿಯಾನ್–ಹೈಕಲ್ ಮುಹಮ್ಮದ್ ಆಘಾತ ನೀಡಿದರು. ವಿಶ್ವದ ಮಾಜಿ ಅಗ್ರಮಾನ್ಯ ಜೋಡಿಯಾಗಿರುವ ಸಾತ್ವಿಕ್–ಚಿರಾಗ್, 14–21, 21–13, 20-22ರಿಂದ ಮಲೇಷ್ಯಾ ಜೋಡಿಗೆ ಶರಣಾದರು.

ರಾಜ್ಯ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿ

ಎರಡು ಫೈನಲ್ ತಲುಪಿದ ಶೈನಾ

ಪ್ರಜಾವಾಣಿ ವಾರ್ತೆ

ಮಂಗಳೂರು: ಬೆಂಗಳೂರಿನ ಶೈನಾ ಮಣಿಮುತ್ತು ಅವರು ನಗರದ ಉರ್ವ ಕ್ರೀಡಾ ಸಂಕೀರ್ಣದಲ್ಲಿ ನಡೆಯುತ್ತಿರುವ ರಾಜ್ಯ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಕ್ರವಾರ 19 ವರ್ಷದೊಳಗಿನ ಬಾಲಕಿಯರ ಮತ್ತು ಮಹಿಳಾ ವಿಭಾಗಗಳಲ್ಲಿ ಸಿಂಗಲ್ಸ್ ಫೈನಲ್ ತಲುಪಿದ್ದು 'ಪ್ರಶಸ್ತಿ ಡಬಲ್' ಹಾದಿಯಲ್ಲಿದ್ದಾರೆ.



ನಾಲ್ಕನೇ ಶ್ರೇಯಾಂಕ ಪಡೆದಿದ್ದ ಶೈನಾ ಮಹಿಳೆಯರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ 21–9, 21–10 ರಿಂದ ಅಗ್ರ ಶ್ರೇಯಾಂಕದ ಅಶ್ವತಿ ವರ್ಗೀಸ್ (ಬೆಂಗಳೂರು) ಅವರನ್ನು ಸುಲಭವಾಗಿ ಸೋಲಿಸಿದರು.

ಇನ್ನೊಂದು ಸೆಮಿಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಲಕ್ಷ್ಯಾ ರಾಜೇಶ್ 21–16, 21–19 ರಿಂದ ಪ್ರೇರಣಾ ಶೇಟ್ ಅವರನ್ನು ಪರಾಭವಗೊಳಿಸಿದರು.

19 ವರ್ಷದೊಳಗಿನವರ ವಿಭಾಗದ ಸಿಂಗಲ್ಸ್ ಪ್ರಶಸ್ತಿಗಾಗಿ ಶೈನಾ ಅವರು ಅಗ್ರ ಶ್ರೇಯಾಂಕದ ದಿಯಾ ಭೀಮಯ್ಯ ಅವರನ್ನು ಎದುರಿಸಲಿದ್ದಾರೆ. ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ದಿಯಾ 26–24, 21–8 ರಿಂದ ಮೂರನೇ ಶ್ರೇಯಾಂಕದ ನವ್ಯಾ ಕೊಲ್ಲೂರಿ ಅವರನ್ನು ಹಿಮ್ಮೆಟ್ಟಿಸಿದರು. ಆರನೇ ಶ್ರೇಯಾಂಕದ ಶೈನಾ ನಾಲ್ಕರ ಘಟ್ಟದ ಪಂದ್ಯದಲ್ಲಿ 21–15, 21–13 ರಿಂದ ಪ್ರಾಪ್ತಿ ಕುಮಾರ್ ವಿರುದ್ಧ ನೇರ ಗೇಮ್‌ಗಳಲ್ಲಿ ಗೆಲುವು ಪಡೆದರು.

ಫೈನಲ್‌ಗೆ ನಿಕೋಲಸ್: ಎದುರಾಳಿಗಳ ವಿರುದ್ಧ ಮೂರು ಗೇಮ್‌ಗಳ ಹೋರಾಟದಲ್ಲಿ ಜಯಗಳಿಸಿದ ಮೂರನೇ ಶ್ರೇಯಾಂಕದ ನಿಕೋಲಸ್ ರಾಜ್ ಮತ್ತು ನಾಲ್ಕನೇ ಶ್ರೇಯಾಂಕದ ತುಷಾರ್ ಸುವೀರ್ ಅವರು ಪುರುಷರ ಸಿಂಗಲ್ಸ್‌ನಲ್ಲಿ ಪ್ರಶಸ್ತಿಗಾಗಿ ಸೆಣಸಲಿದ್ದಾರೆ.

ನಿಕೋಲಸ್ 22–20, 15–21. 21–6 ರಿಂದ ಎರಡನೇ ಶ್ರೇಯಾಂಕದ ನರೇನ್ ಎಸ್.ಅಯ್ಯರ್ ಅವರನ್ನು ಸೋಲಿಸಿದರೆ, ತುಷಾರ್ ಸುವೀರ್ 18–21, 21–18, 21–13 ರಿಂದ ಅಗ್ರ ಶ್ರೇಯಾಂಕದ ಅಭಿನವ್ ಗರ್ಗ್ ಅವರನ್ನು ಮಣಿಸಿದರು.

ಆದರೆ 19 ವರ್ಷದೊಳಗಿನವರ ವಿಭಾಗದ ಸಿಂಗಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಅಭಿನವ್ ಫೈನಲ್ ತಲುಪಿದ್ದು, ಪ್ರಶಸ್ತಿಗಾಗಿ ಎರಡನೇ ಶ್ರೇಯಾಂಕದ ಓಂ ಮಾಕಾ ಅವರನ್ನು ಎದುರಿಸಲಿದ್ದಾರೆ. ಸೆಮಿಫೈನಲ್ ಪಂದ್ಯಗಳಲ್ಲಿ ಅಭಿನವ್ 21–19, 21–13 ರಿಂದ ಏಳನೇ ಶ್ರೇಯಾಂಕದ ಹಾರ್ದಿಕ್ ದಿವ್ಯಾನ್ಶ್ ಅವರನ್ನು ಸೋಲಿಸಿದರೆ, ಮಾಕಾ 19–21, 21–14, 21–12 ರಿಂದ ಆರನೇ ಶ್ರೇಯಾಂಕದ ಪ್ರಣವ್ ಎಂ. ಅವರನ್ನು ಹಿಮ್ಮೆಟ್ಟಿಸಿದರು.

ಡಬಲ್ಸ್: ಅಗ್ರ ಶ್ರೇಯಾಂಕದ ಇಶಿಕಾ ಬರೂವ ಕಶ್ಯಪ್– ತನಿಕಾ ಮೋಹನ್ ಜೋಡಿ 19 ವರ್ಷದೊಳಗಿನ ಬಾಲಕಿಯರ ಡಬಲ್ಸ್ ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಅಶ್ವತಿ ವರ್ಗೀಸ್– ಲಕ್ಷ್ಯಾ ರಾಜೇಶ್ ಜೋಡಿಯನ್ನು ಎದುರಿಸಲಿದೆ

19 ವರ್ಷದೊಳಗಿನ ಬಾಲಕರ ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಕ್ರಿಸ್ ಬ್ಯಾಪ್ಟಿಸ್ಟ್– ಸುಮಿತ್ ಎ.ಆರ್. ಜೋಡಿ ಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಅಮಿತ್ ರಾಜ್ ನಟರಾಜ್–ಹಾರ್ದಿಕ್ ದಿವ್ಯಾನ್ಶ್ ಜೋಡಿಯನ್ನು ಎದುರಿಸಲಿದೆ.



ಶುಕ್ರವಾರ ಮುಕ್ತಾಯಗೊಂಡ ಬೆಂಗಳೂರು ಬೇಸಿಗೆ ರೇಸ್‌ಗಳ ಪ್ರಧಾನ ಆಕರ್ಷಣೆ 'ಗವರ್ನರ್ಸ್ ಕಪ್' ಗೆದ್ದ ಪೊಸಿಟಾನೊ ಕುದುರೆಯ ತರಬೇತುದಾರ ಸುಲೈಮಾನ್ ಅತೋಲಾಹಿ ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಟ್ರೋಫಿ ಪ್ರದಾನ ಮಾಡಿದರು. ಬಿಟಿಸಿ ಸ್ಟೀವರ್ಡ್ ಅರವಿಂದ್ ಎಸ್. ಕಟಾರ್ಕಿ, ವ್ಯವಸ್ಥಾಪಕ ಸಮಿತಿಯ ಸದಸ್ಯ ಹರೀಶ್ ನಾಯ್ಕ್, ಅಧ್ಯಕ್ಷ ಹಾಗೂ ಹಿರಿಯ ಸ್ಟೀವರ್ಡ್ ಆರ್. ಮಂಜುನಾಥ್ ರಮೇಶ್, ಸ್ಟೀವರ್ಡ್‌ಗಳಾದ ಅರುಣ್‌ಕುಮಾರ್ ಪರಸ ಮತ್ತು ಎಲ್. ಶಿವಶಂಕರ್ ಉಪಸ್ಥಿತರಿದ್ದರು

ಶಾಲೆಗೆ ದೇಣಿಗೆ

ಬೆಂಗಳೂರು: ಅಂಧ ಮತ್ತು ಸೌಲಭ್ಯವಂಚಿತ ಮಕ್ಕಳಿಗಾಗಿ ನಡೆಸಲಾಗುತ್ತಿರುವ ಆಚಾರ್ಯ ರಕುಮ್ ಮಕ್ಕಳ ಶಾಲೆಗೆ ಬೆಂಗಳೂರು ಟರ್ಫ್ ಕ್ಲಬ್ ಮತ್ತು ಪೊಸಿಟಾನೊ ಕುದುರೆ ಮಾಲೀಕರಾದ ದೌಲತ್ ಛಾಬ್ರಿಯಾ ಅವರು ತಲಾ ₹3 ಲಕ್ಷ ದೇಣಿಗೆ ನೀಡಿದರು.

ಬಿಟಿಸಿ ಮಾಜಿ ಅಧ್ಯಕ್ಷ ಎನ್. ನಟರಾಜ್ ಮತ್ತು ಹಾಲಿ ಅಧ್ಯಕ್ಷ ಆರ್. ಮಂಜುನಾಥ್ ರಮೇಶ್ ಅವರೂ ತಲಾ ₹50 ಸಾವಿರ ದೇಣಿಗೆ ಕೊಟ್ಟರು.

ಚಿಟಿಕೆ ಸುದ್ದಿ

ಬಾಕ್ಸಿಂಗ್ ಫೆಡರೇಷನ್ ಚುನಾವಣೆ 21ರಂದು

ನವದೆಹಲಿ (ಪಿಟಿಐ): ದೀರ್ಘಕಾಲದಿಂದ ಬಾಕಿಯಿರುವ ಭಾರತ ಬಾಕ್ಸಿಂಗ್ ಫೆಡರೇಷನ್‌ನ ಚುನಾವಣೆ ಇದೇ ತಿಂಗಳ 21ರಂದು ದೆಹಲಿಯಲ್ಲಿ ನಡೆಯಲಿದೆ ಎಂದು ಬಿಎಫ್‌ಐ ಆಡಳಿತದ ಹೊಣೆ ವಹಿಸಿರುವ ಹಂಗಾಮಿ ಸಮಿತಿ ಶುಕ್ರವಾರ ಪ್ರಕಟಿಸಿದೆ.



ಭಾರತ ಬಾಕ್ಸಿಂಗ್ ಫೆಡರೇಷನ್‌ನ ವಾರ್ಷಿಕ ಮಹಾಸಭೆ ಆಗಸ್ಟ್ 21ರಂದು ದೆಹಲಿ–ಎನ್‌ಸಿಆರ್‌ನಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಹಂಗಾಮಿ ಸಮಿತಿಯ ಮುಖ್ಯಸ್ಥ ಅಜಯ್ ಸಿಂಗ್ ಸಹಿ ಮಾಡಿರುವ ಮಾರ್ಚ್ 31ರ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

'ಈ ಹಿಂದಿನ ಸಭೆಯ ನಡಾವಳಿಗಳಿಗೆ ಒಪ್ಪಿಗೆ ನೀಡುವುದು ಮತ್ತು 2025–29ರ ಸಾಲಿಗೆ ಪದಾಧಿಕಾರಿಗಳ ಆಯ್ಕೆ, ಅಧ್ಯಕ್ಷರ ಅನುಮತಿಯ ಮೇಲೆ ಇತರ ವಿಷಯದ ಮೇಲೆ ಚರ್ಚೆ' ಇವು ಕಾರ್ಯಸೂಚಿಯಾಗಿದೆ.

ವಿಶ್ವ ಈಜು ಚಾಂಪಿಯನ್‌ಷಿಪ್ • ಪ್ರಶಸ್ತಿ ಉಳಿಸಿಕೊಂಡ ಸ್ಟೀನ್‌ಬರ್ಗೆನ್

ಚೀನಾದ ಹಯಾಂಗ್‌ಗೆ ಎರಡನೇ ಚಿನ್ನ

ಸಿಂಗಪುರ (ಎಎಫ್‌ಪಿ/ಎಪಿ): ವಿಶ್ವ ಈಜು ಚಾಂಪಿಯನ್‌ಷಿಪ್‌ನ ಆರನೇ ದಿನವಾದ ಶುಕ್ರವಾರ ಐದು ಸ್ಪರ್ಧೆಗಳ ಚಿನ್ನದ ಪದಕಗಳು ಐದು ದೇಶಗಳಿಗೆ ಹಂಚಿಹೋದವು. ಫ್ರಾನ್ಸ್‌ನ ಲೆಯಾನ್ ಮರ್ಷಾನ್ ಮತ್ತು ಕೆನಡಾದ ಸಮ್ಮರ್ ಮೆಕಿಂಟೋಷ್ ಅವರಿಗೆ ಯಾವುದೇ ಫೈನಲ್ ಸ್ಪರ್ಧೆ ಇರಲಿಲ್ಲ.

ಚೀನಾದ ಅನುಭವಿ ಈಜುಪಟು ಕಿನ್ ಹಯಾಂಗ್ ಅವರು ಎರಡನೇ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. 26 ವರ್ಷದ ಅವರು ಪುರುಷರ 200 ಮೀಟರ್ ಬ್ರೆಸ್ಟ್‌ಸ್ಟ್ರೋಕ್ ಫೈನಲ್‌ನಲ್ಲಿ 2 ನಿಮಿಷ 07.41 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಸೋಮವಾರ 100 ಮೀಟರ್ ಬ್ರೆಸ್ಟ್‌ಸ್ಟ್ರೋಕ್‌ನಲ್ಲೂ ಚಿನ್ನದ ಸಾಧನೆ ಮೆರೆದಿದ್ದರು.

ಹಯಾಂಗ್ 2023ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ವಿಶ್ವದಾಖಲೆಯೊಂದಿಗೆ (2:05.48) ಚಿನ್ನದ ಸಾಧನೆ ಮಾಡಿದ್ದರು. ಈ ಬಾರಿ ಎರಡು ಸೆಕೆಂಡು ತಡವಾಗಿ ಗುರಿಮುಟ್ಟಿದರು. ಜಪಾನ್‌ನ ಇಪ್ಪೈ ವಟನಾಬೆ (2:07.70) ಬೆಳ್ಳಿ ಮತ್ತು ನೆದರ್ಲೆಂಡ್ಸ್‌ನ ಕ್ಯಾಸ್ಪರ್ ಕಾಬ್ರ್ಯೂ (2:07.73) ಕಂಚು ಗೆದ್ದರು.

ಹಾಲಿ ಚಾಂಪಿಯನ್ ಮ್ಯಾರಿಟ್ ಸ್ಟೀನ್‌ಬರ್ಗೆನ್ ಅವರು ಮಹಿಳೆಯರ 100 ಮೀಟರ್ ಫ್ರೀಸ್ಟೈಲ್‌ನಲ್ಲಿ ಪ್ರಶಸ್ತಿ ಉಳಿಸಿಕೊಂಡರು. ಎರಡನೇ ಚಿನ್ನದ ಪ್ರಯತ್ನದಲ್ಲಿದ್ದ ಆಸ್ಟ್ರೇಲಿಯಾದ ಮೋಲಿ ಓ'ಕ್ಯಾಲಗನ್ ಅವರ ತೀವ್ರ ಸವಾಲನ್ನು ನೆದರ್ಲೆಂಡ್ಸ್‌ನ ಈಜುಪಟು ಮೆಟ್ಟಿನಿಂತರು. ಸ್ಟೀನ್‌ಬರ್ಗೆನ್ 52.55 ಸೆ.ಗಳಲ್ಲಿ ಗುರಿ ಮುಟ್ಟಿದರು. 200 ಮೀ. ಫ್ರೀಸ್ಟೈಲ್‌ನಲ್ಲಿ ಚಾಂಪಿಯನ್ ಆಗಿದ್ದ ಕ್ಯಾಲಗನ್ 52.67 ಸೆಕೆಂಡ್ ತೆಗೆದುಕೊಂಡು ಬೆಳ್ಳಿ ಗೆದ್ದರು. ಅಮೆರಿಕದ ಟೊರಿ ಹಸ್ಕೆ (52.89) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಒಲಿಂಪಿಕ್ ಚಾಂಪಿಯನ್ ಹ್ಯೂಬರ್ಟ್ ಕೋಸ್ ಪುರುಷರ 200 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ಹಂಗೇರಿಯ ಹ್ಯೂಬರ್ಟ್ ಗುರಿ ತಲುಪಲು 1 ನಿಮಿಷ 53.19 ಸೆಕೆಂಡ್ ತೆಗೆದುಕೊಂಡರು. 100 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಚಿನ್ನ ಗೆದ್ದಿದ್ದ ದಕ್ಷಿಣ ಆಫ್ರಿಕಾದ ಪೀಟರ್ ಕೋಟ್ಝೆ ಇಲ್ಲಿ 0.17 ಸೆಕೆಂಡ್‌ಗಳ ಅಂತರದಲ್ಲಿ ಚಿನ್ನ ತಪ್ಪಿಸಿಕೊಂಡರು. ಫ್ರಾನ್ಸ್‌ನ ಯೋಹಾನ್ ನ್ದೋಯೆ ಬ್ರೌರ್ಡ್ ೯(1:54.62) ಕಂಚು ಗೆದ್ದರು.



ಚಿನ್ನ ಗೆದ್ದ ಚೀನಾದ ಈಜುಪಟು ಕಿನ್ ಹಯಾಂಗ್

ಮಹಿಳೆಯರ 200 ಮೀಟರ್ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಒಲಿಂಪಿಕ್ ಚಾಂಪಿಯನ್, ಅಮೆರಿಕದ ಕೇಟ್ ಡಗ್ಲಾಸ್ ಚಿನ್ನ ಗೆದ್ದರು. 23 ವರ್ಷದ ಡಗ್ಲಾಸ್ ಚಾಂಪಿಯನ್‌ಷಿಪ್ ದಾಖಲೆಯೊಂದಿಗೆ (2:18.50) ಗುರಿ ತಲುಪಿದರು.

ರೋಹಿತ್‌ಗೆ ನಿರಾಸೆ: ಭಾರತದ ರೋಹಿತ್ ಬೆನೆಡಿಕ್ಷನ್ ಅವರು ಪುರುಷರ 100 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ನಿರಾಸೆ ಮೂಡಿಸಿದರು.

ಹಾಲಿ ರಾಷ್ಟ್ರೀಯ ಚಾಂಪಿಯನ್, ರೋಹಿತ್ 53.92 ಸೆಕೆಂಡ್‌ಗಳಲ್ಲಿ ಗುರಿ ತಲುಪಿ, ತಮ್ಮ ಹೀಟ್ಸ್‌ನಲ್ಲಿ ಕೊನೆಯ ಸ್ಥಾನ ಗಳಿಸಿದರು. ಒಟ್ಟಾರೆಯಾಗಿ 47ನೇ ಸ್ಥಾನ ಪಡೆದರು.

ಯು ಝಿದಿ ದಾಖಲೆ

ಚೀನಾದ 12 ವರ್ಷದ ಯು ಝಿದಿ ಮಹಿಳೆಯರ 4x200 ಮೀಟರ್ ಫ್ರೀಸ್ಟೈಲ್ ರಿಲೆ ಸ್ಪರ್ಧೆಯಲ್ಲಿ ಕಂಚು ಗೆದ್ದರು. ಈ ಮೂಲಕ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆದ್ದ ಅತ್ಯಂತ ಕಿರಿಯ ಸ್ಪರ್ಧಿ ಎಂಬ ದಾಖಲೆ ಬರೆದರು.

ಈ ಬಾಲ ಪ್ರತಿಭೆ 200 ಮೀಟರ್ ಬಟರ್‌ಫ್ಲೈ ಮತ್ತು 200 ಮೀಟರ್ ಮೆಡ್ಲೆಯಲ್ಲಿ ಸ್ಪರ್ಧಿಸಿ, ಕೂದಲೆಳೆಯ ಅಂತರದಲ್ಲಿ ವೈಯಕ್ತಿಕ ಪದಕ ತಪ್ಪಿಸಿಕೊಂಡು, ನಾಲ್ಕನೇ ಸ್ಥಾನ ಗಳಿಸಿದ್ದರು.

ಮೆಕಿಂಟೋಷ್– ಲೆಡೆಕಿ ಮುಖಾಮುಖಿ ಇಂದು

ಈಜುತಾರೆಯರಾದ ಸಮ್ಮರ್ ಮೆಕಿಂಟೋಷ್ ಮತ್ತು ಕೇಟಿ ಲೆಡೆಕಿ ಶನಿವಾರ ನಡೆಯಲಿರುವ 800 ಮೀಟರ್ ಫ್ರೀಸ್ಟೈಲ್ ಫೈನಲ್‌ನಲ್ಲಿ ಮತ್ತೆ ಮುಖಾಮುಖಿಯಾಗಿದ್ದಾರೆ.


28 ವರ್ಷದ ಅಮೆರಿಕದ ಲೆಡೆಕಿ ಈ ಸ್ಪರ್ಧೆಯಲ್ಲಿ ವಿಶ್ವದಾಖಲೆಯನ್ನು ಹೊಂದಿದ್ದಾರೆ. ಮೇ ತಿಂಗಳಲ್ಲಿ ತಮ್ಮದೇ ವಿಶ್ವದಾಖಲೆಯನ್ನು ಉತ್ತಮಪಡಿಸಿರುವ ಅವರು, ಚಿನ್ನ ಗೆಲ್ಲುವ ನೆಚ್ಚಿನ ಸ್ಪರ್ಧಿಯಾಗಿದ್ದಾರೆ.

ಅವರಿಗಿಂತ 10 ವರ್ಷ ಕಿರಿಯವರಾದ ಮೆಕಿಂಟೋಷ್ ಇಲ್ಲಿ ವೈಯಕ್ತಿಕ ವಿಭಾಗದಲ್ಲಿ ಐದು ಚಿನ್ನ ಗೆಲ್ಲುವ ಗುರಿ ಹೊಂದಿದ್ದಾರೆ. ಈಗಾಗಲೇ ಮೂರು ಚಿನ್ನ ಗೆದ್ದಿರುವ ಅವರು ಲೆಡೆಕಿ ಅವರಿಗೆ ಸವಾಲೊಡ್ಡಲು ಸಜ್ಜಾಗಿದ್ದಾರೆ.


ಮಾಲಿನ್ಯ ತಗ್ಗಿಸಿ, ಕ್ಯಾನ್ಸರ್ ತಪ್ಪಿಸಿ

ಅಧಿಕ ಮಾಲಿನ್ಯದಿಂದಾಗಿ, ಧೂಮಪಾನ ಮಾಡದವರೂ ಶ್ವಾಸಕೋಶದ ಕ್ಯಾನ್ಸರ್‌ಗೆ ತುತ್ತಾಗುವ ಸಾಧ್ಯತೆ ಹೆಚ್ಚು

1



ಯಾವ ಮೂಗುತಿ ಆಯ್ಕೆ ಮಾಡುತಿ?
ಮೂಗಿಗೆ ಎಂದೂ ಭಾರವಾಗದ ಮೂಗುತಿಯು ಹೊಸ ಹೊಸ ವಿನ್ಯಾಸಗಳಲ್ಲಿ ಲಭ್ಯ
2




ಸಿದ್ಧಸೂತ್ರಕ್ಕೆ ಜೋತುಬಿದ್ದ ಕಥೆ

ಸಿನಿಮಾದಲ್ಲಿ ಅದ್ಭುತವಾಗಿ ನಟಿಸುವ ಸಾಮರ್ಥ್ಯವಿರುವ ಕಲಾವಿದರಿದ್ದರೂ, ನಿರ್ಮಾಣಕ್ಕೆ ಕೋಟ್ಯಂತರ ರೂಪಾಯಿ ಸುರಿದಿದ್ದರೂ, ಪ್ರಚಾರವನ್ನು ಭರಪೂರವಾಗಿ ನಡೆಸಿದ್ದರೂ ಆ ಸಿನಿಮಾದ ನಿರ್ದೇಶಕರಿಗೆ ಚಿತ್ರಕಥೆ, ನಿರೂಪಣೆಯ ಮೇಲೆ ಹಿಡಿತವಿಲ್ಲದೇ ಹೋದರೆ ಅದು ಎಡವುವುದು ಖಚಿತ. 'ಕೊತ್ತಲವಾಡಿ'ಯ ಒನ್‌ಲೈನ್ ಸ್ಟೋರಿ, ಕಲಾವಿದರ ನಟನೆ ಚೆನ್ನಾಗಿದೆ. ಆದರೆ ಅದನ್ನು ಸೂಕ್ತವಾಗಿ ತೆರೆ ಮೇಲೆ ತರುವಲ್ಲಿ ನಿರ್ದೇಶಕರು ವಿಫಲರಾಗಿದ್ದಾರೆ. ಟ್ರೇಲರ್‌ನಲ್ಲಿ ಬೆಟ್ಟದಷ್ಟು ನಿರೀಕ್ಷೆ ಹುಟ್ಟಿಸಿದ್ದ ಈ ಸಿನಿಮಾ ತೆರೆ ಮೇಲೆ ಮ್ಯಾಜಿಕ್ ಮಾಡಿಲ್ಲ.

ಕಾವೇರಿ ನದಿ ಹರಿಯುವ ಗ್ರಾಮ 'ಕೊತ್ತಲವಾಡಿ'. ಅಲ್ಲಿ ಅನಾಥವಾಗಿ ಬೆಳೆದ ಹುಡುಗ ಮೋಹನ (ಪೃಥ್ವಿ ಅಂಬಾರ್). ಕೆಲಸಕ್ಕೆ ಜನರನ್ನು ಒಟ್ಟುಗೂಡಿಸಿ ಕಳುಹಿಸುವ ಕೆಲಸ ಆತನದ್ದು. ಹೀಗಾಗಿ ಊರಿನ ಜನರಿಗೆ ಆತ ಅಚ್ಚುಮೆಚ್ಚು. ಅದೇ ಊರಿನಲ್ಲಿ ಅಜ್ಜಿಯ ಆಶ್ರಯದಲ್ಲಿ ಬೆಳೆಯುತ್ತಿರುವ ಮಂಜಿ (ಕಾವ್ಯಾ ಶೈವ) ಈತನ ಪ್ರೇಯಸಿ. ಊರಿನಲ್ಲಿ ಗುಜರಿ ಅಂಗಡಿ ಇಟ್ಟುಕೊಂಡ ರಮೇಶ್ ಬಾಬು ಅಲಿಯಾಸ್ ಬಾಬಣ್ಣ (ಗೋಪಾಲಕೃಷ್ಣ ದೇಶಪಾಂಡೆ) ಕಸದಿಂದ ರಾಮರಸ ತೆಗೆಯುವಷ್ಟು ಚಾಲಾಕಿ. ಇಂತಹ ಊರಿನ ಜನ ಅಡವಿಟ್ಟಿದ್ದ ತಮ್ಮ ಜಮೀನು ವಾಪಸ್ ಪಡೆದುಕೊಳ್ಳುವ ನಿಟ್ಟಿನಲ್ಲಿ ಬಾಬಣ್ಣನ ಮಾತಿನ ಮೋಡಿಗೆ ಒಳಗಾಗುತ್ತಾರೆ. ಇಲ್ಲಿಂದ ಕಥೆ ತೆರೆದುಕೊಳ್ಳಲಾರಂಭಿಸುತ್ತದೆ.

ಸಿದ್ಧಸೂತ್ರಗಳಿಗೆ ಅಂಟಿಕೊಂಡಂತೆ ನಿರ್ದೇಶಕರು ಇಲ್ಲಿ ಹೆಜ್ಜೆ ಇಟ್ಟಿದ್ದಾರೆ. ಇದು ಚಿತ್ರಕಥೆಯನ್ನು ಪೇಲವವಾಗಿಸಿದೆ. ಅನಗತ್ಯ ಹಾಡು, ಫೈಟ್‌ಗಳನ್ನು ತೂರಿಸಲಾಗಿದೆ. ಬೈಕ್ ಮೇಲಿಂದಲೇ ಖಳನಾಯಕನಿಗೆ ನಾಯಕ ಹಾರಿ ಒದ್ದು ಮತ್ತೆ ಬೈಕ್ ಮೇಲೇ ಕುಳಿತುಕೊಳ್ಳುವ ದೃಶ್ಯವಂತೂ ಭಯಾನಕ!



ಪೃಥ್ವಿ ಅಂಬಾರ್

ನದಿ ದಡದಿಂದ ಮರಳು ಎತ್ತುವಾಗ ಹಾಡು ಏಕೆ ಬರುತ್ತದೋ? ಪೊಲೀಸರು ಸಮವಸ್ತ್ರದಲ್ಲಿರುವಾಗಲೇ ಅವರ ಮೇಲೆ ಹಲ್ಲೆ ನಡೆಸಿದ ಹೀರೊ ಸಿನಿಮಾದುದ್ದಕ್ಕೂ ಆರಾಮವಾಗಿ ಓಡಾಡಿಕೊಂಡಿರುವುದು ಹೇಗೆ? ಮೈಸೂರು ಭಾಗದ ಕನ್ನಡ ಮಾತನಾಡುವ ಮೋಹನ ವೇದಿಕೆ ಹತ್ತಿದ ತಕ್ಷಣ ಬೆಂಗಳೂರು ಕನ್ನಡ ಹೇಗೆ ಮಾತನಾಡುತ್ತಾನೆ? ಶಾಸಕನಾಗಲು ಒಂದು ಗ್ರಾಮದ ಮತ ಸಾಕೇ ಎಂಬಿತ್ಯಾದಿ ಸಾಲು ಸಾಲು ಪ್ರಶ್ನೆಗಳನ್ನು ಈ ಚಿತ್ರಕಥೆ ಉಳಿಸುತ್ತದೆ. ತಾನೇ ಸಾಯಿಸಿರುವ ಹತ್ತಾರು ಖಳರ ದೇಹಗಳ ನಡುವೆ ನಿಂತು 'ಬಾಬಣ್ಣನನ್ನು ಕೊಂದು ನಾವ್ಯಾಕೆ ಜೈಲಿಗೆ ಹೋಗಬೇಕು' ಎಂಬ ನಾಯಕನ ಪ್ರಶ್ನೆ ಆಶ್ಚರ್ಯ ಹುಟ್ಟಿಸುತ್ತದೆ.

ಚುನಾವಣೆ, ಮತದಾನ, ಮತ ಎಣಿಕೆ ಪ್ರಕ್ರಿಯೆ, ಪೊಲೀಸ್ ಇಲಾಖೆ ಕಾರ್ಯವೈಖರಿ ಬಗ್ಗೆ ಏನನ್ನೂ ಅಧ್ಯಯನ ಮಾಡದೇ ಚಿತ್ರಕಥೆ ಬರೆಯಲಾಗಿದೆ. ಹಲವು ದೃಶ್ಯಗಳಿಗೆ ಜೀವಂತಿಕೆಯೇ ಇಲ್ಲ. ಪೊಲೀಸ್ ಅಧಿಕಾರಿಗಳ ಪಾತ್ರದ ಬರವಣಿಗೆಯೇ ಕೃತಕವಾಗಿದೆ. ಕೆಲವೆಡೆ ಸಂಭಾಷಣೆಗಳು ಭಾಷಣದಂತಿವೆ. ಇಂತಹ ವಿಚಾರಗಳನ್ನು ಬಿಗಿಯಾಗಿಸುವುದರ ಜೊತೆಗೆ ಹೇಳಹೊರಟಿರುವ ವಿಷಯದ ಬಗ್ಗೆ ಸ್ಪಷ್ಟತೆ ಇದ್ದಿದ್ದರೆ ಚಿತ್ರದ ಕಥೆಗೂ ನ್ಯಾಯ ದೊರಕಿಸಿಕೊಡಬಹುದಿತ್ತು.

ಗೋಪಾಲಕೃಷ್ಣ ದೇಶಪಾಂಡೆ 'ಬಾಬಣ್ಣ'ನಾಗಿ ತಮ್ಮ ಪಾತ್ರದೊಳಗೆ ಜೀವಿಸಿದ್ದಾರೆ. ಇಂತಹ ಒಂದು ಪಾತ್ರವನ್ನು ಬರೆದ ನಿರ್ದೇಶಕರ ಆಲೋಚನೆ ಚೆನ್ನಾಗಿದೆ. ನಾಲ್ಕೈದು ಶೇಡ್‌ಗಳಲ್ಲಿ ಅವರು ಪಾತ್ರವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಪೃಥ್ವಿ ಅಂಬಾರ್, ಕಾವ್ಯಾ ಶೈವ, ರಾಜೇಶ್ ನಟರಂಗ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಕಾರ್ತಿಕ್ ಎಸ್. ಛಾಯಾಚಿತ್ರಗ್ರಹಣ ಚೆನ್ನಾಗಿದೆ.

-ಅಭಿಲಾಷ್ ಪಿ.ಎಸ್.

ನಾವು ನೋಡಿದ ಸಿನಿಮಾ

ಕೊತ್ತಲವಾಡಿ

- ನಿರ್ಮಾಣ: ಪುಷ್ಪ ಅರುಣ್‌ಕುಮಾರ್
- ನಿರ್ದೇಶನ: ಶ್ರೀರಾಜ್
- ತಾರಾಗಣ: ಪೃಥ್ವಿ ಅಂಬಾರ್, ಗೋಪಾಲಕೃಷ್ಣ ದೇಶಪಾಂಡೆ, ಕಾವ್ಯಾ ಶೈವ, ರಾಜೇಶ್ ನಟರಂಗ, ಅವಿನಾಶ್ ಮತ್ತಿತರರು

ಸೆಟ್ಟೇರಿತು 'ಲೂಸ್ ಮಾದ'



ಯೋಗೇಶ್

'ದುನಿಯಾ' ಚಿತ್ರದ ಬಳಿಕ 'ಲೂಸ್ ಮಾದ' ಪಾತ್ರದಿಂದಲೇ ಚಿರಪರಿಚಿತರಾದವರು ನಟ ಯೋಗೇಶ್. ಅದೇ ಹೆಸರಿನ ಚಿತ್ರವೊಂದು ಇತ್ತೀಚೆಗಷ್ಟೇ ಸೆಟ್ಟೇರಿದೆ. ರಂಜಿತ್ ಕುಮಾರ್ ಗೌಡ ಈ ಚಿತ್ರ ನಿರ್ದೇಶಿಸುತ್ತಿದ್ದಾರೆ.

'ಲೂಸ್ ಮಾದ' ನನ್ನ ನಿರ್ದೇಶನದ ಮೂರನೇ ಚಿತ್ರ. ಇದು ಕರಾವಳಿ ಭಾಗದಲ್ಲಿ ನಡೆಯುವ ಕಥೆ. ಉಡುಪಿ, ಸುರತ್ಕಲ್ ಹಾಗೂ ಮಂಗಳೂರಿನಲ್ಲಿ ಚಿತ್ರೀಕರಣವಾಗಲಿದೆ. ಆಗಸ್ಟ್ 25ರಿಂದ ಚಿತ್ರೀಕರಣ ಆರಂಭವಾಗಲಿದೆ. ಎಲ್ಲಾ ಪ್ರಾಣಿಗಳಿಗಿಂತ ತೋಳವನ್ನು ಪಳಗಿಸುವುದು ಸ್ವಲ್ಪ ಕಷ್ಟ. ಅದು ಯಾರ ಮಾತನ್ನೂ ಕೇಳದ ಪ್ರಾಣಿ. ನಮ್ಮ ಚಿತ್ರದಲ್ಲಿ ನಾಯಕನ ಸ್ವಭಾವವೂ ಅದೇ ರೀತಿ. ಯಾವುದಕ್ಕೂ ಹಾಗೂ ಯಾರಿಗೂ ಬಗ್ಗದ ಹುಡುಗ. ಈ ಹಿಂದೆ ಯೋಗೇಶ್ ಅವರು ಮಾಡಿರುವ ಪಾತ್ರಗಳಿಗಿಂತ ಭಿನ್ನ ಪಾತ್ರ. ಕಿಶೋರ್ ಕೂಡ ಚಿತ್ರದ ಮುಖ್ಯಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಆದಿ ಲೋಕೇಶ್, ಅಚ್ಯುತ ಕುಮಾರ್, ಗೋಪಾಲಕೃಷ್ಣ ದೇಶಪಾಂಡೆ ಮುಂತಾದವರು ತಾರಾಬಳಗದಲ್ಲಿದ್ದಾರೆ' ಎಂದು ಮಾಹಿತಿ ನೀಡಿದರು ನಿರ್ದೇಶಕರು.

ಜಾನಕಿ ಕಂಬೈನ್ಸ್ ಲಾಂಛನದಲ್ಲಿ ಧರ್ಮೇಂದ್ರ ಬಂಡವಾಳ ಹೂಡುತ್ತಿದ್ದಾರೆ. 'ನಿರ್ದೇಶಕರು ನನಗೆ ಬಹಳ ವರ್ಷಗಳಿಂದ ಪರಿಚಯ. ಈ ಹಿಂದೆ ನಮ್ಮಿಬ್ಬರ ಕಾಂಬಿನೇಶನ್‌ನಲ್ಲಿ 'ಕಂಸ' ಎಂಬ ಸಿನಿಮಾ ಆರಂಭ ಆಗಬೇಕಿತ್ತು. ಕಾರಣಾಂತರದಿಂದ ಆ ಸಿನಿಮಾ ವಿಳಂಬವಾಯಿತು. ಈಗ 'ಲೂಸ್ ಮಾದ' ಸಿನಿಮಾ ಶುರುವಾಗಿದೆ. ಈ ಶೀರ್ಷಿಕೆಯನ್ನಿಟ್ಟುಕೊಂಡು ಹಿಂದೆ ಸಾಕಷ್ಟು ನಿರ್ಮಾಪಕರು ಚಿತ್ರ ಮಾಡಲು ಮುಂದಾಗಿದ್ದರು. ನಾನೇ ಬೇಡ ಎನ್ನುತ್ತಿದ್ದೆ. ಆದರೆ ಈ ಕಥೆಗೂ ಶೀರ್ಷಿಕೆಗೂ ಪೂರಕವಾಗಿದೆ. 'ದುನಿಯಾ' ಸಿನಿಮಾದ ಲೂಸ್ ಮಾದನ ಪಾತ್ರಕ್ಕೂ ಈ ಚಿತ್ರದ ಪಾತ್ರಕ್ಕೂ ಸಂಬಂಧ ಇರುವುದಿಲ್ಲ' ಎಂದರು ಯೋಗೇಶ್.

ಶಶಾಂಕ್ ಶೇಷಗಿರಿ ಸಂಗೀತ ನಿರ್ದೇಶನ, ಪ್ರದೀಪ್ ರೆಡ್ಡಿ ಛಾಯಾಚಿತ್ರಗ್ರಹಣ, ರಂಜನ್ ಸಂಕಲನ ಚಿತ್ರಕ್ಕಿದೆ.

ಹಿಕೋರ ಚಿತ್ರದ ಟ್ರೇಲರ್



ಚಿತ್ರತಂಡ

ಬಹುತೇಕ ನೀನಾಸಂನ ರಂಗಕರ್ಮಿಗಳೇ ಸೇರಿ ನಿರ್ಮಿಸಿರುವ 'ಹಿಕೋರ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ರಂಗಕರ್ಮಿ, ನಟ ಹಾಗೂ ನಿರ್ದೇಶಕ ಪ್ರಕಾಶ್ ಬೆಳವಾಡಿ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ನೀನಾಸಂ ಕಿಟ್ಟಿ ನಿರ್ದೇಶನದ ಜತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ. ರತ್ನ ಶ್ರೀಧರ್ ಬಂಡವಾಳ ಹೂಡಿದ್ದಾರೆ.

'ನಾನು ಕೂಡ ನೀನಾಸಂನಲ್ಲಿ ಅನೇಕ ನಾಟಕಗಳನ್ನು ಮಾಡಿದ್ದೇನೆ. ಅಲ್ಲಿಗೆ ನಾನು ಹೋಗುತ್ತಿದ್ದಾಗ ನಿರ್ಮಾಪಕಿ ರತ್ನ ಶ್ರೀಧರ್ ರುಚಿಯಾದ ಊಟ ನೀಡುತ್ತಿದ್ದರು. ಅಲ್ಲಿಂದ ಅವರ ಪರಿಚಯ. ಸಿನಿಮಾ ಮೇಲಿನ ಪ್ರೀತಿಯಿಂದ ಅವರು ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ನಾನು ಕೂಡ ಈ ಚಿತ್ರದಲ್ಲಿ ನಟಿಸಿದ್ದೇನೆ' ಎಂದರು ಪ್ರಕಾಶ್ ಬೆಳವಾಡಿ.

'ರಂಗಭೂಮಿ ಕಲಾವಿದರೇ ಸೇರಿ ಮಾಡಿದ ಸದಭಿರುಚಿಯ ಸಿನಿಮಾವಿದು. ಪ್ರೇಕ್ಷಕ ಕೊಟ್ಟ ದುಡ್ಡಿಗೆ ಮೋಸ ಮಾಡದಂಥ ಕಥೆ. ನಿರ್ಮಾಪಕಿ ರತ್ನ ಹಾಗೂ ಅವರ ಪತಿ ಶ್ರೀಧರ್ ನೀನಾಸಂನಲ್ಲೇ ಮೆಸ್ ನಡೆಸುತ್ತಿದ್ದರು. ನಮಗೆಲ್ಲ ಅನ್ನ ಹಾಕಿದ ಮಹಾತಾಯಿ ಅವರು. ರತ್ನಕ್ಕ ಈಗ ನಿರ್ಮಾಪಕಿಯಾಗಿದ್ದಾರೆ. ಚಿತ್ರವನ್ನು ಚಿತ್ರಮಂದಿರದಲ್ಲಿಯೇ ವೀಕ್ಷಿಸಿ ನಮಗೆ ಹರಸಿ' ಎಂದರು ನಿರ್ದೇಶಕರು.

'ವಾರ್ 2', 'ಕೂಲಿ' ಜುಗಲ್ಬಂದಿ

ಎರಡು ದೊಡ್ಡ ಸಿನಿಮಾಗಳು ಏಕಕಾಲದಲ್ಲಿ ಬಿಡುಗಡೆಯಾಗುವುದನ್ನು ತಪ್ಪಿಸುವ ಲೆಕ್ಕಾಚಾರಗಳು ಈ ಹಿಂದೆ ನಡೆಯುತ್ತಿದ್ದವು. ಈಗ ಪರಿಸ್ಥಿತಿ ಹಾಗಿಲ್ಲ. ಚಿತ್ರಮಂದಿರಗಳಲ್ಲಿ ಇಂತಿಷ್ಟು ಪರದೆಗಳ ಮೇಲೆ ಸಿನಿಮಾ ತೆರೆಕಾಣಿಸಬೇಕು ಎನ್ನುವ ಗಣಿತವೊಂದಕ್ಕೇ ಈಗ ಗೆಲುವು. ಆಗಸ್ಟ್ ಎರಡನೇ ವಾರ ತಮಿಳಿನ 'ಕೂಲಿ' ಹಾಗೂ ಹಿಂದಿಯ 'ವಾರ್ 2' ಚಿತ್ರಗಳು ತೆರೆಕಾಣುತ್ತಿವೆ. ಎರಡೂ ಆಗಸ್ಟ್ 14ರಂದು ಬಿಡುಗಡೆಗೆ ದಿನಾಂಕ ಗೊತ್ತುಪಡಿಸಿವೆ. ಹೀಗಾಗಿ, ಈ ಚಿತ್ರಗಳ ಪೈಕಿ ಗೆಲುವು ಯಾವುದಕ್ಕೆ ಎನ್ನುವ ಕುತೂಹಲ ಮೂಡಿದೆ.



ಕೆಲವು ಯೂಟ್ಯೂಬರ್‌ಗಳು ಇದೇ ವಿಷಯವನ್ನು ಚರ್ಚೆಯ ವಸ್ತುವಾಗಿಸಿ, ತಮಿಳುನಾಡಿನಲ್ಲಿ ಪ್ರೇಕ್ಷಕರನ್ನು ಮಾತನಾಡಿಸಿ ಸುದ್ದಿ ಮಾಡುತ್ತಿದ್ದಾರೆ. 'ಕೂಲಿ' ಅಥವಾ 'ವಾರ್ 2' ಎರಡರಲ್ಲಿ ನಿಮ್ಮ ಆಯ್ಕೆ ಯಾವುದು' ಎನ್ನುವ ಪ್ರಶ್ನೆ ಅದು. ಈ ಪ್ರಶ್ನೆಗೆ ಮಿಶ್ರ ಸ್ವರೂಪದ ಉತ್ತರ ದೊರೆಯುತ್ತಿದೆ. ಎರಡೂ ಸಿನಿಮಾಗಳನ್ನು ನೋಡಲು ಕಾತರದಿಂದ ಇರುವವರ ಸಂಖ್ಯೆ ಸಮನಾಗಿದೆ ಎನ್ನುವ ಅರ್ಥದ ಸುದ್ದಿಗಳೂ ಹೊಮ್ಮುತ್ತಿವೆ. 'ವಾರ್ 2' ಸಿನಿಮಾದಲ್ಲಿ ಹೃತಿಕ್ ರೋಷನ್ ಹಾಗೂ ಜೂನಿಯರ್ ಎನ್‌ಟಿಆರ್ ಅಭಿನಯಿಸಿದ್ದಾರೆ. ಕಿಯಾರಾ ಅಡ್ವಾಣಿ ಅವರ ಗ್ಲ್ಯಾಮರ್ ಚಿತ್ರದ ಬೋನಸ್ಸು. ಬೇಹುಗಾರಿಕಾ ಲೋಕದ ಕಥನವನ್ನು ಒಳಗೊಂಡಿರುವ ಈ ಚಿತ್ರದಲ್ಲಿ ಮೈನವಿರೇಳಿಸುವ ಸಾಹಸ ದೃಶ್ಯಗಳು ಹಾಗೂ ಅದ್ಭುತ ಲಯದ ನೃತ್ಯವಿದೆ ಎಂದು ಯಶ್‌ರಾಜ್ ಫಿಲಂಸ್ ನಿರ್ಮಾಣ ಸಂಸ್ಥೆಯು ಪ್ರಚಾರ ಮಾಡುತ್ತಿದೆ. ಈ ಸಿನಿಮಾದ ಅವಧಿಯು ಮೂರು ತಾಸಿಗೂ ಹೆಚ್ಚು ಇರಲಿದೆ ಎನ್ನುವುದು ಕೂಡ ಚರ್ಚೆಯ ವಸ್ತುವಾಗಿದೆ. ಈ ಹಿಂದೆ 'ಟೈಗರ್ ಜಿಂದಾ ಹೈ' ಹಿಂದಿ ಸಿನಿಮಾ 162 ನಿಮಿಷ ಅವಧಿಯದ್ದಾಗಿತ್ತು.



ಅಬ್ಬಬ್ಬಾ ಎಂದರೆ ಎರಡೂವರೆ ಗಂಟೆ ಕುಳಿತು ಸಿನಿಮಾ ನೋಡಬಹುದು, ಅದಕ್ಕಿಂತ ಹೆಚ್ಚು ಹೊತ್ತು ಎಳೆದಾಡಿದರೆ ತಾಳ್ಮೆ ಪರೀಕ್ಷಿಸಿದಂತೆ ಆಗುತ್ತದೆ ಎಂಬ ಅಭಿಪ್ರಾಯವನ್ನು ಹೆಚ್ಚು ಜನ ವ್ಯಕ್ತಪಡಿಸಿದ್ದಾರೆ. 'ವಾರ್ 2' ನಿರ್ದೇಶಕ ಅಯಾನ್ ಮುಖರ್ಜಿ ಅವರು 'ವೇಕ್ ಅಪ್ ಸಿದ್', 'ಯೇ ಜವಾನಿ ಹೈ ದಿವಾನಿ', 'ಬ್ರಹ್ಮಾಸ್ತ್ರ–ಪಾರ್ಟ್ 1' ಹಿಂದಿ ಸಿನಿಮಾಗಳನ್ನು ನಿರ್ದೇಶಿಸಿದ ಅನುಭವ ಇರುವವರು. 'ಸಿನಿಮಾದಲ್ಲಿ ಸತ್ವ ಇದ್ದರೆ ಅವಧಿ ಎಷ್ಟು ಎನ್ನುವುದು ಮುಖ್ಯವಾಗುವುದೇ ಇಲ್ಲ. ಸಂಕಲನ ಮಾಡುವಾಗ ದೃಶ್ಯಗಳು ಹೇಗೆಲ್ಲ ಹಿಡಿದಿಟ್ಟುಕೊಳ್ಳಬೇಕು ಎನ್ನುವುದನ್ನೆಲ್ಲ ಅಂದಾಜು ಮಾಡಿರುತ್ತೇವೆ' ಎನ್ನುವ ಅವರಿಗೆ ತಮ್ಮ ಸಿನಿಮಾ ಗೆಲ್ಲುತ್ತದೆ ಎಂಬ ವಿಶ್ವಾಸವಿದೆ. ಪ್ರೀತಂ ಸ್ವರ ಸಂಯೋಜನೆ ಮಾಡಿರುವ ಹಾಡುಗಳು ಚಿತ್ರಕ್ಕೆ ಇಂಧನವಾಗಬಲ್ಲವು ಎಂದೂ ಅವರು ಹೇಳಿಕೊಂಡಿದ್ದಾರೆ. 'ಕೂಲಿ' ಸಿನಿಮಾ ನಾಯಕ ಸೂಪರ್‌ಸ್ಟಾರ್ ರಜನೀಕಾಂತ್. ಅದರಲ್ಲಿ ಕನ್ನಡದ ಉಪೇಂದ್ರ, ತೆಲುಗಿನ ನಾಗಾರ್ಜುನ, ಮಲಯಾಳದ ಶೌಬಿನ್ ಶಹೀರ್, ತಮಿಳಿನ ಸತ್ಯರಾಜ್ ಅಭಿನಯಿಸಿದ್ದಾರೆ. ಅಮೀರ್ ಖಾನ್ ಕೂಡ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಲೋಕೇಶ್ ಕನಕರಾಜ್ ನಿರ್ದೇಶನದ ಈ ಚಿತ್ರಕ್ಕೆ ಅನಿರುದ್ಧ್ ರವಿಚಂದರ್ ಸಂಗೀತವಿದೆ. 'ಮೋನಿಕಾ' ಹಾಡಿನಲ್ಲಿ ಪೂಜಾ ಹೆಗ್ಡೆ ನೃತ್ಯ ಲಾಲಿತ್ಯವಿದ್ದರೂ ಅದರಲ್ಲಿ ಶೌಬಿನ್ ದಢೂತಿ ದೇಹ ಇಟ್ಟುಕೊಂಡೂ ಹಾಕಿರುವ ಹೆಜ್ಜೆಗಳು ಪ್ರೇಕ್ಷಕರಿಗೆ ಹಿಡಿಸಿವೆ.


'ಜನಪ್ರಿಯ ಸಿನಿಮಾದಲ್ಲಿ ಸಿದ್ಧಮಾದರಿಗಳನ್ನು ಈ ರೀತಿಯೂ ಒಡೆಯಬಹುದು. ಶೌಬಿನ್ ಅವರು ನೆಗೆಟಿವ್ ಶೇಡ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅವರಿಂದ ನೃತ್ಯ ಮಾಡಿಸುವುದು ಭಿನ್ನ ಆಲೋಚನೆ' ಎನ್ನುತ್ತಾರೆ ಲೋಕೇಶ್ ಕನಕರಾಜ್.

ಒಂದು ಅಂದಾಜಿನ ಪ್ರಕಾರ, 'ವಾರ್ 2', 'ಕೂಲಿ' ಎರಡೂ ಸಿನಿಮಾಗಳ ಮೇಲೆ ತಲಾ ₹ 400 ಕೋಟಿ ಬಂಡವಾಳ ಹೂಡಲಾಗಿದೆ. ಸನ್ ಪಿಕ್ಚರ್ಸ್ ನಿರ್ಮಾಣದ ಕೂಲಿ ಒಂದು ಕಡೆ, ಯಶ್‌ರಾಜ್ ಬ್ಯಾನರ್‌ನ 'ವಾರ್ 2' ಇನ್ನೊಂದು ಕಡೆ. ಪ್ಯಾನ್–ಇಂಡಿಯಾ ಸಿನಿಮಾಗಳ ಭರಾಟೆ ಹೇಗಿರುತ್ತದೆ ಎನ್ನುವುದಕ್ಕೆ ಈ ಬೆಳವಣಿಗೆ ಇನ್ನೊಂದು ಉದಾಹರಣೆ. 'ಕೂಲಿ' ಸಿನಿಮಾ ಕೂಡ ಎರಡೂಮುಕ್ಕಾಲು ತಾಸಿಗೂ ಹೆಚ್ಚಿನ ಅವಧಿಯದ್ದಾಗಿದೆ. ನೂರು ಕೋಟಿ ಕ್ಲಬ್ ಸೇರಿದ 'ಸೈಯಾರಾ' 'ಪುಷ್ಪಾ 2', 'ಸ್ತ್ರೀ 2', 'ಬಾಹುಬಲಿ 2', 'ಛಾವಾ' ಈ ಎಲ್ಲ ಸಿನಿಮಾಗಳ ಗಳಿಕೆಯ ಹಾದಿಯಲ್ಲಿ 'ಸೈಯಾರಾ' ಸಿನಿಮಾ ಇದೆ ಎಂದು 'ಫಸ್ಟ್‌ಪೋಸ್ಟ್' ವರದಿ ಮಾಡಿದೆ. 2ನೇ ವಾರದಲ್ಲೇ ಈ ಸಿನಿಮಾ ₹ 100 ಕೋಟಿ ಗಳಿಸಿರುವುದು ಆ ಸಿನಿಮಾಗಳ ಹಾದಿಯನ್ನು ನೆನಪಿಸುವಂತಿದೆ.

ಒಟಿಟಿ ಸವಾಲಿಗೆ ಅಮೀರ್ ಜವಾಬು

'ಸಿತಾರೆ ಜಮೀನ್ ಪರ್' ಹಿಂದಿ ಸಿನಿಮಾದ ಒಟಿಟಿ ಬಿಡುಗಡೆಗೆ 125 ಕೋಟಿ ರೂಪಾಯಿಯ ಒಪ್ಪಂದಕ್ಕೆ ವೇದಿಕೆಯೊಂದು ಮುಂದಾಗಿದ್ದ ಸಂಗತಿಯನ್ನು ಅಮೀರ್ ಖಾನ್ ಹೇಳಿಕೊಂಡಿದ್ದಾರೆ. ಅಂತಹ ಅವಕಾಶ ಬಂದರೂ ಅವರು ಒಪ್ಪದೇ ಇದ್ದುದಕ್ಕೆ ಕಾರಣವಿದೆ.

'ಚಿತ್ರಮಂದಿರದಲ್ಲೇ ಜನ ಸಿನಿಮಾ ನೋಡಬೇಕು ಎಂದು ಬಯಸುವವನು ನಾನು. ಅಲ್ಲಿ ಕತ್ತಲ ಸಭಾಭವನದಂತಹ ವಾತಾವರಣದಲ್ಲಿ ಸಿಗುವ ಸಿನಿಮಾ ಅನುಭವ ಪುಟ್ಟ ಪರದೆಗಳಲ್ಲಿ ಸಿಗಲಾರದು. ಅದೊಂದೇ ಕಾರಣಕ್ಕೆ ಒಟಿಟಿ ಬಿಡುಗಡೆಗೆ ಒಪ್ಪಂದ ಮಾಡಿಕೊಳ್ಳಲು ನಿರಾಕರಿಸಿದೆ. ಚಿತ್ರಮಂದಿರಗಳಲ್ಲಿ ಸಿನಿಮಾ ತೆರೆಕಂಡು ಎಂಟು ವಾರಗಳಲ್ಲೇ ಒಟಿಟಿಗೆ ಬಂದರೆ ಮಜಾ ಇರಲಾರದು. ಎರಡು ತಿಂಗಳೊಳಗೆ ಮನೆಯೊಳಗೇ ಸಿನಿಮಾ ಬರುತ್ತದೆ ಎಂದರೆ ಎಷ್ಟೋ ಜನ ಚಿತ್ರಮಂದಿರಗಳಿಗೆ ಬರಲಾರರು. ಅದಕ್ಕೇ ನಾನು ಒಟಿಟಿ ಒಪ್ಪಂದವನ್ನು ಮಾಡಿಕೊಳ್ಳಲಿಲ್ಲ' ಎಂದು ಅಮೀರ್ ಖಾನ್ ಸ್ಪಷ್ಟಪಡಿಸಿದರು. ಇದುವರೆಗೆ 'ಸಿತಾರೆ ಜಮೀನ್ ಪರ್' ಸಿನಿಮಾ ₹ 250 ಕೋಟಿ ಸಂಗ್ರಹಿಸಿದೆ. ಒಟಿಟಿಯಲ್ಲಿ ಬರುವ ನಿರೀಕ್ಷೆ ಮೊದಲೇ ಇದ್ದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ ಎನ್ನುತ್ತಾರೆ ಅಮೀರ್. ಈಗ ಹಣ ಕೊಟ್ಟು ಯೂಟ್ಯೂಬ್‌ನಲ್ಲಿ ಪ್ರೇಕ್ಷಕರು ನೋಡಬಹುದಾದ ರೀತಿಯಲ್ಲಿ 'ಸಿತಾರೆ ಜಮೀನ್ ಪರ್' ಅನ್ನು ಅವರು ಬಿಡುಗಡೆ ಮಾಡಿಸಿದ್ದಾರೆ. ಈ ಮೂಲಕ ಇನ್ನೊಂದು ಸಾಹಸಕ್ಕೆ ಅವರು ಕೈಹಾಕಿದಂತಾಗಿದೆ.



ಮಾಲಿನ್ಯ ತಗ್ಗಿಸಿ ಕ್ಯಾನ್ಸರ್ ತಪ್ಪಿಸಿ

• ಅಭಿಲಾಷ ಬಿ.ಸಿ.

ಅಧಿಕ ಮಾಲಿನ್ಯದಿಂದಾಗಿ, ಧೂಮಪಾನ ಮಾಡದವರೂ ಶ್ವಾಸಕೋಶದ ಕ್ಯಾನ್ಸರ್‌ಗೆ ತುತ್ತಾಗುವ ಸಾಧ್ಯತೆ ಹೆಚ್ಚಾಗಿ ಕಂಡುಬರುತ್ತಿದೆ ಎಂದು ಎಚ್ಚರಿಸಿದ್ದಾರೆ ತಜ್ಞರು. 'ವಿಶ್ವ ಶ್ವಾಸಕೋಶ ಕ್ಯಾನ್ಸರ್' ದಿನದ ಅಂಗವಾಗಿ ಸಂಪ್ರದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯರು ಶನಿವಾರ ಈ ಕುರಿತು ಮಾಹಿತಿ ನೀಡಿದರು.

ಅವರ ಪ್ರಕಾರ, ಈ ಬೆಳವಣಿಗೆಗೆ ಪ್ರಮುಖ ಕಾರಣ, ವಾಹನ, ವಿದ್ಯುತ್ ಸ್ಥಾವರ ಮತ್ತು ಕೈಗಾರಿಕೆಗಳಿಂದ ಹೊರಬರುವ ಹೊಗೆ ಹಾಗೂ ಅನಾರೋಗ್ಯಕರ ಜೀವನಶೈಲಿ. ಡಾ. ವಿನೋದ್ ಕೆ.ರಮಣಿ, ರಾಧೆಶ್ಯಾಮ್ ನಾಯ್ಕ್, ಡಾ. ವಿಶ್ವಜೀತ್ ಪೈ ಈ ರೋಗದ ವಿವಿಧ ಆಯಾಮಗಳು ಮತ್ತು ಪರಿಹಾರಗಳನ್ನು ವಿವರಿಸಿದರು.

ಏನು ಮಾಡಬಹುದು?

ದೈಹಿಕ ಚಟುವಟಿಕೆ, ಗುಣಮಟ್ಟದ ಆಹಾರದಿಂದ ಬಹುತೇಕ ರೋಗಗಳಿಂದ ದೂರವಿರಬಹುದು. ಒಳ್ಳೆಯ ನಿದ್ರೆ ಮಾಡಬೇಕು. ಮಾನಸಿಕ ಒತ್ತಡಗಳಿಂದ ಮುಕ್ತರಾಗಬೇಕು.

ವಾಯುಮಾಲಿನ್ಯ ಹಾಗೂ ರಾಸಾಯನಿಕ ಮಾಲಿನ್ಯಗಳಿಂದ ಆದಷ್ಟೂ ದೂರವಿರಬೇಕು. ಹೆಚ್ಚು ವಾಹನದಟ್ಟಣೆ ಇರುವ ಪ್ರದೇಶಗಳಲ್ಲಿ ಕಡ್ಡಾಯವಾಗಿ ಮಾಸ್ಕ್ ಬಳಸಬೇಕು. ಮಕ್ಕಳಿಗೆ ಸೈಕಲ್ ಬಳಸಲು ಉತ್ತೇಜನ ನೀಡಬೇಕು, ನಡಿಗೆ ಆದ್ಯತೆಯಾಗಬೇಕು. ಕನಿಷ್ಠ ಮನೆಗೊಂದು ಎಲೆಕ್ಟ್ರಿಕ್ ವಾಹನ ಇರಬೇಕು. ಪೆಟ್ರೋಲ್, ಡೀಸೆಲ್ ವಾಹನಗಳ ಬಳಕೆ ತಗ್ಗಿಸಬೇಕು.

ಸೂರ್ಯನ ಬೆಳಕು, ಸ್ವಚ್ಛ ಗಾಳಿ ಇರುವ ಮನೆಗಳಲ್ಲಿ ವಾಸಿಸಬೇಕು. ಎತ್ತರಕ್ಕೆ ಅನುಗುಣವಾಗಿ ದೇಹದ ತೂಕ ಕಾಯ್ದುಕೊಳ್ಳಬೇಕು. ಹೊಟ್ಟೆಯ ಸುತ್ತ ಶೇಖರವಾಗುವ ಬೊಜ್ಜು ರೋಗಗಳಿಗೆ ರಹದಾರಿ.


ಗುರುವಂದನಾ

ಸಂಜೋಗ್ ಬಾನ್ಸುರಿ ಮಹಾವಿದ್ಯಾಲಯವು ಗುರು ಪಂಡಿತ್ ವೆಂಕಟೇಶ್ ಗೋಡ್ಖಿಂಡಿ ಸ್ಮರಣಾರ್ಥವಾಗಿ ಆಗಸ್ಟ್ 2ರಂದು ಮಧ್ಯಾಹ್ನ 3 ಗಂಟೆಗೆ ವಿದ್ಯಾಲಯದ ವಿದ್ಯಾರ್ಥಿಗಳಿಂದ ಗುರುವಂದನಾ ಕಾರ್ಯಕ್ರಮ ಆಯೋಜಿಸಿದೆ.

ಅತಿಥಿಗಳು: ಸಂಸದ ತೇಜಸ್ವಿ ಸೂರ್ಯ, ಮೃದಂಗ ವಾದಕ ಆನೂರು ಅನಂತಕೃಷ್ಣ ಶರ್ಮಾ.

ಬಾನ್ಸುರಿ ಮತ್ತು ಗಾಯನದ ಜುಗಲ್‌ಬಂದಿ: ಷಡಜ್ ಗೋಡ್ಖಿಂಡಿ (ಬಾನ್ಸುರಿ), ಅನಿರುದ್ಧ್ ಐತಾಳ್ (ಗಾಯನ), ರೂಪಕ್ ಕಲ್ಲೂರ್‌ಕರ್ (ತಬಲಾ), ಪ್ರಸಾದ್ ಕಾಮತ್ (ಹಾರ್ಮೋನಿಯಂ). **ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತದ ಕೊಳಲು ಜುಗಲ್‌ಬಂದಿ:** ಪ್ರವೀಣ್ ಗೋಡ್ಖಿಂಡಿ (ಬಾನ್ಸುರಿ), ಶಶಾಂಕ್ ಸುಬ್ರಹ್ಮಣ್ಯಂ (ಕೊಳಲು), ತುಮಕೂರು ಬಿ. ರವಿಶಂಕರ್ (ಮೃದಂಗ), ಕಿರಣ್ ಗೋಡ್ಖಿಂಡಿ (ತಬಲಾ).

ಸ್ಥಳ: ಚೌಡಯ್ಯ ಸ್ಮಾರಕ ಭವನ, 16ನೇ ಅಡ್ಡರಸ್ತೆ, ಗಾಯತ್ರಿದೇವಿ ಉದ್ಯಾನ, ಮಲ್ಲೇಶ್ವರಂ. ಉಚಿತ ಪ್ರವೇಶ.





ಸಾಂಸ್ಕೃತಿಕ

ಯಕ್ಷ ಕಾರ್ತಿಕ

ಶ್ರೀ ಪೆರ್ಡೂರು ಮೇಳ ಮತ್ತು ಅತಿಥಿ ಕಲಾವಿದರಿಂದ ಆಗಸ್ಟ್ 2ರಂದು ಶನಿವಾರ ರಾತ್ರಿ 9.55ರಿಂದ ಯಕ್ಷ ಕಾರ್ತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಹಿಮ್ಮೇಳದಲ್ಲಿ: ಜನ್ಸಾಲೆ ರಾಘವೇಂದ್ರ ಆಚಾರ್, ಪ್ರಸನ್ನ ಭಟ್ ಬಾಳ್ಕಲ್, ಶಶಾಂಕ ಆಚಾರ್ಯ, ಅನಿರುದ್ಧ ಹೆಗಡೆ, ಪ್ರಜ್ವಲ್ ಮುಂಡಾಡಿ, ನಯನ್ ಕುಮಾರ್ ನಿಟ್ಟೂರು.

ಕಂಸವಧೆ: ಕಂಸ–ಕೊಂಡದಕುಳಿ ರಾಮಚಂದ್ರ ಹೆಗಡೆ, ಕೃಷ್ಣ–ಕಾರ್ತಿಕ್ ಚಿಟ್ಟಾಣಿ. ಅಕ್ರೂರ–ಅಶೋಕ್ ಭಟ್ ಸಿದ್ಧಾಪುರ, ಬಲರಾಮ: ಕಾರ್ತಿಕ್ ಕಣ್ಣಿ, ರಜಕ–ರವೀಂದ್ರ ದೇವಾಡಿಗ. ಗೋಪಿಕೆಯರು–ಸುಧೀರ ಉಪ್ಪೂರು, ಸಂತೋಷ ಕುಲಾಲ್, ಪ್ರಥಮ್.

ಮೋಕ್ಷ ಸಂಗ್ರಾಮ: ಅರ್ಜುನ–ಬಳ್ಕೂರು ಕೃಷ್ಣಯಾಜಿ, ಸುಧನ್ವ–ಉದಯ ಕಡಬಾಳು, ಪ್ರಭಾವತಿ–ಸುಬ್ರಹ್ಮಣ್ಯ ಹೆಗಡೆ ಯಲಗುಪ್ಪ, ಕೃಷ್ಣ–ಪವನ್ ಹೆಗಡೆ ಸಾಣ್ಮನೆ, ವೃಷಕೇತು–ಕೆ.ಜಿ. ಕಾರ್ತಿಕ, ಪ್ರದ್ಯುಮ್ನ–ಭಾಸ್ಕರ ಮರಾಠೆ.

ಲವ ಕುಶ: ಶ್ರೀರಾಮ–ನೀಲ್ಕೋಡು ಶಂಕರ ಹೆಗಡೆ, ಲವ–ಸನ್ಮಯ ಭಟ್, ಕುಶ–ಚಂದ್ರಹಾಸ ಗೌಡ. ಮಾಣಿ 1–ರವೀಂದ್ರ ದೇವಾಡಿಗ, ಮಾಣಿ 2–ಅಶೋಕ್ ಭಟ್ ಸಿದ್ಧಾಪುರ, ಶತ್ರುಘ್ನ–ಅಣ್ಣಪ್ಪ ಮಾಗೋಡು, ಸೀತೆ–ಸಂತೋಷ ಕುಲಾಲ್, ದೂತ–ಪುರಂದರ ಮೂಡ್ಕಣಿ, ವಾಲ್ಮೀಕಿ–ಭಾಸ್ಕರ ಮರಾಠೆ.

ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ. ಮಾಹಿತಿಗೆ: 91102 30904, 94816 69860

ಸ್ವರ ಮಲ್ಹಾರ್

ವಯೊಲಿನ್ ಅಕಾಡೆಮಿ ಮತ್ತು ಸಪ್ತಕ ಬೆಂಗಳೂರು: ಆಗಸ್ಟ್ 2ರಂದು ಶನಿವಾರ ಸಂಜೆ 5 ಗಂಟೆಗೆ ಸ್ವರ ಮಲ್ಹಾರ್ ಕಾರ್ಯಕ್ರಮವನ್ನು ಆಯೋಜಿಸಿವೆ.

ವಯೊಲಿನ್: ತೇಜಸ್ ಮತ್ತು ರಜಸ್ ಉಪಾಧ್ಯ ಸಹೋದರರು. ಸಂತೂರ್: ರಾಹುಲ್ ಶರ್ಮಾ, ತಬಲಾ: ಓಜಸ್ ಅಧಿಯಾ.

ಗಾಯನ: ಪಂಡಿತ್ ಆನಂದ್ ಭಾಟೆ, ತಬಲಾ: ಭರತ್ ಕಾಮತ್, ಹಾರ್ಮೋನಿಯಂ: ಸುಯೋಗ್ ಕುಂಡಲಕರ್.

ಸ್ಥಳ: ಪತ್ತಿ ಸಭಾಂಗಣ, ಶ್ರೀ ರಾಮ ಮಂದಿರಂ ಟ್ರಸ್ಟ್, ಎನ್.ಆರ್. ಕಾಲೊನಿ. ಮಾಹಿತಿಗೆ: 7019434992, 9535511888

ಗುರು ಸ್ಮರಣೆ

ಸಮುದ್ ಭವ ಸಂಸ್ಥೆಯು ಆಗಸ್ಟ್ 2ರಂದು ಗುರು ಸ್ಮರಣೆ ಕಾರ್ಯಕ್ರಮವನ್ನು ಸಂಜೆ 5 ಗಂಟೆಗೆ ಆಯೋಜಿಸಿದೆ. **ಅತಿಥಿಗಳು:** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಲವಂತ ರಾವ್ ಪಾಟೀಲ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಟಿ.ಜಿ. ನರಸಿಂಹ ಮೂರ್ತಿ, ವಿದ್ವಾನ್ ಆನೂರು ಅನಂತ ಕೃಷ್ಣ ಶರ್ಮಾ. **ಸ್ಥಳ:** ಜೆಎಸ್‌ಎಸ್ ಸಭಾಂಗಣ, ಶಿವರಾತ್ರೀಶ್ವರ ಕೇಂದ್ರ, 38ನೇ ಅಡ್ಡರಸ್ತೆ, 8ನೇ ಬ್ಲಾಕ್, ಜಯನಗರ.

ಗಾಯನ

ಕರ್ನಾಟಕ ಸಂಗೀತದ ಮೂವರು ದಿಗ್ಗಜರಾದ ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು ಹಾಗೂ ಶ್ಯಾಮಾ ಶಾಸ್ತ್ರಿ ಅವರ ಕೀರ್ತನೆಗಳ ಗಾಯನ ಕಾರ್ಯಕ್ರಮವನ್ನು ಆಗಸ್ಟ್ 2ರಂದು ಶನಿವಾರ ಸಂಜೆ 7 ಗಂಟೆಗೆ ಆಯೋಜಿಸಲಾಗಿದೆ.
ಗಾಯನ: ಸಂಗೀತಾ ಶಿವಕುಮಾರ್, ವಯೊಲಿನ್: ಎ.ಎಸ್. ಶುಭಲಕ್ಷ್ಮಿ, ಪಕ್ಕವಾದ್ಯ: ಪ್ರವೀಣ್ ಸ್ಪರ್ಶ್
ಸ್ಥಳ: ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್, 4ನೇ ಮುಖ್ಯರಸ್ತೆ, ದೊಮ್ಮಲೂರು 2ನೇ ಹಂತ.



ವ್ಯಂಗ್ಯಚಿತ್ರ ಪ್ರದರ್ಶನ

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಟೂನಿಸ್ಟ್ಸ್: ಇಂಡಿಯನ್ ಕಾರ್ಟೂನ್ ಗ್ಯಾಲರಿಯ 18ನೇ ವಾರ್ಷಿಕೋತ್ಸವದ ಪ್ರಯುಕ್ತ ವ್ಯಂಗ್ಯಚಿತ್ರ ಪ್ರದರ್ಶನವನ್ನು ಆಗಸ್ಟ್ 2ರಂದು ಆಯೋಜಿಸಿದೆ. ಇದೇ ಸಂದರ್ಭದಲ್ಲಿ, ಹಿರಿಯ ವ್ಯಂಗ್ಯಚಿತ್ರಕಾರ ಸುರೇಂದ್ರ ಅವರಿಗೆ 'ಬಾರ್ಟನ್ಸ್ ಜೀವಮಾನ ಸಾಧನೆ–2025' ಪ್ರಶಸ್ತಿಯನ್ನು ನೀಡಲಾಗುವುದು.

ಉದ್ಘಾಟನೆ: ಅಮರನಾಥ್ ಕಾಮತ್. **ಅತಿಥಿ:** ಭರತ್ ಮೆಹತಾ. **ಅಧ್ಯಕ್ಷತೆ:** ಡಾ. ಕೆ. ಅನಂತ ಗೌಡ. **ಸಮಯ:** ಬೆಳಿಗ್ಗೆ 11.

ವ್ಯಂಗ್ಯಚಿತ್ರ ಪ್ರದರ್ಶನವು ಆಗಸ್ಟ್ 23ರವರೆಗೆ ಇರಲಿದೆ.

ಸ್ಥಳ: ಇಂಡಿಯನ್ ಕಾರ್ಟೂನ್ ಗ್ಯಾಲರಿ, ಮಿಡ್‌ಫೋರ್ಡ್ ಗಾರ್ಡನ್, ಎಂ.ಜಿ. ರಸ್ತೆ.

'ಅಪರಾಧಿ ನಾನಲ್ಲ' ಇಂದು



ರಂಗರಸಧಾರೆ ತಂಡವು ಅಭಿನಯಿಸುವ ನಾಟಕ 'ಅಪರಾಧಿ ನಾನಲ್ಲ' ಪ್ರದರ್ಶನ ಆಗಸ್ಟ್ 2ರಂದು ಶನಿವಾರ ಸಂಜೆ 7ಕ್ಕೆ ನಡೆಯಲಿದೆ. ರಚನೆ: ವಾಸುದೇವ ಮೂರ್ತಿ ಪಿ. ನಿರ್ದೇಶನ : ಪ್ರದೀಪ್ ಅಂಚೆ.

ಸ್ಥಳ: ಡಾ. ಸಿ.ಅಶ್ವಥ್ ಕಲಾಭವನ ಸಭಾಂಗಣ, ಬಸವನಗುಡಿ, ಎನ್.ಆರ್. ಕಾಲೊನಿ. ಸಂಪರ್ಕ ಸಂಖ್ಯೆ: 8550830610

ಯಾವ ಮೂಗುತಿ ಆಯ್ಕೆ ಮಾಡುತಿ?

• ರಕ್ಷಿತಾ ಚಪ್ಪರಿಕೆ

ಮೂಗುತಿ ಎಂದರೆ ಹೆಣ್ಣುಮಕ್ಕಳಿಗೆ ಅದೇನೋ ಪ್ರೀತಿ. ಮೂಗಿಗೆ ಎಂದೂ ಭಾರವಾಗದ ಈ ಆಭರಣವು ಈಗೀಗ ಹೊಸ ಹೊಸ ವಿನ್ಯಾಸಗಳಲ್ಲಿ ಲಭ್ಯವಾಗುತ್ತಿದ್ದು, ಯುವ ಮನಸ್ಸುಗಳನ್ನು ಸೆಳೆಯುತ್ತಿದೆ.

ಬಂಗಾರ, ಬೆಳ್ಳಿ, ವಜ್ರ, ಮುತ್ತು, ರತ್ನ, ಹರಳುಗಳಿಂದ ಮಾಡಿದ ಮೂಗುತಿಗಳು ಈಗ ಲಭ್ಯವಿವೆ. ಎಂಥ ಮುಖದವರಿಗೆ, ಯಾವ ರೀತಿಯ ಮೂಗು ಇರುವವರಿಗೆ ಯಾವ ಬಗೆಯ ಮೂಗುತಿ ಸರಿ ಹೊಂದುತ್ತದೆ ಎಂಬುದನ್ನು ಸರಿಯಾಗಿ ಅಳೆದು ತೂಗಿಯೇ ಮೂಗುತಿಯನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿದೆ.


ಗಿಣಿಯಂಥ ನೀಳವಾದ ಮೂಗಿಗೆ ರಿಂಗ್ ಮೂಗುತಿ ಒಪ್ಪುತ್ತದೆ. ದುಂಡಗಿನ ಮೊರದಗಲದ ಮುಖಕ್ಕೆ ರಿಂಗ್ ಅಥವಾ ಸಣ್ಣ ಸಣ್ಣ ಹರಳುಗಳಿರುವ ಉದ್ದನೆಯ ಮೂಗುತಿ ಸೂಕ್ತವಾಗುತ್ತದೆ ಅಥವಾ ಮುತ್ತಿನ ಹರಳು ಇರುವ ನತ್ತನ್ನು ಧರಿಸಬಹುದು. ಚಿಕ್ಕ ಮೂಗು ಇದ್ದರೆ ಚಿನ್ನ, ವಜ್ರ ಅಥವಾ ಮುತ್ತಿನ ಸ್ಟಡ್ ಇರುವ ಮೂಗುತಿಯನ್ನು ಧರಿಸಬಹುದು.

ಟ್ರೆಂಡಿಂಗ್‌ನಲ್ಲಿರುವ ಮೂಗುತಿ....


ಬೆಳ್ಳಿಯಿಂದ ಮಾಡಲಾದ, ವೃತ್ತಾಕಾರದಲ್ಲಿರುವ, ಆರು ಅಥವಾ ಐದು ಹರಳುಗಳಿರುವ ಮೂಗುತಿ ಹೆಚ್ಚು ಸದ್ದು ಮಾಡುತ್ತಿದೆ. ಧರಿಸುವ ಉಡುಪಿಗೆ ಅನುಗುಣವಾಗಿ ಮೂಗುತಿಯನ್ನು ಹೊಂದಿಸಬಹುದು. ಸೀರೆ, ಲೆಹೆಂಗಾಗಳಿಗೆ ಚಿನ್ನ ಅಥವಾ ವಜ್ರದ ದೊಡ್ಡ ಮೂಗುತಿ ಒಪ್ಪುತ್ತದೆ. ಇದಲ್ಲದೇ ಮುತ್ತಿನ ಮೂಗುತಿ, ನತ್ತುಗಳು ಚೆನ್ನಾಗಿ ಕಾಣುತ್ತವೆ. ಜೀನ್ಸ್, ಸ್ಕರ್ಟ್, ಇಂಡೋವೆಸ್ಟ್ರನ್ ಔಟ್‌ಫಿಟ್ ಇದ್ದಾಗ ಬೆಳ್ಳಿಯ ತೆಳುವಾದ ರಿಂಗ್, ಬಿಳಿ ಹರಳಿನ ಅಥವಾ ವಜ್ರದ ಸ್ಟಡ್ ಧರಿಸಿಯೂ ಆಧುನಿಕವಾಗಿ ಕಾಣಿಸಿಕೊಳ್ಳಬಹುದು.

ದೊಡ್ಡದಾದ ಮೂಗುತಿ ಧರಿಸಿದಾಗ ಅತಿಯಾದ ಮೇಕಪ್ ಬೇಡ. ಸ್ಟಡ್ ಧರಿಸಿದಾಗ ಮೇಕಪ್ ಹೆಚ್ಚಿದ್ದರೂ ನಡೆಯುತ್ತದೆ. ಈಗೀಗ ಮೂಗಿನ ಎಡ ಹಾಗೂ ಬಲ ಎರಡು ಬದಿಗಳಲ್ಲಿಯೂ ಮೂಗು ಚುಚ್ಚಿಸಿಕೊಳ್ಳುವ ಟ್ರೆಂಡ್ ಹೆಚ್ಚುತ್ತಿದೆ. ಮಾಡೆಲಿಂಗ್ ಕ್ಷೇತ್ರದಲ್ಲಿ ಇರುವವರು ಮೂಗಿನ ಮಧ್ಯಭಾಗದಲ್ಲಿ ರಿಂಗ್‌ನಂಥ ಒಡವೆಯನ್ನು ಹಾಕುತ್ತಾರೆ. ಚೆನ್ನಾಗಿ ಕಾಣಿಸದ ಆಭರಣಗಳಾಗಲಿ, ಮುಖವಾಗಲಿ ಇರುವುದಿಲ್ಲ. ಎಂಥ ಮುಖದ ಆಕಾರಕ್ಕೆ ಎಂಥ ಮೂಗುತಿ ಬೇಕು ಎಂಬುದನ್ನು ಆಯ್ಕೆ ಮಾಡುವ ಹೊಣೆ ನಮ್ಮದಾಗಿರಬೇಕಷ್ಟೆ.

ಮೂಗುತಿ ಹಾಕಿಕೊಳ್ಳುವ ಉತ್ಸಾಹದಲ್ಲಿ, ಮೂಗು ಚುಚ್ಚಿಸಿಕೊಳ್ಳುವಾಗ ವಿನಾಕಾರಣ ನೋವುಣ್ಣಬೇಡಿ. ನುರಿತವರಿಂದಲೇ ಮೂಗು ಚುಚ್ಚಿಸಿಕೊಳ್ಳಿ. ಆಗ ಮೂಗಿನ ಮೇಲೆ ಗುಳ್ಳೆಗಳಾಗುವುದು, ನರದ ಮೇಲೆ ಚುಚ್ಚಿ ಬಾಧೆಗೆ ಒಳಗಾಗುವುದು ತಪ್ಪುತ್ತದೆ. ಮೂಗುತಿಯ ಸಹವಾಸವೇ ಬೇಡಪ್ಪ ಎಂದೆಲ್ಲ ಅನ್ನಿಸದೆ, ಮೂಗುತಿಯು ಫ್ಯಾಷನ್ ಆ್ಯಕ್ಸೆಸರಿಯ ಭಾಗವಾಗುತ್ತದೆ.



ಫ್ಯಾಷನ್



ಕ್ಲಾರೆನ್ಸ್ ಪ್ರೌಢಶಾಲೆಯ ಪೋಸ್ಟ್‌ಕಾರ್ಡ್‌ಗಳ ಅನಾವರಣ

ಕ್ಲಾರೆನ್ಸ್ ಶಾಲೆಗೆ ಶತಮಾನ ಪಿಕ್ಚರ್ ಪೋಸ್ಟ್‌ಕಾರ್ಡ್ ಅನಾವರಣ

ಬೆಂಗಳೂರಿನ ಐತಿಹಾಸಿಕ ಶೈಕ್ಷಣಿಕ ಸಂಸ್ಥೆಗಳಲ್ಲಿ ಒಂದಾದ ಕ್ಲಾರೆನ್ಸ್ ಪ್ರೌಢಶಾಲೆಯು ಶತಮಾನ ಪೂರೈಸಿದ್ದರ ಸ್ಮರಣಾರ್ಥವಾಗಿ ಪಿಕ್ಚರ್ ಪೋಸ್ಟ್‌ಕಾರ್ಡ್‌ಗಳನ್ನು (ಪೋಸ್ಟ್‌ಕಾರ್ಡ್ ಕಲಾಕೃತಿ) ಹೊರತಂದಿದೆ.

ಅಂಚೆ ಇಲಾಖೆಯ ಸಹಯೋಗದೊಂದಿಗೆ ಅನಾವರಣಗೊಳಿಸಲಾದ ಈ ನಾಲ್ಕು ಪೋಸ್ಟ್‌ಕಾರ್ಡ್‌ಗಳು ಶಾಲೆಯ ಹಳೆಯ ದಿನಗಳನ್ನು ನೆನಪಿಸುವ ಸ್ಮರಣಿಕೆಗಳಂತೆ ಇವೆ. ಶಾಲೆಯ ಸಂಸ್ಥಾಪಕರು, ಇಲ್ಲಿ ಕಾರ್ಯನಿರ್ವಹಿಸಿರುವ ಪ್ರಾಂಶುಪಾಲರು ಮತ್ತು ಕಿಂಟರ್‌ಗಾರ್ಡನ್ ವಿಭಾಗದ ಮಾಜಿ ಸಂಯೋಜಕರ ಛಾಯಾಚಿತ್ರಗಳನ್ನು ಇವು ಒಳಗೊಂಡಿವೆ. ಶಾಲೆಯ ಆವರಣದಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ, 110 ವರ್ಷಗಳ ಇತಿಹಾಸವಿರುವ ಶಾಲೆಯ ಶೈಕ್ಷಣಿಕ ಪರಂಪರೆಯನ್ನು ನೆನೆಯಲಾಯಿತು. ಶಾಲೆಯು ಸಾಗಿಬಂದ ಪಯಣದ ಹಾದಿಯ ಮಹತ್ವವನ್ನು ಎತ್ತಿ ಹಿಡಿಯಲಾಯಿತು.

ಶಾಸಕ ರಿಜ್ವಾನ್ ಅರ್ಷದ್ ಅತಿಥಿಯಾಗಿ ಭಾಗವಹಿಸಿದ್ದರು. ಬೆಂಗಳೂರಿನ ಜಿಪಿಒದ ಮುಖ್ಯ ಪೋಸ್ಟ್‌ಮಾಸ್ಟರ್ ಎಚ್.ಎಂ. ಮಂಗೇಶ ಉಪಸ್ಥಿತರಿದ್ದರು.



ಸ್ಮಾರ್ಟ್ ಟಿ.ವಿ. ಸ್ಮಾರ್ಟ್ ಆಯ್ಕೆ

ಲ್ಯಾಪ್‌ಟಾಪ್‌ಗಳು, ಡೆಸ್ಕ್‌ಟಾಪ್‌ಗಳು, ಮಾನಿಟರ್‌ಗಳು ಮತ್ತು ಸ್ಮಾರ್ಟ್ ಟಿ.ವಿ.ಗಳನ್ನು ಒಳಗೊಂಡಂತೆ ವಿವಿಧ ಎಲೆಕ್ಟ್ರಾನಿಕ್ ಉತ್ಪನ್ನಗಳ ತಯಾರಿಕಾ ಕಂಪನಿ ಏಸರ್ ಇದೀಗ ಕ್ಯುಎಲ್‌ಇಡಿ ಸ್ಮಾರ್ಟ್ ಟೆಲಿವಿಷನ್‌ಗಳ ಪ್ರೀಮಿಯಂ ಸಾಲಿನ ಹೊಸ ಏಸರ್ ವಿ–ಪ್ರೊ ಕ್ಯುಎಲ್‌ಇಡಿ ಟಿ.ವಿ.ಯನ್ನು ಮಾರುಕಟ್ಟೆಗೆ ತಂದಿದೆ.

ಗುಣಮಟ್ಟದ ಪ್ರದರ್ಶನ ಮತ್ತು ಅತ್ಯುತ್ತಮ ಧ್ವನಿ ಸಂಯೋಜನೆಯನ್ನು ಒಳಗೊಂಡಿರುವ ಇದು ಮನರಂಜನಾ ಉತ್ಸಾಹಿಗಳಿಗೆ ಅತ್ಯುತ್ತಮ ಆಯ್ಕೆ. ಚಲನಚಿತ್ರ, ನೆಚ್ಚಿನ ಕಾರ್ಯಕ್ರಮ ವೀಕ್ಷಿಸಲು, ಅಷ್ಟೇ ಅಲ್ಲದೆ ಗೇಮಿಂಗ್‌ನಲ್ಲಿ ಇದು ಉತ್ತಮ ಅನುಭವ ನೀಡುತ್ತದೆ.

ಅಂತರ್ನಿರ್ಮಿತ ವೈ–ಫೈ (ಇನ್‌ಬಿಲ್ಟ್), ಬ್ಲೂಟೂತ್, ಬಹು ಎಚ್‌ಡಿಎಂಐ ಮತ್ತು ಯುಎಸ್‌ಬಿ ಪೋರ್ಟ್‌ನೊಂದಿಗೆ ತಡೆರಹಿತ ಸಂಪರ್ಕ ಸೌಲಭ್ಯ ಒದಗಿಸುತ್ತದೆ ಎಂಬುದು ಕಂಪನಿಯ ವಿವರಣೆ.

ಸ್ಮಾರ್ಟ್ ಸಂಪರ್ಕ ಆಯ್ಕೆಗಳಿವೆ. ವೈ–ಫೈ, ಬ್ಲೂಟೂತ್ ಸಂಪರ್ಕವನ್ನು ಬೇಗನೇ ಪಡೆಯಬಹುದು. ಕಡಿಮೆ ವಿದ್ಯುತ್ ಬಳಕೆಗೆ ಸರಿಹೊಂದುವಂತೆ ವಿನ್ಯಾಸಗೊಳಿಸಿರುವ ಟಿ.ವಿ. ಪರದೆಯು ವಿವಿಧ ಗಾತ್ರಗಳಲ್ಲಿ ಲಭ್ಯವಿದೆ.

- ಇದು ಭಾರತದ ಮೊದಲ ಆ್ಯಂಡ್ರಾಯ್ಡ್ 14 ಗೂಗಲ್ ಪ್ಲ್ಯಾಟ್‌ಫಾರ್ಮ್ ಆಗಿದ್ದು, ಎಐ ಪ್ರೊಸೆಸರ್ ಅನ್ನು ಬಳಸಲಾಗಿದೆ.
- 43 ಇಂಚಿನ ಟಿ.ವಿ ಬೆಲೆ ₹27,999 ಹಾಗೂ 55 ಇಂಚಿನ ಟಿ.ವಿಗೆ ₹55,000. ಬಜಾಜ್ ಮಾಲ್‌ನಲ್ಲಿ, ಅಮೆಜಾನ್‌ನಲ್ಲಿ ಟಿ.ವಿ ಲಭ್ಯವಿದೆ.

ಯಕೃತ್ತು: ತಂದುಕೊಳ್ಳದಿರಿ ಕುತ್ತು



ಕಾಳಜಿ

ದೇಹದ ಅಂಗಾಂಗಗಳಲ್ಲಿ ಹೃದಯದ ನಂತರ ಯಕೃತ್ತಿಗೆ ಎರಡನೇ ಸ್ಥಾನ. ಹಲವು ಕಾರಣಗಳಿಂದಾಗಿ ಹೆಪಟೈಟಿಸ್‌ನಂಥ ಗಂಭೀರ ಕಾಯಿಲೆಗೆ ಅದು ತುತ್ತಾಗುತ್ತಿದೆ.

ಆಧುನಿಕ ಜೀವನಶೈಲಿಯು ದೈನಂದಿನ ಬದುಕಿನಲ್ಲಿ ಮಹತ್ತರ ಬದಲಾವಣೆ ತಂದಿದೆ. ಇದು ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ. ಜಡ ಜೀವನಶೈಲಿ, ಪೌಷ್ಟಿಕಾಂಶಯುಕ್ತ ಆಹಾರ ಸೇವನೆ ಮಾಡದೇ ಇರುವುದು, ಕಳಪೆ ಆಹಾರ, ಬೊಜ್ಜು, ಮದ್ಯಪಾನ ಸೇರಿದಂತೆ ಹಲವು ಕಾರಣಗಳು ಯಕೃತ್ತಿನ ಆರೋಗ್ಯದ ಮೇಲೆ ಪ್ರಭಾವ ಬೀರಬಹುದು.

ನಾನ್-ಆಲ್ಕೋಹಾಲಿಕ್ ಫ್ಯಾಟಿ ಲಿವರ್ ಡಿಸೀಸ್ (ಎನ್‌ಎಎಫ್‌ಎಲ್‌ಡಿ) ಒಂದು ಪ್ರಮುಖ ಸಮಸ್ಯೆಯಾಗಿದೆ. ದೇಹದಲ್ಲಿನ ಒಂದು ಮುಖ್ಯ ಅಂಗವಾದ ಯಕೃತ್ತು ಚಯಾಪಚಯ (ಮೆಟಬಾಲಿಸಂ), ವಿಷರಹಿತ ಸ್ಥಿತಿ (ಡಿಟಾಕ್ಸಿಫಿಕೇಶನ್) ಮತ್ತು ಪೋಷಕಾಂಶಗಳ ಸಂಗ್ರಹದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಬಹುಬೇಗನೆ ತೂಕ ಇಳಿಸಿಕೊಳ್ಳಲು ಅನುಸರಿಸುವ ಆಹಾರ ಕ್ರಮ, ಅತಿಯಾದ ಉಪವಾಸ ಅಥವಾ ಕಡಿಮೆ ಕ್ಯಾಲೊರಿಯುಳ್ಳ ಆಹಾರ ಸೇವನೆಯಿಂದ ಕೊಬ್ಬಿನಾಂಶ ಶೇಖರಣೆಯಾಗುತ್ತದೆ. ಇದು ಕೊಬ್ಬಿನಾಮ್ಲಗಳ ಬಿಡುಗಡೆಗೆ ಕಾರಣವಾಗುತ್ತದೆ. ಯಕೃತ್ತಿನಲ್ಲಿ ಸಂಗ್ರಹಗೊಂಡ ಕೊಬ್ಬಿನಾಂಶದಿಂದ ಆರೋಗ್ಯದ ಮೇಲೆ ಇನ್ನಷ್ಟು ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ.

ಅತ್ಯಂತ ಹಾನಿಕಾರಕ ಆಹಾರ ಪದ್ಧತಿಗಳಲ್ಲಿ ಸಕ್ಕರೆ ಮತ್ತು ಸಂಸ್ಕರಿಸಿದ (ಪ್ರೋಸೆಸ್ಡ್) ಆಹಾರದ ಅತಿಯಾದ ಸೇವನೆಯೂ ಒಂದು. ಇವು ಆಕ್ಸಿಡೇಟಿವ್ ಒತ್ತಡವನ್ನು ಹೆಚ್ಚಿಸುವುದಲ್ಲದೆ, ಯಕೃತ್ತಿನಲ್ಲಿ ಕೊಬ್ಬಿನ ಶೇಖರಣೆ ಮತ್ತು ಉರಿಯೂತವನ್ನು ಉಂಟು ಮಾಡುತ್ತವೆ. ಅತಿಯಾದ ಸಕ್ಕರೆ ಮತ್ತು ಅನಾರೋಗ್ಯಕರ ಕೊಬ್ಬಿನಾಂಶವುಳ್ಳ ಪದಾರ್ಥಗಳ ಸೇವನೆಯು ದೀರ್ಘಕಾಲದ ಉರಿಯೂತಕ್ಕೆ ಕಾರಣವಾಗಬಹುದು. ಇದು ಕಾಲಾನಂತರದಲ್ಲಿ ಯಕೃತ್ತಿನ ಜೀವಕೋಶಗಳನ್ನು ಹಾನಿಗೊಳಿಸುತ್ತದೆ.

ಯಕೃತ್ತಿನ ಆರೋಗ್ಯದ ವಿಷಯದಲ್ಲಿ ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ, ಅಡುಗೆ ಎಣ್ಣೆಯನ್ನು ಪದೇಪದೇ ಬಳಸುವುದು. ವಿಶೇಷವಾಗಿ ಡೀಪ್ ಫ್ರೈ ಮಾಡಿದ ಎಣ್ಣೆಯನ್ನು ಮತ್ತೆ ಬಳಸುವುದು. ಮನೆಗಳಲ್ಲಿ ಅಥವಾ ಹೋಟೆಲ್‌ಗಳಲ್ಲಿ ಒಮ್ಮೆ ಬಳಸಿದ ಎಣ್ಣೆಯನ್ನು ಮತ್ತೆ ಮತ್ತೆ ಬಳಸುತ್ತಾರೆ. ಇದು ಟ್ರಾನ್ಸ್ ಕೊಬ್ಬು ಮತ್ತು ಯಕೃತ್ತಿಗೆ ವಿಷಕಾರಿಯಾದ ಸಂಯುಕ್ತಗಳನ್ನು ಉತ್ಪಾದಿಸುತ್ತದೆ. ಕಪ್ಪಾದ, ಗಾಢವಾದ ಅಥವಾ ಸುಟ್ಟ ವಾಸನೆಯುಳ್ಳ ಎಣ್ಣೆಯು ಅಪಾಯಕಾರಿ.

ಆರೋಗ್ಯ ಕಾಪಾಡಿಕೊಳ್ಳುವುದು ಹೇಗೆ?

ಯಕೃತ್ತಿನ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಮತೋಲಿತ ಆಹಾರವನ್ನು ಸೇವಿಸಬೇಕು. ನಮ್ಮ ದೈನಂದಿನ ಆಹಾರವು ಹಣ್ಣುಗಳು, ತರಕಾರಿಗಳು, ಧಾನ್ಯಗಳು ಮತ್ತು ಕಡಿಮೆ ಕೊಬ್ಬಿನ ಪ್ರೋಟೀನ್‌ಗಳಿಂದ ಕೂಡಿರಬೇಕು. ಮದ್ಯ, ಸಂಸ್ಕರಿಸಿದ ಆಹಾರ ಮತ್ತು ಸಕ್ಕರೆಸಹಿತ ಪಾನೀಯಗಳನ್ನು ತ್ಯಜಿಸಬೇಕು. ಆರೋಗ್ಯಕರ ಅಡುಗೆ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಉದಾಹರಣೆಗೆ, ಹುರಿಯುವ ಬದಲು ಸ್ಟೀಮಿಂಗ್, ಬೇಯಿಸುವುದು, ಗ್ರಿಲ್ಲಿಂಗ್ ಅಥವಾ ಸಾಟಿಂಗ್ ಮಾಡುವುದು ಉತ್ತಮ.

ಕೊಲೆಸ್ಟ್ರಾಲ್ ಮಟ್ಟವನ್ನು ಸಮತೋಲನದಲ್ಲಿ ಇಟ್ಟುಕೊಳ್ಳಲು ಯಾವಾಗಲೂ ತಾಜಾ ಎಣ್ಣೆ ಬಳಸುವುದು ಮತ್ತು ಅದನ್ನು ನಿಯಮಿತವಾಗಿ ಬದಲಾಯಿಸುವುದು ಒಳಿತು (ಉದಾಹರಣೆಗೆ, ಸಾಸಿವೆ, ನೆಲಗಡಲೆ, ಸೂರ್ಯಕಾಂತಿ ಅಥವಾ ಅಕ್ಕಿಹೊಟ್ಟು ಎಣ್ಣೆ). ದೇಹದಲ್ಲಿ ಶಕ್ತಿ ಉತ್ಪಾದನೆಗಾಗಿ ಅಗತ್ಯವಾದ ಕಾರ್ಬೋಹೈಡ್ರೇಟ್‌ಗಳು, ಅಂಗಾಂಗಗಳ ಆರೋಗ್ಯ ಮತ್ತು ಬೆಳವಣಿಗೆಗಾಗಿ ಪ್ರೋಟೀನ್‌ಗಳು, ಸಮತೋಲಿತವಾದ ಆರೋಗ್ಯಕರ ಕೊಬ್ಬಿನಾಂಶ, ಚಯಾಪಚಯ ಸಮತೋಲನ ಮತ್ತು ರೋಗನಿರೋಧಕಶಕ್ತಿಯನ್ನು ಕಾಪಾಡಿಕೊಳ್ಳಲು ಅಗತ್ಯವಾದ ವಿಟಮಿನ್‌ಗಳನ್ನು ಒಳಗೊಂಡ ಆರೋಗ್ಯಕರ ಆಹಾರವನ್ನು ಸೇವಿಸಬೇಕು.

ಮೊದಲನೆಯದಾಗಿ, ಊಟವನ್ನು ಎಂದಿಗೂ ಬಿಡಬಾರದು. ನಿಯಮಿತವಾಗಿ ಆಹಾರವನ್ನು ಸೇವಿಸುವುದು ಮುಖ್ಯ. ಜೊತೆಗೆ ದ್ರವಾಹಾರದ ಮೂಲಕ ದೇಹವನ್ನು ಹೈಡ್ರೇಟೆಡ್ ಆಗಿ ಇಟ್ಟುಕೊಳ್ಳಬೇಕು. ತಾಜಾ ಹಣ್ಣು ಮತ್ತು ತರಕಾರಿಗಳು, ಒಣಹಣ್ಣು ಮತ್ತು ಬೀಜಗಳು, ಮೊಳಕೆಕಾಳು ಮತ್ತು ಧಾನ್ಯಗಳು, ಸಿಟ್ರಸ್ ಹಣ್ಣುಗಳ ಸೇವನೆ ಒಳಿತು. ಕರುಳಿನ ಆರೋಗ್ಯಕ್ಕಾಗಿ ಪ್ರೀ-ಬಯೋಟಿಕ್ಸ್ ಮತ್ತು ಪ್ರೊ-ಬಯೋಟಿಕ್ಸ್, ನಿಯಮಿತ ವ್ಯಾಯಾಮ, ತೂಕ ನಿಯಂತ್ರಣ, ಸಾಕಷ್ಟು ನಿದ್ರೆ, ಒತ್ತಡ ನಿರ್ವಹಣೆ ಮತ್ತು ವಾರ್ಷಿಕ ಆರೋಗ್ಯ ತಪಾಸಣೆ ಮುಖ್ಯ.

ಡಾ. ಟಿ.ರಮಾಲಕ್ಷ್ಮಿ
ಆಹಾರ ತಜ್ಞೆ, ವಾಸವಿ ಆಸ್ಪತ್ರೆ

ಶ್ರದ್ಧಾ ಹಾಸ್ಯವಲ್ಲರಿ



'ಸೋ ಮಿನಿ ಥಿಂಗ್ಸ್'– ಯೂಟ್ಯೂಬ್ ಮೋಹಿಗಳಿಗೆ ಹಾಗೂ ಸ್ಟ್ಯಾಂಡ್–ಅಪ್ ಕಾಮಿಡಿ ಸವಿಯುವವರಿಗೆ ಈ ಪದಪುಂಜ ತಿಳಿದಿರುತ್ತದೆ. 'ಅಯ್ಯೋ ಶ್ರದ್ಧಾ' ಎಂದೇ ಮನೆಮಾತಾಗಿರುವ ಶ್ರದ್ಧಾ ಜೈನ್ ಅವರ ಸ್ಟ್ಯಾಂಡ್–ಅಪ್ ಕಾಮಿಡಿಯ ವಸ್ತುವಿಷಯ ಇದು.

ಈ ಸ್ವರೂಪದ ಸ್ಟ್ಯಾಂಡ್–ಅಪ್ ಕಾಮಿಡಿಯನ್ನು ಅವರು 45 ನಗರಗಳಲ್ಲಿ ಪ್ರಸ್ತುತಪಡಿಸಿ ಈಗ ಬೆಂಗಳೂರಿಗೆ ಬಂದಿದ್ದಾರೆ. ಅಮೆರಿಕವೊಂದರಲ್ಲೇ 28 ಪ್ರದರ್ಶನಗಳನ್ನು ಆ ಸ್ಟ್ಯಾಂಡ್–ಅಪ್ ಕಾಮಿಡಿ ಕಂಡಿತ್ತು.

ಶ್ರದ್ಧಾ ಈ ಹಿಂದೆ ರೇಡಿಯೊ ಜಾಕಿ ಆಗಿದ್ದವರು. ಅರಳು ಹುರಿದಂತಹ, ಮಾಹಿತಿಯಿಂದ ಭರಪೂರವಾದ ಮಾತಿನಿಂದ ಅವರು ಜನಪ್ರಿಯರಾಗಿದ್ದರು. ಆಮೇಲೆ ಕಾಮಿಡಿ ಪ್ರಕಾರಕ್ಕೆ ಹೊರಳಿಕೊಂಡರು. ಮರಾಠಿ, ಹಿಂದಿ, ಇಂಗ್ಲಿಷ್, ಕನ್ನಡ ಎಲ್ಲ ಭಾಷೆಗಳಲ್ಲಿ ಅವರು ಲೀಲಾಜಾಲವಾಗಿ ಮಾತನಾಡಬಲ್ಲರು.

ಹೊಸಕಾಲದ ತಂದೆ–ತಾಯಿ–ಮಗುವಿನ ನಡುವೆ ನಡೆಯಬಹುದಾದ ನವಿರಾದ ಸಂಭಾಷಣೆಯಿಂದಲೇ ಬದುಕಿನ ಸಣ್ಣಪುಟ್ಟ ಸಂಗತಿಗಳಿಗೆ ಅವರು ವ್ಯಂಗ್ಯ–ಹಾಸ್ಯದ ಲೇಪ ನೀಡುತ್ತಾರೆ. ಆರು ವರ್ಷದ ಮಕ್ಕಳಿಂದ ಹಿಡಿದು 60 ದಾಟಿರುವವರೂ ಅವರ ಹಾಸ್ಯ ಕಾರ್ಯಕ್ರಮ ನೋಡಲು ಬರುತ್ತಾರೆ.

ಆಗಸ್ಟ್ 2ರಂದು ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ಸಂಜೆ 4ಕ್ಕೆ ಹಾಗೂ ರಾತ್ರಿ 7.30ಕ್ಕೆ 'ಸೋ ಮಿನಿ ಥಿಂಗ್ಸ್' ಸ್ಟ್ಯಾಂಡ್–ಅಪ್ ಕಾಮಿಡಿಯ ಪ್ರದರ್ಶನವಿದೆ.

ಆರೋಗ್ಯಕರ ಹಾಸ್ಯವನ್ನು ಸವಿದು, ಹೊಟ್ಟೆಹುಣ್ಣಾಗಿಸಿಕೊಳ್ಳಲು ಬಯಸುವವರು ಹೋಗಬಹುದು.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331







ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER

ಕ್ಲಾಸಿಫೈಡ್ಸ್

REAL ESTATE SELLING

Sites

Banashankari

BDA AUCTION CORNER SITES SALE 60x54 North`West Corner and 46x80 South WestCorner Both Sides 40`feet,Road, Banashankari 6th`Stage 4th`B`Block, Rs.12,000/-sqft Call: 9008444779

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES, BRINDAVAN ASSOCIATES- 9980863245/ 9945333993

BANASHANKARI 6TH Stage, VISHWESHRAIAH LAYOUT, BDA SITES 50X80, 40X60, 30X40, 20X30 Buying/ Selling, Immediate Settlement. 9845675290 9845446826.

40X60, WEST facing site for sale at, Banashankari 6th stage, 4th B Block, call 9844039482

AVAILABLE BANASHANKARI 6TH STAGE 6TH BLOCK 20×30 #971 W/F 68 LAKHS CONTACT OWNER 8050908920/ 9986866661

BDA APPROVED private layout site for sale in BSK 6th stage, 120'x70' north facing, 8700/ sft, 9845380312

Basaweshwaranagar

SALE INDEPENDENT 2&3 BHK HOUSE 2500 SQFT BUILT 1600 SQFT SITE EASTHI KHATHA 2CRORE: 9035883017

BASVESHWARNAGAR RESIDENTIAL 40×60 East Facing and Commercial 40×60 South Facing Super Location Immediate Sale 8660075308

Kanakapura Road

BCC LAYOUT,BDA Approved 50x60,Corner Site 15000/-30x50,G+3 Brand New_House 4.60cr_BSK 6th Stg,3rd_Blk 3780Sft,Corner 13500/- 9845704509

HSR Layout

HSR 1ST-SECTOR Sale Semi Commercial 40x60 NF 4 Lakhs Rent, Rs. 10.5Cr Negotiable, Shivu 9880004149

Jakkur

JUDICIAL LAYOUT JAKKUR 1500 sft Excellent Location For Sale Contact: 9341260828

Kempegowda Layout

COMMERCIAL SITE for sale 50*80 WF BDA 300 ft/ rd very good locality Rs 14000/- Negotiable Nadaprabhu Kempegowda Layout near Challaghatta Metro Station Mysore Road. Contact: 9916826976.

KEMPEGOWDA LAYOUT, 30x40 1st Block, 'K' Sector, Site 391, 40x39 1st Block, 'I' Sector, Site 1626, BDA Auctioned, Owner-9164644113.

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Sahakarnagar

SAHAKARANAGAR 40X70 Site Excellent Location For Sale Contact: 9341260828

Nagarabhavi

30X50 WEST SOUTH CORNER SITE SALE, NAGARABHAVI BDA RHCS Layout E Block Near BDA Complex. Call: 8105688602

Rajarajeshwari Nagar

50X60 NORTH East Corner Site FOR SALE, Ideal Homes, RAJARAJESHWARI NAGAR. Contact: 7624809123. Brokers Excuse.

RAJARAJESHWARI NAGAR BEML 4th Stages site 60x40 for sale, Contact Vasavi Estates 9880127399

Vishweshwariah Layout

AVAILABLE 30X40 BDA Site Viswesavaraiah Layout 2nd Block Good Location Only Genuine Buyer Contact: 9844603127

BDA-SITE FOR-SALE 30x40 East Facing at Sir.M Vishveshwaraiya Layout 1st & 3rd Block Good Location Call:7676900174 6363496142

COMMERCIAL BDA SITE SALE 40x60 N/F Vishveswaraiah Layout 1st Block, 100ft Road,Contact: 9886634578, 9742681666

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, BANASHANKARI 6th Stage. Contact: 8892901567

COMMERCIAL SITE SALE SMV Layout, 50x80 West Face 100 Feet Road, Opposite BDA Complex Call: 9986869996.

30X40, SOUTH facing site for sale at, Vishweshwaraiah layout, 6th block, Call 9844039482

30X40 BDA Site Vishveshwaraiah Layout 3rd Block 12500/-, 20x30 Site Sale Kempegowda Layout 7th Block 58 Lacs: 8310003509

Vidyaranyapura

SALE SITES 1200 & 1600 SQFT BBMP EASTHI EAST FACING COMPOUND WALL CLEAR TITLES 9035883017

HBR Layout

BDA ALLOTTED 50X80 SITE FOR SALE
Prime residential site, in excellent well-developed location, opp. ISKCON Goshala in H.B.R BDA Layout, North facing, 15.24x 24.4 = 371.85sq mts (4000sq.ft), e-khata done.
Contact :
Mobile : 97422 59826
ananth.hr1@gmail.com

Hegganahalli

SITE SALE 160x100ft In Hegganahalli Cross Bangalore A Katha Borewell Brick wall Fenced: 9900287834/ 9448377834

Anjanapura

SITE for Sale- 30x90 (2 sites) A Katha, Anjanapura 11th Block, adjacent to BDA. Contact: 9591954285, 9901540494

Mysore

SALE COMMERCIAL Plot 29X75 W/F Ganapathi Temple Road NRMohalla, Rs.8,500/sqft Full Cheque Payment Call: 9686522990

House

J P Nagar

SHAKAMBARINAGA R, J.P.NAGAR 1st Phase 30x40 East 11B E-Katha with Duplex house and rented building SALE 2,10,00,000/- 9845395885

Magadi Road

40X80 EAST facing 6 Years Old Building For Sale, Kamakshipalya Near By Magadi Road: 9900230142

R T Nagar


SALE COMMERCIAL INDEPENDENT DUPLEX BUILDING GROUND FIRST FLOOR VACANT POSITION A KHATHA 56 LAKHS 9035883017

Yelahanka

SALE UNFINISHED Residential 20 Squr Building Facing South on 30x53.5 Site at Yelahanka (Shivkote) Clear Title Contact: 9019516062

RESIDENTIAL LAND FOR SALE
Residentially Converted & Approved Land of 1,40,000 Sq. Ft Out of 4.5 Acres land suitable for Apartment, Villas, Row Houses, Plotted development located very close to Bengaluru - Mysuru Expressway near WONDERLA, Bengaluru Urban.
Call / WhatsApp
87148 25477 | 78922 55733

LAND FOR SALE
10 Acre Land for Sale in Dodda Aaladamara near ISRO, prime location, Yellow belt, clear title, Single owner
Price 3.15 crore Per Acre
Contact: 9845000299



General

Multiple Locations

REAL ESTATE- We undertake Property Maintenance/ Civil/Painting/ Electrical Plumbing, Carpentry Farm house Houses Offices, Industrial shed's etc- Invest on Small Agricultural plots around Bangalore South, Harohalli, Jigani, Maralwadi etc and get Good returns in Resale Business Property Monitoring, PropertyManagement- Rental, Buying, Selling of All kinds of properties contact: Victory Properties Mobile: 7411692219, 8618576685, 9686894972 info@victoryproperties.in www.victoryproperties.in

Industrial & Factory

Out-Station

INDUSTRIAL SITES FOR SALE At HOSUR. 1) 7.5 Acres of land with 50000 sft High roof shed on the-NH. 2) 2.5 Acres of land with 15000 sft Shed next to SIPCOT-11. Serious buyers call: 9059026979

Residential/ Commercial

J P Nagar

JPNAGAR 2NDPHASE Sale of Independent House 2400sft on 30x40 plot east facing. Offer Rs 3.75Cr if transaction closed by 29th August; no nego. Serious buyers with money call 9980028093

Commerical

Jayanagar

KR.ROAD NEAR Uma Maheshwari Temple Semi Commercial 30x70 SW Corner 32,000/ Sft. 'PRAKASH ENTERPRISES'- 98456-09477

Agricultural Land

Nelamangala

3 ACRE Agriculture Land For Sale Near Nelamangala Contact 9663192081

Commercial Land

Out-Station

COMMERCIAL LAND one acre, 138ftx325ft,For Sale in Kangrali bk, Industrial area,on 100ft Bauxite road. BELGAUM.Adjacent to NH4 National Highway, surrounded by Commercial hub.clear title.Contact: 9448349089

Flat

Nagarabhavi

AVAILABLE RENT ONE TWO BHK NAGARABHVI SECOND MALAGALA CLOSE RING ROAD SBI: MURTHY 8105273951/ 9738223432

BUILDERS ESSENTIAL

Water Proofing

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Anjanapura

BDA-SITES WANTED 30x40, 40X60, 50x80 Immediate Settlement BANASHANKARI VI STAGE, ANJANAPURA VISHWESHWARAIAH LAYOUT RAJESH: 9945610779

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

BDA-SITES WANTED @ Banashankari 6th Stage Any Block Vishweshwaraiah Layout 30x40, 40x60, 50x80 Settlement Immediately Contact: 98455-55666

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

REQUIRED BDA SITES @ Nagarbhavi, Vishweshwaraiya layout, Kempegowda layout. For Immediate Purchase any measurement. 9513955756, 9513119696.

WANTED 30X40, 40x60, 50x80, 20x30 BDA Site Viswesavaraiah, Kempegowda, Kengeri, Layout, with Clear Titles: 9035470616

Real Estate Agents

0% BROKERAGE for Buying and Selling any properties in Mysore city. Contact: Mysore Estates Vishwanath Gowda 9590911111

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

REAL ESTATE BUYING

Joint Development

Out-Station

LAND FOR Villa Joint Venture 6 Acres, Near Chikka Tirupati Temple, Malur, OWNER, 9945965777

RENTAL PROPERTIES

Accommodation Available

Commercial

RENT PREMIUM 3600sqft furnished office at 4th Floor Vishnupriya Towers Beside Srirampura Metro Station. 6-Cabins, 45 Workstations, Lift, Pantry,Parking. Contact: 9900029200

BASAVANAGUDI NETKALLAPPA Circle, Office/ Commercial Space Available for RENT. 2nd Floor, 1800 sqft. CONTACT: 9845176280.

5500 SQFT Rent space available for Showroom, Super Market, Quick Commerce, Ware House, Cloud Kitchen at MEI New Double Road, Yeshwanthpur. Contact 9845048657 / 7892914631 / 9341904488

OFFICE / Commercial space for Rent 1st floor 950 Sq.ft and 2nd floor 2532 Sq.ft. at 'Surya Prasad' , Udaya Ravi Road, Kuvempunagar (above woodland showroom) Mysore. Contact 9448056137

PUBLIC NOTICE

APSET
N.R.Colony, B'lore-19. Phone: 080-26602586
Email:apsedutrust@gmail.com

INVITING TENDER

Inviting Tender from the Registered PWD Civil Contractors.

Sl. No.	Name of work	Approximate cost	EMD @2%	Cost of Tender
1.	CC Flooring with VDF and Allied Works	Rs. 36 Lakh	Rs. 72 K	Rs. 1 K
2.	Entrance Arch at APSET	Rs. 15 Lakh	Rs. 30 K	Rs. 1 K
3.	Solar Roof Top Installation for 85KVA at NR Colony	EMD 2% on Their Quoted amount to be submitted with DD		

- Date of issue of blank Tender: From 04-08-2025 to 07-08-2025
- Last date for submission of Sealed Tender: 11-08-2025 Before 4.00 PM
- Any clarification Contact Trust office during working hours.

CORRIGENDUM

In the advertisement released for faculty positions at MES College of Arts, Commerce & Science on 27.07.2025 and 30.07.2025 in Deccan Herald and Prajavani, **all the posts are for self-financed (un-aided) programs.**
CHIEF EXECUTIVE

JOB OPPORTUNITIES

Teachers/ Professors

TEACHER REQUIRED for Primary and High school for Maths, Science and Social Studies. Whatsapp 9901501185

Hospital & Medical Jobs

WANTED MARKETING EXECUTIVES with 2 wheeler, KRISHNA LAB, Dwarkanagar, BSK 3rd Stage. 9611752078/ krishnasimha2000@gmail.com

Manager

SURYADATTA GROUP of Institutes is inviting applications from experienced and dynamic individuals for the post of Manager for its Bangalore branch. Interested candidates are invited to send their resume-on sef.support@suryadatta.edu.in. For more details, visit www.suryadatta.org

PUBLIC NOTICE
To Place your Classified Ads Contact
9731810277

WEEKEND CORNER

BUSINESS

Business to Business

Business

FOR OUTDOOR Branding Bus back/ Auto back/ cycle/ three wheeler branding Standees Police Barricades branding Hoardings No Parking boards, Digital boards for All Educational, Business, Hotels, Ice creams, Chats, Products sales. Contact Venuscast Technologies Pvt Ltd. Contact 9482303339, 8722123445, 9538123445 balaji@venuscast.com, www.venuscast.com UAE/ INDIA

Finance

FOR HOUSING/ Business/ Personal/ Automobile/ Loans For Health/ General/ Life, Automobile, Travel Industries, Insurance Contact Victory Fin Services Mobile: 7411692219, 8618576685, 9482303339. info@victoryfinservices.com, www.victoryfinservices.com

Business Offers

Finance

MSME LOANS Available for any startup companies,any existing companies NOTE:Also one approved loan available contact-7204995189

PERSONAL

Lost

DOCUMENT LOST
I, **C. SOWBHAGYA**, residing at Mahalakshmipuram, Bengaluru-86, have lost my **Original Sale deed Document No:/ Identification: 38981/ 2003-2004. (Site located in Doddabidarakallu)** While transit.
If found please contact:
9845705292

EDUCATION
To Place your Classified Ads Contact:
9845114560

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331